₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 24.03.2025 ಸಂಪುಟ: 67 ಸಂಚಿಕೆ: 319 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ



ಇಶಾನ್ ಕಿಶನ್ ಶತಕ ವೈಭವ

ಕಳೆದ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ಕಳಪೆ ನಿರ್ವಹಣೆ ಕಾರಣಕ್ಕೆ ಮುಂಬಯಿ ತಂಡದಿಂದ ಕೈಬಿಡಲಾದ ಇಶಾನ್ ಕಿಶನ್ ಈ ಆವೃತ್ತಿಯಲ್ಲಿ ಸನ್ ರೈಸರ್ಸ್ ಹೈದರಾಬಾದ್ ಪರ ಶತಕ (106, 47 ಬಾಲ್)ಬಾರಿಸಿ ಮಿಂಚಿದ್ದಾರೆ. ಇದು 18ನೇ ಆವೃತ್ತಿಯ ಮೊದಲ ಶತಕವೂ ಹೌದು.

ಏ.1ಕ್ಕೆ ರಾಜೀನಾಮೆ ಅನ್ವಯವಾಗುವಂತೆ ಬರೆದಿದ್ದ ಪತ್ರ ವೈರಲ್

ಸಭಾಪತಿ ಸ್ಥಾನಕ್ಕೆ ರಾಜೀನಾಮೆ?

ಬಸವರಾಜ ಹೊರಟ್ಟಿ

ರಾಜೀನಾಮೆ ಏಕೆ?

- ಜೂನ್ ವೇಳೆಗೆ ಕಾಂಗ್ರೆಸಿಗರು ನಾಮನಿರ್ದೇಶನ ಸ್ಥಾನ ತುಂಬಿದರೆ ಬಿಜೆಪಿ-ಜೆಡಿಎಸ್ ಬಹುಮತ ಕುಸಿತ
- ಈ ಹಂತದಲ್ಲಿ ಕಾಂಗ್ರೆಸಿಗರಿಂದ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ಖಚಿತ
- ಪೂರ್ಣಗೊಂಡ ಅಧಿವೇಶನದಲ್ಲಿಯೇ ಉಪಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದ ಕಾಂಗ್ರೆಸ್
- ಕಾಂಗ್ರೆಸ್‌ನಿಂದ ನಿರ್ಣಯ ಮಂಡನೆಗೂ ಮೊದಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಘೋಷಿಸುವ ಲೆಕ್ಕಾಚಾರ
- ಭಾವುಕರಾಗಿ ಘೋಷಣೆ ಮಾಡಿದರೆ, ಮುಂದುವರಿಯುವಂತೆ ಕೈ ನಾಯಕರಿಂದ ಆಫರ್ ಬರುವ ಲೆಕ್ಕಾಚಾರ

ಹೊರಟ್ಟಿ ಹೇಳಿದ್ದೇನು?

- ಸದನದ ಘಟನೆಗಳು ತೀವ್ರ ಬೇಸರ ತರಿಸಿವೆ
- ಪ್ರಮುಖ ಬಿಲ್ ಮಂಡಿಸುವಾಗಲೂ ಘೋಷಣೆ ಕೂಗುತ್ತಾರೆ; ಮೊನ್ನೆ 17 ನಿಮಿಷ ಏನು ಮಾಡಲಾಗದೇ ಸುಮ್ಮನೆ ಕೂತಿದ್ದೆ
- ಸದನ ಸರಿಯಾಗಿ ನಡೆಸಲು ಆಗದಿದ್ದರೆ ಅಮಾನತು ಮಾಡುವುದು ಸರಿಯಲ್ಲ
- ಸದನ ನಡೆಸುವುದು ಸವಾಲಾಗಿದೆ; ಅಲ್ಲೇ ಮುಂದುವರಿದರೆ ಅಯೋಗ್ಯರು ಎನಿಸಿಕೊಳ್ಳಬೇಕಾಗುತ್ತದೆ

ರಾಜೀನಾಮೆ ನೀಡಲು ಪತ್ರವನ್ನು ಸಿದ್ಧಪಡಿಸಿದ್ದೇ ಹೊರತು ಆ ಪತ್ರಕ್ಕೆ ಸಹಿ ಹಾಕಿರಲಿಲ್ಲ. ಆದರೆ ಈ ಪತ್ರ ಹೇಗೆ ವೈರಲ್ ಆಗಿದೆ ಎನ್ನುವುದು ಗೊತ್ತಿಲ್ಲ. ರಾಜೀನಾಮೆ ನೀಡುವ ಬಗ್ಗೆ ಆಪ್ತರೊಂದಿಗೆ ಮತ್ತೊಮ್ಮೆ ಚರ್ಚಿಸಿ ತೀರ್ಮಾನಿಸುತ್ತೇನೆ.

ಬೆಂಗಳೂರು/ಹುಬ್ಬಳ್ಳಿ: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಬಗ್ಗೆ ಮಾತಾಡಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ವಿಧಾನ ಪರಿಷತ್ ನಾಲ್ಕು ನಾಮ ನಿರ್ದೇಶಿತ ಸದಸ್ಯರ ನಿವೃತ್ತಿಯಿಂದ ಬಿಜೆಪಿ-ಜೆಡಿಎಸ್ ಮೈತ್ರಿ ಪಕ್ಷದ ಬಹುಮತ ಕುಸಿತವಾಗುತ್ತಿದ್ದಂತೆ ಸಭಾಪತಿ ಬದಲಾಗುತ್ತಾರೆ ಎನ್ನುವ ಮಾತಿತ್ತು. ಈ ಕಾರಣಕ್ಕಾಗಿಯೇ ವಿಧಾನಮಂಡಲ ಆರಂಭಕ್ಕೂ ಮೊದಲೇ ಹೊರಟ್ಟಿಯವರು ರಾಜೀನಾಮೆಯ ಇಂಗಿತ ವ್ಯಕ್ತಪಡಿಸಿದ್ದರು. ಆದರೆ ಈ ಅಧಿವೇಶನದ ವೇಳೆಗೆ ಪರಿಷತ್‌ನಲ್ಲಿ ಖಾಲಿಯಿರುವ ಸ್ಥಾನಗಳಿಗೆ ಆಯ್ಕೆ ಮಾಡದಿರುವುದರಿಂದ ಹೊರಟ್ಟಿ ಅವರು ಸಭಾಪತಿಯಾಗಿ ಮುಂದುವರಿದರು. ಇದೀಗ ಜೂನ್ ವೇಳೆಗೆ ಖಾಲಿಯಿರುವ ನಾಲ್ಕು ಪರಿಷತ್ ಸ್ಥಾನಗಳನ್ನು ಭರ್ತಿ ಮಾಡುವುದು ಖಚಿತವಾಗಿರುವುದರಿಂದ ಮತ್ತೊಮ್ಮೆ ರಾಜೀನಾಮೆಯ ಮಾತಾಡಿದ್ದಾರೆ.

ವಿಧಾನಸಭೆಯಲ್ಲಿ 18 ಶಾಸಕರ ಅಮಾನತು, ಪರಿಷತ್‌ನಲ್ಲಿನ ಗದ್ದಲ-ಗಲಾಟೆಯಿಂದ ಬೇಸತ್ತು ರಾಜೀನಾಮೆಯ ಘೋಷಿಸಿದ್ದರು. ಆದರೆ ಇದು ಭಾರಿ ವಿವಾದಕ್ಕೆ ಕಾರಣವಾಗುತ್ತಿದ್ದಂತೆ, ಈ ಸಂಬಂಧ ಸ್ಪಷ್ಟನೆ ನೀಡಿರುವ ಅವರು ಆಪ್ತರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುತ್ತೇನೆ ಎಂದಿದ್ದಾರೆ.

ಪೀಠದಲ್ಲಿ ಕೂರುವ ಯೋಗ್ಯತೆ ಇಲ್ಲವೆನಿಸುತ್ತದೆ

ಹುಬ್ಬಳ್ಳಿಯಲ್ಲಿ ಭಾನುವಾರ ಮಾತನಾಡಿರುವ ಸಭಾಪತಿ ಬಸವರಾಜ ಹೊರಟ್ಟಿ ಅವರು, ಇತ್ತೀಚಿಗೆ ಸದನದಲ್ಲಿ ನಡೆದ ಬೆಳವಣಿಗೆ ನನ್ನ ಮನಸ್ಸಿಗೆ ಬೇಸರ ತರಿಸಿದೆ. ಹಾಗಾಗಿ ವಿಧಾನ ಪರಿಷತ್ ಸಭಾಪತಿ ಸ್ಥಾನದಲ್ಲಿ ಮುಂದುವರಿಯುವುದು ಸೂಕ್ತವಲ್ಲ ಎಂಬ ಭಾವನೆ ಬಂದಿದೆ. ಸ್ನೇಹಿತರೊಂದಿಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ. ಸದನದಲ್ಲಿ ನಡೆದ ಬೆಳವಣಿಗೆ ನಿಯಂತ್ರಿಸುವಲ್ಲಿ ನಾನು ವಿಫಲವಾಗಿದ್ದೇನೆ ಅನಿಸುತ್ತಿದೆ. ನಾನು ಈ ಸ್ಥಾನಕ್ಕೆ ಯೋಗ್ಯ ಇದ್ದಿನೋ ಇಲ್ಲವೋ ಎಂದು ಅನಿಸುತ್ತಿದೆ. ಈ ಸ್ಥಾನಕ್ಕೆ ಘನತೆ-ಗೌರವ ಇಲ್ಲದ ಮೇಲೆ ಇಲ್ಲಿ ಇರಬಾರದು ಎಂದು ತೀರ್ಮಾನಕ್ಕೆ ಬಂದಿದ್ದೇನೆ ಎಂದು ಹೇಳಿದ್ದಾರೆ.

ವೈರಲ್ ಪತ್ರದಲ್ಲಿ ಏನಿದೆ?

ಸಭಾಪತಿ ಬಸವರಾಜ ಹೊರಟ್ಟಿ ಅವರು ಉಪ ಸಭಾಪತಿ ಎಂ.ಕೆ.ಪ್ರಾಣೇಶ್ ಅವರಿಗೆ ಬರೆದಿರುವ ಪತ್ರದಲ್ಲಿ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರೂ, ಅದಕ್ಕೆ ಸಹಿ ಹಾಕಿಲ್ಲ. ಮಾರ್ಚ್ 18ರಂದು ಸಿದ್ಧಪಡಿಸಿರುವ ಈ ಪತ್ರದಲ್ಲಿ 'ದಿನಾಂಕ 01.04.2025 ರಂದು ನಾನು ನನ್ನ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ನನ್ನ ವೈಯಕ್ತಿಕ ಕಾರಣಗಳಿಂದ ಸದರಿ ರಾಜೀನಾಮೆಯನ್ನು ದಿನಾಂಕ 31.03.2025 ರೊಳಗೆ ಸ್ವೀಕರಿಸಿ ದಿನಾಂಕ 01.04.2025ರಿಂದ ಅನ್ವಯವಾಗುವಂತೆ ಕ್ರಮ ಕೈಗೊಂಡು ಹಾಗೂ ನನ್ನನ್ನು ಈ ಹುದ್ದೆಯಿಂದ ಮುಕ್ತಿಗೊಳಿಸಲು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ' ಎಂದು ಮನವಿ ಮಾಡಿದ್ದಾರೆ.

ಸದನ ಹದಗೆಟ್ಟಿದೆ

ಸದನ ಬಹಳ ಹದಗೆಟ್ಟಿದೆ. ಸಭಾಪತಿಗಳ ಮಾತು ಯಾರೂ ಕೇಳುವುದಿಲ್ಲ. ಸದನ ನಡೆಸುವುದು ಬಹಳ ಕಷ್ಟವಾಗಿದೆ. ಸದನದಲ್ಲಿ ಕುಳಿತು ಸರಿಯಾಗಿ ನಡೆಸದಿದ್ದರೆ ನಾವು ಅಯೋಗ್ಯರು ಎನ್ನಿಸಿಕೊಳ್ಳಬೇಕಾಗುತ್ತದೆ. ವಿಧಾನ ಪರಿಷತ್ತಿನಲ್ಲಿ ಜೈಕಾರ, ಧಿಕ್ಕಾರ ಕೂಗಬಾರದು ಎನ್ನುವ ನಿಯಮವಿದೆ. ಅದರೂ ಅದನ್ನು ಯಾರೂ ಪಾಲನೆ ಮಾಡುತ್ತಿಲ್ಲ. ಇವುಗಳನ್ನೆಲ್ಲ ನೋಡಿಕೊಂಡು ಮೂಕಪ್ರೇಕ್ಷರಂತೆ ಕುಳಿತುಕೊಳ್ಳುವಂತಾಗಿದೆ. ನಾನು ಯಾರ ಮೇಲೂ ಆರೋಪ ಮಾಡುವುದಿಲ್ಲ. ಸದನ ನಡೆಸಲು ನನಗೆ ಯೋಗ್ಯತೆ ಇಲ್ಲ ಅನ್ನಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವರಿಷ್ಠರೊಂದಿಗೆ ಚರ್ಚಿಸಿದ ಬಳಿಕವೇ ದೂರು ನೀಡಲು ತೀರ್ಮಾನ

ಹನಿ ಕಹಾನಿ ವರದಿ ಕೇಳಿದ ಹೈಕಮಾಂಡ್

ಬೆಂಗಳೂರು: ಕಳೆದ ನಾಲ್ಕು ದಿನಗಳಿಂದ ರಾಜ್ಯ ರಾಜಕೀಯ ಹನಿಟ್ರ್ಯಾಪ್ ಸುತ್ತಲೇ ಗಿರಕಿ ಹೊಡೆಯುತ್ತಿದ್ದರೂ ಈ ಪ್ರಕರಣದಲ್ಲಿ ಅಧಿಕೃತ ದೂರಾಗಲಿ, ತನಿಖೆಯ ಸ್ವರೂಪವಾಗಿ ಬಹಿರಂಗವಾಗಿಲ್ಲ. ಈ ನಡುವೆ ಕಾಂಗ್ರೆಸ್ ಹೈಕಮಾಂಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ತೀವ್ರ ಅಸಮಧಾನ ವ್ಯಕ್ತಪಡಿಸಿ, ಸಂಪೂರ್ಣ ವರದಿ ಪಡೆಯಲು ಮುಂದಾಗಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಗುರುವಾರ ವಿಧಾನಸಭೆಯಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಸಹಕಾರ ಸಚಿವರ ಹೆಸರು ಪ್ರಸ್ತಾಪಿಸಿ ಪ್ರಕರಣವನ್ನು ಬಹಿರಂಗಪಡಿಸುತ್ತಿದ್ದಂತೆ, ರಾಜಣ್ಣ ಅವರು ಅಧಿಕೃತ ದೂರು ದಾಖಲಿಸುವುದಾಗಿ ಹೇಳಿ ತನಿಖೆಗೆ ಆಗ್ರಹಿಸಿದ್ದರು. ಬಳಿಕ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು 'ಉನ್ನತ ಮಟ್ಟದ ತನಿಖೆ' ನಡೆಸುವ ಭರವಸೆ ನೀಡಿದ್ದರು. ಆದರೀಗ ಈ ಬಗ್ಗೆ ಯಾವುದೇ ದೂರು ದಾಖಲಾಗದೇ ಇರುವುದರಿಂದ ಪ್ರಕರಣ 'ಟೇಕ್ ಆಫ್' ಆಗಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಈ ನಡುವೆ ದೆಹಲಿಗೆ ತೆರಳಿ ಹೈಕಮಾಂಡ್‌ಗೆ ದೂರು ನೀಡುವುದಾಗಿ ಹೇಳಿದ್ದ ಸಹಕಾರ ಸಚಿವ ರಾಜಣ್ಣ ಅವರು, ಶನಿವಾರ ರಾತ್ರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದು, ದೆಹಲಿಯಲ್ಲಿ ಪಕ್ಷದ ವರಿಷ್ಠರನ್ನು ಭೇಟಿಯಾಗಿ ಸಂಪೂರ್ಣ ಮಾಹಿತಿ ನೀಡಿದ ಬಳಿಕವೇ ಬೆಂಗಳೂರಿನಲ್ಲಿ ಅಧಿಕೃತ ದೂರು ದಾಖಲಿಸಲು ತೀರ್ಮಾನಿಸಿದ್ದಾರೆ. ಒಂದು ವೇಳೆ ದೂರು ದಾಖಲಾದ ಬಳಿಕ ತನಿಖಾ ಸಂಸ್ಥೆಯಿಂದ ವಿಚಾರಣೆಗೆ ಕರೆದರೂ ಸಮಸ್ಯೆಯಾಗಬಾರದು ಎನ್ನುವ ಉದ್ದೇಶದಿಂದ ಈ ಯೋಜನೆ ರೂಪಿಸಿದ್ದಾರೆ ಎನ್ನಲಾಗಿದೆ.

ಸಂಪೂರ್ಣ ವರದಿಗೆ ಸೂಚನೆ

ಸರಕಾರದ ವರ್ಚಸ್ಸಿಗೆ ಧಕ್ಕೆಯಾಗಿರುವ ಹನಿಟ್ರ್ಯಾಪ್ ಪ್ರಕರಣವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ದೂರವಾಣಿ ಕರೆ ಮಾಡಿ ಈ ಬಗ್ಗೆ ಸಮಗ್ರ ವರದಿ ನೀಡುವಂತೆ ಸೂಚಿಸಿದ್ದಾರೆ ಎಂದು ಹೇಳಲಾಗಿದೆ. ಹೈಕಮಾಂಡ್‌ಗೆ ವರದಿ ಸಲ್ಲಿಕೆಯಾದ ನಂತರ ಹೈಕಮಾಂಡ್ ಸೂಚನೆಯನ್ನು ನೋಡಿಕೊಂಡು ದೂರು ಸಲ್ಲಿಕೆ ಬಗ್ಗೆ ತೀರ್ಮಾನ ಮಾಡಲಾಗುತ್ತದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ. ಈ ಪ್ರಕರಣವನ್ನು ಅಧಿವೇಶನದಲ್ಲಿ ಪ್ರಸ್ತಾಪಿಸುವುದಕ್ಕಿಂತ ಪಕ್ಷದ ವೇದಿಕೆಯಲ್ಲಿಯೇ ಪ್ರಸ್ತಾಪಿಸಬಹುದಾಗಿತ್ತು. ಸದನದಲ್ಲಿ ಈ ವಿಚಾರ ಚರ್ಚಿಸಿರುವುದು ಸರಿಯಲ್ಲ, ಸದನದಲ್ಲಿ ಪ್ರಸ್ತಾಪಿಸುವ ಬದಲು ದೆಹಲಿ ನಾಯಕರ ಗಮನಕ್ಕೆ ತಂದಿದ್ದರೆ, ಪಕ್ಷಕ್ಕೆ ಹಾಗೂ ವೈಯಕ್ತಿಕ ಗೌರವಕ್ಕೆ ಧಕ್ಕೆಯಾಗದಂತೆ ಪ್ರಕರಣವನ್ನು ನಿಭಾಯಿಸ ಬಹುದಾಗಿತ್ತು ಎನ್ನುವ ಮಾತನ್ನು ದೆಹಲಿ ನಾಯಕರು ಹೇಳಿದ್ದಾರೆ ಎನ್ನಲಾಗಿದೆ.

ರಾಜಣ್ಣ ದೂರು ಕೊಡುವುದಾಗಿ ಹೇಳಿದ್ದರು. ಆದರೆ ಈವರೆಗೂ ಕೊಟ್ಟಿಲ್ಲ. ಅವರು ದೂರು ಕೊಟ್ಟರೆ ತನಿಖೆಗೆ ವಹಿಸುತ್ತೇವೆ. ಉನ್ನತಮಟ್ಟದ ತನಿಖೆ ಬಗ್ಗೆ ನಾನು ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡುತ್ತೇನೆ. ಯಾವ ತನಿಖೆಗೆ ಕೊಡಬೇಕು ಎಂಬುದನ್ನು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು.

\- ಡಾ.ಜಿ.ಪರಮೇಶ್ವರ ಗೃಹ ಸಚಿವ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾನುವಾರ ಸಿಎಂ ಸಿದ್ದರಾಮಯ್ಯ ಅವರ ನಿವಾಸಕ್ಕೆ ತೆರಳಿ ಯೋಗಕ್ಷೇಮ ವಿಚಾರಿಸಿದರು. ಸಚಿವ ಪ್ರಿಯಾಂಕ್ ಖರ್ಗೆ ಇದ್ದರು.

ಸೊಂಪಾದ ಪುಟಗಳು



ಹನಿಟ್ರ್ಯಾಪ್ ಬಲೆಗೆ ಬಿದ್ದ ಆ ಸಚಿವರ್ ಮಕ್ಕಳು? ಮೂರ್ತಿಪೂಜೆ ಆರ್.ಟಿ.ವಿಠ್ಠಲಮೂರ್ತಿ 6

ಗಗನದಲ್ಲಿ ಸಖಿ; ಬದುಕಿನಲ್ಲಿ ಅಸುಖಿ ವಿದೇಶವಾಸಿ ಕಿರಣ್ ಉಪಾಧ್ಯಾಯ, ಬಹ್ರೈನ್ 7

ದಾರಿದೀಪೋಕ್ತಿ



ನೀವು ಯುವಕರಾಗಿದ್ದಾಗ ವೃದ್ಧರನ್ನು ಗೌರವಿಸಿ. ಬಲಿಷ್ಠರಾಗಿದ್ದಾಗ ದುರ್ಬಲರಿಗೆ ಸಹಾಯ ಮಾಡಿ. ನೀವು ತಪ್ಪು ಮಾಡಿದಾಗ ಅದನ್ನು ಒಪ್ಪಿಕೊಳ್ಳಿ. ಕಾರಣ ಒಂದಲ್ಲ ಒಂದು ದಿನ ನೀವೂ ವೃದ್ಧರಾಗುತ್ತೀರಿ, ದುರ್ಬಲರಾಗುತ್ತೀರಿ ಮತ್ತು ತಪ್ಪು ಮಾಡುತ್ತೀರಿ.

ವಕ್ರತುಂಡೋಕ್ತಿ

ಮಗ ಪರಿಪೂರ್ಣನಾಗಿರಬೇಕೆಂದು ಬಯಸುವುದು ವ್ಯರ್ಥ. ಕಾರಣ ಆತ ಅದಕ್ಕೆ ಅವಕಾಶವನ್ನೇ ಕೊಡುವುದಿಲ್ಲ.

ಗೃಹಲಕ್ಷ್ಮಿ ಹಣ 31ರ ಬಳಿಕ ಬಿಡುಗಡೆ

ಬೆಳಗಾವಿ: ಮಾರ್ಚ್ 31ರ ನಂತರ ಗೃಹಲಕ್ಷ್ಮಿ ಯೋಜನೆಯ ಎರಡು ಕಂತುಗಳ ಹಣ ಬಿಡುಗಡೆ ಮಾಡಲಾಗುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು. ಅಂಗನವಾಡಿ ಕಾರ್ಯಕರ್ತೆಯರ ಗೌರವಧನವನ್ನು ₹2 ಸಾವಿರ ಹೆಚ್ಚಿಸಿದ್ದೆವು. ಅದಾದ ನಂತರ ಯಾವುದೇ ಸರಕಾರಗಳೂ ಹೆಚ್ಚಿಸಲಿಲ್ಲ. ಈ ಬಜೆಟ್‌ನಲ್ಲಿ ಕಾರ್ಯಕರ್ತೆಯರ ಗೌರವಧನವನ್ನು ₹1,000, ಸಹಾಯಕಿಯರ ಗೌರವಧನವನ್ನು ₹750 ಹೆಚ್ಚಿಸಿ ಘೋಷಿಸಿದ್ದೇವೆ. ಅದನ್ನು ಜಾರಿಗೆ ತರುತ್ತೇವೆ ಎಂದರು. ಸಚಿವರೊಬ್ಬರಿಗೆ ಹನಿಟ್ರ್ಯಾಪ್ ಮಾಡಲು ಯತ್ನಿಸಿರುವುದು ದುರದೃಷ್ಟಕರ ಸಂಗತಿ. ಈ ಬಗ್ಗೆ ರಾಜಣ್ಣ ಅವರು ತಮಗಾದ ಅನುಭವವನ್ನು ಸದನದಲ್ಲಿ ಹಂಚಿಕೊಂಡಿದ್ದಾರೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು ಈಗಾಗಲೇ ಇದರ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ಗೃಹ ಸಚಿವರು ಆ ವಿಷಯ ನೋಡಿಕೊಳ್ಳುತ್ತಾರೆ. ಆ ಬಗ್ಗೆ ಹೆಚ್ಚು ಮಾತನಾಡಲ್ಲ ಎಂದರು.

ಮಾತಂದ್ರೆ ಮಾತು

ಭಾರತದ ಚುನಾವಣಾ ಆಯೋಗವು ಸಂಪೂರ್ಣವಾಗಿ ನಿಷ್ಕ್ರಿಯವಾಗಿದ್ದು, ವಿಫಲಗೊಂಡ ಸಂಸ್ಥೆಯಾಗಿದೆ. ಸಂವಿಧಾನಕ್ಕೆ ಅನುಗುಣವಾಗಿ ಆಯೋಗವು ಜವಾಬ್ದಾರಿ ನಿರ್ವಹಿಸುತ್ತಿಲ್ಲ, ಹೀಗಾಗಿ, ಬಹುಸಂಖ್ಯಾತರು ಆಯೋಗದ ಮೇಲಿನ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ.



\- ಕಪಿಲ್ ಸಿಬಲ್ ರಾಜ್ಯಸಭಾ ಸದಸ್ಯ

ಫನ್‌ತರಂಗ

\- ರಘುಪತಿ ಶೃಂಗೇರಿ -

ಬಿಸಿಯೂಟದಲ್ಲಿ ಎಣ್ಣೆ ಬಳಕೆ ಶೇ.10ರಷ್ಟು ಕಡಿತ

ಬೆಂಗಳೂರು: ಶಾಲೆಗಳಲ್ಲಿ ಮಧ್ಯಾಹ್ನದ ಊಟದಲ್ಲಿ ಎಣ್ಣೆಯನ್ನು ಶೇ.10ರಷ್ಟು ಕಡಿಮೆ ಮಾಡುವಂತೆ ಕೇಂದ್ರ ಸರಕಾರದ ಆದೇಶದ ಮೇರೆಗೆ ರಾಜ್ಯ ಸರಕಾರವು ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಶಾಲಾ ವಯಸ್ಸಿನ ಮಕ್ಕಳಲ್ಲಿ ಬೊಜ್ಜು ಹಾಗೂ ಹೃದಯ ಸಂಬಂಧಿ ಕಾಯಿಲೆ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಕೇಂದ್ರ ಶಿಕ್ಷಣ ಸಚಿವಾಲಯದ ಪತ್ರವನ್ನು ಅನುಸರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪಿಎಂ ಪೋಷಣ್ ಯೋಜನೆಯಲ್ಲಿ ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಬಿಸಿಯೂಟಕ್ಕೆ ಬಳಕೆ ಮಾಡಲಾಗುತ್ತಿರುವ ಸೂರ್ಯಕಾಂತಿ ಎಣ್ಣೆಯ ಪ್ರಮಾಣವನ್ನು ಶೇ.10ರಷ್ಟು ಕಡಿತಗೊಳಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ.ವಿ ತ್ರಿಲೋಕ ಚಂದ್ರ ಸೂಚನೆ ನೀಡಿದ್ದಾರೆ.

ಬಿಸಿಯೂಟ ತಯಾರಿಕಾ ಸಿಬ್ಬಂದಿಗೆ ಅಡುಗೆ ಎಣ್ಣೆಯನ್ನು ಕಡಿಮೆ ಬಳಸಿ ಆಹಾರ ತಯಾರಿಸುವ ಕುರಿತು ಕಡ್ಡಾಯವಾಗಿ ತರಬೇತಿ ನೀಡಬೇಕಾಗಿದೆ.

→ 4

ರಾಜೀವ್ ಚಂದ್ರಶೇಖರ್ ಕೇರಳ ಬಿಜೆಪಿ ಅಧ್ಯಕ್ಷ?

ತಿರುವನಂತಪುರ: ಕೇಂದ್ರದ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಅವರು ಕೇರಳ ಬಿಜೆಪಿ ಘಟಕದ ಮುಂದಿನ ಅಧ್ಯಕ್ಷರಾಗುವ ಸಾಧ್ಯತೆ ಇದೆ. ಭಾನುವಾರ ತಿರುವನಂತಪುರದಲ್ಲಿ ನಡೆದ ಪಕ್ಷದ ಕೋರ್ ಸಮಿತಿ ಸಭೆಯಲ್ಲಿ ಈ ಬಗ್ಗೆ ತೀರ್ಮಾನವಾಗಿದೆ ಎನ್ನಲಾಗಿದ್ದು, ರಾಜ್ಯ ಬಿಜೆಪಿ ಉಸ್ತುವಾರಿ ಪ್ರಕಾಶ್ ಜಾವಡೇಕರ್ ಸೋಮವಾರ ಈ ಬಗ್ಗೆ ಘೋಷಣೆ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

26 ರಿಂದ ಪ್ರತಿಭಟನೆಗೆ ಮುಸ್ಲಿಂ ಸಂಘಟನೆಗಳ ನಿರ್ಧಾರ

ವಕ್ಫ್ ತಿದ್ದುಪಡಿ ವಿರುದ್ಧ ರಾಷ್ಟ್ರವ್ಯಾಪಿ ಆಂದೋಲನ

ದೆಹಲಿ: ಪ್ರಸ್ತಾವಿತ ವಕ್ಫ್ ತಿದ್ದುಪಡಿ ಮಸೂದೆಯ ವಿರುದ್ಧ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಭಾನುವಾರ ರಾಷ್ಟ್ರವ್ಯಾಪಿ ಆಂದೋಲನ ಘೋಷಿಸಿದೆ.

ಮಾರ್ಚ್ 17ರಂದು ದೆಹಲಿಯಲ್ಲಿ ನಡೆದ ಬೃಹತ್ ಮತ್ತು ಯಶಸ್ವಿ ಪ್ರತಿಭಟನೆಯ ನಂತರ, ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಪ್ರಸ್ತಾವಿತ ವಕ್ಫ್ ತಿದ್ದುಪಡಿ ಮಸೂದೆಯ ವಿರುದ್ಧ ರಾಷ್ಟ್ರವ್ಯಾಪಿ ಆಂದೋಲನವನ್ನು ಘೋಷಿಸಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಮೊಹಮ್ಮದ್ ವಕ್ವಾರ್ ಉದ್ದೀನ್ ಲತೀಫಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆಂದೋಲನದ ಮೊದಲ ಹಂತದ ಭಾಗವಾಗಿ, ಮಾರ್ಚ್ 26 ರಂದು ಪಾಟ್ನಾ ಮತ್ತು ಮಾರ್ಚ್ 29 ರಂದು ವಿಜಯವಾಡದ ವಿಧಾನಸಭೆಗಳ ಮುಂದೆ ದೊಡ್ಡ ಪ್ರತಿಭಟನಾ ಧರಣಿಗಳನ್ನು ಯೋಜಿಸಲಾಗಿದೆ. ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಧಾರ್ಮಿಕ ಮತ್ತು ಸಾಮಾಜಿಕ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಎಐಎಂಪಿಎಲ್‌ಬಿಯ ಹಿರಿಯ ನಾಯಕರು ಈ ಪ್ರತಿಭಟನೆಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಇಸ್ರೇಲ್ ದಾಳಿಗೆ ಹಮಾಸ್‌ನ 19 ಮಂದಿ ಸಾವು

ಕೈರೊ: ಇಸ್ರೇಲ್ ಸೇನೆಯು ಗಾಜಾಪಟ್ಟಿ ಮೇಲೆ ಶನಿವಾರ ರಾತ್ರಿಯಿಡೀ ನಡೆಸಿದ ದಾಳಿಯಲ್ಲಿ ಹಮಾಸ್ ಸಂಘಟನೆಯ ರಾಜಕೀಯ ನಾಯಕ ಸೇರಿ 19 ಮಂದಿ ಮೃತಪಟ್ಟಿರುವುದಾಗಿ ಭಾನುವಾರ ವರದಿಯಾಗಿದೆ. ತಮ್ಮ ರಾಜಕೀಯ ಘಟಕ ಹಾಗೂ ಪ್ಯಾಲೆಸ್ಟೀನ್ ಸಂಸತ್ತಿನ ಸದಸ್ಯ ಸಲಾಹ್ ಬರ್ದಾವಿಲ್ ಅವರು ದಕ್ಷಿಣ ನಗರ ಖಾನ್ ಯೂನಿಸ್ ಸಮೀಪ ಮೃತಪಟ್ಟಿದ್ದಾನೆ. ಅವರ ಪತ್ನಿಯೂ ಸಾವಿಗೀಡಾಗಿದ್ದಾರೆ ಎಂದು ಹಮಾಸ್ ಖಚಿತ ಪಡಿಸಿದೆ. ಅಕ್ಟೋಬರ್ 7 ರಿಂದ ಇಲ್ಲಿಯವರೆಗೆ ಗಾಜಾದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ 50,021 ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ.

ಪರೀಕ್ಷೆ ಅಕ್ರಮ ತಡೆಗೆ ಎಐ ಬಳಕೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೊದಲ ಯತ್ನ ಯಶಸ್ವಿ

ಬೆಂಗಳೂರು: ನಗರದಲ್ಲಿ ಶನಿವಾರ ವಿಧಾನ ಪರಿಷತ್‌ನ ಕಂಪ್ಯೂಟರ್ ಆಪರೇಟರ್ ಹಾಗೂ ಇನ್ನಿತರ ಹುದ್ದೆಗಳಿಗೆ ನಡೆದ ಪರೀಕ್ಷೆಯಲ್ಲಿ ಎಐ ತಾಂತ್ರಿಕತೆಯ ಮೊಬೈಲ್ ಅಧಾರಿತ ಅಭ್ಯರ್ಥಿ ದೃಢೀಕರಣ ವ್ಯವಸ್ಥೆಯನ್ನು ಮೊದಲ ಬಾರಿಗೆ ಬಳಸಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಎಂಜಿನಿಯರಿಂಗ್ ತಂಡ ಸಿದ್ಧಪಡಿಸಿದ ಎಐ ತಾಂತ್ರಿಕತೆಯ ಮೊಬೈಲ್ ಆಧಾರಿತ ಅಭ್ಯರ್ಥಿ ದೃಢೀಕರಣ ವ್ಯವಸ್ಥೆಯನ್ನು ಸಿದ್ಧಪಡಿಸಲಾಗಿದ್ದು, ಈ ತಂತ್ರಜ್ಞಾನವು ನಕಲಿ ಅಭ್ಯರ್ಥಿಗಳು ಪರೀಕ್ಷೆ ಬರೆಯುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಲಿದೆ. ಶನಿವಾರದ ಪರೀಕ್ಷೆಯಲ್ಲಿ ಈ ತಂತ್ರಜ್ಞಾನವನ್ನು ಪ್ರಯೋಗಾರ್ಥವಾಗಿ ಬಳಸಲಾಗಿದ್ದು, ಅಭ್ಯರ್ಥಿಗಳು ಪರೀಕ್ಷಾ ಕೊಠಡಿ ಪ್ರವೇಶಿಸುವಾಗ ಮೊಬೈಲ್ ಆ್ಯಪ್ ಬಳಸಿ ಮುಖ ಚಿತ್ರ ಸೆರೆಹಿಡಿದು ಸರ್ವರ್‌ನೊಂದಿಗೆ ಆನ್‌ಲೈನ್‌ನ ಮೂಲಕ ಸಂಪರ್ಕ ಕಲ್ಪಿಸಿಕೊಂಡು ಅಭ್ಯರ್ಥಿಗಳು ಅರ್ಜಿ ಹಾಕುವ ಸಂದರ್ಭದಲ್ಲಿ ಹಾಕಿದ್ದ ಭಾವಚಿತ್ರದೊಂದಿಗೆ ತಾಳೆ ನೊಡಿ, ಅಭ್ಯರ್ಥಿ ನೈಜತೆಯನ್ನು ತಕ್ಷಣವೇ ದೃಢಪಡಿಸಿದೆ. ಈ ತಂತ್ರಜ್ಞಾನದಿಂದ ನಕಲಿ ಅಭ್ಯರ್ಥಿಗಳನ್ನು ಪರೀಕ್ಷಾ ಕೊಠಡಿ ಪ್ರವೇಶಿಸದಂತೆ ತಡೆಯಲು ಸಾಧ್ಯವಾಯಿತು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದರು.



ಶನಿವಾರ ಬೆಳಗ್ಗೆ 74 ಅಭ್ಯರ್ಥಿಗಳು ಹಾಗೂ ಮಧ್ಯಾಹ್ನ 267 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಈ ತಾಂತ್ರಿಕ ವ್ಯವಸ್ಥೆಯ ಮೊದಲ ದಿನದ ಪ್ರಯೋಗ ಯಶಸ್ವಿಯಾಗಿದೆ. ಇನ್ನು ಮುಂದೆ ಇತರ ಪರೀಕ್ಷೆಗಳಿಗೂ ಇದರ ಬಳಕೆ ವಿಸ್ತರಿಸಲಾಗುವುದು. ಪರೀಕ್ಷೆ ಮುಗಿದ ತಕ್ಷಣವೇ ಅಭ್ಯರ್ಥಿಗಳ ಒಎಂಆರ್ ಶೀಟ್‌ಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಕೆಲಸವನ್ನೂ ಇದೇ ಮೊದಲು ಮಾಡಲಾಯಿತು. ಇದು ಪಾರದರ್ಶಕ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದ್ದು, ಯಾರು ಬೇಕಾದರೂ ಒಎಂಆರ್ ಶೀಟ್‌ಗಳನ್ನು ನೊಡಬಹುದು. ಇದರಿಂದ ಅಕ್ರಮ, ಅನುಮಾನಗಳಿಗೆ ಅವಕಾಶವೇ ಇಲ್ಲದಂತಾಗಲಿದೆ.

\- ಎಚ್.ಪ್ರಸನ್ನ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ

ಹೋಟೆಲ್, ಮೆಸ್, ಬೇಕರಿ ಮೇಲೆ ದಾಳಿ, ಪರಿಶೀಲನೆ | ಚಹಾಪುಡಿ, ಸಂಬಾರ ಪದಾರ್ಥಗಳಲ್ಲಿ ಕಲಬೆರಕೆ ಪತ್ತೆ

ಎಲ್ಲೆಡೆ ಕಲಬೆರಕೆ: ರಾಜ್ಯಾದ್ಯಂತ ಎಫ್‌ಡಿಎ ದಾಳಿ

- ಆಹಾರದ ಗುಣಮಟ್ಟದ ಕುರಿತು ಸಾಕಷ್ಟು ದೂರುಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳಿಂದ ದಾಳಿ
- ವಿಶೇಷವಾಗಿ ಕಾಲೇಜುಗಳು ಮತ್ತು ಕಚೇರಿಗಳ ಬಳಿ ಲಭ್ಯವಾಗುವ ಆಹಾರ ಪದಾರ್ಥಗಳ ತಪಾಸಣೆ
- ಕುದಿಸಿದ ಚಹಾ ಪುಡಿಯನ್ನು ಇತರ ತ್ಯಾಜ್ಯದೊಂದಿಗೆ ಬೆರೆಸದೇ ಅದನ್ನೇ ಒಣಗಿಸಿ ಮರುಬಳಕೆ ಮಾಡುವ ಕೃತ್ಯ ಪತ್ತೆ

ಬೆಂಗಳೂರು: ಇಡ್ಲಿ, ಹೋಳಿಕೆ, ಗೋಬಿ ಮಂಚೂರಿ ಸೇರಿದಂತೆ ಹೋಟೆಲ್‌ನಲ್ಲಿ ತಯಾರಿಸುವ ಹತ್ತಾರು ಪದಾರ್ಥಗಳಲ್ಲಿ ವಿಷಯುಕ್ತ ಪದಾರ್ಥದ ಅಂಶ ಪತ್ತೆಯಾಗಿರುವ ಬೆನ್ನಲ್ಲೇ ಇದೀಗ ಹೋಟೆಲ್‌ನಲ್ಲಿ ಸೇವಿಸುವ ಚಹಾದಲ್ಲಿಯೂ ವಿಷಕಾರಕ ಅಂಶಗಳನ್ನು ಕಲಬೆರಕೆ ಮಾಡಲಾಗುತ್ತಿದೆ ಎನ್ನುವ ಆಘಾತಕಾರಿ ವಿಷಯ ಬಹಿರಂಗವಾಗಿದೆ.

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಇಡ್ಲಿ, ಹೋಳಿಗೆ ತಯಾರಿಕೆ ಯಲ್ಲಿ ಪ್ಲಾಸ್ಟಿಕ್ ಹಾಳೆಗಳ ಬಳಕೆಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಿದ ಬಳಿಕವೂ ಸಾಕಷ್ಟು ದೂರುಗಳು ಕೇಳಿಬಂದಿರುವ ಹಿನ್ನೆಲೆ ಯಲ್ಲಿ ಮತ್ತೆ ರಾಜ್ಯದ ವಿವಿಧ ಹೋಟೆಲ್, ಮೆಸ್ ಹಾಗೂ ಬೇಕರಿಗಳ ಮೇಲೆ ಎಫ್‌ಡಿಐ ದಾಳಿ ನಡೆಸಿ ತಪಾಸಣೆ ನಡೆಸಿದೆ. ಈ ಸಮಯದಲ್ಲಿ ಹಲವು ಹೋಟೆಲ್, ಮೆಸ್ ಹಾಗೂ ಬೇಕರಿಯಲ್ಲಿ ಮಾತು ಚಹಾಪುಡಿ ಹಾಗೂ ಮಸಾಲೆ ಪದಾರ್ಥವನ್ನು ಕಲಬೆರಕೆ ಮಾಡಿರುವುದು ಬಹಿರಂಗವಾಗಿದೆ.

ದಾಳಿಗಳ ವೇಳೆ ಆಹಾರ ತಯಾರಿಕೆಯಲ್ಲಿ ಕಲಬೆರಕೆ ಮಸಾಲೆಗಳನ್ನು ಬಳಸಲಾಗುತ್ತಿರುವುದು ಮತ್ತು ಬೆಲ್ಲ, ಎಣ್ಣೆ, ಪನೀರ್, ಖೋವಾ ಮತ್ತು ಚಹಾಪುಡಿಯಂತಹ ವಸ್ತುಗಳಲ್ಲಿ ಗುಣಮಟ್ಟವಿಲ್ಲದ ಪದಾರ್ಥಗಳು ಇರುವುದು ಬಹಿರಂಗವಾಗಿದೆ. ಇತ್ತೀಚೆಗೆ ನಡೆದ ವಿಷಾಹಾರ ಸೇವನೆ ಪ್ರಕರಣದ ನಂತರ, ಕಾಲೇಜು ಮತ್ತು ಕಚೇರಿಗಳ ಬಳಿಯಿರುವ ಹೋಟೆಲ್, ಮೆಸ್ ಹಾಗೂ ಬೇಕರಿಗಳ ಮೇಲೆ ದಾಳಿ ನಡೆಸಿ ತಪಾಸಣೆ ನಡೆಸಲಾಗುತ್ತಿದೆ.

ಚಹಾ ಪುಡಿಯೇ ಮರುಬಳಕೆ?: ದಾಳಿಯ ವೇಳೆ ಚಹಾ ಪುಡಿ ಸೇರಿದಂತೆ ಹಲವಾರು ವಸ್ತುಗಳು ಕಲಬೆರಕೆಯಾಗಿರುವುದು ಕಂಡುಬಂದಿದ್ದು, ಕಡಿಮೆ ದರ್ಜೆಯ ಚಹಾ ಮತ್ತು ಈ ಹಿಂದೆ ತಯಾರಿಸಿದ ಚಹಾ ಪುಡಿಯನ್ನೇ ಒಣಗಿಸಲಾಗುತ್ತದೆ ಮತ್ತು ಕೃತಕ ಬಣ್ಣ ಬಳಸಿ ಅವುಗಳನ್ನೇ ಬಳಸಲಾಗುತ್ತಿದೆ. ಹೆಚ್ಚಿನ ಅಂಗಡಿಗಳು ಕುದಿಸಿದ ಚಹಾ ಪುಡಿಯನ್ನು ಇತರ ತ್ಯಾಜ್ಯದೊಂದಿಗೆ ಬೆರೆಸುವುದಿಲ್ಲ. ಬದಲಿಗೆ, ಅದನ್ನು ಒಣಗಿಸಿ ಮರುಬಳಕೆ ಮಾಡುತ್ತವೆ ಎಂದು ಅಧಿಕಾರಿ ಹೇಳಿದರು. ಇದಲ್ಲದೆ, ಅನೇಕ ಆಹಾರ ಪದಾರ್ಥ ಗಳನ್ನು ಕಲಬೆರಕೆ ಮಸಾಲೆಗಳನ್ನು ಬಳಸಿ ತಯಾರಿಸಲಾಗುತ್ತದೆ. ಹೆಚ್ಚಿನ ಬೇಡಿಕೆಯಿರುವ ಮತ್ತು ಪುಡಿ ರೂಪದಲ್ಲಿರುವ ಅರಿಶಿನ, ಮೆಣಸಿನ ಪುಡಿ ಮತ್ತು ಕೊತ್ತಂಬರಿ ಪುಡಿಗಳು ಸಾಮಾನ್ಯವಾಗಿ ಕಲಬೆರಕೆಯಾಗಿರುತ್ತವೆ. ಅರಿಶಿನವನ್ನು ಹೆಚ್ಚಾಗಿ ಮೆಟಾನಿಲ್ ಹಳದಿ, ಸಂಶ್ಲೇಷಿತ ಬಣ್ಣ ಅಥವಾ ಸೀಸದ ಕ್ರೋಮೇಟ್‌ನೊಂದಿಗೆ ಬೆರೆಸಿ ಬಣ್ಣ ಹೆಚ್ಚಿಸಲಾಗುತ್ತಿದೆ. ಇವೆರಡೂ ಹಾನಿಕಾರಕ ವಾಗಿವೆ. ಅದೇ ರೀತಿ, ಮೆಣಸಿನ ಪುಡಿಯನ್ನು ಸುಡಾನ್ ರೆಡ್‌ನಂತಹ ಕೃತಕ ಬಣ್ಣಗಳೊಂದಿಗೆ ಕಲಬೆರಕೆ ಮಾಡಲಾಗುತ್ತದೆ. ಇದು ಕ್ಯಾನ್ಸರ್‌ಕಾರಕ ಎಂದು ತಿಳಿದುಬಂದಿದೆ. ಕಲಬೆರಕೆ ಆಹಾರಗಳನ್ನು ನಿಯಮಿತವಾಗಿ ಸೇವಿಸುವುದರಿಂದ ಕಾಲಾನಂತರದಲ್ಲಿ ಅವು ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಉಂಟು ಮಾಡಬಹುದು ಎಂದು ಅಧಿಕಾರಿ ಎಚ್ಚರಿಸಿದ್ದಾರೆ.

ಮೆಟಾನಿಲ್ ಹಳದಿ, ಸೀಸದ ಕ್ರೋಮೇಟ್ ಮತ್ತು ಸುಡಾನ್ ಕೆಂಪು ಮುಂತಾದ ಹಾನಿಕಾರಕ ರಾಸಾಯನಿಕಗಳನ್ನು ಬೆರೆಸಿರುವ ಮಸಾಲೆಗಳು ಜೀರ್ಣಕಾರಿ ಸಮಸ್ಯೆಗಳು, ಯಕೃತ್ತು ಮತ್ತು ಮೂತ್ರಪಿಂಡದ ಹಾನಿ ಮತ್ತು ಕ್ಯಾನ್ಸರ್‌ಗೆ ಕಾರಣವಾಗಬಹುದು. ಈ ರೀತಿಯ ಕಲಬೆರಕೆ ಪದಾರ್ಥಗಳಿಗೆ ದೀರ್ಘಕಾಲದವರೆಗೆ ಒಡ್ಡಿಕೊಳ್ಳುವುದರಿಂದ ನರವೈಜ್ಞಾನಿಕ ಅಸ್ವಸ್ಥತೆಗಳು, ಉಸಿರಾಟದ ತೊಂದರೆಗಳು ಮತ್ತು ಅಂಗಗಳ ಕಾರ್ಯವು ದುರ್ಬಲಗೊಳ್ಳುತ್ತದೆ. ಕೆಲವು ಪ್ರಕರಣಗಳಲ್ಲಿ, ಅವು ಜಠರಕರುಳಿನ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಸೇರಿದಂತೆ ದೀರ್ಘಕಾಲದ ಕಾಯಿಲೆಗಳಿಗೆ ಕಾರಣವಾಗಬಹುದು ಎಂದು ವಿವರಿಸಿದರು.

ಸಮಾಚಾರ ಸಣ್ಣದಲ್ಲ

ಗುಣಮಟ್ಟದ ಶಿಕ್ಷಣಕ್ಕೆ ಲಕ್ಷ್ಮೀ ಟ್ರಸ್ಟ್ ಆದ್ಯತೆ

ಗೋಕಾಕ: ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಅವರನ್ನು ಸ್ಪರ್ಧಾತ್ಮಕ ಯುಗದ ಸ್ಪರ್ಧಿಗಳನ್ನಾಗಿ ಮಾಡಲು ಲಕ್ಷ್ಮೀ ಎಜ್ಯುಕೇಷನ ಟ್ರಸ್ಟ್ ಶ್ರಮಿಸುತ್ತಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸನತ ಜಾರಕಿಹೊಳಿ ಹೇಳಿದರು. ಅವರು ಶನಿವಾರದಂದು ನಗರದ ಶ್ರೀಲಕ್ಷ್ಮಣರಾವ ಜಾರಕಿಹೊಳಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಕ್ರೀಡೋ ಪೂರ್ವ ಪ್ರಾಥಮಿಕ ಶಾಲೆಯ ಗ್ರಾಜ್ಯುವೇಶನ ಡೇ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ವಿದ್ಯಾರ್ಥಿಗಳಿಗೆ ಆಧುನಿಕ ತಾಂತ್ರಿಕ ಅಳವಡಿಕೊಂದಿಗೆ ಆಟದೊಂದಿಗೆ ಕಲಿಕೆಯ ಕ್ರೀಡೋ ಪದ್ಧತಿಯೊಂದಿಗೆ ಕಲಿಸಲಾಗುತ್ತಿದೆ. ಈ ಪದ್ಧತಿಗೆ ಮಕ್ಕಳು ಸ್ಪಂದಿಸಿ ಪರಿಣಾವಕಾರಿಯಾಗಿ ಕಲಿಯುತ್ತಿದ್ದಾರೆ. ಪಾಲಕರು ಇದರ ಸದುಪಯೋಗಪಡಿಸಿಕೊಂಡು ತಮ್ಮ ಮಕ್ಕಳನ್ನು ಪ್ರತಿಭಾನ್ವಿತರನ್ನಾಗಿ ಮಾಡುವಂತೆ ಕರೆ ನೀಡಿದರು. ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಇಲ್ಲಿಯ ಲಕ್ಷ್ಮೀ ನವೋದಯ ಕೋಚಿಂಗ್ ಶಾಲೆಯ ವಿನಾಯಕ ಗಾಣಿಗ ಮಾತನಾಡುತ್ತ ಮಕ್ಕಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಪಾಲಕರ ಹಾಗೂ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಮಕ್ಕಳಿಗೆ ಪ್ರಪಂಚವನ್ನು ಪರಿಚಯಿಸಿ ಅವರ ಜ್ಞಾನ ಮಟ್ಟವನ್ನು ವೃದ್ಧಿಸಿ ಉತ್ತಮ ನಾಗರಿಕರನ್ನಾಗಿ ರೂಪಿಸುವದು ನಮ್ಮೆಲ್ಲರ ಮೇಲಿದೆ ಎಂದರು. ಸಮಾರಂಭವನ್ನು ಸಂಸ್ಥೆಯ ಉಪಾಧ್ಯಕ್ಷೆ ಸುವರ್ಣಾ ಭೀಮಶಿ ಜಾರಕಿಹೊಳಿ ಉದ್ಘಾಟಿಸಿದರು. ವೇದಿಕೆಯ ಮೇಲೆ ಆಡಳಿತಾಧಿಕಾರಿ ಬಿ ಕೆ ಕುಲರ್ಣಿ, ಮುಖ್ಯೋಪಾಧ್ಯಾಯರುಗಳಾದ ಎಚ್ ವ್ಹಿ ಪಾಗ್ನೀಸ, ಎ ಎಮ್ ಸರಕಾವಸ, ಪಿ ವಿ ಚಚಡಿ ಇದ್ದರು.

ನೀರು ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿ

ಗೋಕಾಕ: ತಾಪಮಾನದಲ್ಲಿ ಆಗುತ್ತಿರುವ ವೈಪರಿತ್ಯಗಳಿಂದಾಗಿ ಜನರು ನೀರಿನ ಅಭಾವವನ್ನು ಎದುರಿಸುತ್ತಿದ್ದಾರೆ. ಅದನ್ನು ಪರಿಸರ ಸಂರಕ್ಷಣೆ ಮೂಲಕ ನಿಯಂತ್ರಿಸಲು ಸಾಧ್ಯ ಎಂದು ಇಲ್ಲಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಉಮೇಶ ಆತ್ನುರೆ ಹೇಳಿದರು. ಶನಿವಾರ ಇಲ್ಲಿನ ನಗರಸಭೆ ಸಭಾ ಭವನದಲ್ಲಿ ಜರುಗಿದ ವಿಶ್ವ ಜಲ ದಿನಾಚರಣೆ ಮತ್ತು ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನೀರನ್ನು ಸಂರಕ್ಷಣೆ ಮಾಡುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ ಆಗಿದೆ ಎಂದು ಹೇಳಿದ ಅವರು, ಗ್ರಾಹಕರ ಹಿತರಕ್ಷಣಾ ಕಾನೂನಿನ ಮಹತ್ವ ಕುರಿತು ಪ್ರಾಸ್ತಾವಿಕ ಮಾತನಾಡಿದರು. ವಕೀಲರ ಸಂಘದ ಮಹಿಳಾಪ್ರತಿನಿಧಿ ವಿಜಯಲಕ್ಷ್ಮೀ ಸಿದ್ದಾಪೂರಮಠ ಅವರು ಗ್ರಾಹಕರ ಹಕ್ಕುಗಳ ರಕ್ಷಣೆ ಮಾಡುವ ಕುರಿತು ಮಾತನಾಡಿದರು. ಅಧ್ಯಕ್ಷತೆಯನ್ನು ನಗರಸಭೆ ಅಧ್ಯಕ್ಷ ಪ್ರಕಾಶ ಮುರಾರಿ ವಹಿಸಿದ್ದರು. ನಗರಸಭೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ವಿನೋದ ಪಾಟೀಲ ಅವರು ವಿಶ್ವ ಜಲ ದಿನಾಚರಣೆ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಬಿ.ವಡೇರಹಟ್ಟಿ ಮತ್ತು ಪಾಲ್ಗೊಂಡಿದ್ದರು. ಭೀಮಶೆಪ್ಪ ಗೋರೋಶಿ ಸ್ವಾಗತಿಸಿ, ನಿರೂಪಿಸಿದರು.

ಸುಗಮವಾಗಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಗುಳೇದಗುಡ್ಡ: ರಾಜ್ಯಾದ್ಯಂತ ಶುಕ್ರವಾರದಿಂದ ಎಸ್ಎಸ್ ಎಲ್‌ಸಿ ಪರೀಕ್ಷೆಗಳು ಪ್ರಾರಂಭವಾಗಿದ್ದು, ಗುಳೇದಗುಡ್ಡ ಪಟ್ಟಣದ ರಾಠಿ ಹಾಗೂ ಕಾವಡೆ ಆಂಗ್ಲಮಾಧ್ಯಮ ಶಾಲೆ, ಬಾಲಕಿಯರ ಸರಕಾರಿ ಪಪೂ ಕಾಲೇಜು, ಬಾಲಕರ ಸರಕಾರಿ ಪಪೂ ಕಾಲೇಜು ಹಾಗೂ ಜಮ್ಮನಕಟ್ಟಿ ಗ್ರಾಮದ ಸರಕಾರಿ ಪ್ರೌಢಶಾಲೆ ಸೇರಿದಂತೆ ತಾಲೂಕಿನಲ್ಲಿ ಒಟ್ಟು ನಾಲ್ಕು ಪರೀಕ್ಷಾ ಕೇಂದ್ರಗಳನ್ನು ತೆರೆದು ಒಟ್ಟು 57 ಬ್ಲಾಕ್‌ಗಳನ್ನು ಸ್ಥಾಪಿಸಲಾಗಿದೆ. ಶುಕ್ರವಾರ ನಡೆದ ಪ್ರಥಮಭಾಷಾ ಪರೀಕ್ಷೆಗೆ 1321 ವಿದ್ಯಾರ್ಥಿಗಳು ಹಾಜರಾಗಿದ್ದು 4 ವಿದ್ಯಾರ್ಥಿಗಳು ಗೈರಾಗಿದ್ದರು. ಪರೀಕ್ಷೆಗಳು ಸುಗಮವಾಗಿ ಸಾಗಿದವು. ಎಸ್‌ಎಸ್‌ಎಲ್‌ಸಿ ಪರೀಕ್ಷೆಗಾಗಿ ನಾಲ್ಕು ಪರೀಕ್ಷಾ ಅಧೀಕ್ಷರು, ಮೂವರು ಉಪಮುಖ್ಯ ಪರೀಕ್ಷಾ ಅಧೀಕ್ಷಕರು, ಪ್ರತಿ ಕೇಂದ್ರಕ್ಕೆ ಮುಖ್ಯ ಮೊಬೈಲ್ ಸ್ವಾಧೀನ ಅಧಿಕಾರಿಗಳು ಹಾಗೂ ಜಾಗೃತ ದಳ ಅಧಿಕಾರಿಗಳು ಹಾಗೂ ತಹಶೀಲ್ದಾರ ಮಂಜುಳಾ ಎಂ, ತಾಪಂ ಸಿಇಓ ಮಲ್ಲಿಕಾರ್ಜುನ ಹಾಗೂ ಮುಖ್ಯಶಿಕ್ಷಕರನ್ನೊಳಗೊಂಡ ಸಂಚಾರಿ ಜಾಗೃತದಳ ನೇಮಕ ಮಾಡಲಾಗಿದೆ. ಪ್ರತಿಯೊಂದು ಪರೀಕ್ಷಾ ಕೇಂದ್ರಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನಾಗಿ ಎಂ.ಪಿ. ಮಾಗಿ, ಬಿ.ಎಸ್. ಅಂಬಣ್ಣವರ, ಎನ್.ಸಿ. ಮುದಕವಿ, ಬಿ.ಎಸ್. ಕವಿಶೆಟ್ಟಿ ನೇಮಕಮಾಡಲಾಗಿದೆ.

ಅಗಲಿದ ಜೀವ

ಫಕೀರವ್ವ ಬನ್ನೂರ

ರಾಮದುರ್ಗ: ತಾಲೂಕಿನ ಸುನ್ನಾಳ (ಸಿದ್ದಾರೂಢ ನಗರ) ಗ್ರಾಮದ ನಿವಾಸಿ, ಶತಾಯುಷಿ ಫಕೀರವ್ವ ಬಾಳಪ್ಪ ಬನ್ನೂರ (101) ಶುಕ್ರವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

{ ದಿನೇಶ್ ಗುಂಡೂರಾವ್, } ಸಚಿವ

ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ರಾಜ್ಯಾದ್ಯಂತ ಗೃಹ ಆರೋಗ್ಯ ಯೋಜನೆ ಜಾರಿಯಾಗಲಿದೆ. ಜನರ ಮನೆ ಬಾಗಿಲಿಗೆ ಆರೋಗ್ಯ ಸಿಬ್ಬಂದಿ ಭೇಟಿ ನೀಡಿ,ಮಧುಮೇಹ, ಕ್ಯಾನ್ಸರ್ ಸೇರಿದಂತೆ ಮಾನಸಿಕ ಕಾಯಿಲೆಗಳ ಬಗ್ಗೆ ತಪಾಸಣೆ ನಡೆಸಲಿದ್ದಾರೆ.

8 ಸಾವಿರ ಮಂದಿ ಭಾಗಿ, ಭರ್ಜರಿ ಸ್ಪಂದನೆ | ಸತೀಶ್ ಜಾರಕಿಹೊಳಿ

ಬಡ ಜನರ ಅನುಕೂಲಕ್ಕಾಗಿ ಆರೋಗ್ಯ ಮೇಳ: ಸಚಿವ

ಸವದತ್ತಿ: ಈ ಹಿಂದಿನ ಯಾವ ಸರಕಾರಗಳೂ ಇಂತಹ ಮೇಳ ಆಯೋಜನೆ ಮಾಡಿರಲಿಲ್ಲ. ಬಡ ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಆರೋಗ್ಯ ಮೇಳ ಹಮ್ಮಿಕೊಳ್ಳಲಾಗಿದ್ದು ಉತ್ತಮವಾಗಿ ಯಶಸ್ವಿಯಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಇಲ್ಲಿನ ತಾಲೂಕಾ ಕ್ರೀಡಾಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ವಿವಿಧ ಸಂಘ ಸಂಸ್ಥೆ, ವಿವಿಧ ಆಸ್ಪತ್ರೆಗಳು ವಿವಿಧ ಇಲಾಖೆಗಳಿಂದ ರವಿವಾರ ಆಯೋಜಿಸಿದ್ದ ಬೃಹತ್ ಆರೋಗ್ಯ ಮೇಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮನೆ ಬಾಗಿಲಿಗೆ ಆರೋಗ್ಯ ಭಾಗ್ಯ ಬಂದಿದೆ ಎಲ್ಲರೂ ಪ್ರಯೋಜನ ಪಡೆದುಕೊಳ್ಳಬೇಕು. ಸವದತ್ತಿಯ ಆರೋಗ್ಯ ಮೇಳ ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು ಎಲ್ಲ ಇಲಾಖೆ ಅಧಿಕಾರಿಗಳು, ವೈದ್ಯರು, ಆಶಾ ಕಾರ್ಯಕರ್ತೆಯರು, ಸಿಬ್ಬಂದಿಗಳಿಂದ ಕಾರ್ಯಕ್ರಮ ಯಶಸ್ವಿಯಾಗಿದೆ. ವಿಶ್ವಾಸ ವೈದ್ಯ ನೇತೃತ್ವದಲ್ಲಿ ಕ್ಷೇತ್ರ ಅಭಿವೃದ್ಧಿ ಹೊಂದಲಿದೆ. ತಾಲೂಕಾಸ್ಪತ್ರೆಯನ್ನು 150 ಕೋಟಿ ಅನುದಾನದಲ್ಲಿ ಮೇಲದರ್ಜೆಗೆರಿಸಲು ಬಜೆಟ್ ನಲ್ಲಿ ಅನುಮೋದನೆ ದೊರೆತಿದೆ. ಇನ್ನೆರಡು ವರ್ಷದಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ಆರೋಗ್ಯ, ನೀರಾವರಿ, ರಸ್ತೆ, ಸರಕಾರಿ ಶಾಲೆಗಳ ಅಭಿವೃದ್ಧಿ ಕಾರ್ಯ ನಡೆಯಲಿವೆ ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಬಡ ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮೇಳ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮ ಯಶಸ್ವಿಗೆ ಶ್ರಮಿಸಿದ ಎಲ್ಲರಿಗೂ ನಮ್ಮ ನಿರೀಕ್ಷೆಗಿಂತಲೂ ಹೆಚ್ಚು ಜನರು ಇಲ್ಲಿಗೆ ಬಂದಿದ್ದಾರೆ. ಸುಮಾರು 8 ಸಾವಿರಕ್ಕಿಂತಲೂ ಹೆಚ್ಚು ಜನ ತಪಾಸಣೆ ಮಾಡಿಸಿಕೊಂಡಿದ್ದಾರೆ. ಆರೋಗ್ಯ ಸೌಲಭ್ಯ ಎಷ್ಟು ಮುಖ್ಯ ಎಂಬುದನ್ನು ಇದು ತೋರಿಸಿದೆ. ಆರೋಗ್ಯ ಸಮಾಜ



ಬೃಹತ್ ಆರೋಗ್ಯ ಮೇಳ ಕಾರ್ಯಕ್ರಮವನ್ನು ಸಚಿವರಾದ ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.

ವ್ಯವಸ್ಥೆಯ ಕನ್ನಡಿಯಾಗಿದೆ. ಕಾಯಿಲೆಗಳು ಆರಂಭದಲ್ಲೇ ಪತ್ತೆಯಾದರೆ ಚಿಕಿತ್ಸೆ ಪಡೆದು ಗುಣಪಡಿಸಬಹುದು. ಹಾಗಾಗಿ, ಜನರು ಆರೋಗ್ಯವನ್ನು ಆಗಾಗ ತಪಾಸಣೆ ಮಾಡಿಸಿಕೊಳ್ಳಬೇಕು ಎಂಬ ನಿಟ್ಟಿನಲ್ಲಿ ರಾಜ್ಯ ಸರಕಾರವೇ ಆರೋಗ್ಯ ಪರೀಕ್ಷೆಗೆ ಹೆಚ್ಚು ಒತ್ತು ನೀಡುತ್ತಿದೆ. ಗೃಹ ಆರೋಗ್ಯ ಕಾರ್ಯಕ್ರಮದಡಿ ಮನೆ ಮನೆಗೆ ಭೇಟಿ ನೀಡಿ ತಾಪಾಸಣೆ ನಡೆಸುವ ಯೋಜನೆ ಮುಂದಿನ ತಿಂಗಳಿಂದ ಪ್ರಾರಂಭವಾಗಲಿದೆ. ಬಡ ಸಾಮಾನ್ಯ ವರ್ಗದ ಪರವಾಗಿ ಸಿದ್ದರಾಮಯ್ಯ ಸರಕಾರ ಕೆಲಸ ಮಾಡುತ್ತಿದೆ. ಬಜೆಟ್‌ನಲ್ಲಿ ಸವದತ್ತಿ ಮತ್ತು ರಾಮದುರ್ಗ ತಾಲೂಕ ಆಸ್ಪತ್ರೆ ಹೊಸ ಕಟ್ಟಡಕ್ಕೆ ಅನುಮೋದನೆ ದೊರೆತಿದೆ ಎಂದರು.

ಶಾಸಕ ವಿಶ್ವಾಸ ವೈದ್ಯ ಮಾತನಾಡಿ, ಸರಕಾರ ಬಡವರ, ದೀನದಲಿತರ ಅನುಕೂಲಕ್ಕಾಗಿ ಆರೋಗ್ಯ ಮೇಳ ಆಯೋಜಿಸಿದ್ದು ಯಶಸ್ವಿಗೆ ಶ್ರಮಿಸಿದ ಎಲ್ಲರಿಗೂ ಧನ್ಯವಾದಗಳು ಅರ್ಪಿಸುತ್ತೇನೆ. ಶಿಥಿಲಾವಸ್ಥೆಯಲ್ಲಿರುವ ತಾಲೂಕಾಸ್ಪತ್ರೆಯನ್ನು 150 ಕೋಟಿ ಅನುದಾನದಲ್ಲಿ ಮೇಲದರ್ಜೆಗೆರಿಸಲು ಬಜೆಟ್ ನಲ್ಲಿ ಅನುಮೋದನೆ ದೊರೆತಿದ್ದು ಸಹಕರಿಸಿದ ಆರೋಗ್ಯ ಸಚಿವರಿಗೆ ಧನ್ಯವಾದಗಳು. ಮುನವಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿಸುವ ಅಗತ್ಯವಿದೆ. ರಸ್ತೆ, ಸ್ಮಶಾನ, ಕ್ರೀಡಾಂಗಣ ಅಭಿವೃದ್ಧಿ, ಶಾಲಾ ಕಟ್ಟಡ, ಅಲಂಕಾರಿಕ ದೀಪಗಳ ಅಳವಡಿಕೆ ಸೇರಿ ಕ್ಷೇತ್ರದ ಅಭಿವೃದ್ಧಿಗೆ 150 ಕೋಟಿಗೂ ಹೆಚ್ಚು ಅನುದಾನ ನೀಡಿ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಿದ ಸತೀಶ್ ಜಾರಕಿಹೊಳಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ತಾಲೂಕಾ ಕ್ರೀಡಾಗಣದ ಮೈದಾನದಲ್ಲಿ ಆಯೋಜಿಸಿದ್ದ ಬೃಹತ್ ಆರೋಗ್ಯ ಮೇಳಕ್ಕೆ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದ್ದು, ಮಂದಿ ಭಾಗಿಯಾಗಿ ಸೌಲಭ್ಯ ಪಡೆದಿದ್ದಾರೆ. ಬೆಳಗ್ಗೆ 7 ಗಂಟೆಗೆ ಆರಂಭವಾದ ಮೇಳ ಸಂಜೆ 6 ಗಂಟೆವರೆಗೂ ನಡೆಯಿತು. ಹೆಚ್ಚು ಮಂದಿ ಹೃದಯ ತಪಾಸಣೆ, ನರರೋಗ, ಎಲುವು ಕೀಲು ತಪಾಸಣೆ ಮಾಡಿಸಿಕೊಂಡಿದ್ದಾರೆ. ಮೇಳದಲ್ಲಿ ಭಾಗವಹಿಸಿದ್ದವರಿಗೆ ಮಧ್ಯಾಹ್ನದ ಉಪಾಹಾರದ ವ್ಯವಸ್ಥೆಯೂ ಮಾಡಲಾಗಿತ್ತು. ವಿಶಾಲವಾಗಿ ಶಾಮಿಯಾನ ಹಾಕಿ ಬೇರೆ ಬೇರೆ ವಿಭಾಗದ ಕೌಂಟರ್‌ಗಳನ್ನು ಮಾಡಲಾಗಿತ್ತು.

> **ಗೋಕಾಕನಲ್ಲಿ ಜಿಲ್ಲಾಸ್ಪತ್ರೆ ನಿರ್ಮಾಣಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಬಿಪಿ ಶುಗರ್ ಹಿಡಿತವಿದ್ದಲ್ಲಿ ಇತರೆ ರೋಗಗಳಿಗೆ ನಿಯಂತ್ರಣ ಮಾಡಿದಂತೆ. ಉತ್ತಮ ವ್ಯಾಯಾಮ, ಉತ್ತಮ ಹವ್ಯಾಸಗಳ ಮೂಲಕ ಆರೋಗ್ಯ ವೃದ್ಧಿಯಾಗಲಿದೆ.**
> – ದಿನೇಶ್ ಗುಂಡೂರಾವ್, ಸಚಿವ

ಸರಕಾರಿ ಆಸ್ಪತ್ರೆಗೆ ಸಚಿವ ದಿನೇಶ ಭೇಟಿ, ಪರಿಶೀಲನೆ



ಸಚಿವ ದಿನೇಶ ಗುಂಡೂರಾವ ಆಸ್ಪತ್ರೆಯಲ್ಲಿನ ವ್ಯವಸ್ಥೆಯ ಕುರಿತು ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು.

ರಾಮದುರ್ಗ: ಸ್ಥಳೀಯ ಸರಕಾರಿ ಆಸ್ಪತ್ರೆಯನ್ನುಅತ್ಯಾಧುನಿಕ ಸೌಲಭ್ಯಕ್ಕೊಳಪಟ್ಟ 100 ಹಾಸಿಗೆ ಸಾಮರ್ಥ್ಯಕ್ಕೆ ಹೆಚ್ಚಿಸಲು ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡಿದ ಹಿನ್ನಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವದಿನೇಶ ಗುಂಡುರಾವ್ ಭಾನುವಾರ ರಾಮದುರ್ಗ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳ ಕುರಿತು ಪರಿಶೀಲನೆ ನಡೆಸಿದರು.

ಸವದತ್ತಿಯಲ್ಲಿ ರಾಜ್ಯ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೇತೃತ್ವದಲ್ಲಿ ಭಾನುವಾರ ಏರ್ಪಡಿಸಿದ ಆರೋಗ್ಯ ಮೇಳದಲ್ಲಿ ಪಾಲ್ಗೊಂಡು ನಂತರ ರಾಮದುರ್ಗ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆದು, ಮೇಲ್ದರ್ಜೆಗೇರಿಸುವ ಕಟ್ಟಡ ನಿರ್ಮಾಣ ಹಾಗೂ ಸೌಲಭ್ಯ ಕಲ್ಪಿಸುವ ಬಗೆಗೆ ಮಾಹಿತಿ ಪಡೆದರು.

ಇದೇ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳ ಮಾಹಿತಿ ಪಡೆದು, ಒಳರೋಗಿಗಳೊಂದಿಗೆ ಸಂವಾದ ನಡೆಸಿದರು.ಇದೇ ಸಂದರ್ಭದಲ್ಲಿ ಕೆಲ ರೋಗಿಗಳು ಆಸ್ಪತ್ರೆಯಲ್ಲಿ ವೈದ್ಯರು ಸಮಯಕ್ಕೆ ಸರಿಯಾಗಿ ದೊರೆಯುವುದಿಲ್ಲ, ಸ್ತ್ರೀರೋಗ, ಅರವಳಿಕೆ ತಜ್ಞರಿಲ್ಲ. ಹೆರಿಗೆ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆ ಅಗತ್ಯವಿದ್ದಲ್ಲಿ ಬೇರೆಡೆಗೆ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಸಂಚಾರ ಮಾಡಬೇ ಕಾದ ಅನಿವಾರ್ಯತೆ ಇದೆ ಎಂದು ಸ್ಥಳೀಯರು ತಮ್ಮ ಅಳಲು ತೋಡಿಕೊಂಡರು.

ಸಾರ್ವಜನಿಕ ಸಮಸ್ಯೆಗಳಿಗೆ ಪ್ರತಿಕ್ರಿಯಿಸಿದ ಸಚಿವ ದಿನೇಶ ಗುಂಡುರಾವ್, ನೂತನ ಕಟ್ಟಡ ನಿರ್ಮಾಣ, ವೈದ್ಯಕೀಯ ಸೌಲಭ್ಯ ಒದಗಿಸಲು ಸುಸಜ್ಜಿತ ಕಟ್ಟಡ ನಿರ್ಮಾಣ ಕಲ್ಪಿಸುವ ಕುರಿತು ಜಿಲ್ಲಾ ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. ಆಸ್ಪತ್ರೆಯ ಉನ್ನತೀಕರಣ, ಅಗತ್ಯ ಸ್ತ್ರೀರೋಗ ತಜ್ಞರು, ಅರವಳಿಕೆ ತಜ್ಞರ ನೇಮಕಕ್ಕೆ ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸುತ್ತೇನೆಎಂದು ಭರವಸೆ ನೀಡಿದರು.

ಸರಕಾರಿ ಆಸ್ಪತ್ರೆಯ ವೈದ್ಯರು ತಮ್ಮ ಸರಕಾರಿ ಸೇವೆ ಸಲ್ಲಿಸುವ ಸಮಯ ಹೊರತುಪಡಿಸಿ, ಖಾಸಗಿ ಸೇವೆ ಮಾಡಲು ಅಭ್ಯಂತರವಿಲ್ಲ. ತುರ್ತು ಸಂದರ್ಭದಲ್ಲಿ ತಮ್ಮ ಖಾಸಗಿ ಸೇವೆ ಬಿಟ್ಟು ಸರಕಾರಿ ಸೇವೆಗೆ ಕಡ್ಡಾಯವಾಗಿ ಹಾಜರಾಗಬೇಕು. ಒಂದು ವೇಳೆ ದೂರುಗಳು ಕೇಳಿ ಬಂದಲ್ಲಿ ಅಂತವರ ಮೇಲೆ ಸರಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದರು.

ತಾಲೂಕಿನಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿರುವ ಕುರಿತು ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗುಂಡೂರಾವ್, ತಾಲೂಕು ಅಷ್ಟೇ ಅಲ್ಲರಾಜ್ಯಾದ್ಯಂತ ನಕಲಿ ವೈದ್ಯರ ಹಾವಳಿ ಇದೆ. ಅಧಿಕಾರಿಗಳ ಮುಖಾಂತರ ಅಂತವರ ಮೇಲೆ ಶಿಸ್ತು ಕ್ರಮಕ್ಕೆ ಸರಕಾರ ಸೂಚನೆ ನೀಡುತ್ತದೆ. ಆದರೂ ಕೆಲವರು ಪ್ರಭಾವ ಬಳಕೆ ಮಾಡಿಕೊಂಡು ಶಿಸ್ತು ಕ್ರಮದಿಂದ ನುನುಚಿಕೊಳ್ಳುತ್ತಿದ್ದಾರೆ. ಅಂತವರ ಮೇಲೆಯೂ ಕ್ರಮಕ್ಕೆ ಸರಕಾರ ಬದ್ಧವಿದೆ ಎಂದರು.

ಈ ಸಂದರ್ಭದಲ್ಲಿ ಜಿ.ಪಂ ಸಿಇಓ ರಾಹುಲ ಶಿಂಧೆ, ಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತ ಶಿವಕುಮಾರ, ಮುಖಂಡರಾದ ಪ್ರದೀಪ ಪಟ್ಟಣ, ಅನಿಕೇತ ಪಟ್ಟಣ, ಟಿಎಚ್ಓ ಡಾ.ನವೀನ ನಿಜಗುಲಿ ಸೇರಿದಂತೆಇಲಾಖೆಯ ಅಧಿಕಾರಿಗಳು ಇದ್ದರು.

ಬಳೆ ತೊಡಿಸಿಕೊಂಡ ಸಚಿವೆ ಲಕ್ಷ್ಮೀ

ಬೆಳಗಾವಿ: ಮೋದಗಾ ಶ್ರೀಮಹಾಲಕ್ಷ್ಮಿ ದೇವಿಯ ಜಾತ್ರಾ ಮಹೋತ್ಸವದಲ್ಲಿ ಕುಟುಂಬ ಸದಸ್ಯರೊಂದಿಗೆ ಪಾಲ್ಗೊಂಡ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ದೇವಿಗೆ ಉಡಿ ತುಂಬಿ, ಸರ್ವರ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಇದೇ ವೇಳೆ, ಹಸಿರು ಕಾಜಿನ ಬಳೆಗಳನ್ನು ತೊಟ್ಟು ಸಚಿವರು ಖುಷಿಪಟ್ಟರು. ದೇವಿಯ ಕೃಪೆಯನ್ನು ಪಡೆಯುವ ಸೌಭಾಗ್ಯ ಲಭಿಸಿರುವುದು ಖುಷಿ ತಂದಿದೆ. ಈ ಧಾರ್ಮಿಕ ಸಂಭ್ರಮವು ನಂಬಿಕೆ, ಪರಂಪರೆ ಮತ್ತು ಆಧ್ಯಾತ್ಮಿಕತೆಯ ಮಹತ್ವವನ್ನು ಇಮ್ಮಡಿಗೊಳಿಸಲೆಂದು ಹಾರೈಸುತ್ತೇನೆ ಎಂದು ಸಚಿವರು ಹೇಳಿದರು.

ಹಸಿರು ಕಾಜಿನ ಬಳೆಗಳು ನಂಬಿಕೆಯ ಸಂಕೇತ, ಸೌಭಾಗ್ಯದ ಪ್ರತೀಕ. ಪ್ರತಿ ಘಳಿಗೆಯೂ ದೇವಿಯ ಅನುಗ್ರಹದಿಂದ ಪವಿತ್ರವಾಗಲಿ, ಜಾತ್ರೆಯ ಈ ಶುಭ ಸಂದರ್ಭದಲ್ಲಿ ಎಲ್ಲರ ಜೀವನ ಶ್ರೀಮಂತಿಕೆ ಮತ್ತು ಸುಖದಿಂದ ಕೂಡಿರಲಿ ಎಂದರು.

ಮೋದಗಾ ಶ್ರೀಮಹಾಲಕ್ಷ್ಮಿ ದೇವಿಯ ಜಾತ್ರಾ ಮಹೋತ್ಸವದಲ್ಲಿ ಸಚಿವೆ ಲಕ್ಷ್ಮೀ ಅವರು ಬಳೆ ತೊಡಿಸಿಕೊಂಡರು.

ಶೈಕ್ಷಣಿಕ ಪ್ರಗತಿ ಯೋಜನೆಗಳ ಅನುಷ್ಠಾನ

ಗೋಕಾಕ: ಕ್ಷೇತ್ರದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಹಲವಾರು ಯೋಜನೆಗಳ ಅನುಷ್ಠಾನದೊಂದಿಗೆ ಶಾಸಕರಾದ ರಮೇಶ ಜಾರಕಿಹೊಳಿ ಅವರು ಕಾರ್ಯ ಪ್ರವೃತ್ತರಾಗಿದ್ದಾರೆಂದು ಯುವ ನಾಯಕ ಅಮರನಾಥ ಜಾರಕಿಹೊಳಿ ಹೇಳಿದರು.

ಅವರು ಶನಿವಾರದಂದು ನಗರದ ಶಾಸಕರ ಗೃಹ ಕಚೇರಿಯಲ್ಲಿ ಕ್ಷೇತ್ರದ ಮೂರು ಸರಕಾರಿ ಶಾಲೆಗಳು ಪಿಎಮ್‌ಎಸ್ ಯೋಜನೆಗೆ ಆಯ್ಕೆಗೊಂಡ ಹಿನ್ನಲೆಯಲ್ಲಿ ಶಿಕ್ಷಣ ಇಲಾಖೆ ಮತ್ತು ಎಸ್‌ಡಿಎಮ್‌ಸಿಯವರು ಹಮ್ಮಿಕೊಂಡ ಅಭಿನಂಧನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು.

ಗೋಕಾಕ ಶೈಕ್ಷಣಿಕ ವಲಯದ ಕೊಣ್ಣೂರು ಗ್ರಾಮದ ಕೆಬಿಎಸ್, ಬೆಣಚಿನಮರಡಿ ಗ್ರಾಮದ ಆರ್‌ಎಮ್‌ಎಸ್‌ಎ ಎಚ್‌ಪಿಎಸ್ ಮತ್ತು ಜಿಎಚ್‌ಎಸ್ ಹಾಗೂ ನಗರದ ಸರಕಾರಿ ಪ್ರೌಢ ಶಾಲೆ(ಜಿಪಿಯುಸಿ) ಸೇರಿ ಒಟ್ಟು ಮೂರು ಶಾಲೆಗಳು ಶಾಸಕರ ಪ್ರಯತ್ನದಿಂದ ಆಯ್ಕೆಯಾಗಿದ್ದು ಐದು ವರ್ಷಗಳಲ್ಲಿ ತಲಾ 2 ಕೋಟಿ ರು.ಗಳ ಅನುದಾನದಲ್ಲಿ ಈ ಶಾಲೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಶಾಸಕರು ಶೈಕ್ಷಣಿಕ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡಿದ್ದರಿಂದ ವಿದ್ಯಾರ್ಥಿಗಳು ಇಂದು ಸಾಧಕರಾಗಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ತಾಲೂಕಿನ ಕೀರ್ತಿಯನ್ನು ಹರಡುತ್ತಿದ್ದಾರೆ. ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಜನತೆ ಶಾಸಕರಿಗೆ ಸಹಕಾರ ನೀಡುವಂತೆ ಕೋರಿದರು.

ಜೀವ ಉಳಿಸಲು ರಕ್ತದಾನ ಅತ್ಯಗತ್ಯ

ಸಿಂದಗಿ: ರಕ್ತದಾನ ಮಾನವನ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ. ದೇಶದಲ್ಲಿ ಪ್ರತಿವರ್ಷ 41ದಶ ಲಕ್ಷ ಯೂನಿಟ್ ರಕ್ತದ ಕೊರತೆ ಉಂಟಾಗುತ್ತದೆ. ಸಮಯಕ್ಕೆ ಸರಿಯಾಗಿ ರಕ್ತ ದೊರೆಯದೆ ವಿವಿಧ ಕಾಯಿಲೆಗಳಿಂದ ಬಳಲುವ ರೋಗಗಳು, ಅಪಘಾತದ ಗಾಯಾಳುಗಳು ಮೃತಪಟ್ಟಿದ್ದಾರೆ. ಅಮೂಲ್ಯವಾದ ಜೀವ ಉಳಿಸಲು ಸ್ವಯಂ ಪ್ರೇರಣೆಯಿಂದ ಎಲ್ಲರೂ ರಕ್ತದಾನ ಮಾಡುವುದು ಅತೀ ಅವಶ್ಯಕ ಎಂದು ರಾಂಪೂರ ಪಿಎ ಗ್ರಾಮದ ಆರೂಢ ಮಠದ ಸಮರ್ಥ ಸದ್ಗುರು ಆರೂಢ ನಿತ್ಯಾನಂದ ಶಿವಯೋಗಿಗಳು ಹೇಳಿದರು.

ತಾಲೂಕಿನ ರಾಂಪೂರ ಪಿಎ ಗ್ರಾಮದ ಶ್ರೀ ಸಮರ್ಥ ಸದ್ಗುರು ಆರೂಢ ಸಂಗನಬಸವೇಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ನಿಮಿತ್ಯ ಹಮ್ಮಿಕೊಂಡ ಶ್ರೀಮನ್ ನಿಜಗುಣ ಶಿವಯೋಗಿಗಳ ವಿರಚಿತ ಕೈವಲ್ಯ ಪದ್ಧತಿ ಪ್ರವಚನ ಕಾರ್ಯಕ್ರಮದಲ್ಲಿ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸಹಯೋಗದಲ್ಲಿ ಜರುಗಿದ ರಕ್ತದಾನ ಶಿಬಿರವನ್ನು ಉದ್ದೇಶಿಸಿ ಮಾತನಾಡಿದ ಅವರು, ರಕ್ತದಾನದಿಂದ ರಕ್ತದೊತ್ತಡ, ಮಧುಮೇಹದಂತಹ ರೋಗಗಳು ನಿಯಂತ್ರಣಕ್ಕೆ ಬರುವುದರ ಜೊತೆಗೆ ಆತ್ಮತೃಪ್ತಿ ದೊರೆಯುತ್ತದೆ ಎಂದರು.

ಪ್ರವಚನ ಕಾರ್ಯಕ್ರಮದಲ್ಲಿ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸಹಯೋಗದಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಯಿತು.

ಈ ವೇಳೆ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಹರಿ ಕುಲಕರ್ಣಿ ಮಾತನಾಡಿದರು. ಈ ವೇಳೆ ಸ್ವಯಂ ಪ್ರೇರಿತರಾಗಿ 35ಕ್ಕೂ ಅಧಿಕ ಜನರು ರಕ್ತದಾನ ಮಾಡಿದರು. ರಕ್ತದಾನ ಶಿಬಿರದಲ್ಲಿ ಮಹಾಂತ ಮಹರಾಜ, ಶಂಕರಾನಂದ ಮಹಾರಾಜ, ಡಾ.ಮಹಾಂತೇಶ ಹಿರೇಮಠ, ರಾಜು ನರಗೋದಿ, ಬಿ.ಕೆ.ಮೈಸೂರ, ಡಾ.ವಿನಾಯಕ ಕಟ್ಟಿ, ಅರುಣ ಕಾಂಬ್ಳೆ, ನಬಿಸಾಬ, ಪ್ರಿಯಾಂಕ, ಜ್ಯೋತಿ, ಪ್ರಕಾಶ ಕವಲಗಿ, ಮಹೇಶ, ಯಲ್ಲಾಲಿಂಗ ಕಟಕದೊಂಡ, ಭಗವಂತ ಮಹೇಂದ್ರಕರ, ದಾನಮ್ಮ ಮಠ, ಫಿರಜಾನ್ ಮುಜಾವರ, ಮಹಾಲಕ್ಷ್ಮಿ ನಾಯ್ಕೋಡಿ, ನಾಗರತ್ನ ಪರೀಟ್, ಭೋಜರಾಜ ದೇಸಾಯಿ, ಬಸಮ್ಮ ಅಂಗಡಿ, ಸುನಂದಾ ಅಂಗಡಿ, ಶಕುಂತಲಾ ದೇಸಾಯಿ, ರುಕ್ಮಿಣಿ, ಅರ್ಪಿತಾ ಕುಳಗೇರಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಇದ್ದರು.

ನೀರು ಸಂರಕ್ಷಣೆ ಎಲ್ಲರ ಹೊಣೆ

ಅಥಣಿ: ಜೀವಜಲ ಅತ್ಯಮೂಲ್ಯವಾದ ಸಂಪತ್ತು, ಈ ಪ್ರಕೃತಿಯಲ್ಲಿ ಇರುವ ಪ್ರತಿಯೊಂದು ಜೀವಿಗೂ ಕುಡಿಯುವ ನೀರು ಬೇಕೇ ಬೇಕು. ಈ ಜೀವ ಜಲವನ್ನು ಮಲಿನವಾಗದಂತೆ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಹೊಣೆಯಾಗಿದೆ ಎಂದು ಅಥಣಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ನಾಮದೇವ ಸಾಲಿಮಂಟಪಿ ಹೇಳಿದರು.

ಅವರು ಶನಿವಾರ ಪಟ್ಟಣದ ನ್ಯಾಯಾಧೀಶರ ವಸತಿ ಗ್ರಹದ ಆವರಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ಅಥಣಿ, ವಕೀಲರ ಸಂಘ ಅಥಣಿ ಹಾಗೂ ಅರಣ್ಯ ಇಲಾಖೆ ಅಥಣಿ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಜಲ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಅನೇಕ ಜಲಚರ ಪ್ರಭೇದಗಳು ತಮ್ಮ ಉಳಿವಿಗಾಗಿ ಆರೋಗ್ಯಕರ ಜಲಮೂಲ ಗಳನ್ನು ಅವಲಂಬಿಸಿ ರುತ್ತವೆ. ಜಲಮೂಲಗಳ ರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದ್ದು, ಅತಿಯಾದ ನೀರಿನ ಬಳಕೆ ಮತ್ತು ಮಾಲಿನ್ಯವು ಈ ಆವಾಸ ಸ್ಥಾನಗಳಿಗೆ ಹಾನಿ ಮಾಡು ತ್ತದೆ, ಇದು ಹಲವಾರು ಸಸ್ಯ ಮತ್ತು ಪ್ರಾಣಿ ಪ್ರಭೇದಗಳ ಅವನತಿಗೆ ಕಾರಣವಾಗುತ್ತದೆ. ನೀರನ್ನು ವ್ಯರ್ಥ ಮಾಡಬಾ ರದು. ಪ್ರಕೃತಿಯಲ್ಲಿ ಗಿಡಮರಗಳ ಸಂರಕ್ಷಣೆಯ ಜೊತೆಗೆ ಪ್ರತಿಯೊಬ್ಬರೂ ಪಕ್ಷಿ ಪ್ರಾಣಿಗಳ ಬಗ್ಗೆ ಕಾಳಜಿ ವಹಿಸುವುದು ಅಗತ್ಯ. ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬಿಸಿಲಿನ ತಾಪ ಮಾನದಿಂದ ಮೂಕ ಪ್ರಾಣಿಗಳ ಮತ್ತು ಪಕ್ಷಿಗಳಿಗೆ ಆಹಾರ ಮತ್ತು ನೀರನ್ನು ಒದಗಿಸುವ ಮೂಲಕ ಅವುಗಳ ಸಂರಕ್ಷಣೆ ಮಾಡಬೇಕು ಎಂದು ಕರೆ ನೀಡಿದರು.

ಅಥಣಿ ವಲಯ ಅರಣ್ಯ ಅಧಿಕಾರಿ ರಾಕೇಶ ಅರ್ಜುನವಾಡ ಮಾತನಾಡಿ ಸರಕಾರ ನಮ್ಮ ಇಲಾಖೆ ನಿರಂತರ ಅರಣ್ಯ ಬೆಳೆಸುವಲ್ಲಿ ಶ್ರಮಿಸುತ್ತಿದೆ. ನಗರದಲ್ಲಿ ಸಾರ್ವಜನಿಕ ಖಾಲಿ ಜಾಗಗಳಲ್ಲಿ, ಉದ್ಯಾನವನಗಳಲ್ಲಿ ಇಲಾಖೆ ಮೇಲೆ ಮಾತ್ರ ಅವಲಂಬಿತರಾಗದೆ, ವಾಯುವಿಹಾರಕ್ಕಾಗಿ ಬರುವವರು ಸಾರ್ವಜನಿಕರು ಸಹ ಕಾರ ನೀಡುವುದ ರೊಂದಿಗೆ ಅರಣ್ಯ ಬೆಳೆಸಲು ಸಹಕರಿಸ ಬೇಕೆಂದು ಕೋರಿದರು. ಕಾರ್ಯಕ್ರಮದಲ್ಲಿ ಹೆಚ್ಚುವರಿ ಹಿರಿಯ ಸಿವಿಲ್ ನಾಯಾಧೀಶರಾದ ರವಿ ಕುಮಾರ, ಕೆ ಹಾಗೂ ಅಥಣಿ ಪ್ರಭಾರಿ ಪಧಾನ ಸಿವಿಲ್ ಹಾಗೂ ಜೆಎಮ್‌ಎಫ್‌ಸಿ ನ್ಯಾಯಾಧೀಶರಾದ ಓಂಕಾರ ಮೂರ್ತಿ ಎಚ್. ಪಾಲ್ಗೊಂಡಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಥಣಿ ವಕೀಲರ ಸಂಘದ ಅಧ್ಯಕ್ಷ ಎನ್ ಬಿ ಖೋಖಲೆ ವಹಿಸಿ ಮಾತನಾಡಿದ ರು. ನಂತರ ನ್ಯಾಯಾಧೀಶರ ವಸತಿಗೃಹದ ಆವರಣದಲ್ಲಿರು ವ ಗಿಡ ಮರಗಳಿಗೆ ಮಣ್ಣಿನ ಕುಡಿಕೆಗಳನ್ನು ಕಟ್ಟಿ ಪಕ್ಷಿಗಳಿಗೆ ಕುಡಿಯಲು ನೀರು ತುಂಬಿಸುವ ಮೂಲಕ ವಿಶ್ವ ಜಲ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕ ಬಸಪ್ಪ ಕಾಂಬಳೆ, ವಕೀಲರ ಸಂಘದ ಉಪಾಧ್ಯಕ್ಷ ಬಸವರಾಜ ಡಂಗಿ, ಕಾರ್ಯದರ್ಶಿ ಎನ್‌ಆರ್ ಯಕ್ಕಂಚಿ, ಆರ್ ಪಿ ನಲವಡಿ, ಪುರಸಭೆ ಮುಖ್ಯ ಅಧಿಕಾರಿ ಅಶೋಕ ಗುಡಿಮನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೂರು ಸಾವಿರ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ ಇಂದು

ಬೆಳಗಾವಿ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಕರ್ನಾಟಕ ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ಸೋಮವಾರ ಮಾ.24ರಂದು ಮೂರು ಸಾವಿರ ಮಹಿಳೆಯರಿಗೆ ಸಾಮೂಹಿಕ ಸೀಮಂತ ಕಾರ್ಯಕ್ರಮ, ವಿಕಲಚೇತನರಿಗೆ ವಿವಿಧ ಸಲಕರಣೆಗಳ ವಿತರಣೆ ಹಾಗೂ ವಿಭಾಗೀಯ ಮಟ್ಟದ ಸ್ತ್ರೀ ಶಕ್ತಿ ಗುಂಪುಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಉದ್ಘಾಟಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಗೃಹಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು, 3000 ಗರ್ಭಿಣಿಯರಿಗೆ ಸೀರೆ, ಹೂವು, ಹಣ್ಣು ಕಾಯಿ, ಅರಿಶಿನ-ಕುಂಕುಮ, ಬಳೆ ಹೀಗೆ ಪಂಚ ಬಗೆಯ ಮಂಗಳಕರ ಸಾಮಗ್ರಿಗಳನ್ನೊಳಗೊಂಡು ಉಡಿ ತುಂಬುವ ಶಾಸ್ತ್ರದೊಂದಿಗೆ ಸೀಮಂತ ಕಾರ್ಯಕ್ರಮವನ್ನು ನೆರವೇರಿಸಲಾಗು ವುದು ಎಂದರು.

ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ಹಿರಿಯ ನಾಗರಿಕರ ದಿನಾಚರಣೆ ಪ್ರಯುಕ್ತ 1000 ಹಿರಿಯ ನಾಗರಿಕರು ಹಾಗೂ ವಿಕಲಚೇತನರು ಕಾರ್ಯಕ್ರಮದಲ್ಲಿ ಭಾಗವಹಿಸಲ್ಲಿದ್ದು, ವಿಕಲ ಚೇತನರಿಗೆ - ತ್ರಿಚಕ್ರ ಸ್ಕೂಟರ್ ವಿತರಣೆ ಮಾಡಲಾಗುವುದು ಎಂದು ಸಚಿವರು ಹೇಳಿದರು. ಸ್ತ್ರೀಶಕ್ತಿ ಗುಂಪುಗಳನ್ನು ಉತ್ತೇಜಿಸಲು ವಿಭಾಗೀಯ ಮಟ್ಟದ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆ ಮೇಳವನ್ನು ಆಯೋಜಿಸಲಾಗಿದ್ದು, ಬೆಳಗಾವಿ, ಹಾವೇರಿ, ಬಾಗಲಕೋಟೆ, ವಿಜಯಪುರ, ಕಾರವಾರ, ಗದಗ ಹಾಗೂ ಧಾರವಾಡ ಹೀಗೆ 7 ಜಿಲ್ಲೆಗಳ ಸ್ತ್ರೀಶಕ್ತಿ ಗುಂಪುಗಳ ಸದಸ್ಯರು ಮತ್ತು ಜಿಲ್ಲಾ ಪಂಚಾಯತ್ ಎನ್.ಆರ್.ಎಲ್.ಎಮ್ ಅಡಿ ಸ್ತ್ರೀ ಶಕ್ತಿ ಗುಂಪುಗಳು ಪಾಲ್ಗೊಂಡು ಸದರಿ ಮಳಿಗೆಗಳಲ್ಲಿ ವಿವಿಧ ಕರಕುಶಲ ವಸ್ತುಗಳ ಪ್ರದರ್ಶನ, ಬಟ್ಟೆ ವ್ಯಾಪಾರ, ತಿಂಡಿ-ತಿನಿಸುಗಳ ವ್ಯಾಪಾರ, ಲಂಬಾಣಿ ಉಡುಪು, ಬಿದಿರಿನಿಂದ ತಯಾರಿಸಿದ ವಸ್ತುಗಳು, ವಿವಿಧ ರೀತಿಯ ಬ್ಯಾಗಗಳು ಇತ್ಯಾದಿ ವಸ್ತುಗಳನ್ನು ಪ್ರದರ್ಶಿಸಲು ಹಾಗೂ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಮಾತನಾಡಿದರು.

ಬೇಟಿ ಬಚಾವೊ, ಬೇಟಿ ಪಡಾವೊ ಕಾರ್ಯಕ್ರಮದಡಿ ಹೆಣ್ಣು ಮಗುವಿನ ಹೆಸರಿನಲ್ಲಿ ಗಿಡವನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದ ಸಚಿವರು, ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಬೇಕು ಎಂದು ಮನವಿ ಮಾಡಿದರು.

ಬೆಳಗಾವಿ ಗ್ರಾಮೀಣ ಮತ ಕ್ಷೇತ್ರದಿಂದ ಮೂರು ಸಾವಿರ ಗರ್ಭಿಣಿಯರಿಗೆ ಸಾಮೂಹಿಕವಾಗಿ ಸೀಮಂತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮುಂಬರುವ ದಿನಗಳಲ್ಲಿ ರಾಜ್ಯಾದ್ಯಂತ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದ್ದು, ಮೊದಲ ಯತ್ನವಾಗಿ ಬೆಳಗಾವಿ ಗ್ರಾಮೀಣ ಕ್ಷೇತ್ರದಿಂದ ಶುರು ಮಾಡಲಾಗುತ್ತಿದೆ. ಸೀಮಂತ ಕಾರ್ಯಕ್ರಮಕ್ಕೆ ಆಗಮಿಸುವ ಗರ್ಭಿಣಿಯರ ಸಂಪೂರ್ಣ ಆರೈಕೆಯನ್ನು ಅಂಗನವಾಡಿ ಕಾರ್ಯಕರ್ತೆಯರು ನೋಡಿಕೊಳ್ಳುತ್ತಾರೆ ಎಂದರು.

ಸುದ್ದಿ ಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ್ ಹಟ್ಟಿಹೊಳಿ, ಸಚಿವರ ಮಾಧ್ಯಮ ಸಲಹೆಗಾರರಾದ ಎಂ.ಕೆ.ಹೆಗಡೆ, ಇಲಾಖೆಯ ಉಪ ನಿರ್ದೇಶಕರಾದ ನಾಗರಾಜ್ ಉಪಸ್ಥಿತರಿದ್ದರು.

6ನೇ ಗ್ಯಾರಂಟಿ ಬಗ್ಗೆ ಸಿಎಂ ನಿರ್ಧಾರ

ಕರ್ನಾಟಕದಲ್ಲಿ ಈಗಾಗಲೇ ಪಂಚ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿದ್ದು, ಅಂಗನವಾಡಿ ಕಾರ್ಯಕರ್ತೆಯರಿಗೆ ಆರನೇ ಗ್ಯಾರಂಟಿ ನೀಡುವುದರ ಬಗ್ಗೆ ಸಿಎಂ ತೀರ್ಮಾನ ಕೈಗೊಳ್ಳುವರು. 2017ರಲ್ಲಿ ಸಿದ್ದರಾಮಯ್ಯನವರೇ ಸಿಎಂ ಆಗಿದ್ದಾಗ, ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವ ಧನ ಹೆಚ್ಚಿಸಲಾಗಿತ್ತು. ಈಗ ಮತ್ತೆ ಅವರೇ ಗೌರವ ಧನವನ್ನು ಏರಿಸಿದ್ದಾರೆ. ಜೊತೆಗೆ 2023ರಿಂದ ನಿವೃತ್ತಿಯಾದವರಿಗೆ ಗ್ರ್ಯಾಚ್ಯುಟಿಯನ್ನು ನೀಡಲಾಗುತ್ತಿದೆ ಎಂದು ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದರು.

ಸಿಪಿಎಡ್ ಮೈದಾನದಲ್ಲಿ ನಡೆಯಲಿದೆ ಕಾರ್ಯಕ್ರಮ

ಬೆಳಗಾವಿ ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಮಹಿಳಾ ಮತ್ತು ಮಕ್ಕಳು ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ವತಿಯಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಸಿ.ಪಿ.ಎಡ್ ಆಟದ ಮೈದಾನದಲ್ಲಿ ಬೆಳಗ್ಗೆ 10.30ರಿಂದ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೊಳಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸಮಾರಂಭದಲ್ಲಿ ಮುಖ್ಯಅತಿಥಿಯಾಗಿ ಪಾಲ್ಗೊಳ್ಳುತ್ತಿದ್ದು, ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಆಸೀಫ್ ಸೇಠ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಮಾಚಾರ ಸಣ್ಣದಲ್ಲ

ತೆಲಂಗಾಣಕ್ಕೆ 10 ಟಿಎಂಸಿ ನೀರು: ಸಂಸದ

ವಿಜಯಪುರ: ರಾಜ್ಯದ ಕೃಷ್ಣಾ ನದಿಯಿಂದ ತೆಲಂಗಾಣಕ್ಕೆ ನೀರು ಬಿಟ್ಟ ವಿಚಾರಕ್ಕೆ, ತೆಲಂಗಾಣಕ್ಕೆ 10 ಟಿಎಂಸಿ ನೀರು ಬಿಟ್ಟಿದ್ದಾರೆಂದು ಸಂಸದ ರಮೇಶ ಜಿಗಜಿಣಗಿ ಆರೋಪಿಸಿ ದೆಹಲಿಯಿಂದ ವಿಡಿಯೋ ಮೂಲಕ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರಾಜ್ಯದಿಂದ ತೆಲಂಗಾಣಕ್ಕೆ 1.5 ಟಿಎಂಸಿ ಮಾತ್ರ ನೀಡು ಬಿಡುತ್ತೇವೆಂದು ಹೇಳಿ ಮೋಸ ಮಾಡಲಾಗಿದೆ. ಇದು ವಿಜಯಪುರ ಜಿಲ್ಲೆಯ ಜನರಿಗೆ ಮಾಡಿದ ಮೋಸ. ಮೂಲಗಳ ಪ್ರಕಾರ ತೆಲಂಗಾಣಕ್ಕೆ 10 ಟಿಎಂಸಿ ರಾಜ್ಯದ ನೀರು ಬಿಟ್ಟಿದ್ದಾರೆ. ಒಂದು ಮಹಾ ಮೋಸ. ನಮ್ಮ ಜಿಲ್ಲೆಯಲ್ಲೇ ಕುಡಿಯುವ ನೀರಿನ ಸಮಸ್ಯೆಯಿದೆ. ನಗರದಲ್ಲಿ ಒಂದಡೆ ನಾಲ್ಕು ದಿವಸ ಮತ್ತೊಂದೆಡೆ 8 ದಿನಕ್ಕೆ ನೀರು ಬಿಡಲಾಗುತ್ತಿದೆ. ನಮ್ಮಲ್ಲೇ ನೀರಿಲ್ಲಾ ಆದರೆ ತೆಲಂಗಾಣಕ್ಕೆ ನೀರು ಬಿಡೋ ಅವಶ್ಯಕತೆ ಏನಿತ್ತು? ಈ ಕುರಿತು ಸರಕಾರಕ್ಕೆ ಪ್ರಶ್ನೆ ಮಾಡುವೆ ಇದು ಸರಿಯಲ್ಲ ಎಂದರು. ಇದೇ ರೀತಿ ಮಾಡಿದರೆ ಈ ಸರಕಾರ ಬಹಳ ದಿನ ಉಳಿಯಲ್ಲ. ಇದಕ್ಕೆ ಬಹಳ ಕಾರಣಗಳಿವೆ. ರಾಜ್ಯದ ವಿಶ್ವವಿದ್ಯಾಲಯಗಳು, ಆರೋಗ್ಯ ಇಲಾಖೆ ಕಂದಾಯ ಇಲಾಖೆಗಳಲ್ಲಿ ಗುತ್ತಿಗೆ ಆಧಾರದ ಕೆಲಸ ಮಾಡುವವರಿಗೆ ನಾಲ್ಕೈದು ತಿಂಗಳಿನಿಂದ ವೇತನ ಆಗಿಲ್ಲ. ಸರ್ಕಾರ ನೀತಿ ಪ್ರವೃತ್ತಿ ಸರಿಯಿಲ್ಲ ಎಂದು ವಿಜಯಪುರ ಸಂಸದ ರಮೇಶ ಜಿಗಜಿಣಗಿ ವಿಡಿಯೋ ಹೇಳಿಕೆ ಮೂಲಕ ಆಕ್ರೋಶ ಹೊರಹಾಕಿದ್ದಾರೆ.

ಮಾರುತಿ ಅಂತ್ಯ ಸಂಸ್ಕಾರ

ದೇವರಹಿಪ್ಪರಗಿ: ಸಮೀಪದ ಬೊಮ್ಮನಹಳ್ಳಿ ಗ್ರಾಮದಲ್ಲಿ ನಿನ್ನೆ ದಿವಸ ಮಂಗ ಒಂದು ಆಕಸ್ಮಿಕವಾಗಿ ವಿದ್ಯುತ್ ತಂತಿ ಸ್ಪರ್ಶಿಸಿ ಮೃತಪಟ್ಟಿದ್ದು. ಸಾವಿಗೀಡಾದ ಮಂಗನಿಗೆ ಗ್ರಾಮಸ್ಥರು ಶಾಸ್ತ್ರೋಕ್ತವಾಗಿ ಮಂಗನ ಶವವನ್ನು ಕೂಡಿಸಿ ಪೂಜೆ ಪುನಸ್ಕಾರ ಮಾಡಿ ನಂತರ ಮನುಷ್ಯರಿಗೆ ಮಾಡುವ ಹಾಗೆ ಅದ್ದೂರಿಯಾಗಿ ಗ್ರಾಮದಲ್ಲಿ ವಾಹನದ ಮೇಲೆ ಕುಳ್ಳಿರಿಸಿ ಮೆರವಣಿಗೆ ಮಾಡಿ ಸಾವಿರಾರು ರೂಪಾಯಿ ಖರ್ಚಿನಿಂದ ಸಮಾಧಿಯನ್ನು ನಿರ್ಮಿಸಿ ಅಂತ್ಯ ಸಂಸ್ಕಾರವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಊರಿನ ಹಿರಿಯರಾದ ನಾನಾಗೌಡ ಮದ್ದರಕಿ, ಸಂಜೀವ ಪಾಟೀಲ, ಗ್ರಾಮ ಪಂಚಾಯತಿ ಸದಸ್ಯ ಬಾಲಪ್ಪ ಹಾದಿಮನಿ. ಕುಮಾರ ಮದ್ದರಕಿ, ತಿಪ್ಪಣ್ಣ ಅಚನೂರ, ನಿಂಗು ತುಂಬಗಿ. ರಾಜು ಹತ್ತರಕಿಹಾಳ. ಬೀರು ಹಾದಿಮನಿ. ಪಿಕೆಪಿಎಸ್. ಸದಸ್ಯ ಶಿವಪ್ಪ ಮಧಬಾವಿ ಸೇರಿದಂತೆ. ಊರಿನ ಯುವಕರು ಪಾಲ್ಗೊಂಡು ಅಂತ್ಯ ಸಂಸ್ಕಾರ ನೆರವೇರಿಸಿದರು.

ಪ್ರಥಮ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ | ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಚಾಲನೆ

ತಿಕೋಟಾ ಜಲಸಂಗ್ರಹಾಲಯಕ್ಕೆ ಡಿಪಿಆರ್ ತಯಾರಿಸಿ

ವಿಜಯಪುರ: ತುಬಚಿ- ಬಬಲೇಶ್ವರ ಏತ ನೀರಾವರಿ ಯೋಜನೆಯಿಂದ ಮಳೆಗಾಲದಲ್ಲಿ ಕೃಷ್ಣಾ ನದಿಯಲ್ಲಿ ಹರಿಯುವ ನೀರೆತ್ತಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ತಿಕೋಟಾ ತಾಲೂಕಿನ ಎರಡು ಕಡೆ ಸರಕಾರಿ ಜಮೀನಿನಲ್ಲಿ ಒಟ್ಟು ಎರಡೂವರೆ ಟಿಎಂಸಿ ನೀರು ಸಂಗ್ರಹಿಸಲು ಜಲಸಂಗ್ರಹಾಲಯ(ಸ್ಟೋರೇಜ್ ಟ್ಯಾಂಕ್) ನಿರ್ಮಿಸಲು ಯೋಜನಾ ವರದಿ ತಯಾರಿಸಲು ಸೂಚನೆ ನೀಡಿರುವುದಾಗಿ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ತಿಕೋಟಾದಲ್ಲಿ ಸುವರ್ಣ ಕರ್ನಾಟಕ ಸಂಭ್ರಮ- 50 ನಿಮಿತ್ಯವಾಗಿ ರವಿವಾರ ನಡೆದ ಪ್ರಥಮ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ತುಬಚಿ- ಬಬಲೇಶ್ವರ ಏತ ನೀರಾವರಿಯಲ್ಲಿ ಲಭ್ಯವಿರುವ ನೀರನ್ನು ಸದುಪಯೋಗ ಪಡಿಸಿಕೊಳ್ಳಲು ಈ ಚಿಂತನೆ ನಡೆಸಲಾಗುತ್ತಿದ್ದು, ಬಾಬಾನಗರ, ಸೋಮದೇವರಹಟ್ಟಿ ಮತ್ತು ಮಲಕನದೇವರಹಟ್ಟಿ, ಗ್ರಾಮಗಳ ಬಳಿ ಸರಕಾರಿ ಜಮೀನು ಲಭ್ಯವಿದೆ. ಈ ಪ್ರದೇಶಗಳಲ್ಲಿ ಜಮೀನು ಗುರುತಿಸಿ ಎರಡು ಸ್ಟೋರೇಜ್ ಟ್ಯಾಂಕುಗಳಲ್ಲಿ ಮಳೆಗಾಲದಲ್ಲಿ ನೀರು ಸಂಗ್ರಹಿಸುವ ಚಿಂತನೆಯಿದೆ. ನದಿಯಿಂದ ನೀರೆತ್ತುವುದರಿಂದ ಕೃಷ್ಣಾ ನದಿ ಭಾಗದಲ್ಲಿ ನೀರಿನ ಅಭಾವವಾಗುತ್ತಿದೆ ಎಂದು ರೈತರು ದೂರುತ್ತಿದ್ದು, ರೈತರ ಈ ಆತಂಕವನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆ ರೂಪಿಸಲಾಗುತ್ತಿದೆ. ಈ ಯೋಜನೆ ಸಂಬಂಧ ನೀರಾವರಿ ತಜ್ಞ ಡಾ. ವಿ. ಪಿ. ಹುಗ್ಗಿ ಅವರೊಂದಿಗೆ ಚರ್ಚೆ ನಡೆಸಿದ್ದೇನೆ. ಮತ್ತೋರ್ವ ತಜ್ಞ ಅರವಿಂದ ಗಲಗಲಿ ಅವರೊಂದಿಗೆ ಚರ್ಚಿಸಿ ವಿಸ್ತೃತ ವರದಿ ತಯಾರಿಸಲು ಸೂಚನೆ ನೀಡಿದ್ದೇನೆ ಎಂದು ಸಚಿವರು ತಿಳಿಸಿದರು.

ಪ್ರಥಮ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಚಿವ ಎಂ. ಬಿ. ಪಾಟೀಲ ಉದ್ಘಾಟಿಸಿದರು.

ಜಿಲ್ಲೆಯ ದ್ರಾಕ್ಷಿ ಬೆಳೆಗಾರರ ಹಿತರಕ್ಷಣೆಗೆ ಬದ್ಧನಾಗಿದ್ದೇನೆ. ಅಮೇರಿಕದ ಕ್ಯಾಲಿಫೋರ್ನಿಯಾದಲ್ಲಿ ಈಗ ಬರವಿದೆ. ಆದರೆ, ಶ್ರೀಆಶಯದಂತೆ ನೀರಾವರಿ ಮಾಡಿದ ಪರಿಣಾಮ ಇಲ್ಲಿ ಸಾಕಷ್ಟು ನೀರಿದೆ ಎಂದು ಹೇಳಿದರು. ಕನ್ನಡ ನಮ್ಮ ಮಾತೃಭಾಷೆ. ಕರ್ನಾಟಕದಲ್ಲಿರುವ ಪ್ರತಿಯೊಬ್ಬರು ಕನ್ನಡ ಕಲಿಯಬೇಕು. ಇಲ್ಲಿಗೆ ವಿದ್ಯಾಭ್ಯಾಸಕ್ಕೆ ಬರುವ ಹೊರ ರಾಜ್ಯಗಳ ವಿದ್ಯಾರ್ಥಿಗಳೂ ಕನ್ನಡವನ್ನು ಕಲಿಯಬೇಕು. ಕನ್ನಡ ನಮ್ಮ ಅಸ್ಮಿತೆಯಾಗಿದ್ದು, ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಆಯಾ ದೇಶಗಳಲ್ಲಿ ಕನ್ನಡ ಸಂಘ ರಚಿಸಿ ಅನೇಕ ಕಾರ್ಯಕ್ರಮಗಳಿಗೆ ನಮ್ಮನ್ನು ಆಹ್ವಾನಿಸಿ ಅತಿಥಿ ಸತ್ಕಾರ ಮಾಡುತ್ತಾರೆ. ಅವರಿಗೆ ಇರುವ ಕನ್ನಡಾಭಿಮಾನ ಹೆಮ್ಮೆಯ ವಿಷಯ. ಅನೇಕ ಹಿರಿಯರ ತ್ಯಾಗ, ಬಲಿದಾನದಿಂದ ಕನ್ನಡ ಉಳಿದಿದೆ. 12ನೇ ಶತಮಾನದಲ್ಲಿ ಎಲ್ಲವೂ ಸಂಸ್ಕೃತಮಯವಾಗಿದ್ದ ಸಂದರ್ಭದಲ್ಲಿ ಅನುಭವ ಮಂಟಪದ ರಚಿಸಿದ ಬಸವಾದಿ ಶರಣರು ಕನ್ನಡ ವಚನಗಳ ಮೂಲಕ ಭಾಷೆಯನ್ನು ಬೆಳೆಸಿದ್ದಾರೆ. ಅಸಮಾನತೆ, ಸಾಮಾಜಿಕ ಮೌಢ್ಯಗಳನ್ನು ಹೋಗಲಾಡಿಸಿ ದ್ದಾರೆ. ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಸರ್ವ ಶ್ರೇಷ್ಠ ಸಂವಿದಾನ ನೀಡುವ ಮೂಲಕ ಸಮಾನತೆಗೆ ಶ್ರಮಿಸಿದ್ದಾರೆ. ಕನ್ನಡ ವಿಶ್ವದ ಹಳೆಯ ಭಾಷೆಗಳಲ್ಲೊಂದಾಗಿದ್ದು, ನಾಡಿನ ಹಿರಿಯರು ಕೃಷ್ಣೆಯಿಂದ ಕಾವೇರಿವರೆಗಿನ ವಿಶಿಷ್ಠ ಸಂಸ್ಕೃತಿಯನ್ನು ಉಳಿಸುವ ಮೂಲಕ ಎಲ್ಲರನ್ನೂ ಒಗ್ಗೂಡಿಸುವ ಕೆಲಸ ಮಾಡಿದ್ದಾರೆ. ಶಾಸ್ತ್ರೀಯ ಭಾಷೆಯಾಗಿರುವ ಕನ್ನಡವನ್ನು ಸಪ್ತಸಾಗರದಾಚೆ ತಲುಪಿಸಿದ್ದಾರೆ. ಇಂಗ್ಲಿಷ್ ಒಂದು ಜಾಗತಿಕ ಭಾಷೆಯಾಗಿದ್ದು, ಅದೂ ಕೂಡ ಒಂದು ಭಾಷೆಯಾಗಿ ಕಲಿತರೆ ನಮ್ಮ ಮಕ್ಕಳಿಗೆ ಅನುಕೂಲವಾಗಲಿದೆ. ಕನ್ನಡ ಮಾಧ್ಯಮವರು ಇಂಗ್ಲಿಷ್ ಮತ್ತು ಇಂಗ್ಲಿಷ್ ಮಾಧ್ಯಮದವರು ಕನ್ನಡ ಭಾಷೆಯನ್ನು ಕಲಿಯಬೇಕು. ನಮ್ಮ ಕನ್ನಡಪರ ನನ್ನ ಕೆಲಸ ನಿರಂತರವಾಗಿರಲಿದೆ ಎಂದು ಸಚಿವರು ತಿಳಿಸಿದರು.

ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿಯವರು ಸಂಶೋಧನೆ ಮೂಲಕ 250ಕ್ಕೂ ಹೆಚ್ಚು ಶರಣರನ್ನು ಬೆಳಕಿಗೆ ತಂದಿದ್ದಾರೆ. ಬಿ.ಎಲ್.ಡಿ.ಇ ಸಂಸ್ಥೆಯಿಂದ ಶಿವಾನುಭವ ಮಾಸ ಪತ್ರಿಕೆ ಮರುಮುದ್ರಣ ಕಾರ್ಯ ಪ್ರಗತಿಯಲ್ಲಿದೆ.

> ತಿಕೋಟಾ ತಾಲೂಕು ಮಹಾಮೇದಾವಿ ಶತಮಾನದ ಸಂತ ಶ್ರೀಸಿದ್ದೇಶ್ವರ ಮಹಾಸ್ವಾಮೀಜಿ ಅವರ ಜನ್ಮಭೂಮಿ. ಶ್ರೀಗಳ ಆಶಯದಂತೆ ಅಭಿವೃದ್ಧಿ ಕಾಯಕ ನಿರತನಾಗಿದ್ದೇನೆ. ಸಾಕಷ್ಟು ಸವಾಲು ಎದುರಿಸಿ ಈ ಭಾಗಕ್ಕೆ ನೀರಾವರಿ ಮಾಡಿದ್ದೇನೆ. ಅಸಾಧ್ಯವಾಗಿದ್ದ ನೀರಾವರಿ ಯೋಜನೆಯನ್ನು ಸಾಧ್ಯ ಮಾಡುವಲ್ಲಿ ಯಶಸ್ವಿಯಾಗಿದ್ದೇನೆ.
> -ಎಂ.ಬಿ.ಪಾಟೀಲ, ಸಚಿವ

ಅಷ್ಟೇ ಅಲ್ಲ, ಆದಿಲ್ ಶಾಹಿ ಸಾಹಿತ್ಯದ ಕನ್ನಡ ಅನುವಾದ ಮತ್ತು ದಾಸ ಸಾಹಿತ್ಯದ ಮರು ಮುದ್ರಣ ಮೂಲಕ ಸಾಹಿತ್ಯಾಭಿವೃದ್ಧಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಸಮ್ಮೇಳನಾಧ್ಯಕ್ಷ ತಿಕೋಟಾ ವಿರಕ್ತಮಠದ ಶ್ರೀಚನ್ನಮಲ್ಲಿಕಾರ್ಜುನ ಸ್ವಾಮಿಗಳು, ಹೊನಾಡದ ಬಾಬುರಾವ ಮಹಾರಾಜರು, ತಿಕೋಟಾ ಶಿವಬಸವ ಶಿವಾಚಾರ್ಯರು, ಕನ್ನಡ ಸಾಹಿತ್ಯ ಪರಿಷತ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ತಿಕೋಟಾ ತಾಲೂಕಾಧ್ಯಕ್ಷ ಸಿದ್ರಾಮಪ್ಪ ಲಕ್ಕುಂಡಿಮಠ, ಮುಖಂಡ ಎಂ. ಎಸ್. ರುದ್ರಗೌಡರ, ಸೋಮನಾಥ ಬಾಗಲ ಕೋಟ, ಆರ್. ಜಿ. ಯರನಾಳ, ಭಾಗೀರಥಿ ತೇಲಿ, ಸೋಮಶೇಖರ ಜತ್ತಿ, ಅಡಿವೆಪ್ಪ ಸಾಲಗಲ್ಲ, ಬಸಯ್ಯ ವಿಭೂತಿಮಠ, ಆರ್. ಬಿ. ದೇಸಾಯಿ, ಜಗದೀಶ ಪಾಟೀಲ, ಪೀರಪಟೇಲ ಪಾಟೀಲ, ಶೋಭಾ ಹುಲ್ಯಾಳ, ತಹಸೀಲ್ದಾರ ಸುರೇಶ ಚವಲರ ಮುಂತಾದವರು ಉಪಸ್ಥಿತರಿದ್ದರು.

ರಾಜ್ಯ ಸರಕಾರದಿಂದ ರೈತರಿಗೆ ಅನ್ಯಾಯ

ಸಿಂದಗಿ: ರಾಜ್ಯ ಕಾಂಗ್ರೆಸ್ ಸರಕಾರ ರೈತ ವಿರೋಧಿ ಸರಕಾರ. ವಿಜಯಪುರ, ಬಾಗಲಕೋಟೆ, ಕಲಬುರಗಿ ಸೇರಿದಂತೆ ವಿವಿಧ ಭಾಗದ ರೈತರ ತೊಗರಿ ಬೆಳೆ ಸಂಪೂರ್ಣ ನಾಶಗೊಂಡಿದೆ. ರೈತರಿಗೆ ಪರಿಹಾರ ನೀಡುತ್ತಿಲ್ಲ. ಜೊತೆಗೆ ಬೆಂಬಲ ಬೆಲೆ ಹಣ ಹಾಕುತ್ತಿಲ್ಲ. ಇದರ ಮಧ್ಯದಲ್ಲಿ ಈಗಿನ ಆಡಳಿತ ಪಕ್ಷದ ಶಾಸಕರು ಮಾಜಿ ಶಾಸಕರು ಯಾವುದೇ ಕಾಮಗಾರಿ ಮಾಡಿಲ್ಲ. ಅವರ ಪಾತ್ರವೇ ಏನಿಲ್ಲ ಎಂಬಂತೆ ಬಿಂಬಿಸುತ್ತಿದ್ದಾರೆ. ಆದರೆ ನಮ್ಮ ಕಾಮಗಾರಿ ಗಳಿಗೆ ಪ್ರಸ್ತುತ ಶಾಸಕರು ಪೂಜೆ ಮಾಡುತ್ತಿದ್ದಾರೆ ಎಂದು ಪರೋಕ್ಷವಾಗಿ ಶಾಸಕ ಅಶೋಕ ಮನಗೂಳಿಗೆ ಅವರಿಗೆ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ ಟಾಂಟ್ ನೀಡಿದರು.

ಭಾನುವಾರದಂದು ಪಟ್ಟಣದ ಮಾಜಿ ಶಾಸಕ ರಮೇಶ ಭೂಸನೂರ ಸ್ವ-ಗೃಹದಲ್ಲಿ ಹಮ್ಮಿಕೊಂಡ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಕಾರವೇ ನೀಡಿದ ಜಿಆರ್‌ಜಿ 811, 152 ತಳಿಯ ತೊಗರಿ ಬೀಜಗಳು ಸಂಪೂರ್ಣವಾಗಿ ವಿಫಲವಾಗಿವೆ. ಇದಕ್ಯಾರು ಹೊಣೆ ಎಂದು ಪ್ರಶ್ನಿಸಿದ ಅವರು, ಪ್ರಸ್ತುತ 12 ಸಾವಿರ ಹೆಕ್ಟೇರ್ ನಾಶವಾಗಿದೆ. ಕೂಡಲೇ ಸಂಬಂಧಿಸಿದ ಸಚಿವರು, ಸಿಎಂ ಸೇರಿ ಜಿಲ್ಲಾಧಿಕಾರಿ, ಸಿಇಒಗಳ ಸಭೆ ಕರೆದು ಪರಿಹಾರ ನೀಡಬೇಕು.

ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ ಮಾತನಾಡಿದರು.

ಈ ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ಎಕರೆಗೆ 25ಸಾವಿರ ರೂ. ಪರಿಹಾರ ನೀಡಬೇಕು ಎಂದು ಕಾಂಗ್ರೆಸ್‌ನವರು ಪ್ರತಿಭಟನೆ ಮಾಡಿತ್ತು. ಅದಕ್ಕೆ ಉತ್ತರವಾಗಿ ಅಂದಿನ ಬಸವರಾಜ ಬೊಮ್ಮಾಯಿ ಸರ್ಕಾರ ನೀಡಿದೆ. ಇದೀಗ ಅಷ್ಟೇ ಪರಿಹಾರವನ್ನು ರೈತರಿಗೆ ಕೊಡಬೇಕು. ಕೇಂದ್ರದ ಜೆಜೆಎಂ ಕಾಮಗಾರಿಗೆ ರಾಜ್ಯದಲ್ಲಿ ಸಂಪೂರ್ಣ ಕಳಪೆ ಗುಣಮಟ್ಟದಿಂದ ಕೂಡಿದೆ. ಅದನ್ನು ಪರಿಶೀಲನೆ ಮಾಡಿ ಮತ್ತೊಮ್ಮೆ ಒಳ್ಳೆಯ ರೀತಿಯಲ್ಲಿ ಮಾಡುವಂತೆ ನೋಡಿಕೊಳ್ಳ ಬೇಕು. ಕೃಷ್ಣ ಮೇಲ್ದಂಡೆ ಯೋಜನೆ ಪೂರ್ಣಗೊಳಿಸುವ ಭರವಸೆ ಕೊಟ್ಟಿಲ್ಲ. ಇನ್ನು ರಾಜ್ಯದಲ್ಲಿ ಕಾಂಗ್ರೆಸ್ ತುಷ್ಟೀಕರಣ ಮಾಡು ತ್ತಿದೆ ಎಂದರು.

ಮಾಜಿ ಶಾಸಕ ರಮೇಶ ಭೂಸನೂರ ಮತ್ತು ನಿಂಬೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಅಶೋಕ ಅಲ್ಲಾಪೂರ ಮಾತನಾಡಿ ದರು. ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮಂ ಡಲ ಅಧ್ಯಕ್ಷ ಸಂತೋಷ ಪಾಟೀಲ ಡಂಬಳ, ಕೋಶಾಧ್ಯಕ್ಷ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ, ಬಿ.ಎಚ್. ಬಿರಾದಾರ, ಪೀರು ಕೆರೂರು, ಪ್ರಶಾಂತ ಕದ್ದರಕಿ, ಗುರು ತಳವಾರ, ಎನ್.ಎಸ್. ಹಿರೇಮಠ ಸೇರಿದಂತೆ ಇತರರು ಇದ್ದರು.

ಪ್ರತಿ ಮಗುವಿನಲ್ಲೂ ಸುಪ್ತ ಪ್ರತಿಭೆ ಅಡಗಿದೆ

ತಾಳಿಕೋಟಿ: ಹುಟ್ಟುವ ಪ್ರತಿಯೊಂದು ಮಗುವಿನಲ್ಲೂ ಪ್ರಕೃತಿದತ್ತವಾಗಿ ಒಂದಲ್ಲ ಒಂದು ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ ಬೆಳೆಸುವಲ್ಲಿ ತಾಯಂದಿರ ಪಾತ್ರ ಪ್ರಮುಖವಾಗಿದೆ, ಪ್ರತಿಯೊಬ್ಬ ಸಾಧಕನ ಸಾಧನೆಯ ಹಿಂದೆ ಅವಳ ತಾಯಿಯ ಪಾತ್ರ ಇದೆ ಎಂದು ಖ್ಯಾತ ವಾಗ್ಮಿ ಸಾಹಿತಿ ಅಶೋಕ ಹಂಚಲಿ ಹೇಳಿದರು.

ಭಾನುವಾರ ಪಟ್ಟಣದ ಮಿಣಜಗಿ ಕ್ರಾಸ್‌ನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಕೌಟಿಲ್ಯ ಅಕಾಡೆಮಿ ಕಟ್ಟಡ ಉದ್ಘಾಟನೆ ಹಾಗೂ ಜೀನಿಯಸ್ ಸ್ಟೂಡೆಂಟ್ ಅವಾರ್ಡ್ ಪರೀಕ್ಷೆ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಸಮಾರಂಭದಲ್ಲಿ ವಿಶೇಷ ಉಪಾ ನ್ಯಾಸಕರಾಗಿ ಆಗಮಿಸಿ ಮಾತನಾಡಿ, ತಾಳಿಕೋಟಿ ಪಟ್ಟಣ ಇವತ್ತು ಶಿಕ್ಷಣ ಕಾಶಿ ಎಂದಿನಿಸಿಕೊಳ್ಳುತ್ತಿದೆ, ಇಲ್ಲಿಯ ಶಿಕ್ಷಣ ಪ್ರೇಮಿಗಳು ಸಾಕಷ್ಟು ಸಂಸ್ಥೆಗಳನ್ನು ಕಟ್ಟಿ ಅತ್ಯುತ್ತಮವಾಗಿ ನಡೆಸುತ್ತಿದ್ದಾರೆ. ಇದೀಗ ನಮ್ಮ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸೂಕ್ತ ತರಬೇತಿ ಕೇಂದ್ರದ ಅಗತ್ಯವಿತ್ತು ಅದನ್ನು ಸಹ ನಮ್ಮ ಸಜ್ಜನ ಬಳಗದ ಮಿತ್ರರು ಮಾಡಿರುವುದು ಶ್ಲಾಘ ನೀಯವಾದ ಕಾರ್ಯ ಇದಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ ಎಂದರು.

ಮಹಾದೇವಯ್ಯ ಶಾಸ್ತ್ರಿ ಹಾಗೂ ಸಹಕಾರಿ ಬ್ಯಾಂಕ್ ಅಧ್ಯಕ್ಷ ಕಾಶಿನಾಥ್ ಸಜ್ಜನ ಮಾತನಾಡಿ ಶಿಕ್ಷಣ ಸಂಸ್ಥೆಗಳು ವ್ಯಾಪಾರಿ ಕೇಂದ್ರಗಳಾಗದೆ ಜ್ಞಾನ ದಾಸೋಹದ ಕೇಂದ್ರ ಗಳಾಗಲಿ ಈ ನೂತನ ಸಂಸ್ಥೆ ಉತ್ತ ರೋತ್ತರವಾಗಿ ಬೆಳೆಯಲಿ ಎಂದರು. ಸಮಾ ರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕೌಟಿಲ್ಯ ಅಕಾಡೆಮಿ ನೂತನ ಕಟ್ಟಡವನ್ನು ಗುಂಡಕನಾಳ ಬ್ರಹನ್ಮಠದ ಪರಮ ಪೂಜ್ಯ ಶ್ರೀ ಗುರುಲಿಂಗ ಶಿವಾಚಾರ್ಯರು ಉದ್ಘಾಟಿಸಿದರು. ವೇದಿಕೆ ಸಮಾರಂಭವನ್ನು ಮಿಣಜಗಿ ಗ್ರಾಪಂ ಅಧ್ಯಕ್ಷೆ ಭಾಗ್ಯಶ್ರೀ ಮಹಾಂತೇಶ ಬಿರಾದಾರ ಉದ್ಘಾಟಿಸಿದರು. ಕೌಟಿಲ್ಯ ಅಕಾಡೆಮಿ ಗೌರವ ಅಧ್ಯಕ್ಷ ರಾಮನಗೌಡ ಬಾಗೇವಾಡಿ ಅಧ್ಯಕ್ಷತೆ ವಹಿಸಿದ್ದರು.

ಪ್ರಾಚಾರ್ಯ ಧರ್ಮಣ್ಣ ಪ್ರಸ್ತಾವಿಕವಾಗಿ ಮಾತನಾಡಿದರು. ಈ ವೇಳೆ ಅಕಾಡೆಮಿ ಅಧ್ಯಕ್ಷ ರಾಜು ಸಜ್ಜನ, ಆಡಳಿತಾಧಿಕಾರಿ ನಾನಾಗೌಡ ಕುಳಗೇರಿ, ಸಂಯೋಜಕ ವೀರೇಶ ಬಳಿಗಾರ, ಪ್ರಭುಗೌಡ ಮದರಕಲ್ಲ, ಘನ ಶ್ಯಾಮ ಚೌವಾಣ, ವೆಂಕನಗೌಡ ಅರಿಕೇರಿ, ಶಿವನಗೌಡ ಪಾಟೀಲ ಇದ್ದರು.

ಬಿಎಲ್‌ಡಿಇ ಸಂಸ್ಥೆಯ ವಿದ್ಯಾರ್ಥಿನಿಯರ ಸಾಧನೆ

ವಿಜಯಪುರ: ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಳೆದ 2023-24 ನೇ ಸಾಲಿನ ನವೆಂಬರ್ ತಿಂಗಳಲ್ಲಿ ಜರುಗಿದ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಬಿಎಲ್ಡಿಇ ಸಂಸ್ಥೆಯ ಎಸ್ ಬಿ ಕಲಾ ಮತ್ತು ಕೆ ಸಿ ಪಿ ವಿಜ್ಞಾನ ಮಹಾವಿದ್ಯಾಲಯಕ್ಕೆ ಪ್ರಥಮ ಮತ್ತು ದ್ವಿತೀಯ ರ‍್ಯಾಂಕ್ ಪಡೆಯುವುದರ ಮೂಲಕ ಉನ್ನತ ಸಾಧನೆ ತೋರಿದ್ದಾರೆ. ವಿದ್ಯಾರ್ಥಿನಿಯರಾದ ಕು. ಅನುಷಾ ಕುಲಕರ್ಣಿ ಎಂ.ಎಸ್ಸಿ (ಕಂಪ್ಯೂಟರ್ ಸೈನ್ಸ್) ನಲ್ಲಿ ಶೇ.81.25 ಫಲಿತಾಂಶದೊಂದಿಗೆ ವಿಶ್ವವಿದ್ಯಾಲಯಕ್ಕೆ ಪ್ರಥಮ ರ‍್ಯಾಂಕ್ ಹಾಗೂ ಚಿನ್ನದ ಪದಕ ಪಡೆದುಕೊಂಡಿದ್ದಾಳೆ, ಅಲ್ಲದೆ ಕು.ಐಶ್ವರ್ಯ ಆಸಂಗಿ ಎಂಎಸ್ಸಿ (ರಸಾಯನಶಾಸ್ತ್ರ) ವಿಭಾಗದಲ್ಲಿ ಶೇ.81.33 ಫಲಿತಾಂಶದೊಂದಿಗೆ ವಿಶ್ವವಿದ್ಯಾಲಯಕ್ಕೆ ಪ್ರಥಮ ರ‍್ಯಾಂಕ್ ಹಾಗೂ ಚಿನ್ನದ ಪದಕ ಪಡೆದುಕೊಂಡಿದ್ದಾಳೆ. ಅದೇ ರೀತಿಯಾಗಿ ಎಂ ಎ (ಇಂಗ್ಲಿಷ್) ವಿಭಾಗದಲ್ಲಿ ಕು. ಮೇಘಾ ಪವಾರ್ ಶೇ.70.38ರಷ್ಟು ಫಲಿತಾಂಶದೊಂದಿಗೆ ವಿಶ್ವವಿದ್ಯಾಲಯಕ್ಕೆ ದ್ವಿತೀಯ ರ‍್ಯಾಂಕ್ ಪಡೆದುಕೊಂಡು ಉನ್ನತ ಸಾಧನೆ ತೋರಿದ್ದಾರೆ. ಇವರ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಹಾಗೂ ಸಚಿವರು ಡಾ.ಎಂ.ಬಿ ಪಾಟೀಲ, ಆಡಳಿತಾಧಿಕಾರಿಗಳು ಡಾ.ವಿ.ಎಸ್.ಬಗಲಿ ಮಹಾ ವಿದ್ಯಾಲಯದ ಪ್ರಾಚಾರ್ಯರಾದ ಡಾ.ಆರ್ ಎಂ. ಮಿರ್ದೆ, ಉಪ ಪ್ರಾಚಾರ್ಯ ಡಾ.ಅನೀಲ್ ಬಿ ನಾಯಕ ಮತ್ತು ಬೋಧಕ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ಮಕ್ಕಳಿಗೆ ಶಿಕ್ಷಣದ ಜತೆ ಸಂಸ್ಕಾರ ಅವಶ್ಯ

ದೇವರಹಿಪ್ಪರಗಿ: ತಾಲೂಕಿನ ಪಡಗಾನೂರ ಗ್ರಾಮದ ಶ್ರೀಗುರು ಶಾಂತೇಶ್ವರ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ದೇವರ ಹಿಪ್ಪರಗಿಯ ಪ್ರತಿಷ್ಠಿತ ಶ್ರೀಸಿದ್ದೇಶ್ವರ ಸ್ವಾಮೀಜಿ ಶಿಕ್ಷಣ ಸಂಸ್ಥೆಯ ಶಾಲೆ ಕಾಲೇಜುಗಳ ಸಂಸ್ಥಾಪಕ ಅಧ್ಯಕ್ಷರಾದ ವಿ.ಕೆ ಪಾಟೀಲರು ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ಮಕ್ಕಳಿಗೆ ಪರೀಕ್ಷೆಯಲ್ಲಿ ಅಂಕಗಳನ್ನು ಪಡೆಯುವುದಕ್ಕಿಂತ ಸಂಸ್ಕಾರ ಪಡೆಯುವುದು ಮುಖ್ಯವಾಗಿದೆ ಎಂದು ಹೇಳಿದರು.

ಇಂದಿನ ಮಕ್ಕಳಲ್ಲಿ ಗುರುಹಿರಿಯರಿಗೆ ತಂದೆ ತಾಯಂದಿರಿಗೆ ಗೌರವ ಕೊಡುವುದು ಬಹಳಷ್ಟು ಕಡಿಮೆಯಾಗಿದ್ದು ದುರ್ದೈವ ಕಾರಣ ಪೋಷಕರು ತಮ್ಮ ಮಕ್ಕಳನ್ನು ಟಿವಿ ಹಾಗೂ ಮೊಬೈಲ್‌ಗಳಿಂದ ದೂರವಿಟ್ಟು ವಿದ್ಯೆಯ ಜೊತೆ ಸಂಸ್ಕಾರವನ್ನು ಪ್ರಮುಖವಾಗಿ ಕಲಿಸಿಕೊಡಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಮುಳಸಾವಳಗಿಯ ಶ್ರೀ ಸಿದ್ಧಾರೂಢ ಮಠದ ಪೀಠಾಧಿಪತಿಗಳಾದ ಶ್ರೀ ದಯಾನಂದ ಸ್ವಾಮಿಗಳು ವಹಿಸಿದ್ದರು. ಅಧ್ಯಕ್ಷತೆಯನ್ನು ಶ್ರೀ ಸೋಮೇಶ್ವರ ಸಂಸ್ಥೆಯ ಅಧ್ಯಕ್ಷರಾದ ವೇ. ಶ್ರೀಅಯ್ಯಪ್ಪ ಸ್ವಾಮಿಗಳು ಹಿರೇಮಠ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಮಹಾದೇವಿ.ಗ್ರಾ.ಪ. ಉಪಾಧ್ಯಕ್ಷರಾದ ಕಸ್ತೂರಿಬಾಯಿ ಹೊಸಟ್ಟಿ, ವಿಜಯಪುರ ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಹಣಮಂತ್ರಾಯಗೌಡ ಪಾಟೀಲ. ತಾಲೂಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಂಗಮೇಶ ಉತ್ನಾಳ. ಸಂಸ್ಥೆ ಉಪಾಧ್ಯಕ್ಷರಾದ ಬಸನಗೌಡ ಪಾಟೀಲ. ಅತಿಥಿಗಳಾಗಿ ಸಂಸ್ಥೆಯ ನಿರ್ದೇಶಕರಾದ ಗೋವಿಂದಗೌಡ ಪಾಟೀಲ. ವಿಠ್ಠಲ ಕಬ್ಬಿನ. ಮುರಿಗೆಪ್ಪ ಬುಸಾರಿ. ಆನಂದ ಕರಬಂಟನಾಳ. ಸೋಮನಗೌಡ ಪಾಟೀಲ. ತೀರ್ಥಪ್ಪ ಕಂಬಾರ. ಕಲ್ಲಪ್ಪ ಜೋಗೂರ. ಮಾರುತಿ ಸೇರಿಕಾರ ಸೇರಿದಂತೆ ಊರಿನ ಗಣ್ಯರು .ಭಾಗವಹಿಸಿದ್ದರು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನಿಂಗನಗೌಡ ಪಾಟೀಲ ಸ್ವಾಗತಿಸಿದರು.

ಕಾರ್ಯಕ್ರಮವನ್ನು ಶಾಲೆ ಕಾಲೇಜುಗಳ ಸಂಸ್ಥಾಪಕ ಅಧ್ಯಕ್ಷರಾದ ವಿ.ಕೆ ಪಾಟೀಲ ಅವರು ಉದ್ಘಾಟಿಸಿದರು.

ಶಾಲೆಯ ಮುಖ್ಯ ಗುರುಗಳಾದ ಹಣಮಂತ್ರಾಯ. ಕಡ್ಲೆವಾಡ ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೀ ಸಿದ್ದೇಶ್ವರ ಪ್ರೌಢಶಾಲೆ ಶಿಕ್ಷಕ ಮಹಾಂತೇಶ ಬೀಳಗಿಮಠ. ವಂದಿಸಿದರು. ಕಾರ್ಯಕ್ರಮವನ್ನು ಶಾಲೆಯ ಶಿಕ್ಷಕರಾದ ಬಸವರಾಜ ಹಚಡದ. ಮತ್ತು ವಿಶ್ವನಾಥ ಹಿರೇಮಠ, ಕಾರ್ತಿಕ. ಸಚಿನ. ಶ್ರೀಮತಿ.ಆಶಾ ಕಡ್ಲೆ ವಾಡ ಸೇರಿದಂತೆ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ಅಚ್ಚುಕಟ್ಟಾಗಿ ಕಾರ್ಯಕ್ರಮ ವ್ಯವಸ್ಥೆಗೊಳಿಸಿ ಜನರ ಮೆಚ್ಚುಗೆಗೆ ಪಾತ್ರರಾದರು. ನಂತರ ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಆಕರ್ಷಕ ನೃತ್ಯ ಸಂಗೀತ, ಯಕ್ಷಗಾನ, ನಾಟಕ ಸೇರಿದಂತೆ ಸಾಂಸ್ಕೃತಿಕ ಹಾಗೂ ಮನರಂಜನೆ ಕಾರ್ಯಕ್ರಮಗಳು ನಡೆದವು ಮಕ್ಕಳು ನಡೆಸಿಕೊಟ್ಟ ಅತ್ಯಾಕರ್ಷಕ ಕಾರ್ಯಕ್ರಮಗಳು ನೆರೆದಿದ್ದ ಸಾವಿರಾರು ಜನರು ಹಾಗೂ ಗಣ್ಯರು, ಗ್ರಾಮಸ್ಥರು, ಪಾಲಕರು ಹಾಗೂ ಪ್ರೇಕ್ಷಕರ ಮನ ಸೂರೆಗೊಂಡವು.

ರಾಜ್ಯ ಮಟ್ಟದ ಸಮಾವೇಶ ಪೂರ್ವಭಾವಿ ಸಭೆ

ಕೊಲ್ಹಾರ: ಪಟ್ಟಣದಲ್ಲಿ ಎಂಪಿಎಸ್ ಶಾಲಾ ಸಭಾಂಗಣದಲ್ಲಿ ಶನಿವಾರ ಕರ್ನಾಟಕ ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘ ತಾಲೂಕು ಘಟಕದಿಂದ ರಾಜ್ಯ ಮಟ್ಟದ ಕಾರ್ಯಾಗಾರ ಹಾಗೂ ಬೃಹತ್ ಸಮಾವೇಶದ ಪೂರ್ವಭಾವಿ ಸಭೆ ಜರುಗಿತು.

ತಾಲೂಕು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಕೆ.ಯು ಗಿಡ್ಡಪ್ಪಗೋಳ ಮಾತನಾಡಿ 2022ರ ಜು.1ರಿಂದ 2024ರ ಜು.31ರವರಿಗೆ ನಿವೃತ್ತಿ ಹೊಂದಿದ ನೌಕರರಿಗೆ 7ನೇ ವೇತನ ಆಯೋಗದ ಸೌಲಭ್ಯ ಸಿಗದಿದ್ದಕ್ಕೆ ಎಪ್ರೀಲ್ 3 ರ ಗುರುವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಹಾಗೂ ಎಪ್ರಿಲ್ 4 ರ ಶುಕ್ರವಾರ ಮುಂಜಾನೆ 10 ಗಂಟೆಗೆ ರಾಜ್ಯ ಮಟ್ಟದ ಕಾರ್ಯಾಗಾರ ಮತ್ತು ಬೃಹತ್ ಸಮಾವೇಶವನ್ನು ಬೆಂಗಳೂರಿನ ಪ್ರಿನ್ಸಸ್ ಶ್ರೈನ್ (ಗೇಟ್ ನಂ-9) ಅರಮನೆ ಆವರಣದಲ್ಲಿ ಹಮ್ಮಿಕೊಂಡಿದ್ದು. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಾಕ್ಷರಿ ಸಹಿತ ಇನ್ನಿತರರು ಉಪಸ್ಥಿತರಿರುವರು ಎಂದು ಅವರು ಹೇಳಿದರು.

ಪೂರ್ವಭಾವಿ ಸಭೆಯಲ್ಲಿ ಬಿ.ಎಸ್ ಹಂಗರಗಿ, ಎಂ ಕೆ ಚೌಧರಿ, ಡಾ.ಬಿ.ಆರ್ ಮಠ, ಪಿ.ಜಿ ಗಣಿ, ಬಸವರಾಜ ಗಿಡ್ಡಪ್ಪಗೋಳ, ಬಿ.ಎನ್ ವಂದಾಲ, ವಿಲಾಸ ಪತ್ತಾರ, ಶ್ರೀಶೈಲ ಹರನೆಂಟಿ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಬಿಜೆಪಿ ಶಾಸಕರ ಅಮಾನತು ಸರಿ



ರಾಯಚೂರು: ಬಿಜೆಪಿಯ ಶಾಸಕರು ಪೀಠಕ್ಕೆ ಅಗೌರವ ತೋರಿದ ಕಾರಣ ಅವರನ್ನು ಸಭಾಧ್ಯಕ್ಷರು ಅಮಾನತುಗೊಳಿಸಿದ್ದಾರೆ ಎಂದು ಸಣ್ಣನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವ ಎನ್.ಎಸ್. ಬೋಸರಾಜು ಸಮರ್ಥಿಸಿಕೊಂಡಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ವಿಧಾನಸಭೆ ಸ್ಪೀಕರ್ ನಿಯಂತ್ರಣದಲ್ಲಿ ಎಲ್ಲ ಸಚಿವರು, ಶಾಸಕರು ಇರುತ್ತಾರೆ. ಆದರೆ ಬಿಜೆಪಿಯವರು ಪೀಠಕ್ಕೆ ಅಗೌರವ ತೋರಿದ್ದಾರೆ. ವಿಧಾನ ಪರಿಷತ್‌ನಲ್ಲಿ ಸಭಾಪತಿ ಎದ್ದುನಿಂತರೆನಾವು ಎದ್ದು ನಿಲ್ಲಬೇಕು. ನಿಯಮಗಳನ್ನು ಪಾಲನೆ ಮಾಡಬೇಕು. ಅದನ್ನು ಮೀರಿ ಯಾರೂ ನಡೆದುಕೊಳ್ಳಬಾರದು. ವಿಧಾನಮಂಡಲದಲ್ಲಿ ಸರಕಾರಕ್ಕೆ ಯಾವುದೇ ವಿಶೇಷ ಅಧಿಕಾರ ಇರಲ್ಲ ಎಂದರು. ವಿಪಕ್ಷ ನಾಯಕ ಆರ್ ಅಶೋಕ್ ಗೃಹ ಇಲಾಖೆ ಸಚಿವರಾಗಿದ್ದವರು. ನಮ್ಮವರನ್ನು ಅಶೋಕ್ ತಳ್ಳಾಡಿದ್ದಾರೆ. ನಮ್ಮ ಮುಖದ ಮೇಲೆ ಪೇಪರ್ ಎಸೆದಿದ್ದಾರೆ. ರಾಜ್ಯದ ಇತಿಹಾಸ ದಲ್ಲಿ ಈ ರೀತಿ ಘಟನೆಗಳು ನಡೆದಿರಲಿಲ್ಲ ಎಂದು ಸಚಿವ ಬೋಸರಾಜು ಅಸಮಾಧಾನ ವ್ಯಕ್ತಪಡಿಸಿದರು.

ಆರನೇ ಗ್ಯಾರಂಟಿ ಬಗ್ಗೆ ಮುಖ್ಯಮಂತ್ರಿ ನಿರ್ಧಾರ

ಬೆಳಗಾವಿ: ಕರ್ನಾಟಕದಲ್ಲಿ ಈಗಾಗಲೇ ಪಂಚ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿದ್ದು, ಅಂಗನವಾಡಿ ಕಾರ್ಯಕರ್ತೆಯರಿಗೆ ಆರನೇ ಗ್ಯಾರಂಟಿ ನೀಡುವ ಬಗ್ಗೆ ಸಿಎಂ ತೀರ್ಮಾನ ಕೈಗೊಳ್ಳುವರು. 2017ರಲ್ಲಿ ಸಿದ್ದರಾಮಯ್ಯನವರೇ ಸಿಎಂ ಆಗಿದ್ದಾಗ, ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸಲಾಗಿತ್ತು. ಈಗ ಮತ್ತೆ ಅವರೇ ಗೌರವಧನವನ್ನು ಏರಿಸಿದ್ದಾರೆ ಎಂದು ಸಚಿವರು ತಿಳಿಸಿದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಕರ್ನಾಟಕ ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ಸೋಮವಾರ ಮೂರು ಸಾವಿರ ಮಹಿಳೆಯ ರಿಗೆ ಸಾಮೂಹಿಕ ಸೀಮಂತ ಕಾರ್ಯಕ್ರಮ, ವಿಕಲ ಚೇತನರಿಗೆ ವಿವಿಧ ಸಲಕರಣೆಗಳ ವಿತರಣೆ ಹಾಗೂ ವಿಭಾಗೀಯ ಮಟ್ಟದ ಸ್ತ್ರೀ ಶಕ್ತಿ ಗುಂಪುಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಉದ್ಘಾಟಿಸಲಾಗುವುದು ಎಂದರು.

ಗುಡುಗು ಸಹಿತ ಮಳೆ

ಬೆಂಗಳೂರು: ಮುಂದಿನ ಎರಡು ದಿನಗಳಲ್ಲಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಭಾರೀ ಗಾಳಿ ಮತ್ತು ಮಳೆಯಾಗುವ ಸಾಧ್ಯತೆ ಇರುವುದರಿಂದ ನಾಗರಿಕರು ಎಚ್ಚರಿಕೆಯಿಂದಿರುವಂತೆ ಸೂಚಿಸಲಾಗಿದೆ. ಬೆಂಗಳೂರು, ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಾಮರಾಜನಗರ, ಮಂಡ್ಯ, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಬಳ್ಳಾರಿ, ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮಳೆ ಈಗಾಗಲೇ ಆರಂಭವಾಗಿದೆ.

ಬತ್ತಿದ ವೇದಾವತಿ ನದಿಯೊಡಲು: ಬೇಸಿಗೆ ಆರಂಭದಲ್ಲೇ ಕೃಷಿಕರಿಗೆ ಆತಂಕ

ಹಗರಿ ನದಿ ಒಣಗಿ ನೀರಿಗೆ ಕೊರತೆ

ಬಳ್ಳಾರಿ: ಕೃಷಿ, ಕುಡಿಯುವ ನೀರಿಗೆ ಆಧಾರವಾಗಿರುವ ಹಗರಿ ನದಿಯೊಡಲು ಬೇಸಿಗೆಯ ಆರಂಭದಲ್ಲಿಯೇ ಒಣಗಿದೆ. ಹಗರಿ ಎಂದೇ ಜನ ಸಾಮಾನ್ಯರು ಕರೆಯುವ ವೇದಾವತಿ ನದಿ ಒಣಗುತ್ತಿರುವುದರಿಂದ ಅದನ್ನೇ ನಂಬಿಕೊಂಡಿರುವ ಅನ್ನದಾತನಿಗೀಗ ಸಂಕಷ್ಟದ ಪರಿಸ್ಥಿತಿ ಎದುರಾಗಿದೆ.

ಬತ್ತಿದ ವೇದಾವತಿ: ಸಿರುಗುಪ್ಪ ತಾಲೂಕಿನ ವ್ಯಾಪ್ತಿಯಲ್ಲಿನ ಹಲವು ಗ್ರಾಮಗಳ ಜನರು ಕುಡಿಯುವ ನೀರು ಹಾಗೂ ತಮ್ಮ ಜಾನುವಾರುಗಳ ಅವಶ್ಯಕತೆಗೆ ಹಗರಿ ನದಿಯನ್ನೇ ಅವಲಂಬಿಸಿದ್ದಾರೆ. ಜತೆಗೆ ತಮ್ಮ ಕೃಷಿ ಚಟುವಟಿಕೆಗಳಿಗೆ ಈ ನೀರನ್ನೇ ನೆಚ್ಚಿಕೊಂಡಿದ್ದಾರೆ. ಬೇಸಿಗೆಯ ಆರಂಭದಲ್ಲಿಯೇ ಹಗರಿ ನದಿಯ ಒಡಲು ಬತ್ತಿಹೋಗಿರುವುದರಿಂದ ಮುಂದೇನು ಎಂದು ರೈತರು ಹಾಗೂ ವಿವಿಧ ಗ್ರಾಮಗಳ ಜನರು ಆತಂಕದಿಂದ ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳುವಂತಾಗಿದೆ.

ನೀರಿಲ್ಲದೆ ಒಣಗಿದ ಬೆಳೆ: ಹಗರಿ ನದಿ ನೀರಿನ ಭರವಸೆಯಲ್ಲಿ ಕಳೆದ ಡಿಸೆಂಬರ್‌ನಲ್ಲಿಯೇ ಸಿರುಗುಪ್ಪ ಭಾಗದ ರೈತರು ಭತ್ತ ನಾಟಿ ಮಾಡಿದ್ದರು. ತೆನೆಬಿಚ್ಚಿ ಕಾಳು ಕಟ್ಟುವ ಹಂತದಲ್ಲಿರುವ ಬೆಳೆಗೆ ಈಗ

ನೀರು ಅನಿವಾರ್ಯ. ಈವೇಳೆಯೇ ವೇದಾವತಿ ಖಾಲಿ ಖಾಲಿಯಾಗಿದೆ. ನೀರಿಲ್ಲದೇ ಗದ್ದೆಗಳು ಒಣಗಿವೆ. ಇನ್ನು 3-4 ದಿನಗಳಲ್ಲಿ ಭತ್ತಕ್ಕೆ ನೀರು ಹರಿಯದಿದ್ದರೆ, ಕೈಗೆ ಬಂದ ಬೆಳೆ ನಾಶವಾಗುತ್ತವೆ ಎಂಬುದು ರೈತರ ಸಂಕಟ.

ಕೊಳವೆಬಾವಿಯಲ್ಲೂ ನೀರಿಲ್ಲ : ಬೆಳೆದು ನಿಂತ ಬೆಳೆಗೆ ನೀರು ಅಗತ್ಯವಿರುವ ಕಾರಣ, ಬತ್ತಿಹೋಗಿರುವ ಹಗರಿ ಒಡಲಿನಲ್ಲಿ ನೆಲ ಕೊರೆದು ಪಂಪ್‌ಸೆಟ್ ಇಟ್ಟು ಕೊಳವೆಗಳ ಮೂಲಕ ನೀರು ಹೊರ ತೆಗೆಯುವ ಪ್ರಯತ್ನವನ್ನು ಕೆಲವು ರೈತರು ಮಾಡುತ್ತಿದ್ದಾರೆ. ಆದರೆ ಏನೇ ಹಳ್ಳ ತೆಗೆದು, ಪಂಪ್‌ಸೆಟ್ ಅಳವಡಿಸಿದರೂ ನೀರು ಮಾತ್ರ ಸಿಗುತ್ತಿಲ್ಲ.

ಕಳೆದ ಡಿಸೆಂಬರ್‌ನಲ್ಲಿ ನಾಟಿ ಮಾಡಿದ್ದ ಈ ಭತ್ತದ ಬೆಳೆಗೆ ಇದುವರೆಗೂ ಎಕರೆಗೆ 40 ಸಾವಿರ ರು. ಹೆಚ್ಚು ಖರ್ಚಾಗಿದೆ. ಟಿಬಿ ಡ್ಯಾಂ ಎಲ್‌ಎಲ್‌ಸಿ ಕಾಲುವೆ ಮೂಲಕ ನದಿಗೆ ನೀರು ಹರಿಸಿದರೆ ಮಾತ್ರ ಬೆಳೆ, ಜನ, ಜಾನುವಾರು ಉಳಿಯುತ್ತವೆ. ಇಲ್ಲದಿದ್ದರೆ ಮುಂದಿನ ದಿನಗಳು ಕಷ್ಟಕರವೇ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ತಮ್ಮ ನೆರವಿಗೆ ಬರಬೇಕೆಂದು ರೈತರು ಮನವಿ ಮಾಡಿದ್ದಾರೆ.

ತೆಲಂಗಾಣಕ್ಕೆ 10 ಟಿಎಂಸಿ ನೀರು ಬಿಡುಗಡೆ ಆಗಿಲ್ಲ

ವಿಜಯಪುರ: ತೆಲಂಗಾಣಕ್ಕೆ 10 ಟಿಎಂಸಿ ನೀರು ಬಿಟ್ಟಿರಲು ಸಾಧ್ಯವಿಲ್ಲ. ಒಂದೂವರೆ ಟಿಎಂಸಿ ನೀರು ಬಿಟ್ಟಿರುವ ಮಾಹಿತಿ ಇದೆ. ಮಾನವೀಯತೆ ದೃಷ್ಟಿಯಿಂದ ಅಷ್ಟು ನೀರು ಬಿಡಲಾಗಿದೆ ಎಂಬ ಮಾಹಿತಿ ಇದೆ. ಈ ಕುರಿತು ನಾನು ಸಹ ಸ್ಪಷ್ಟೀಕರಣ ಮಾಡಿಕೊಳ್ಳುತ್ತೇನೆ ಎಂದು ಬೃಹತ್ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ. ತೆಲಂಗಾಣಕ್ಕೆ ಒಂದೂವರೆ ಟಿಎಂಸಿ ಬದಲಾಗಿ 10 ಟಿಎಂಸಿ ಕೃಷ್ಣಾ ನದಿಯ ನೀರು ಬಿಟ್ಟಿದ್ದಾರೆಂದು ಸಂಸದ ರಮೇಶ ಜಿಗಜಿಣಗಿ ಆರೋಪ ಸರಿಯಲ್ಲ. ಒಂದು ವೇಳೆ ಹತ್ತು ಟಿಎಂಸಿ ನೀರು ಬಿಟ್ಟಿದ್ದರೆ ಅದು ದೊಡ್ಡ ಅನ್ಯಾಯ. ಆದರೆ 10 ಟಿಎಂಸಿ ನೀರು ಬಿಟ್ಟಿರೋಕೆ ಸಾಧ್ಯವಿಲ್ಲ. ಟಿಎಂಸಿಯಷ್ಟು ಕೊಡು-ಕೊಳ್ಳುವಿಕೆ ಇರುತ್ತದೆ ಎಂದು ವಿಜಯಪುರದಲ್ಲಿ ಸಚಿವರು ಸ್ಪಷ್ಟಪಡಿಸಿದರು.

ಮಾಹಿತಿ ಇಲ್ಲ: ತೆಲಂಗಾಣಕ್ಕೆ ನೀರು ಬಿಡಲು ಅಧಿಕಾರಿಗಳು ಬೇಡವೆಂದರೂ ಜಲಸಂಪನ್ಮೂಲ ಸಚಿವರು ಬಿಡಿಸಿದ್ದಾರೆಂಬ ವಿಚಾರಕ್ಕೆ ಸಚಿವ ಎಂ.ಬಿ.ಪಾಟೀಲ ಪ್ರತಿಕ್ರಿಯಿಸಿ, ಆ ಕುರಿತು ನನಗೆ ಮಾಹಿತಿ ಇಲ್ಲ. ಈ ನಿಟ್ಟಿನಲ್ಲಿ ಮಾಹಿತಿ ಕಲೆ ಹಾಕುತ್ತೇನೆ ಎಂದರು.

ಬಿಸಿಯೂಟದಲ್ಲಿ ಎಣ್ಣೆ ಬಳಕೆ ಶೇ.10ರಷ್ಟು ಕಡಿತ

← ಮೊದಲಪುಟದಿಂದ

ಆರೋಗ್ಯ ಸಂಸ್ಥೆಗಳು ಮತ್ತು ಗೃಹ ವಿಜ್ಞಾನ ಕಾಲೇಜುಗಳ ಪೌಷ್ಟಿಕ ಆಹಾರ ತಜ್ಞರನ್ನು ಆಹ್ವಾನಿಸಿ ಕಡಿಮೆ ಎಣ್ಣೆ ಬಳಸಿ ತಯಾರಿಸಬಹುದಾದ ಪಾಕ ವಿಧಾನವನ್ನು ಎಲ್ಲರಿಗೂ ತಲುಪಿಸಬೇಕು. ಆರೋಗ್ಯಕರ ಆಹಾರ ಪದ್ಧತಿಯ ಬಗ್ಗೆ ಶಾಲಾ ಮಟ್ಟದಲ್ಲಿ ರಸಪ್ರಶ್ನೆ ಆಯೋಜಿಸಿ ಬಹುಮಾನ ವಿತರಿಸಬೇಕು. ಶಾಲೆಗಳಲ್ಲಿ ವ್ಯಾಯಾಮ, ಯೋಗ ಮತ್ತು ಕ್ರೀಡಾ ಚಟುವಟಿಕೆಗಳನ್ನು ನಿಯಮಿತವಾಗಿ ಆಯೋಜಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಪರಿಷ್ಕೃತ ಮಾರ್ಗಸೂಚಿಗಳ ಅಡಿಯಲ್ಲಿ, ಮಧ್ಯಾಹ್ನದ ಊಟದಲ್ಲಿ ಬಳಸುವ ಸೂರ್ಯಕಾಂತಿ ಎಣ್ಣೆಯ ಪ್ರಮಾಣವನ್ನು 1 ರಿಂದ 5 ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ಮಗುವಿಗೆ 5 ಗ್ರಾಂ ಮತ್ತು 6 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ಮಗುವಿಗೆ 7.5 ಗ್ರಾಂಗೆ ಇಳಿಸಲಾಗಿದೆ. ಈ ಸಂಶೋಧನಾ ವರದಿ ಪ್ರಕಾರ ಭಾರತದಲ್ಲಿ 5 ರಿಂದ 19 ವರ್ಷ ವಯಸ್ಸಿನ ಅಧಿಕ ತೂಕವುಳ್ಳ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. 1990 ರಲ್ಲಿ 0.4 ಮಿಲಿಯನ್‌ಷ್ಟಿದ್ದ ಮಕ್ಕಳ ಸಂಖ್ಯೆ 2022 ರಲ್ಲಿ 12.5 ಮಿಲಿಯನ್‌ಗೆ ಏರಿಕೆಯಾಗಿದೆ ಎಂದು ತಿಳಿಸಿದೆ. ವರದಿಯಲ್ಲಿ ಅತಿಯಾದ ಎಣ್ಣೆ ಸೇವನೆಯಿಂದ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿದ್ದು, ಶಾಲಾ ಊಟದಲ್ಲಿ ಎಣ್ಣೆ ಬಳಕೆಯನ್ನು ಕಡಿಮೆ ಮಾಡುವ ಹಾಗೂ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಮತ್ತು ಸಮುದಾಯದಲ್ಲಿ ಜಾಗೃತಿ ಮೂಡಿಸುವ ತುರ್ತು ಅಗತ್ಯವೆಂದು ಅಭಿಪ್ರಾಯಪಟ್ಟಿದೆ.

ಬೊಜ್ಜು ಸಮಸ್ಯೆಗೆ ಬಗ್ಗೆ ಮಾತಾಡಿದ್ದ ಮೋದಿ: ಪ್ರಧಾನಿ ಮೋದಿಯವರು ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಜಗತ್ತಿನಾದ್ಯಂತ ಜನರಲ್ಲಿ ಹೆಚ್ಚುತ್ತಿರುವ ಬೊಜ್ಜಿನ ಸಮಸ್ಯೆಯ ಕುರಿತು ಮಾತನಾಡಿ, ನಮ್ಮ ಸಣ್ಣ-ಪುಟ್ಟ ಪ್ರಯತ್ನಗಳಿಂದಲೇ ನಾವು ಈ ಬೊಜ್ಜಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಅಡುಗೆ ಎಣ್ಣೆ ಬಳಕೆಯಲ್ಲಿ ನಾನು ಪ್ರತಿ ತಿಂಗಳು ಶೇ.10ರಷ್ಟು ಕಡಿತ ಮಾಡಲು ನಿರ್ಧರಿಸಿದರೆ ಸಾಮಾನ್ಯವಾಗಿ ಪ್ರತಿ ತಿಂಗಳು ಎಷ್ಟು ಅಡುಗೆ ಎಣ್ಣೆ ಖರೀದಿ ಮಾಡುತ್ತಾ ಬಂದಿದ್ದೀರೋ ಅದರಲ್ಲಿ ಶೇ.10ರಷ್ಟು ಕಡಿಮೆ ಪ್ರಮಾಣದಲ್ಲಿ ಈಗ ಅಡುಗೆ ಎಣ್ಣೆ ಖರೀದಿಸಿ ಎಂದು ಸೂತ್ರವೊಂದನ್ನು ನೀಡಿದ್ದರು. ಅಧಿಕ ಅಡುಗೆ ಎಣ್ಣೆ ಬಳಕೆಯಿಂದ ಹೃದಯ ಕಾಯಿಲೆ ಮಧುಮೇಹ ಮತ್ತು ಅಧಿಕ ಒತ್ತಡಗಳಂಥ ರೋಗಗಳು ಬರುತ್ತವೆ. ನಮ್ಮ ಆಹಾರ ಪದ್ಧತಿಯಲ್ಲಿ ಮಾಡಿಕೊಳ್ಳುವ ಸಣ್ಣ ಬದಲಾವಣೆಯಿಂದ ರೋಗ ಮುಕ್ತವಾದ ಉತ್ತಮ ಭವಿಷ್ಯವನ್ನು ನಾವು ರೂಪಿಸಿಕೊಳ್ಳಬಹುದು. ಆದ್ದರಿಂದ ತಡಮಾಡದೇ ಅಡುಗೆ ಎಣ್ಣೆ ಖರೀದಿಯಲ್ಲಿ ಕಡಿತ ಮಾಡಿ ಎಂದು ಹೇಳಿದ್ದರು.

ಹುಬ್ಬಳ್ಳಿ: ಛಾಯಾಚಿತ್ರ ಪ್ರದರ್ಶನ

ಹುಬ್ಬಳ್ಳಿಯ ಇಂದಿರಾಗಾಂಧಿ ಗಾಜಿನಮನೆಯಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಏರ್ಪಡಿಸಿದ್ದ ಛಾಯಾಚಿತ್ರ ಪ್ರದರ್ಶನದಲ್ಲಿ ಸಚಿವ ಸಂತೋಷ್ ಲಾಡ್ ಅವರು ವಿಶ್ವವಾಣಿಯ ಫೋಟೋ ಜರ್ನಲಿಸ್ಟ್ ಸುಧಾಕರ್ ದೇವರಾಜ್ ಅವರ ಚಿತ್ರವನ್ನು ಕುತೂಹಲದಿಂದ ವೀಕ್ಷಿಸಿದರು. ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ ಇದ್ದರು.

ಹನಿಟ್ರ್ಯಾಪ್ ಗಂಭೀರ ವಿಚಾರ : ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಸಚಿವ ರಾಜಣ್ಣ ದೂರಿನ ಮೇರೆಗೆ ಗಂಭೀರ ತನಿಖೆ

ಬೆಳಗಾವಿ: ಹನಿಟ್ರ್ಯಾಪ್ ಬಗ್ಗೆ ಸಚಿವ ಕೆ.ಎನ್.ರಾಜಣ್ಣ ಈಗಾಗಲೇ ಹೇಳಿದ್ದಾರೆ. ಅದು ಗಂಭೀರವಾದ ವಿಷಯ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಭಾನುವಾರ ಸವದತ್ತಿಯಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಅನೇಕ ಸಂದರ್ಭಗಳಲ್ಲಿ ಇಂಥ ಘಟನೆಗಳು ಆಗಿವೆ. ಉದ್ದೇಶ ಪೂರ್ವಕವಾಗಿ ಅವರನ್ನು ಸಿಲುಕಿಸುವ ಘಟನೆ ನಡೆ ದಿವೆ. ಅನೇಕ ಕಡೆಗಳಲ್ಲಿ ಇಂಥದ್ದು ನಡೆದಿದೆ ಎಂದರು. ಸಾರ್ವಜನಿಕ ಜೀವನದಲ್ಲಿರುವವರಿಗೆ, ಉದ್ಯಮಿ ದಾರರಿಗೆ ಇಂಥ ಘಟನೆ ನಡೆದಿವೆ. ಇದೊಂದು ಗಂಭೀರ ಘಟನೆ ಸಚಿವ ರಾಜಣ್ಣ ನೀಡುವ ದೂರಿನ ಮೇರೆಗೆ ಸರಕಾರ ಕಟ್ಟುನಿಟ್ಟಿನ ತನಿಖೆ ನಡೆಸುತ್ತದೆ ಎಂದರು.

ಎಲ್ಲ ಪಕ್ಷಗಳವರೂ ಇದ್ದಾರೆ: ಬಿಜೆಪಿಯವರು ಆರೋಪ ಮಾಡುತ್ತಾರೆ. ಇದನ್ನು ಯಾರು ಮಾಡಿಸಿದ್ದಾರೆ ಎಂದು ಪತ್ತೆ ಮಾಡಬೇಕು. ಇದರಲ್ಲಿ ಬಿಜೆಪಿ, ಕಾಂಗ್ರೆಸ್ ಎಂದು ಎಳೆದು ತರಬಾರದು. ಎಲ್ಲ ಪಕ್ಷದವರು ಇದಕ್ಕೆ ಸಿಲುಕಿ ಹಾಕಿರುವ ಪ್ರಸ್ತಾಪ ರಾಜಣ್ಣ ಮಾಡಿದ್ದಾರೆ ಎಂದು ಸಚಿವರು ತಾಕೀತು ಮಾಡಿದರು.

ವಿಧಾನಸಭೆಯಲ್ಲಿ ಅತ್ಯಂತ ಕೆಟ್ಟ ರೀತಿಯಲ್ಲಿ ಬಿಜೆಪಿ ಶಾಸಕರ ವರ್ತಿಸಿದ್ದಾರೆ. ಹೀಗಾಗಿ ಬಿಜೆಪಿಯ 18 ಶಾಸಕರನ್ನು ಸ್ಪೀಕರ್ ಅಮಾನತು ಮಾಡಿದ್ದಾರೆ. ಸ್ಪೀಕರ್ ಮೇಲೆ ದಾಳಿ ಮಾಡುವುದು, ಅನುಚಿತವಾಗಿ ವರ್ತಿಸಿರುವ ಮೂಲಕ ಸದನದ ಗೌರವ ಹಾಳು ಮಾಡಿದ್ದಾರೆ. ಈ ದುರ್ವರ್ತನೆಯನ್ನು ಯಾರೂ ಸಹಿಸುವುದಿಲ್ಲ ಎಂದು ದಿನೇಶ್ ಗುಂಡೂರಾವ್ ಎಚ್ಚರಿಕೆ ಕೊಟ್ಟರು.

ಹನಿಟ್ರ್ಯಾಪ್ ದುರದೃಷ್ಟಕರ: ಬೆಳಗಾವಿ: ರಾಜ್ಯದ ಸಚಿವರೊಬ್ಬರಿಗೆ ಹನಿಟ್ರ್ಯಾಪ್ ಮಾಡಲು ಯತ್ನಿಸಿರುವುದು ದುರದೃಷ್ಟಕರ ಸಂಗತಿ. ಸದನದಲ್ಲಿ ಹಿರಿಯ ಸಚಿವರು ತಮಗಾದ ಅನುಭವವನ್ನು ಹಂಚಿಕೊಂಡಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಪ್ರತಿಕ್ರಿಯಿಸಿದ್ದಾರೆ. ಹನಿಟ್ರ್ಯಾಪ್ ಯತ್ನಕ್ಕೆ ಸಂಬಂಧಿಸಿದಂತೆ ಈಗಾಗಲೇ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿ ಹಾಗೂ ಗೃಹಸಚಿವರು ಪ್ರತಿಕ್ರಿಯೆ ನೀಡಿದ್ದಾರೆ. ಗೃಹ ಸಚಿವರು ಇದನ್ನು ನೋಡಿಕೊಳ್ಳುತ್ತಾರೆ. ನಾನು ಅದರ ಕುರಿತು ಹೆಚ್ಚು ಮಾತನಾಡಲ್ಲ ಎಂದರು.

ಹನಿಟ್ರ್ಯಾಪ್ ಪ್ರಯತ್ನ ಅಷ್ಟೇ: ಸಚಿವ ಕೆ.ಎನ್. ರಾಜಣ್ಣ ಮೇಲೆ ಹನಿಟ್ರ್ಯಾಪ್ ಆಗಿಲ್ಲ. ಕೇವಲ ಹನಿಟ್ರ್ಯಾಪ್ ಪ್ರಯತ್ನ ನಡೆದಿದೆ ಅಷ್ಟೇ. ಈ ಬಗ್ಗೆ ದೂರು ಬಂದ ತಕ್ಷಣ ಗಂಭೀರವಾಗಿ ಪರಿಶೀಲಿಸಿ ಸರಕಾರ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ಸಚಿವ ಬೋಸರಾಜು ಸ್ಪಷ್ಟಪಡಿಸಿದ್ದಾರೆ. ರಾಯಚೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಹನಿಟ್ರ್ಯಾಪ್ ಪ್ರಕರಣದಲ್ಲಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಗೃಹ ಸಚಿವರು ಹೇಳಿದ್ದಾರೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಲ್ಲರ ಮೇಲೂ ಹನಿಟ್ರ್ಯಾಪ್ ಪ್ರಯತ್ನ ನಡೆದಿದೆ.ಸದಾಶಿವ ನಗರದಲ್ಲಿ ಎಲ್ಲ ಪಕ್ಷಗಳ ನಾಯಕರು ಇದ್ದಾರೆ ಎಂದರು.

ತುಮಕೂರಿನಲ್ಲಿ ₹ 13 ಲಕ್ಷದ ಗಾಂಜಾ ವಶ

ತುಮಕೂರು: ಗಾಂಜಾ ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ತುಮಕೂರು ಪೊಲೀಸರು ಬಂಧಿಸಿದ್ದು, 13 ಲಕ್ಷ ರೂಪಾಯಿ ಮೌಲ್ಯದ 17.89 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದಾರೆ. ಮೈಸೂರಿನ ರಾಕೇಶ್, ಮಂಡ್ಯದ ಹರ್ಷ ಪಿ.ಜೆ. ಬಂಧಿತರು. ತುಮಕೂರಿನ ಟೂಡಾ ಲೇಔಟ್‌ಲ್ಲಿ ಮಾರಾಟ ಮಾಡಲು ಆರೋಪಿಗಳು ಗಾಂಜಾ ಸಾಗಿಸುತ್ತಿದ್ದರು. ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.

ಕರ್ನಾಟಕ ಸರ್ಕಾರ
(ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2024-25/8538 ದಿನಾಂಕ:21.03.2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024-25 ನೇ ಸಾಲಿನ ಈ ಕಚೇರಿಯ ಟೆಂಡರ ಪ್ರಕಟಣೆ **ಸಂಖ್ಯೆ: 8538 ದಿನಾಂಕ: 21.03.2025** ರಂತೆ ಒಟ್ಟು 3 ಕಾಮಗಾರಿಯ ಇಂಡೆಂಟ ನಂ: 7277, 7279 ಮತ್ತು 7512 ರ ರೂ. 7.00 ಲಕ್ಷದಿಂದ 17.00 ಲಕ್ಷಗಳ ಒಳಗಿನ ಸಾಮಗ್ರಿ ಸರಬರಾಜುದಾರರಿಗೆ ಇ-ಟೆಂಡರ್‌ನ್ನು ಅಹ್ವಾನಿಸಿದ್ದು. ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.kppp.karnataka.gov. in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/787/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ:ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/3054/2024-25/4395
ದಿನಾಂಕ: 20.03.2025

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3 ರಲ್ಲಿ ಲೆಕ್ಕ ಶೀರ್ಷಿಕೆ 3054-04-337-0-10-200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿಯಲ್ಲಿ ಒಟ್ಟು 1 ಕಾಮಗಾರಿ ಗುತ್ತಿಗೆಯನ್ನು ಕರೆಯಲಾಗಿದ್ದು, ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 100.00 ಲಕ್ಷಗಳು & ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 2,00,000/- ರೂ.ಗಳು. ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:-27.03.2025 ರ ಸಂಜೆ 5.29 ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 28.03.2025 ರ ಸಂಜೆ 5.30 ಘಂಟೆಯ ನಂತರ ಮತ್ತು. ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 29.03.2025 ರ ಸಂಜೆ 5.30 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/779/ಕೆಎಸ್‌ಎಂಸಿಎ/2024-25

ತಾಯಿ-ಮೂವರು ಮಕ್ಕಳ ಹತ್ಯೆ, ಆರೋಪಿ ಅರ್ಜಿ ತಿರಸ್ಕೃತ

ಉಡುಪಿ: ಹಂಪನಕಟ್ಟೆ ಸಮೀಪದ ನೇಜಾರಿನಲ್ಲಿ 2023 ರಲ್ಲಿ ನಡೆದ ತಾಯಿ ಮತ್ತು ಮೂವರು ಮಕ್ಕಳ ಹತ್ಯೆ ಪ್ರಕರಣದ ಸಾಕ್ಷ್ಯಗಳ ವಿಚಾರಣೆಯ ಆಡಿಯೊ ಮತ್ತು ವಿಡಿಯೋ ದಾಖಲಿಸಬೇಕೆಂದು ಕೋರಿ ಆರೋಪಿ ಪ್ರವೀಣ್ ಚೌಗುಲೆ ಸಲ್ಲಿಸಿದ್ದ ಅರ್ಜಿಯನ್ನು ಉಡುಪಿಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತಿರಸ್ಕರಿಸಿದೆ.

ಅಲ್ಲದೆ, ಚೌಗುಲೆ ಕೃತ್ಯಕ್ಕೆ ಬಳಸಿದ ಕಾರನ್ನು ಸಾಲದ ಕಂತು ಪಾವತಿಸದ ಹಿನ್ನೆಲೆಯಲ್ಲಿ ತಮ್ಮ ವಶಕ್ಕೆ ನೀಡಬೇಕೆಂಬ ಬ್ಯಾಂಕಿನವರ ಅರ್ಜಿಯ ಕುರಿತ ಅಂತಿಮ ಆದೇಶವನ್ನು ವಿಚಾರಣೆ ಮುಗಿಯುವವರೆಗೆ ನ್ಯಾಯಾಲಯ ಕಾಯ್ದಿರಿಸಿದೆ. ಕಾರನ್ನು ಬ್ಯಾಂಕಿನವರಿಗೆ ನೀಡಿದರೆ, ಮುಂದೆ ಅವರು ಅದನ್ನು ಮಾರಾಟ ಮಾಡಿದರೆ ಸಾಕ್ಷ್ಯ ವಿಚಾರಣೆಗೆ ತೊಂದರೆ ಆಗುತ್ತದೆ ಎಂದು ವಿಶೇಷ ಸರ್ಕಾರಿ ಅಭಿಯೋಜಕರು ಆಕ್ಷೇಪಣೆ ಸಲ್ಲಿಸಿದ್ದರು. ಮುಂದಿನ ವಿಚಾರಣೆಯನ್ನು ಏ.3ಕ್ಕೆ ನಿಗದಿಪಡಿಸಿ ನ್ಯಾಯಾಧೀಶ ಸಮೀವುಲ್ಲಾ ಆದೇಶ ನೀಡಿದ್ದಾರೆ.

ಖಾಸಗಿ ಆಸ್ಪತ್ರೆಗಳ ಮಾದರಿಯಲ್ಲಿ ಸರಕಾರದಿಂದ ವೈದ್ಯಕೀಯ ಸೇವೆ

ಏಪ್ರಿಲ್ ಮೊದಲ ವಾರದಲ್ಲಿ ಗೃಹ ಆರೋಗ್ಯ ಯೋಜನೆ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭಾನುವಾರ ಬೆಳಗಾವಿ ಜಿಲ್ಲೆಯಲ್ಲಿ ಆರೋಗ್ಯ ಮೇಳ ಉದ್ಘಾಟಿಸಿದರು.

ಬೆಳಗಾವಿ: ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ರಾಜ್ಯದ ಎಲ್ಲಾ ಜನರ ಮನೆ ಬಾಗಿಲಲ್ಲಿ ಆರೋಗ್ಯ ತಪಾಸಣೆ ನಡೆಸುವ ಗೃಹ ಆರೋಗ್ಯ ಯೋಜನೆ ಜಾರಿಯಾಗಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಭಾನುವಾರ ಸವದತ್ತಿ ತಾಲೂಕಿನಲ್ಲಿ ಬೃಹತ್ ಆರೋಗ್ಯ ಮೇಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜನರಿಗೆ ಖಾಸಗಿ ಆಸ್ಪತ್ರೆಗಳ ಮಾದರಿಯಲ್ಲಿ ವೈದ್ಯಕೀಯ ಸೇವೆ ಒದಗಿಸುವ ನಿಟ್ಟಿನಲ್ಲಿ ಆರೋಗ್ಯ ಮೇಳ ಆಯೋಜಿಸಲಾಗಿದೆ. ಜನರ ಅನುಕೂಲಕ್ಕಾಗಿ ರಾಜ್ಯದ ವಿವಿಧೆಡೆ ಚಿಕಿತ್ಸಾ ಮಳಿಗೆಗಳನ್ನು ಸ್ಥಾಪಿಸಲಾಗಿದೆ ಎಂದರು.

ನಿರ್ಲಕ್ಷ್ಯ ತೋರಬೇಡಿ: ಅನೇಕ ರೋಗಗಳಿಗೆ ರೋಗದ ಕಾರಣ ಗೊತ್ತಿರುವುದಿಲ್ಲ. ತಮ್ಮ ಕಾಯಿಲೆಗಳಿಗೆ ನಿರ್ಲಕ್ಷ್ಯ ತೋರಿಸಬಾರದು. ಸಕ್ಕರೆ ಕಾಯಿಲೆ, ರಕ್ತದೊತ್ತಡ ಪರೀಕ್ಷೆಗಳನ್ನು ಮಾಡಿಸಿ ನಿಯಂತ್ರಣಕ್ಕೆ ತರುವ ಮೂಲಕ ಜೀವನ ಶೈಲಿ ಬದಲಾಯಿಸಿ ಆರೋಗ್ಯಯುತ ಜೀವನ ನಡೆಸಬೇಕು ಎಂದು ಸಚಿವರು ಕಿವಿಮಾತು ಹೇಳಿದರು.

ಆರೋಗ್ಯಯುತ ಜೀವನ ನಡೆಸಲು ದಿನನಿತ್ಯ ವ್ಯಾಯಮ ಉತ್ತಮ ಆಹಾರ ಪದ್ಧತಿ ಅಳವಡಿಸಿಕೊಳ್ಳಬೇಕು. ಸರಕಾರದ ಇನ್ನೂ ಅನೇಕ ಆರೋಗ್ಯ ಸೇವೆಗಳು ಸಾರ್ವಜನಿಕರಿಗೆ ಉಚಿತವಾಗಿ ಒದಗಿಸಲಾಗುವುದು. ಸರ್ಕಾರದಿಂದ ಖಾಸಗಿ ಮಾದರಿಯಲ್ಲಿ ಉಚಿತ ಆರೋಗ್ಯ ಸೇವೆ ಒದಗಿಸಲು ಸರಕಾರ ನಿರಂತರ ಶ್ರಮಿಸುತ್ತಿದೆ ಎಂದು ದಿನೇಶ್ ಗುಂಡೂರಾವ್ ನುಡಿದರು.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಕನ್ನಡಿಗರಿಗೆ ಬೆಲೆ ಏರಿಕೆಯ ಶಿಕ್ಷೆ ನೀಡಲು ಸದಾ ಸಿದ್ಧ 'ಸಿಡಿ' ಸರಕಾರ..!

ಆರ್.ಎನ್.ಸತ್ಯನಾರಾಯಣರಾವ್, ದೆಹಲಿ

ಕಾಂಗ್ರೆಸ್ ಪಕ್ಷದ ಮೂಲತತ್ವ, ವಿಚಾರಧಾರೆ ಎಲ್ಲ ಜನರಿಗೆ ಗೊತ್ತಿಲ್ಲ. ಅದರಲ್ಲೂ ಹಳ್ಳಿ ಜನಗಳಿಗೆ ಗೊತ್ತೇ ಇಲ್ಲ. ಏನಾದರೂ ಬಿಟ್ಟಿಯಾಗಿ ಕೊಡುತ್ತೇವೆ ಎಂದರೆ ಸಾಕು, ನಂಬಿ ಮತ ಹಾಕುತ್ತಾರೆ. ಈಗ ಗೋಳೋ ಅಂತ ಅತ್ತರೆ ಏನು ಪ್ರಯೋಜನ. ಚುನಾವಣೆಗಳನ್ನು ಗೆಲ್ಲಲು ದೇಣಿಗೆ ರೂಪದಲ್ಲಿ ತೆರಿಗೆ ಹಣ. ಬೆಲೆಗಳನ್ನು ಹೆಚ್ಚಿಸಿ ಅವರ ಮೋಜು, ಮಸ್ತಿ..!



ಸಮಾಚಾರ ಸಣ್ಣದಲ್ಲ

ಜೋಡಿ ಕೊಲೆಗೆ ಹಳೇದ್ವೇಷ ಕಾರಣ

ಯಾದಗಿರಿ: ಮಾ. 16 ರಂದು ಶಹಾಪುರ ತಾಲೂಕಿನ ಸಾದ್ಯಾಪುರದಲ್ಲಿ ನಡೆದ ಜೋಡಿಕೊಲೆಗೆ 11 ವರ್ಷಗಳ ಹಿಂದೆ ಅನೈತಿಕ ಸಂಬಂಧದಿಂದ ಉಂಟಾದ ದ್ವೇಷವೇ ಕಾರಣ ಎಂಬ ಅಂಶ ಇದೀಗ ಬೆಳಕಿಗೆ ಬಂದಿದೆ. ಹೆಣ್ಣಿನ ವಿಚಾರಕ್ಕೆ ಶುರುವಾದ ದ್ವೇಷ ಇಬ್ಬರ ಕೊಲೆಯಲ್ಲಿ ಅಂತ್ಯ ವಾಗಿದ್ದು, ಇಡೀ ಪ್ರಕರಣಕ್ಕೆ ಭಾರಿ ತಿರುವು ಸಿಕ್ಕಿದೆ. ಈ ಕೊಲೆ ಹಿನ್ನೆಲೆಯಲ್ಲಿ ಭೀಮರಾಯ ನಗುಡಿ ಪೊಲೀಸರು ರೌಡಿಶೀಟರ್ ಸೇರಿದಂತೆ ಮೂವರನ್ನು ಬಂಧಿಸಿದ್ದಾರೆ. ಮದ್ದರಕಿ ಗ್ರಾಮದ ದಲಿತ ಮುಖಂಡ ಮಾಪಣ್ಣ ಮತ್ತು ಅತನ ಜತೆಗಿದ್ದ ಅಲಿಸಾಬ್‌ರನ್ನು ಎರಡು ಗುಂಪುಗಳು ಹತ್ಯೆಗೈದಿದ್ದವು. ಶಿವಪ್ಪಗೌಡ, ಹುಸೇನಿ ಮತ್ತು ಮೊಹಮ್ಮದ್ ರಿಯಾಜ್ ಎಂಬು ವರನ್ನು ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ.

ಹುಬ್ಬಳ್ಳಿ- ಬೆಂಗಳೂರು ಮತ್ತೊಂದು ವಿಮಾನ

ಹುಬ್ಬಳ್ಳಿ: ರಾಜ್ಯದ ರಾಜಧಾನಿಯೊಂದಿಗೆ ವಾಣಿಜ್ಯ ನಗರಿಯಾದ ಹುಬ್ಬಳ್ಳಿಯಿಂದ ಈಗ ಮತ್ತೊಂದು ವಿಮಾನ ಸಂಚಾರ ಮಾ. 30ರಂದು ಆರಂಭವಾಗಲಿದೆ. ಇದರೊಂದಿಗೆ ದಿನಕ್ಕೆ ಮೂರು ವಿಮಾನಗಳು ಬೆಂಗಳೂರು ಮತ್ತು ಹುಬ್ಬಳ್ಳಿ ಮಧ್ಯೆ ಸಂಚಾರ ಮಾಡಲಿವೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿಯವರು ಇಂದು ಇಂಡಿಗೋ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಈ ಸೇವೆ ಆರಂಭಿಸುವ ಕುರಿತು ಚರ್ಚಿಸಿದ ಫಲವಾಗಿ ಈ ನಿರ್ಣಯ ಕೈಗೊಳ್ಳಲಾಗಿದೆ.ಇದರಿಂದಾಗಿ ಹುಬ್ಬಳ್ಳಿ ಭಾಗದ ಜನತೆಗೆ ಕೇಂದ್ರ ಸರಕಾರ ಯುಗಾದಿಯ ಸಿಹಿ ನೀಡಿದಂತಾಗಿದೆ.

ವಿಮಾನ ಹಾರಾಟ ವಿವರ: ಬೆಂಗಳೂರು- ಹುಬ್ಬಳ್ಳಿ 6ಇ 7056 ಬೆಳಗ್ಗೆ 9.55, ಬೆ.11.20

ಹುಬ್ಬಳ್ಳಿ-ಬೆಂಗಳೂರು 6ಇ 7263 ಬೆಳಗ್ಗೆ 11.55 ಮತ್ತು ಮಧ್ಯಾಹ್ನ 1.20

ಸಚಿವರ ಧನ್ಯವಾದ: ಹುಬ್ಬಳ್ಳಿ - ಬೆಂಗಳೂರು ನಡುವೆ ಮತ್ತೊಂದು ವಿಮಾನಸೇವೆಗೆ ಅವಕಾಶ ಕಲ್ಪಿಸಿದ್ದಕ್ಕಾಗಿ ಸಚಿವ ಜೋಶಿಯವರು ಇಂಡಿಗೋ ಆಡಳಿತ ವರ್ಗಕ್ಕೆ ಧನ್ಯವಾದ ಸಲ್ಲಿಸಿದ್ದಾರೆ. ಅಲ್ಲದೆ, ಹುಬ್ಬಳ್ಳಿ ಮತ್ತು ಅಹ್ಮದಾಬಾದ್ ನಡುವೆ ವಿಮಾನಯಾನ ಆರಂಭಿಸಲೂ ಸಹ ಜೋಶಿಯವರು ಇಂಡಿಗೋ ಆಡಳಿತ ವರ್ಗಕ್ಕೆ ಮನವಿ ಮಾಡಿದ್ದಾರೆ. ಈ ಸೇವೆ ಯಿಂದ ಹುಬ್ಬಳ್ಳಿ - ಧಾರವಾಡ ಸೇರಿದಂತೆ ಸುತ್ತ ಮುತ್ತಲ ಜಿಲ್ಲೆಗಳಿಂದ ಬೆಂಗಳೂರಿಗೆ ಪ್ರಯಾಣಿಸುವ ಪ್ರಯಾಣಿ ಕರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದು ಜೋಶಿ ಸಂತಸ ವ್ಯಕ್ತಪಡಿಸಿದ್ದಾರೆ.

{ ವಿನಯ್ ಕುಲಕರ್ಣಿ } ಶಾಸಕ

ಹನಿಟ್ರ್ಯಾಪ್ ಮಾಡೋದು ಕೆಳಮಟ್ಟದ ರಾಜಕಾರಣ. ನಮ್ಮನ್ನು ಜನಸಾಮಾನ್ಯರು ನೋಡುತ್ತಿದ್ದಾರೆ. ಹನಿಟ್ರ್ಯಾಪ್ ಬಗ್ಗೆ ನನಗೆ ಅಷ್ಟೊಂದು ಮಾಹಿತಿ ಇಲ್ಲ. ರಾಜಕಾರಣದಲ್ಲಿ ಮಹಿಳೆಯರನ್ನು ಮುಂದೆ ಬಿಟ್ಟು ಇಂತಹ ಕೆಲಸಗಳು ನಡೆಯುತ್ತಿವೆ. ಹನಿಟ್ರ್ಯಾಪ್ ಮಾಡೋದರ ಬಗ್ಗೆ ಸದನದಲ್ಲಿ ಚರ್ಚೆ ಆಗಿದೆ. ಇದಕ್ಕೆ ಕಾಯಿದೆ ತಿದ್ದುಪಡಿ ಆಗಬೇಕು.

ಹನಿಟ್ರ್ಯಾಪ್‌ಗೆ ಸಂಬಂಧಿಸಿದಂತೆ ಮಾಹಿತಿ ಹಂಚಿಕೊಂಡ ಸಿಎಂ ಸುಮಾರು 40 ನಿಮಿಷಕ್ಕೂ ಹೆಚ್ಚು ಕಾಲ ಚರ್ಚಿಸಿದ ನಾಯಕರು

ಸಿಎಂ ಭೇಟಿಯಾದ ಅಧ್ಯಕ್ಷ ಖರ್ಗೆ: ಹೆಚ್ಚಿದ ಕುತೂಹಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾನುವಾರ ಸಿಎಂ ಸಿದ್ದರಾಮಯ್ಯನವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಸಚಿವ ಪ್ರಿಯಾಂಕ್ ಖರ್ಗೆ ಇದ್ದರು.

ತೀವ್ರ ವಿವಾದಕ್ಕೆ ಕಾರಣವಾಗಿರುವ ಹನಿಟ್ರ್ಯಾಪ್ ಪ್ರಕರಣದ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಔಪಚಾರಿಕ' ಭೇಟಿ ನೀಡಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಕೆಲ ತಿಂಗಳ ಹಿಂದೆ ಮೊಣಕಾಲು ನೋವಿಗೆ ತುತ್ತಾಗಿದ್ದ ಸಿದ್ದರಾಮಯ್ಯ ಅವರು ಆಸ್ಪತ್ರೆಯಿಂದ ಬಿಡುಗಡೆಯಾದ ಬಳಿಕ ಹಲವು ನಾಯಕರು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿ ದ್ದರು. ಆದರೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿಯಾಗಿರಲಿಲ್ಲ. ಆದ್ದರಿಂದ ಭಾನುವಾರ ಪುತ್ರ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಸಿದ್ದರಾಮಯ್ಯ ನಿವಾಸಕ್ಕೆ ಭೇಟಿನೀಡಿದ ಖರ್ಗೆ , 40 ನಿಮಿಷಕ್ಕೂ ಹೆಚ್ಚು ಕಾಲ ಮಾತುಕತೆ ನಡೆಸಿರುವುದು ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಹನಿಟ್ರ್ಯಾಪ್ ವರದಿ: ಕಠಿಣ ಕ್ರಮ

ಕರ್ನಾಟಕ ಕಾಂಗ್ರೆಸ್‌ನಲ್ಲಿ ವಿವಾದಕ್ಕೆ ಕಾರಣವಾಗಿರುವ ಹನಿಟ್ರ್ಯಾಪ್ ಆರೋಪಕ್ಕೆ ಸಂಬಂಧಿಸಿದಂತೆ ಈಗಾಗಲೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರಿಗೆ ವರದಿ ನೀಡುವಂತೆ ಸೂಚನೆ ನೀಡಿದ್ದಾರೆ. ಆದರೂ ಭಾನುವಾರದ ಭೇಟಿಯ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿ ನೀಡಿದ್ದಾರೆ ಎನ್ನಲಾಗಿದೆ. ಈ ಭೇಟಿಯ ವೇಳೆ ಸಚಿವರಾದ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಇದ್ದರು.

ಹನಿಟ್ರ್ಯಾಪ್ ಪ್ರಕರಣದಲ್ಲಿ ನಮ್ಮ ಪಕ್ಷದವರು, ವಿರೋಧ ಪಕ್ಷದವರು ಯಾರೇ ಭಾಗಿಯಾಗಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಸದನದಲ್ಲಿ ಸಚಿವರೇ ಹೇಳಿಕೆ ನೀಡಿದ ಮೇಲೆ ಸರಕಾರ ಸುಮ್ಮನಿರುವುದಿಲ್ಲ. ಈ ಪ್ರಕರಣ ಕುರಿತು ತನಿಖೆ ನಡೆಸುತ್ತೇವೆ. ಪ್ರತಿಪಕ್ಷದವರು ನ್ಯಾಯಾಂಗ ತನಿಖೆಯ ಸಲಹೆ ನೀಡಿದ್ದಾರೆ. ಆದರೆ ಪ್ರಕರಣವನ್ನು ಯಾವ ರೀತಿಯಲ್ಲಿ ಮಾಡಬೇಕು ಎನ್ನುವುದು ಅಧಿಕೃತ ದೂರು ದಾಖಲಾದ ಬಳಿಕ ತೀರ್ಮಾನಿಸಲಾಗುವುದು ಎನ್ನುವ ಮಾತನ್ನು ಸಿದ್ದರಾಮಯ್ಯ ಹೇಳಿದ್ದಾರೆ ಎಂದು ತಿಳಿದುಬಂದಿದೆ.

ಹನಿಟ್ರ್ಯಾಪ್ ಪ್ರಕರಣ ಸಾಕಷ್ಟು ಸಂಚಲನ ಸೃಷ್ಟಿಸಿದ್ದು, ಈ ಪ್ರಕರಣದಲ್ಲಿ ಸಚಿವರೊಬ್ಬರು ಬಹಿರಂಗವಾಗಿ ಆರೋಪಿಸಿದ್ದಾರೆ. ಇದರಿಂದ ಪಕ್ಷಕ್ಕೆ ಹಾಗೂ ಸರಕಾರದ ವರ್ಚಸ್ಸಿಗೆ ಪೆಟ್ಟು ಬೀಳುತ್ತಿದೆ.ಆದ್ದರಿಂದ ಈ ಬಗ್ಗೆ ಶೀಘ್ರವೇ ತನಿಖೆ ನಡೆಸಿ, ತಾರ್ಕಿಕ ಅಂತ್ಯ ಕಾಣಿಸಿ ಎನ್ನುವ ಸೂಚನೆ ಖರ್ಗೆ ನೀಡಿದ್ದಾರೆ ಎನ್ನಲಾಗಿದೆ.

ಸಿಎಂ ಅವರನ್ನು ಯಾರಾದರೂ ಭೇಟಿಯಾಗಬಹುದು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಚಿವ ರಾಜಣ್ಣ ಪುತ್ರ ರಾಜೇಂದ್ರ ಭೇಟಿಯಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿಯವರನ್ನು ಯಾರು ಬೇಕಾದರೂ ಭೇಟಿ ಮಾಡಬಹುದು. ಅವರನ್ನು ಯಾರು ಭೇಟಿ ಮಾಡಿದರು ಎಂಬುದರ ಬಗ್ಗೆ ನನ್ನನ್ನು ಏಕೆ ಕೇಳುತ್ತೀರಿ? ನನಗೆ ಸಂಬಂಧಿಸಿದ ವಿಚಾರಗಳೇನಾದರೂ ಇದ್ದರೆ ಆ ಬಗ್ಗೆ ಮಾತ್ರ ಪ್ರಶ್ನೆ ಕೇಳಿ ಎಂದು ಮಾಧ್ಯಮದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ರಾಜೇಂದ್ರ, ರಾಜಣ್ಣ ಭೇಟಿಯಾದ ವಿಚಾರವಾಗಿ ಏನನ್ನೂ ಕೇಳಬೇಡಿ. ಮುಖ್ಯಮಂತ್ರಿಗಳನ್ನು ಯಾರು ಬೇಕಾದರೂ ಭೇಟಿ ಮಾಡಿಕೊಳ್ಳಲಿ. ನನ್ನ ಇಲಾಖೆಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಮಾತ್ರ ನನ್ನನ್ನು ಕೇಳಿ. ಅವರು ಇವರನ್ನು ಭೇಟಿ ಮಾಡಿದರು, ಇವರು ಅವರನ್ನು ಭೇಟಿ ಮಾಡಿದರು ಎಂದು ನನ್ನನ್ನು ಯಾಕೆ ಕೇಳುತ್ತೀರಾ? ಮುಖ್ಯಮಂತ್ರಿಗಳು ಅಂದಮೇಲೆ ಎಲ್ಲಾ ಸಚಿವರು, ಶಾಸಕರು, ಸಂಸದರು, ಸಾರ್ವಜನಿಕರು ಭೇಟಿ ಮಾಡುವುದು ಸಹಜ. ನನ್ನನ್ನೂ ಅನೇಕರು ಭೇಟಿ ಮಾಡುತ್ತಾರೆ. ಇಂಥ ವಿಚಾರವಾಗಿ ಯಾವುದೇ ಪ್ರಶ್ನೆಗಳನ್ನು ನನಗೆ ಕೇಳಬೇಡಿ ಎಂದು ಡಿಕೆಶಿ ತಾಕೀತು ಮಾಡಿದರು.

ಕಲಬುರಗಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಘೋಷಣೆ | ಕಾಂಗ್ರೆಸ್ ನಲ್ಲಿ ಆಂತರಿಕ ಗೊಂದಲ ಬಹಿರಂಗ , ಸಿಎಂ ಕುರ್ಚಿ ಸುತ್ತ ಹನಿಟ್ರ್ಯಾಪ್ ಪ್ರಕರಣ

ಕಾಂಗ್ರೆಸ್ ಮುಸ್ಲಿಂ ತುಷ್ಟೀಕರಣ: ಬಿಜೆಪಿ-ಜೆಡಿಎಸ್ ಜಂಟಿ ಹೋರಾಟ

ಕಲಬುರಗಿ: ಹನಿ ಟ್ರ್ಯಾಪ್ ಬಗ್ಗೆ ಹೆಚ್ಚೇನು ಚರ್ಚೆ ಮಾಡುವುದಿಲ್ಲ. ಈ ಬಗ್ಗೆ ವಿಧಾನಸಭೆಯಲ್ಲಿ ಸಾಕಷ್ಟು ಚರ್ಚೆ ಆಗಿದೆ. ಸಂಪೂರ್ಣ ಪ್ರಕರಣ ಮುಖ್ಯಮಂತ್ರಿ ಕುರ್ಚಿಗೆ ಸುತ್ತುವರಿದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ ವಿಜಯೇಂದ್ರ ಪ್ರತಿಕ್ರಿಯೆ ನೀಡಿದರು.

ಕಲಬುರಗಿಯಲ್ಲಿ ತಮ್ಮ ಕುಟುಂಬದ ಕಾರ್ಯಕ್ರಮದಲ್ಲಿ ಭಾಗಿಯಾಗಲು ಭಾನುವಾರ ಆಗಮಿಸಿದ ವಿಜಯೇಂದ್ರ ತಮ್ಮ ತಂದೆ ಹಾಗೂ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ , ಸಿಎಂ ಕುರ್ಚಿಗೆ ಹನಿಟ್ರ್ಯಾಪ್ ಪ್ರಕರಣ ಸುತ್ತುತ್ತಿದೆ. ಈಗಾಗಲೇ, ಸದನದಲ್ಲಿ ಈ ವಿಚಾರ ಮಾತನಾಡಿದ್ದೇವೆ. ಕೆ.ಎನ್. ರಾಜಣ್ಣ, ಸತೀಶ್ ಜಾರಕಿಹೊಳಿ ದಿನಕ್ಕೊಂದು ಹೇಳಿಕೆ ಕೊಡುತ್ತಿದ್ದಾರೆ. ಕಾಂಗ್ರೆಸ್ ನಲ್ಲಿ ಆಂತರಿಕ ಗೊಂದಲದಿಂದ ಈಗ ಪ್ರಕರಣ ಹೊರಬರುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಕ್ಷಿಪ್ರ ಬೆಳವಣಿಗೆ ನಡೆಯುತ್ತಿದೆ ನಾನು ಹಿಂದೆಯೇ ಹೇಳಿದ್ದೆ ಎಂದು ಸ್ಪಷ್ಟಪಡಿಸಿದರು.

ಮುಸ್ಲಿಂ ಓಲೈಕೆ ಸಲ್ಲದು

ಸಿಡಿ ಬಗ್ಗೆ ರಾಜಕಾರಣದ ಚರ್ಚೆ ನಾನು ಮಾಡಲ್ಲ. ಎಲ್ಲ ಸಚಿವರು ಹೇಳಿಕೆ ನೀಡುತ್ತಿದ್ದಾರೆ. ಅವರು ದೂರು ಕೊಡಲಿ, ಕೊಟ್ಟ ಮೇಲೆ ಏನಾಗುತ್ತೆ ನೋಡೋಣ ಎಂದ ವಿಜಯೇಂದ್ರ, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಅಲ್ಪಸಂಖ್ಯಾತರ ಒಲೈಕೆ ಮಾಡುತ್ತಿದೆ. ಅದರ ಬಗ್ಗೆ ಚರ್ಚೆ ನಡೆಯಬೇಕು. ಬಿಜೆಪಿ ಮುಸ್ಲಿಂರ ವಿರೋಧಿ ಅಲ್ಲ. ಆದರೆ, ಮುಸ್ಲಿಮರನ್ನು ಸಂತೃಪ್ತಗೊಳಿಸುವ ಮೂಲಕ ಹಿಂದುಗಳಿಗೆ ಅಪಮಾನ ಮಾಡುವ ಕೆಲಸವನ್ನು ಕಾಂಗ್ರೆಸ್ ನಿಂದ ಆಗುತ್ತಿದೆ. ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಒಲೈಕೆ ಆಗಿದೆಯೇ ಹೊರತು ಅಭಿವೃದ್ಧಿ ಬಜೆಟ್ ಅಲ್ಲ. ಈ ಕುರಿತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಜತೆ ಮಾತನಾಡಿದ್ದು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಜತೆ ಚರ್ಚೆ ಮಾಡುತ್ತೇನೆ. ಮುಸ್ಲಿಂ ತುಷ್ಟೀಕರಣದ ಬಗ್ಗೆ ಜೆಡಿಎಸ್ ಜತೆಗೂಡಿ ಹೋರಾಟ ಮಾಡುತ್ತೇವೆ ಎಂದು ಪ್ರಕಟಿಸಿದರು.

ಶಾಸಕರ ಅಮಾನತು: ಕ್ಷೇತ್ರದ ಜನರಿಗೆ ಅಪಮಾನ: 18 ಶಾಸಕರ ಅಮಾನತು ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಬಿಜೆಪಿ ರಾಜ್ಯಾಧ್ಯಕ್ಷರು, ಈ ರೀತಿ ಯಾವತ್ತೂ ಸದಸ್ಯರನ್ನು ಅಮಾನತು ಮಾಡಿರಲಿಲ್ಲ. ಹಿಂದೆ ಪರಿಷತ್ ನಲ್ಲಿ ಧರ್ಮೆಗೌಡರನ್ನು ಕಾಂಗ್ರೆಸ್ ಸದಸ್ಯರು ಪೀಠದಿಂದಲೇ ಹೊರಹಾಕಿದರು. 18 ಶಾಸಕರನ್ನು ಅಮಾನತು ಮಾಡಿದ್ದು ಏಕೆ ಎಂದು ಕೇಳಿದ್ದೇನೆ. ಶಾಸಕರ ವರ್ತನೆ ಸರಿಯಿಲ್ಲ ಅಂದರೆ, ಅವರ ಅಧಿಕಾರಕ್ಕೆ ಸೀಮಿತವಾದಂತೆ ಅಮಾನತು ಮಾಡಬಹುದಾಗಿತ್ತು. ಆದರೆ, ಆರು ತಿಂಗಳು ಅಮಾನತು ಮಾಡುವುದು ಕಾನೂನುಬಾಹಿರ. ಅಮಾನತಿನ ಜತೆಗೆ ಷರತ್ತು ಹಾಕಿರೋದು ಸಂವಿಧಾನ ವಿರೋಧಿ ನಡೆ. ಯಾವುದೋ ಕೆಟ್ಟ ಗಳಿಗೆಯಲ್ಲಿ ನಮ್ಮವರು ಈ ರೀತಿ ನಡೆದುಕೊಂಡಿದ್ದಾರೆ. ಅಮಾನತು ಮಾಡಿರೋದು ಆ ಕ್ಷೇತ್ರದ ಜನರಿಗೆ ಮಾಡಿರುವ ಅಪಮಾನವಾಗಿದೆ. ಕೂಡಲೇ, ಅಮಾನತು ಆದೇಶ ಹಿಂತೆಗೆದುಕೊಳ್ಳಬೇಕು. ಈ ಬಗ್ಗೆ ಸಭಾಧ್ಯಕ್ಷರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಬಿ.ಎಸ್.ವೈಗೂ ಕಲಬುರಗಿಗೂ ಅವಿನಾಭಾವ ಸಂಬಂಧ

ಯಡಿಯೂರಪ್ಪ ಅವರಿಗೂ, ಕಲಬುರಗಿಗೂ ಅವಿನಾಭ ಸಂಬಂಧವಿದೆ. ಮುಖ್ಯಮಂತ್ರಿ ಯಾಗಿದ್ದಾಗ ಯಡಿಯೂರಪ್ಪ ಅವರು ಸಾಕಷ್ಟು ಸಚಿವ ಸಂಪುಟ ಸಭೆಗಳನ್ನು ಕಲಬುರಗಿ ಯಲ್ಲಿ ಮಾಡಿದ್ದಾರೆ. ನಾನು ಸಹ ಕಲಬುರಗಿಯ ಹೆಣ್ಣುಮಗಳನ್ನು ಮದುವೆ ಆಗಿರೋದು, ಈಗ ನನ್ನ ಸಹೋದರನ ಮಗ ಸುಭಾಷ್ ಗೆ ಲಿಂಗರಾಜ ಅಪ್ಪ ಅವರ ಮಗಳನ್ನು ತಂದುಕೊಳ್ಳುತ್ತಿದ್ದೇವೆ ಎಂದು ಬಿವೈವಿ ಹರ್ಷ ವ್ಯಕ್ತಪಡಿಸಿದರು.

ಸ್ಪೀಕರ್ ತೀರ್ಮಾನ ಬದಲಾವಣೆ ಬೇಡ

ಸದನದಲ್ಲಿ ಬಿಜೆಪಿ ಸದಸ್ಯರ ಗದ್ದಲದ ಹಿನ್ನೆಲೆಯಲ್ಲಿ ಸ್ಪೀಕರ್ ಯು.ಟಿ.ಖಾದರ್ ಕಾನೂನುಬದ್ಧವಾಗಿ ಒಳ್ಳೆಯ ತೀರ್ಮಾನ ತೆಗೆದುಕೊಂಡಿದ್ದಾರೆ. ಅವರು ತಮ್ಮ ತೀರ್ಮಾನದಿಂದ ಹಿಂದೆ ಸರಿಯಬಾರದು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಮನವಿ ಮಾಡಿದ್ದಾರೆ. ಶಿವಮೊಗ್ಗ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ದೇಶದಲ್ಲಿ ಎಲ್ಲರಿಗೂ ಗೌರವ ಕೊಡುತ್ತೇವೆ. ಸ್ಪೀಕರ್ ಪೀಠಕ್ಕೆ ಅಗೌರವ ತೋರಿಸುವುದು ಸಂವಿಧಾನ ವಿರೋಧಿ. ಈಗ ಬಿಜೆಪಿಯವರು ವಿರೋಧ ಪಕ್ಷದಲ್ಲಿದ್ದಾರೆ. ನಾಳೆ ನಾವು ಈ ತಪ್ಪನ್ನು ಮಾಡಬಹುದು. ಪ್ರತಿಪಕ್ಷದವರ ಕೃತ್ಯಕ್ಕೆ ಸ್ಪೀಕರ್ ಕೈಗೊಂಡ ತೀರ್ಮಾನ ಸೂಕ್ತವಾಗಿದೆ ಎಂದು ಸ್ಪಷ್ಟಪಡಿಸಿದರು.

ಮದುವೆ ಸಂಬಂಧದಿಂದ ರಾಜಕೀಯ ಲಾಭ

ಮಾಜಿ ಸಿಎಂ ಯಡಿಯೂರಪ್ಪ ಅವರ ಮೊಮ್ಮಗನಿಗೆ ಕಲಬುರಗಿಯ ಸಂಬಂಧ ನಿಶ್ಚಯವಾಗಿದ್ದು, ಶರಣಬಸವೇಶ್ವರ ದಾಸೋಹ ಸಂಸ್ಥಾನ ಮನೆತನದ ಲಿಂಗರಾಜಪ್ಪ ಅವರ ಮಗಳ ಜತೆಗೆ ಮದುವೆ ಸಂಬಂಧ ಗುರುತಿಸಿದೆ. ಈ ಬಗ್ಗೆ ಮಾತನಾಡಿದ ಮಾಜಿ ಸಿಎಂ ಯಡಿಯೂರಪ್ಪ ಅವರು, ಈಗಾಗಲೇ, ಕಲಬುರಗಿಯ ಸಂಬಂಧ ಮಾಡಿರುವ ಬಗ್ಗೆ ನಿಮಗೆಲ್ಲ ತಿಳಿದೇ ಇದೆ. ಈಗ ಇನ್ನೊಂದು ಸಂಬಂಧ ಕಲಬುರಗಿಯಿಂದಲೇ ಮಾಡುತ್ತಿದ್ದೇವೆ. ಸಂಸದ ರಾಘವೇಂದ್ರ ಅವರ ಮಗನಿಗೆ ಕಲಬುರಗಿಯಿಂದ ಹೆಣ್ಣು ತರಲಾಗುತ್ತಿದೆ. ಸೋಮವಾರ ನಿಶ್ಚಿತಾರ್ಥ ಇದೆ. ರಾಜಕೀಯದಲ್ಲಿ ಸ್ವಾರ್ಥ ಇರುತ್ತೆ. ಹೀಗಾಗಿ, ಇಲ್ಲಿನ ಸಂಬಂಧ ಬೆಳೆಸಿದ್ದೇವೆ. ನಮ್ಮ ಬೀಗರು ಕೂಡ ರಾಜಕೀಯದಲ್ಲಿ ಇದ್ದಾರೆ.

ಪ್ರತ್ಯೇಕ ಅಪಘಾತ: 3 ಬೈಕ್ ಸವಾರರ ಸಾವು

ಚಾಮರಾಜನಗರ: ಬೈಕ್‌ಗೆ ಐಷರ್ ವಾಹನ ಡಿಕ್ಕಿಯಾಗಿ ಸ್ಥಳದಲ್ಲೇ ಇಬ್ಬರು ಯುವಕರು ಮೃತಪಟ್ಟ ದಾರುಣ ಘಟನೆ ಚಾಮರಾಜನಗರ ತಾಲೂಕಿನ ಹರದನಹಳ್ಳಿ ಬಳಿ ನಡೆದಿದೆ. ಬ್ಯಾಡಮೂಡ್ಲು ಗ್ರಾಮದ ಅಭಿಷೇಕ್(23) ಹಾಗೂ ಅಭಿ(21) ಮೃತ ದುರ್ದೈವಿಗಳು. ಮಾದೇಶ್ ಎಂಬಾತನಿಗೆ ಗಂಭೀರ ಗಾಯಗಳಾಗಿದ್ದು ಮೈಸೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಬಾಳೆಗೊನೆ ಕತ್ತರಿಸುವ ಕೆಲಸ ಮಾಡುತ್ತಿದ್ದ ಈ ಮೂವರು ಒಂದೇ ಬೈಕ್ ನಲ್ಲಿ ಕೆಲಸ ಮುಗಿಸಿ ಹಿಂತಿರುಗುವಾಗ ಐಷರ್ ವಾಹನ ಡಿಕ್ಕಿ ಹೊಡೆದು ಪರಾರಿಯಾಗಿತ್ತು. ಬಳಿಕ, ಪೊಲೀಸರು ಕಾರ್ಯಾಚರಣೆ ನಡೆಸಿ ವಾಹನ ಪತ್ತೆಹಚ್ಚಿದ್ದಾರೆ. ಚಾಮರಾಜನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಸವಾರ ಸಾವು: ಬೈಕ್ ಹಾಗೂ ಕಾರಿನ ನಡುವೆ ಅಪಘಾತವಾಗಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಗುಂಡ್ಲುಪೇಟೆ ತಾಲೂಕಿನ ಹಳ್ಳದಮಾದಹಳ್ಳಿ ಗೇಟ್ ಬಳಿ ಭಾನುವಾರ ನಡೆದಿದೆ. ರಾಘವಾಪುರದ ನಾಗಶೆಟ್ಟಿ(37) ಮೃತ ವ್ಯಕ್ತಿ. ಆತ ತನ್ನ ಬೈಕ್‌ನಲ್ಲಿ ಬೇಗೂರು ಕಡೆ ಹೋಗುತ್ತಿದ್ದಾಗ ಎದುರಿಗೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಾಗ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ನಂತರ ಕಾರು ವಿದ್ಯುತ್ ಕಂಬಕ್ಕೆ ಗುದ್ದಿದೆ. ಕಾರು ಚಾಲಕ ಪರಾರಿಯಾಗಿದ್ದಾನೆ. ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಚಿವ ಮಧು ಬಂಗಾರಪ್ಪ ಬಹಿರಂಗ ಹೇಳಿಕೆ

ಕಾಂಗ್ರೆಸ್ ಪಕ್ಷ ಸೇರಲು ದಳ ಶಾಸಕಿಗೆ ಆಹ್ವಾನ

ಶಿವಮೊಗ್ಗ: ಜೆಡಿಎಸ್‌ನ ಶಿವಮೊಗ್ಗ ಗ್ರಾಮಾಂತರ ಶಾಸಕಿ ಶಾರದಾ ಪೂರ್ಯಾನಾಯ್ಕ್ ಅವರಿಗೆ ಕಾಂಗ್ರೆಸ್ ಪಕ್ಷ ಸೇರುವಂತೆ ಸಚಿವ ಮಧು ಬಂಗಾರಪ್ಪ ಬಹಿರಂಗ ಆಹ್ವಾನ ನೀಡಿದ್ದಾರೆ.

ಪುರದಾಳು ಗ್ರಾಮದ ಬಾರೆಹಳ್ಳ ಮತ್ತು ಹಾಯ್ಹೊಳೆ ಕೆರೆಗಳ ಅಭಿವೃದ್ಧಿ ಕಾಮ ಗಾರಿಯ ಗುದ್ದಲಿಪೂಜೆಯ ಕಾರ್ಯಕ್ರಮ ದಲ್ಲಿ ಭಾಗವ ಹಿಸಿದ ವೇಳೆ ಸಚಿವರು ಈ ಆಹ್ವಾನ ನೀಡಿದರು.

ಚುನಾವಣೆ ಬಂದಾಗ ನಮಗೆ ಕಷ್ಟ ಆಗುತ್ತದೆ. ಅದಕ್ಕೆ ಶಾರದಕ್ಕನವರಿಗೆ ಹೇಳೋದು, ನೀವಾದ್ರೂ ಬನ್ನಿ, ಇಲ್ಲ ನಾನಾದ್ರೂ ಬರುತ್ತೇನೆ. ಈಗ ಅಧಿಕಾರ ನನ್ನ ಬಳಿ ಇರುವುದರಿಂದ ನಾನು ಸದ್ಯಕ್ಕೆ ಬರೋದಕ್ಕೆ ಆಗಲ್ಲ. ಈಗ ನಾನು ಬಂದು ಮತ ಕೇಳೋದು ಕಷ್ಟ ಆಗುತ್ತದೆ. ಜನರಿಗೂ ಮತ ಹಾಕುವಾಗ ನನಗೆ ಕೇಳಬೇಕೋ ಅಥವಾ ಶಾರದಕ್ಕನಿಗೆ ಕೇಳಬೇಕೋ ಎಂಬ ಕಷ್ಟಕ್ಕೆ ಸಿಲುಕು ತ್ತಾರೆ. ಇದರಿಂದ ನೀವೆಲ್ಲಾ ಅವರ ಮನೆಗೆ ಹೋಗಿ ಪ್ರತಿಭಟನೆ ಮಾಡಿ ಎಂದು ತಮಾಷೆಯಾಗಿ ಹೇಳಿದರು.

ಬಿಸಿಲಿದ್ದಾಗ ಒಣಗಿಸಿಕೊಳ್ಳಬೇಕು: ಯಾವಾಗ್ಲೂ ಬುದ್ಧಿವಂತಿಕೆ ಹೇಗೆ ಇರಬೇಕು ಅಂದ್ರೆ, ಅಂತ ತಮ್ಮ ತಂದೆ ಹೇಳುತ್ತಿದ್ದ ಇಂಗ್ಲಿಷ್‌ನ ಗಾದೆ ಮಾತು-'ಮೇಕ್ ಎ ಹೈಲ್ ಸನ್‌ಶೈನ್' ಮಧು ಬಂಗಾರಪ್ಪ ನೆನಪಿಸಿಕೊಂಡರು. ಬಿಸಿಲಿ ದ್ದಾಗ ಒಣಗಿಸಿಕೊಳ್ಳಬೇಕು. ಅಕ್ಕ ಬಿಸಿಲಿದೆ, ತೀರ್ಮಾನ ಮಾಡಿ ಎಂದು ಮಾರ್ಮಿಕವಾಗಿ ನುಡಿದರು. ಗ್ರಾಮದಲ್ಲಿ ದೇವಾಲಯಗಳನ್ನು ದೊಡ್ಡದಾಗಿ ಕಟ್ಟಬೇಡಿ, ಶಾಲೆಗಳನ್ನು ದೊಡ್ಡದಾಗಿ ಕಟ್ಟಿ, ಮಕ್ಕಳಿಗೆ ವಿದ್ಯಾಭ್ಯಾಸ ಕೊಟ್ಟರೆ ದೇವರು ನಿಮಗೆ ಪೂರ್ಣ ಪ್ರಸಾದ ಕೊಡುತ್ತಾರೆ ಎಂದರು.

ಮಂತ್ರಾಲಯ ರಾಯರ ಮಠದ ಹುಂಡಿ ಎಣಿಕೆ

3.39 ಕೋಟಿ ನಗದು, 1.28 ಕೆಜಿ ಬೆಳ್ಳಿ ಸಂಗ್ರಹ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಕೋಟ್ಯಂತರ ರುಪಾಯಿ ಕಾಣಿಕೆ ಹರಿದು ಬಂದಿದೆ.

ತುಂಗಾತೀರದಲ್ಲಿ ನೆಲೆಸಿರುವ ರಾಯರ ಮಠಕ್ಕೆ ಕರ್ನಾಟಕ ಸೇರಿದಂತೆ ದೇಶ-ವಿದೇಶಗಳ ಅಸಂಖ್ಯಾತ ಭಕ್ತರು ಭೇಟಿ ನೀಡಿ ರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನದ ದರ್ಶನ ಪಡೆಯುತ್ತಾರೆ.

ಮಾರ್ಚ್ ತಿಂಗಳಲ್ಲಿ ರಾಯರ ಉತ್ಸವದ ಹಿನ್ನೆಲೆಯಲ್ಲಿ ಮಠಕ್ಕೆ ಭಾರಿಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದು, ಕಾಣಿಕೆಯಾಗಿ ಕೋಟಿ ಗಟ್ಟಲೆ ನಗದು ಮತ್ತು ಚಿನ್ನಾಭರಣವನ್ನು ಸಮರ್ಪಿಸಿದ್ದಾರೆ.

3.48 ಕೋಟಿ ಮೌಲ್ಯದ ಕರೆನ್ಸಿ ಸಂಗ್ರಹ

2025ರ ಮಾರ್ಚ್ 21 (30 ದಿನಗಳು) ರಂದು ಹುಂಡಿ ತೆರೆದು ಎಣಿಕೆ ಮಾಡಲಾಗಿದ್ದು,

ರಾಯರ ಮಠದ ಹುಂಡಿ ಎಣಿಕೆ ಕಾರ್ಯದಲ್ಲಿ ನೂರಾರು ಆಸ್ತಿಕರು ಭಾಗವಹಿಸಿದ್ದರು. ಮಠದ ಅಧಿಕಾರಿಗಳ ಉಸ್ತುವಾರಿ ವಹಿಸಿದ್ದರು.

3 ಕೋಟಿ 39 ಲಕ್ಷ 35 ಸಾವಿರದ 121 ರುಪಾಯಿ ನಗದು ಸಂಗ್ರಹವಾಗಿದೆ. ಇದರಲ್ಲಿ 9 ಲಕ್ಷ 34 ಸಾವಿರದ 500 ರುಪಾಯಿ ನಾಣ್ಯಗಳು, 3 ಕೋಟಿ 48 ಲಕ್ಷ 69 ಸಾವಿರದ 621 ರು. ಮೌಲ್ಯದ ನೋಟುಗಳಿವೆ. 37.200 ಗ್ರಾಂ ಚಿನ್ನ, 1.280 ಕೆಜಿ ಬೆಳ್ಳಿ ಕಾಣಿಕೆಯನ್ನು ಹುಂಡಿಗೆ ಭಕ್ತರು ಹಾಕಿದ್ದಾರೆ ಎಂದು ಶ್ರೀಮಠ ತಿಳಿಸಿದೆ.

ಮದುವೆ ಸಿದ್ಧತೆಯಲ್ಲಿದ್ದ ರಿಯಲ್ ಎಸ್ಟೇಟ್ ಉದ್ಯಮಿಗೆ ಇರಿತ ಶಾಸಕ ಬಾಲಕೃಷ್ಣ ಆಪ್ತ ಲೋಕನಾಥ ಸಿಂಗ್ ಬಲಿಯಾದ ವ್ಯಕ್ತಿ

ಮಾಗಡಿ ಶಾಸಕರ ಆಪ್ತನ ಹತ್ಯೆ

ಬೆಂಗಳೂರು: ಮದುವೆ ಸಂಭ್ರಮದಲ್ಲಿದ್ದ ರಿಯಲ್ ಎಸ್ಟೇಟ್ ಉದ್ಯಮಿಯನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿರುವ ಘಟನೆ ಬೆಂಗಳೂರಿನ ಬಿಜಿಎಸ್ ಲೇಔಟ್‌ನ ನಿರ್ಮಾಣ ಹಂತದ ಕಟ್ಟಡ ದಲ್ಲಿ ನಡೆದಿದೆ.

ಮಾಗಡಿ ಶಾಸಕ ಎಚ್ .ಸಿ ಬಾಲಕೃಷ್ಣ ಅವರ ಆಪ್ತ ಲೋಕನಾಥ್ ಸಿಂಗ್ (37) ಹತ್ಯೆಯಾದ ಉದ್ಯಮಿ. ಲೋಕನಾಥ್ ಸಿಂಗ್‌ಗೆ ಇದೇ ತಿಂಗಳು ಮದುವೆ ನಿಶ್ಚಯ ವಾಗಿತ್ತು. ಕುತ್ತಿಗೆ ಭಾಗಕ್ಕೆ ಚಾಕುವಿನಿಂದ ಇರಿದು ಉದ್ಯಮಿಯನ್ನು ಕೊಲೆ ಮಾಡಲಾಗಿದೆ. ಘಟನೆಯಲ್ಲಿ ಲೋಕನಾಥ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಜತೆಯಲ್ಲಿದ್ದವರಿಂದಲೇ ಇರಿತ: ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ಲೋಕನಾಥ್ ಸಿಂಗ್ ಶನಿವಾರ ಸಂಜೆ 5 ಗಂಟೆ ವೇಳೆಗೆ ನಾಲ್ಕೈದು ಸ್ನೇಹಿತರ ಜತೆ ಸೋಲ ದೇವನಹಳ್ಳಿಯ ಬಿಳಿಜಾಜಿಯ ಬಿಜಿಎಸ್ ಲೇಔಟ್ ನಲ್ಲಿರುವ ನಿರ್ಮಾಣ ಹಂತದ ಕಟ್ಟಡದ ಬಳಿ ಕಾರಿನಲ್ಲಿ ಬಂದು ಮದ್ಯ ಸೇವಿಸಿದ್ದಾರೆ. ಈ ವೇಳೆ ಯಾವುದೋ ವಿಚಾರಕ್ಕೆ ಜತೆಯಲ್ಲಿದ್ದವರೇ ಲೋಕನಾಥ್ ಸಿಂಗ್ ಕುತ್ತಿಗೆಗೆ ಮಾರಕಾಸ್ತ್ರದಿಂದ ಚುಚ್ಚಿ ದ್ದಾರೆ. ಆದರೂ ಲೋಕನಾಥ್, ಪ್ರಾಣರಕ್ಷ ಣೆಗಾಗಿ ಆರೋಪಿಗಳನ್ನು ತಳ್ಳಿ ಕಾರಿನಿಂದ ಇಳಿದು ಸ್ವಲ್ಪದೂರ ಓಡಿಹೋದರು. ಆದರೆ, ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟರು ಎಂದು ಪೊಲೀಸರು ಹೇಳಿದ್ದಾರೆ.

ಗನ್‌ಮ್ಯಾನ್ ಮೇಲೆ ಸಂಶಯ

ಘಟನಾ ಸ್ಥಳದ ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸುತ್ತಿದ್ದು, ಆರೋಪಿಗಳ ಪತ್ತೆಗೆ ವಿಶೇಷ ಪೊಲೀಸ್ ತಂಡ ರಚಿಸಲಾಗಿದೆ ಎಂದರು. ಲೋಕನಾಥ್ ಸಿಂಗ್ ಜತೆ ಬಂದಿದ್ದ ಅವರ ಗನ್‌ಮ್ಯಾನ್ ಕೂಡ ನಾಪತ್ತೆಯಾಗಿದ್ದು, ಆತನ ಮೇಲೂ ಅನುಮಾನ ಇದೆ ಎಂದು ಪೊಲೀಸರು ಮಾಹಿತಿ ನೀಡಿದರು. ಉದ್ಯಮಿಯಾ ಗಿದ್ದ ಲೋಕನಾಥ್ ಸಿಂಗ್ ವಿರುದ್ಧ ನಗರದ ಕೆಲ ಠಾಣೆಗಳಲ್ಲಿ ಮೂರಕ್ಕೂ ಹೆಚ್ಚು ವಂಚನೆ ಪ್ರಕರಣಗಳು ದಾಖಲಾಗಿವೆ.

ರಾಜ್ಯಕ್ಕೆ ಮೂರೂ ಪಕ್ಷಗಳು ಹಿತವಲ್ಲ

ಮೈಸೂರು: ರಾಜ್ಯಕ್ಕೆ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಈ ಮೂರೂ ಪಕ್ಷಗಳು ಹಿತವಲ್ಲ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾ ಧ್ಯಕ್ಷ ಮುಖ್ಯಮಂತ್ರಿ ಚಂದ್ರು ಕಿಡಿಕಾರಿದ್ದಾರೆ.

ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಮೂರೂ ಪಕ್ಷಗಳು ಲದ್ದಿ ಇದ್ದ ಹಾಗೆ, ಮುಂದಿನ ದಿನಗಳಲ್ಲಿ ಜನರು ತಕ್ಕ ಪಾಠ ಕಲಿಸುತ್ತಾರೆ. ಅಧಿವೇಶ ನದಲ್ಲಿ ಯಾರಿಗೋಸ್ಕರ ಹೊಡೆದಾಟ ಮಾಡಿದರು ಎಂದು ಪ್ರಶ್ನಿಸಿದರು. ನಗರ ಪಾಲಿಕೆ ಚುನಾವಣೆ ನಡೆಸದಿದ್ದರೆ, ರಾಜ್ಯ ಸರಕಾರದ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಲು ಚಿಂತನೆ ನಡೆಸಲಾಗುವುದು. ಬೃಹತ್ ಮೈಸೂರು ಮಹಾ ನಗರಪಾಲಿಕೆ ರಚನೆ ಹೆಸರಿನಲ್ಲಿ ರಾಜ್ಯ ಸರಕಾರ ಪಾಲಿಕೆ ಚುನಾವಣೆಯನ್ನು ಮುಂದೂಡುತಲಿದೆ ಎಂದು ಆರೋಪಿಸಿದರು.

ಫೆಬ್ರವರಿ ತಿಂಗಳ ಹೆಚ್ಚುವರಿ 5 ಕೆಜಿ ಕೊಡುವುದಕ್ಕೆ ಹಿಂಜರಿತ | ಸರಕಾರದಿಂದ ಅಕ್ಕಿ ಪಡೆದು, ಗ್ರಾಹಕರಿಗೆ ನೀಡದ ಹಲವು ನ್ಯಾಯಬೆಲೆ ಅಂಗಡಿ ಮಾಲೀಕರು | 15 ಕೆ.ಜಿ. ಬದಲು 10 ಕೆ.ಜಿ. ಪಡಿತರ ದಾನ್ಯ ವಿತರಣೆ: ಜನರ ಅಸಮಾಧಾನ

ಉಳಿಕೆ ಅಕ್ಕಿ ಕೊಡುವಲ್ಲಿ ಕಳ್ಳಾಟ!

ಜಯಂತ್ ಬಸವರಾಜ್ ಬೆಂಗಳೂರು

ರಾಜ್ಯ ಸರಕಾರದ ಪಂಚಗ್ಯಾರಂಟಿಯಲ್ಲಿ ಪ್ರಮುಖ ಘೋಷಣೆಯಾಗಿದ್ದ ಅನ್ನಭಾಗ್ಯ ಯೋಜನೆಯ ಹೆಚ್ಚುವರಿ ಐದು ಕೆಜಿ ಕೊಡಲು ಸರಕಾರ ಮುಂದಾದರೂ, ಅರ್ಹರಿಗೆ ತಲುಪಿಸುವಲ್ಲಿ ನ್ಯಾಯಬೆಲೆ ಅಂಗಡಿಗಳ ಮಾಲೀಕರು ತಲುಪಿಸುವ ಬದಲು ಮೋಸ ಮಾಡುತ್ತಿರುವ ಹಲವು ಆರೋಪಗಳು ಕೇಳಿಬಂದಿವೆ.

ಹೌದು, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಪಂಚ ಗ್ಯಾರಂಟಿಗಳಲ್ಲಿ ನಾಲ್ಕು ಗ್ಯಾರಂಟಿಗಳನ್ನು ಘೋಷಿಸಲಾಗಿತ್ತು. ಆದರೆ ಅನ್ನಭಾಗ್ಯ ಯೋಜನೆಯಲ್ಲಿ ಹೆಚ್ಚುವರಿ ಐದು ಕೆಜಿ ಅಕ್ಕಿ ನೀಡಲು ಅಕ್ಕಿಯ ಕೊರತೆಯಾಗಿದ್ದರಿಂದ ಅಕ್ಕಿ ಬದಲಿಗೆ ನಗದು ನೀಡಲು ತೀರ್ಮಾನಿಸಲಾಗಿತ್ತು. ಕಳೆದ ತಿಂಗಳಿನಿಂದ (ಫೆಬ್ರವರಿ) ನಗದಿನ ಬದಲಿಗೆ ಐದು ಕೆ.ಜಿ. ಅಕ್ಕಿಯನ್ನೇ ನೀಡಲು ತೀರ್ಮಾನಿಸಿತ್ತು. ಆದರೆ ಫೆಬ್ರವರಿಯಲ್ಲಿ ಅಗತ್ಯವಿರುವಷ್ಟು ಅಕ್ಕಿಯ ಕೊರತೆ ಇದ್ದಿದ್ದರಿಂದ ಮಾರ್ಚ್‌ನಲ್ಲಿ ಬಾಕಿ ಐದು ಕೆಜಿ ಅಕ್ಕಿ ನೀಡಲು ಆದೇಶಿಸಲಾಗಿದೆ.

ಮಾರ್ಚ್‌ನಲ್ಲಿ ರಾಜ್ಯದ ಬಹುತೇಕ ನ್ಯಾಯಬೆಲೆ ಅಂಗಡಿ ಮಾಲೀಕರು ಪ್ರತಿವ್ಯಕ್ತಿಗೆ ಮಾರ್ಚ್‌ನಲ್ಲಿ ನೀಡಬೇಕಿದ್ದ 15 ಕೆ.ಜಿ ಅಕ್ಕಿಯ ಬದಲು ಕೇವಲ 10 ಕೆ.ಜಿ. ನೀಡುತ್ತಿದ್ದಾರೆ. ಈ ಮೂಲಕ ಫೆಬ್ರವರಿ ತಿಂಗಳ 5 ಕೆ.ಜಿ. ಅಕ್ಕಿಯನ್ನು ಗ್ರಾಹಕರಿಗೆ ನೀಡದೇ ಅಕ್ರಮ ಎಸಗುತ್ತಿವೆ ಎನ್ನುವ ಆರೋಪ ಕೇಳಿಬಂದಿದೆ. ಆದರೆ ಫೆಬ್ರವರಿಯಲ್ಲಿ ಪ್ರತಿ ವ್ಯಕ್ತಿಯಿಂದ ಬಾಕಿ ಉಳಿಸಿಕೊಂಡಿದ್ದ ಐದು ಕೆ.ಜಿ ಅಕ್ಕಿಯನ್ನು ಮಾರ್ಚ್‌ನಲ್ಲಿ ನೀಡಬೇಕು ಎಂದು ಆಹಾರ ಮತ್ತು ನಾಗರಿಕ ಇಲಾಖೆ ಆದೇಶ ಹೊರಡಿಸಿದೆ. ಆದರೂ, ಹಲವು ನ್ಯಾಯಬೆಲೆ ಅಂಗಡಿ ಮಾಲೀಕರು ಈ ಐದು ಕೆಜಿ ಅಕ್ಕಿಯನ್ನು ನೀಡದೇ, ಮೋಸ ಮಾಡುತ್ತಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ.

ಅಧಿಕಾರಿಗಳ ಗಮನಕ್ಕೆ ಬಾರದ ಅಕ್ರಮ

ಪ್ರತಿಯೊಬ್ಬ ಪಡಿತರ ಚೀಟಿಯ ಸದಸ್ಯರಿಂದ ಐದು ಕೆ.ಜಿ ಅಕ್ಕಿ ಉಳಿಸಿಕೊಳ್ಳುತ್ತಿರುವ ನ್ಯಾಯಬೆಲೆ ಅಂಗಡಿಗಳ ಮಾಲೀಕರು ಈ ಅಕ್ರಮ ಅಧಿಕಾರಿಗಳ ಗಮನಕ್ಕೆ ಬಾರದಂತೆ ನಡೆಸುತ್ತಿದ್ದಾರೆ. ಕೆಲವೆಡೆ ಸ್ಥಳೀಯ ಮಟ್ಟದ ಅಧಿಕಾರಿಗಳು ಭಾಗಿಯಾಗಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ. ಅಂಗಡಿಗಳ ಮಾಲೀಕರು ಈ ರೀತಿಯ ಅಕ್ರಮದಲ್ಲಿ ತೊಡಗಿಸಿಕೊಳ್ಳಲು ಮತ್ತೊಂದು ಕಾರಣವೆಂದರೆ, ಬಹುತೇಕ ಪಡಿತರದಾರರಿಗೆ ಕಳೆದ ತಿಂಗಳ ಹೆಚ್ಚುವರಿ ಐದು ಕೆ.ಜಿ.ಅಕ್ಕಿಯನ್ನು ಮಾರ್ಚ್‌ನಲ್ಲಿ ನೀಡಲಾಗುತ್ತದೆ ಎನ್ನುವ ಮಾಹಿತಿಯೇ ಇಲ್ಲ. ಆದ್ದರಿಂದ ಬಹುತೇಕರು 10 ಕೆ.ಜಿ. ಸಿಕ್ಕಿದೆ ಎನ್ನುವ ಖುಷಿಯಲ್ಲಿಯೇ ವಾಪಸಾಗುತ್ತಿದ್ದಾರೆ. ಮಾಹಿತಿ ತಿಳಿದಿರುವವರು ಅಂಗಡಿ ಮಾಲೀಕರನ್ನು ಪ್ರಶ್ನಿಸಿದರೆ, ಹೆಚ್ಚುವರಿ ಅಕ್ಕಿ ಕೇಳಿದರೆ, ಪಡಿತರ ಚೀಟಿಯನ್ನು ರದ್ದುಗೊಳಿಸುವ ಎಚ್ಚರಿಕೆ ನೀಡುತ್ತಿದ್ದಾರೆ ಎನ್ನುವ ಆರೋಪ ಕೇಳಿಬರುತ್ತಿದೆ.

ಇಡೀ ತಿಂಗಳು ಅಕ್ಕಿ ವಿತರಿಸಬೇಕು ಎನ್ನುವ ನಿಯಮವಿದ್ದರೂ ಬಹುತೇಕ ನ್ಯಾಯಬೆಲೆ ಅಂಗಡಿಯವರು ತಿಂಗಳಲ್ಲಿ 2-3 ದಿನ ಅಕ್ಕಿ ವಿತರಿಸುತ್ತಾರೆ. ಉಚಿತ ಅಕ್ಕಿ ತರಬೇಕೆಂದರೆ ನಾವು ಇಡೀ ದಿನ ವ್ಯರ್ಥ ಮಾಡಬೇಕೆಂಬ ಪರಿಸ್ಥಿತಿಯಿದೆ. ಬೆಳಗ್ಗೆ 7 ಗಂಟೆಗೆ ಸಾಲಿನಲ್ಲಿ ನಿಂತರೆ ಕನಿಷ್ಠ 3 ಗಂಟೆಯಾದರೂ ಬೇಕು ನಮ್ಮ ಸರತಿಗೆ ಕಾದರೂ, ಊಟಕ್ಕೆಂದು ಸರ್ವರ್ ಇಲ್ಲವೆಂದು ಹೇಳಿ ಕಳುಹಿಸುತ್ತಿದ್ದಾರೆ.

- ಮಂಜುನಾಥ, ಗ್ರಾಹಕ

ರಾಜ್ಯ ಸರಕಾರ ಹೆಚ್ಚುವರಿ ಐದು ಕೆ.ಜಿ ಅಕ್ಕಿ ಪಡೆಯಲು ಅವಕಾಶ ನೀಡಿದ್ದರೂ ನ್ಯಾಯಬೆಲೆ ಅಂಗಡಿಯವರು ಅನುಮತಿ ನೀಡುತ್ತಿಲ್ಲ. ಉಚಿತ ಅಕ್ಕಿ ಪಡೆಯುವುದು ಭಾರಿ ಕಷ್ಟದ ಕೆಲಸವಾಗಿದೆ. ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಪ್ರತಿ ತಿಂಗಳು ಅಕ್ಕಿ ಪಡೆಯುವಾಗ ವಿತರಕರಿಗೆ ಹಣ ನೀಡಬೇಕಿದೆ. ಪ್ರಶ್ನೆ ಮಾಡಲು ಹೋದರೆ ಪಡಿತರ ಚೀಟಿ ರದ್ದುಮಾಡುವುದಾಗಿ ಹೆದರಿಸುತ್ತಾರೆ.

- ಸೌಜನ್ಯ, ಗ್ರಾಹಕಿ

ನೀಡುವ ಅಕ್ಕಿಯ ತೂಕದಲ್ಲಿ ಮೋಸ

ಫೆಬ್ರವರಿ ತಿಂಗಳ ಉಳಿಕೆ ಐದು ಕೆಜಿ ಅಕ್ಕಿಯನ್ನು ಮಾರ್ಚ್‌ನ 10 ಕೆಜಿ ಸೇರಿಸಿ ಒಟ್ಟು 15ಕೆಜಿ ವಿತರಿಸುಂತೆ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ ನಿಗದಿಪಡಿಸಿದ್ದರೂ ಸೂಕ್ತ ಪ್ರಮಾಣದಲ್ಲಿ ನೀಡುತ್ತಿಲ್ಲ. ಇನ್ನು ಕೆಲ ಅಂಗಡಿಗಳಲ್ಲಿ ಮಾಲೀಕರು ಗ್ರಾಂ ಲೆಕ್ಕದಲ್ಲಿ ತೂಕ ಕಡಿಮೆ ಮಾಡುತ್ತಿದ್ದಾರೆ ಎನ್ನುವ ಆರೋಪವೂ ಕೇಳಿಬಂದಿದೆ. ಬಡವರ್ಗದ ಆಹಾರ ಭತ್ಯೆಗಾಗಿ ಸರಕಾರ ಜಾರಿಗೆ ತಂದಿರುವ ಉಚಿತ ಪಡಿತರ ಆಹಾರ ಧಾನ್ಯ ವಿತರಣೆ ಮಾಡಬೇಕಾದ ನ್ಯಾಯಬೆಲೆ ಅಂಗಡಿಗಳು ವಸೂಲಿಗಿಳಿದಿವೆ. ನ್ಯಾಯಬೆಲೆ ಅಂಗಡಿ ಮಾಲೀಕರು ವಿತರಿಸುವ 10 ಕೆಜಿ ಅಕ್ಕಿಗೆ 15 ರು.ಗಳಂತೆ ಸರಕಾರದಿಂದ ಕಮಿಷನ್ ನೀಡಲಾಗುವುದು. ಈಗಿದ್ದರೂ ದುರಾಸೆಗಿಳಿದ ಅಂಗಡಿ ಮಾಲೀಕರು ಪ್ರತಿ ಪಡಿತರ ಕಾರ್ಡ್‌ಗೆ 20 ರಿಂದ 100 ರು.ಗಳವರೆಗೆ ಹಣ ಪಡೆಯುತ್ತಿದ್ದಾರೆ ಎಂದು ಫಲಾನುಭವಿಗಳು ಆರೋಪಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಹಣದ ಮೂಲ ಪತ್ತೆಯಾಗಲಿ

ದೆಹಲಿ ಹೈಕೋರ್ಟ್ ನ್ಯಾ.ಯಶವಂತ್ ವರ್ಮಾ ಅವರ ದೆಹಲಿ ಮನೆಯಲ್ಲಿ ಇತ್ತೀಚೆಗೆ ಅಗ್ನಿ ಆಕಸ್ಮಿಕ ಸಂಭವಿಸಿದ ವೇಳೆ ಅವರ ಮನೆಯಲ್ಲಿ ಶಂಕಾಸ್ಪದ ಅಪಾರ ಪ್ರಮಾಣದ ನೋಟಿನ ಕಂತೆಗಳು ಪತ್ತೆಯಾಗಿವೆ ಎಂದು ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡಿದ್ದ ಪ್ರಕರಣ ರಾಷ್ಟ್ರದ ಗಮನ ಸೆಳೆದಿದೆ. ಈ ಕುರಿತು ನ್ಯಾಯಮೂರ್ತಿ ವರ್ಮಾ ಅವರು ದೆಹಲಿ ಹೈಕೋರ್ಟ್ ನ್ಯಾ.ಡಿ.ಕೆ.ಉಪಾಧ್ಯಾಯ ಅವರಿಗೆ ಪ್ರತಿಕ್ರಿಯೆ ಸಲ್ಲಿಸಿದ್ದು, ನಾನಾಗಲಿ ಅಥವಾ ನನ್ನ ಕುಟುಂಬ ಸದಸ್ಯರಾಗಲಿ ಸ್ಟೋರ್ ರೂಂನಲ್ಲಿ ನಗದು ಇಟ್ಟಿಲ್ಲ. ತಮ್ಮ ನಿವಾಸದಲ್ಲಿ ಹಣ ಪತ್ತೆಯಾದ ಪ್ರಕರಣವು ತಮ್ಮ ವಿರುದ್ಧ ಸುಳ್ಳು ಆರೋಪ ಮಾಡಲು ಮತ್ತು ಅಪಖ್ಯಾತಿ ತರಲು ನಡೆಸಿರುವ ಪಿತೂರಿಯಂತೆ ಸ್ಪಷ್ಟವಾಗಿ ಕಂಡುಬರುತ್ತಿದೆ. ಅಗ್ನಿ ಅವಘಡ ಸಂಭವಿಸಿದ ರಾತ್ರಿ ಅಗ್ನಿ ಶಾಮಕ ಸಿಬ್ಬಂದಿ ಹಣ ಸಿಕ್ಕಿರುವ ಬಗ್ಗೆ ಅವರ ಕುಟುಂಬ ಸದಸ್ಯರ ಗಮನಕ್ಕೆ ತಂದಿಲ್ಲ. ಹಣ ಸಿಕ್ಕಿರುವ ಕೊಠಡಿಯನ್ನು ಬಳಸದ ಪೀಠೋಪಕರಣಗಳನ್ನು, ವಸ್ತುಗಳನ್ನು ಸಂಗ್ರಹಿಸಲು ಬಳಸಲಾಗುತ್ತಿತ್ತು. ಆ ಕೊಠಡಿಗೆ ಬೀಗ ಹಾಕಿರುವುದಿಲ್ಲ. ಅಧಿಕೃತ ಮುಂಭಾಗದ ಗೇಟ್ ಮತ್ತು ಸಿಬ್ಬಂದಿ ಕ್ವಾರ್ಟರ್ಸ್‌ನ ಹಿಂಬಾಗಿಲಿನಿಂದಲೂ ಪ್ರವೇಶಿಸಲು ದಾರಿ ಇದೆ. ಇದಕ್ಕೆ ಮುಖ್ಯ ನಿವಾಸದಿಂದ ಸಂಪರ್ಕವಿಲ್ಲ ಎಂದು ತಿಳಿಸಿದ್ದಾರೆ. ಹಾಗಾದರೆ ಅಲ್ಲಿ ಕಂತೆ ಕಂತೆ ಹಣ ಇಟ್ಟಿದ್ದು ಯಾರು? ಎಂಬ ಪ್ರಶ್ನೆ ಇದೀಗ ಚರ್ಚೆಯಲ್ಲಿದೆ. ಇದೀಗ ಈ ಕುರಿತು ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ನ್ಯಾ.ಶೀಲ್ ನಾಗು, ಹಿಮಾಚಲ ಪ್ರದೇಶ ಹೈಕೋರ್ಟ್‌ನ ನ್ಯಾ.ಜಿ.ಎಸ್.ಸಂಧಾವಾಲಿಯಾ ಮತ್ತು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್ ನೇತೃತ್ವದ ಸಮಿತಿಯೊಂದನ್ನು ರಚಿಸಿದ್ದಾರೆ. ಈ ಸಮಿತಿಯಿಂದ ಹಣದ ಮೂಲದ ಬಗ್ಗೆ ತನಿಖೆಯಾಗಲಿ. ಒಂದು ವೇಳೆ ನಿಜವಾಗಿಯೂ ನ್ಯಾಯಾಧೀಶರಿಗೆ ಕಪ್ಪುಚುಕ್ಕೆ ಅಂಟಿಸಲು ಷಡ್ಯಂತ್ರ ಮಾಡಿದ್ದರೆ ಆರೋಪಿಗಳನ್ನು ಪತ್ತೆಹಚ್ಚಿ ಸೂಕ್ತ ಶಿಕ್ಷೆ ನೀಡಬೇಕು ಅಥವಾ ಆ ಹಣ ನ್ಯಾಯಾಧೀಶರಿಗೇ ಸಂಬಂಧಿಸಿದ್ದಾಗಿದ್ದರೆ ನ್ಯಾ.ವರ್ಮಾ ಮೇಲೂ ಕಾನೂನು ಕ್ರಮ ಕೈಗೊಳ್ಳಬೇಕು.

ಸೊಂಪಾದಕೀಯ

'ಭಾಯ್' ಚಪಲ

ರೌಡಿಗಳ ಹಾವಳಿ ಎಲ್ಲಿಲ್ಲ ಹೇಳಿ ? ಅದರಲ್ಲೂ ಮಹಾನಗರಗಳಲ್ಲಿ ಇಂಥವರ ಪುಂಡಾಟಿಕೆ ಹೆಚ್ಚು. ಪೊಲೀಸರ ಮುಂದೆ ಬಾಯಿ ಮುಚ್ಚಿಕೊಂಡು, ಕೈ ಕಟ್ಟಿಕೊಂಡು ನಿಂತಿದ್ದರೂ ಹೊರಗೆ ಬಂದ ತಕ್ಷಣ ಇವರು ಬಾಲ ಬಿಚ್ಚೋದು ಕಾಮನ್. ಅದರಲ್ಲೂ ಬೆಂಗಳೂರಿನ ಕೆಲವು ಏರಿಯಾಗಳಲ್ಲಿ ಇಂಥವರ ಹಾವಳಿ ಹೆಚ್ಚು. ವ್ಯಾಪಾರಿಗಳೇ ಇವರ ಪ್ರಮುಖ ಟಾರ್ಗೆಟ್. ಅಂಗಡಿಗಳಿಗೆ ಹೋಗಿ ಹಫ್ತಾ ವಸೂಲಿ ಮಾಡೋದು ಪರಂಪರಾಗತವಾಗಿ ಬಂದಿರುವ ಇವರ ಸಂಪ್ರದಾಯ. ಆದರೆ ಇತ್ತೀಚೆಗೆ ಇದಲ್ಲದೆ ಇನ್ನೊಂದು ದಂಧೆ ಶುರು ಆಗಿದೆ. ಅದು 'ಏನೋ ನನ್ನತ್ರನೇ ದುಡ್ ಕೇಳ್ತೀಯಾ?' ಅನ್ನೋದು. ಹೌದು ನಗರದ ಕೆಲವು ಏರಿಯಾಗಳ ರೌಡಿಗಳು ತಮಗಿರುವ ಸಣ್ಣಪುಟ್ಟ ಕೆಟ್ಟ ಹೆಸರನ್ನೇ ಬಳಸಿಕೊಂಡು ಅಂಗಡಿಗಳಲ್ಲಿ ದೌರ್ಜನ್ಯ ನಡೆಸುತ್ತಾರೆ. ಇತ್ತೀಚೆಗೆ ಕೆಂಪಾಪುರ ಅಗ್ರಹಾರದ ಬೇಕರಿಯೊಂದರಲ್ಲಿ ರೌಡಿಯೊಬ್ಬ ತಿಂದ ಆಹಾರಕ್ಕೆ ಕಾಸು ಕೊಡದೆ, ಚಾಕು ತೋರಿಸಿ ಮಾಲೀಕರನ್ನು ಹೆದರಿಸಿದ ಘಟನೆ ನಡೆದಿದೆ. ಬೇಕರಿಗೆ ಬಂದು ಪಫ್ಸ್, ಚಿಪ್ಸ್ ತಿಂದು ಲಿಪ್ಸ್ ಒರೆಸಿಕೊಂಡು ಹೊರಟ ಈ ಒರಟ ಪುಡಿ ರೌಡಿಯನ್ನು ಹಣ ಕೇಳಿದಾಗ, ಅಂಗಡಿಯನ್ನೇ ಪುಡಿ ಪುಡಿ ಮಾಡ್ತೀನಿ ಅಂತ ಬೆದರಿಕೆ ಹಾಕಿದ್ದಾನೆ. ಜೊತೆಗೆ ಈ ಮಹಾನುಭಾವ ಈ ರೀತಿ ಮಾಡಿದ್ದು ಇದೇ ಮೊದಲೇನೂ ಅಲ್ಲವಂತೆ. ಏರಿಯಾದ ಎಲ್ಲ ಹೊಟೆಲು, ಕಬಾಬ್, ಚಾಟ್ಸ್ ಅಂಗಡಿಗಳಿಗೆ ಹೋಗಿ, ತಿಂದು ಬಿಲ್ ಕೇಳಿದರೆ ಕೊಲ್ಲೋದಾಗಿ ಧಮಕಿ ಹಾಕ್ತಾ ಇದ್ದನಂತೆ. ಹಾಗಾಗಿ ಮೊದಲು ಮಾಡಿದಾಗ ಯಾರೂ ಕೇಳಲಿಲ್ಲ ಅನ್ನೋ ಮದ ತಲೆಗೇರಿ ಮೊನ್ನೆ ಕೂಡಾ ಅದೇ ಕೆಲಸ ಮಾಡಿ ಈಗ ಪೊಲೀಸರ ಅತಿಥಿ ಆಗಿದ್ದಾನೆ. ಬೇಕರಿ ಮಾಲೀಕನ ಜೊತೆ ಜಗಳ ಆಡಿದ್ದಲ್ಲದೆ, ಅವನನ್ನು ಪ್ರಶ್ನೆ ಮಾಡಿದ ಅಂಗಡಿಯ ಗ್ರಾಹಕರಿಗೂ ಬೆದರಿಕೆ ಹಾಕಿ ಅಲ್ಲಿಂದ ಎಸ್ಕೇಪ್ ಆಗಿದ್ದಾನೆ. ಆದರೆ ಇವನು ಮಾಡಿದ ಕಲ್ಯಾಣ ಕಾರ್ಯಕ್ರಮ ಅಲ್ಲಿದ್ದ ಸಿಸಿಟಿವಿಯಲ್ಲಿ ರೆಕಾರ್ಡ್ ಆಗಿದ್ದರಿಂದ ಈಗ ಬೇಕರಿಯಲ್ಲಿ ತಿಂದಿದ್ದಕ್ಕೆ ಪೊಲೀಸ್ ಸ್ಟೇಷನ್‌ನಲ್ಲಿ ಬಿಲ್ ಕಟ್ಟಬೇಕಾಗಿ ಬಂದಿದೆ. ಇವನನ್ನು ವಿಚಾರಿಸಿದ ಪೊಲೀಸರ ಹೇಳಿಕೆ ಪ್ರಕಾರ, ಅಂದು ಈತ ಪಾನಮತ್ತನಾಗಿ ಬಂದಿದ್ದು, ಎಣ್ಣೆ ಏಟಿನಲ್ಲಿ ತಿಂದಿದ್ದಕ್ಕೆ ಕಾಸು ಕೊಡಲು ತಗಾದೆ ಮಾಡಿದ್ದಾನೆ. ಆದರೆ ಇದನ್ನು ಕೇಳಿದ ಮೇಲೆ ಮೂಡುವ ಪ್ರಶ್ನೆ ಅಂದ್ರೆ, ಅಲ್ಲಿಗೆ ಬರುವಾಗ ಕುಡ್ಕೊಂಡ್ ಬಂದಿದ್ದನಲ್ಲ, ಅದಕ್ಕೆ ಬಾರಲ್ಲಾದ್ರೂ ಬಿಲ್ ಕೊಟ್ಟು ಬಂದಿದ್ನಾ ಇಲ್ವಾ ಅನ್ನೋದು.

ಸಂಪಾದಕರ ಸದ್ಯಶೋಧನೆ

ಸುಮೋ ಅಳುವ ಮಗು ಉತ್ಸವ

ಇಂಥದೊಂದು ಉತ್ಸವವೂ ಇದೆಯಾ ಎಂದು ಯಾರಿಗಾದರೂ ಆಶ್ಚರ್ಯವಾಗಬಹುದು. ಅದಕ್ಕೆ ಸುಮೋ ಅಳುವ ಮಗು ಉತ್ಸವ ಅಂತಾರೆ. ಇದು ಜಪಾನಿನ ಅನನ್ಯ ಸಾಂಸ್ಕೃತಿಕ ಪರಂಪರೆಯಲ್ಲಿ ವಿಶೇಷ ಸ್ಥಾನ ಪಡೆದಿರುವ ಒಂದು ಅನನ್ಯ ಉತ್ಸವ. ಇದನ್ನು 'ನಾಕಿ ಸುಮೋ' ಎಂದು ಕರೆಯಲಾಗುತ್ತದೆ. ಈ ಉತ್ಸವದಲ್ಲಿ ಕುಸ್ತಿಪಟುಗಳಾದ ಸುಮೋ ಪೈಲ್ವಾನರು ಮಕ್ಕಳನ್ನು ಎತ್ತಿಕೊಂಡು ಅಳಿಸುವ ಪ್ರಯತ್ನ ಮಾಡುತ್ತಾರೆ. ಈ ಸಂಪ್ರದಾಯವು ಶತಮಾನಗಳಿಂದ ನಡೆದು ಬಂದಿದೆ. ನಾಕಿ ಸುಮೋ ಉತ್ಸವದ ಮೂಲವನ್ನು ನೋಡಿದರೆ, ಇದು ಜಪಾನಿನ ಶಿಂಟೋ ಧರ್ಮದ ಸಂಪ್ರದಾಯ ಮತ್ತು ನಂಬಿಕೆಗಳಿಗೆ ಪೂರಕವಾಗಿದೆ. ಶಿಂಟೋ ಧರ್ಮದಲ್ಲಿ ಮಕ್ಕಳ ಆರೋಗ್ಯ, ಬೆಳವಣಿಗೆ ಮತ್ತು ಸಮೃದ್ಧ ಜೀವನಕ್ಕಾಗಿ ದೇವತೆಗಳನ್ನು ಆರಾಧಿಸುವುದು ಸಾಮಾನ್ಯ. ಜಪಾನಿನ ಅನೇಕ ಮಂದಿರಗಳಲ್ಲಿ ಈ ಉತ್ಸವವನ್ನು ಆಚರಿಸಲಾಗುತ್ತಿದ್ದರೂ, ಸೇನ್ಸೋಜಿ ದೇವಸ್ಥಾನ (Sensoji Temple) ಮತ್ತು ಶಿತನೋಮಿಯಾ ಶ್ರೈನ್ ದೇವಾಲಯಗಳಲ್ಲಿ ನಡೆಯುವ ಉತ್ಸವ ಅತ್ಯಂತ ಜನಪ್ರಿಯವಾಗಿದೆ. ಈ ಉತ್ಸವದ ಪ್ರಮುಖ ಉದ್ದೇಶ ಮಕ್ಕಳ ಆರೋಗ್ಯ ಮತ್ತು ಸುಖ ಸಮೃದ್ಧಿಗಾಗಿ ಆಶೀರ್ವಾದ ಪಡೆಯುವುದು. ಜಪಾನಿಯರಲ್ಲಿ 'ಮಗು ಹೆಚ್ಚು ಜೋರಾಗಿ ಅತ್ತರೆ, ಅದಕ್ಕೆ ಹೆಚ್ಚು ಶಕ್ತಿಯಿದೆ' ಎಂಬ ನಂಬಿಕೆ ಇದೆ. ಇದರಿಂದ ಅಳುವ ಮಗು ಭವಿಷ್ಯದಲ್ಲಿ ಆರೋಗ್ಯವಾಗಿ, ಬುದ್ಧಿವಂತವಾಗಿ ಮತ್ತು ಶಕ್ತಿಯುತವಾಗಿ ಬೆಳೆಯುತ್ತದೆ ಎಂಬ ಭಾವನೆಯಿದೆ. ಉತ್ಸವದ ಆರಂಭದಲ್ಲಿ ಸುಮೋ ಪೈಲ್ವಾನರು ತಮ್ಮ ಸಾಂಪ್ರದಾಯಿಕ ಉಡುಪಿನಲ್ಲಿ ರಿಂಗ್ಗೆ (sumo ring) ಪ್ರವೇಶಿಸುತ್ತಾರೆ. ಈ ಪೈಲ್ವಾನರು ಪ್ರತಿ ಮಗುವನ್ನು ಎತ್ತಿಕೊಂಡು ಅದನ್ನು ಜೋರಾಗಿ ಅಳಿಸಲು ಪ್ರಯತ್ನಿಸುತ್ತಾರೆ. ಕೆಲವೊಮ್ಮೆ ಪೈಲ್ವಾನರು ಮಕ್ಕಳಿಗೆ ವಿನೋದಪೂರ್ಣ ಮುಖಭಾವಗಳನ್ನು ತೋರಿಸುತ್ತಾರೆ ಅಥವಾ ಜೋರಾಗಿ ಗದರುತ್ತಾರೆ, ಬೆದರಿಸುತ್ತಾರೆ. ಆಗ ಮಕ್ಕಳು ಅಳಲು ಆರಂಭಿಸುತ್ತವೆ. ಪರಸ್ಪರ ಎದುರಾಗಿ ಇಬ್ಬರು ಸುಮೋ ಪೈಲ್ವಾನರು ಎರಡು ಮಕ್ಕಳನ್ನು ತಬ್ಬಿಕೊಂಡು ನಿಲ್ಲುತ್ತಾರೆ. ಯಾವ ಮಗು ಮೊದಲು ಅಥವಾ ಹೆಚ್ಚು ಜೋರಾಗಿ ಅಳುತ್ತದೋ ಅದನ್ನು ವಿಜೇತ ಎಂದು ಪರಿಗಣಿಸಲಾಗುತ್ತದೆ. ಒಂದು ವೇಳೆ ಮಗು ಅಳದೇ ಇದ್ದರೆ, ಸುಮೋ ಕುಸ್ತಿಪಟುಗಳು ಗಟ್ಟಿಯಾಗಿ ಕಿರುಚಾಡಿ ಅಳುವಂತೆ ಮಾಡುತ್ತಾರೆ. ಜಪಾನಿ ಸಂಸ್ಕೃತಿಯಲ್ಲಿ, ಅಳುವ ಶಬ್ದವು ದುಷ್ಟ ಶಕ್ತಿಗಳನ್ನು ದೂರ ಮಾಡುವ ಶಕ್ತಿಯನ್ನೂ ಹೊಂದಿದೆ ಎಂಬ ನಂಬಿಕೆಯೂ ಇದೆ. ಹಾಗಾಗಿ, ಮಗು ಉಚ್ಚ ಸ್ವರದಲ್ಲಿ ಅಳುವುದರಿಂದ ಅದು ನೆಗಡಿ, ಕೆಟ್ಟ ಶಕ್ತಿಗಳು ಮತ್ತು ಅನಾರೋಗ್ಯದಿಂದ ದೂರವಿರುತ್ತದೆ ಎಂದು ಭಾವಿಸಲಾಗುತ್ತದೆ. ಹೀಗಾಗಿ ಮಗು ಅಳಲಾರಂಭಿಸಿದರೆ ಯಾರೂ ತಕ್ಷಣಕ್ಕೆ ಸುಮ್ಮನಿರಿಸಲು ಹೋಗುವುದಿಲ್ಲ. ಅದು ಮಗುವಿನ ಒಳ್ಳೆಯದಕ್ಕೆ ಎಂದು ಭಾವಿಸುತ್ತಾರೆ. ಟೋಕಿಯೋ ನಗರದಲ್ಲಿರುವ ಪ್ರಸಿದ್ಧ ಸೇನ್ಸೋಜಿ ದೇವಸ್ಥಾನಕ್ಕೆ ಸಾವಿರಾರು ಜನರು ಈ ಉತ್ಸವವನ್ನು ವೀಕ್ಷಿಸಲು ಆಗಮಿಸುತ್ತಾರೆ. ಆ ಪೈಕಿ ಕೆಲವರು ತಮ್ಮ ಮಕ್ಕಳೊಂದಿಗೂ ಆಗಮಿಸುತ್ತಾರೆ. ಪ್ರತಿ ವರ್ಷ ಅಪಾರ ಸಂಖ್ಯೆಯ ಮಕ್ಕಳು ಮತ್ತು ಅವರ ಪೋಷಕರು ಈ ಉತ್ಸವದಲ್ಲಿ ಭಾಗವಹಿಸುತ್ತಾರೆ. ಉತ್ಸವದ ಅಂಗವಾಗಿ ಮಕ್ಕಳಿಗೆ ರಕ್ಷಾ ತಾಯಿತ (protective amulet) ನೀಡಲಾಗುತ್ತದೆ. ಇದು ಅವರ ಆರೋಗ್ಯ ಮತ್ತು ಭದ್ರತೆಗೆ ಪ್ರಾರ್ಥನೆ ಸಲ್ಲಿಸುವ ಸಂಕೇತವಾಗಿದೆ. ಯಾವುದೇ ಸಂಪ್ರದಾಯದಂತೆ, ನಾಕಿ ಸುಮೋ ಉತ್ಸವವೂ ಕಾಲಾನುಸಾರ ಸ್ವಲ್ಪ ಬದಲಾಗುತ್ತಿದೆ. ಪೋಷಕರಿಗೆ ಅವರ ಮಕ್ಕಳ ಭದ್ರತೆಯ ಬಗ್ಗೆ ಭರವಸೆ ನೀಡಲಾಗುತ್ತಿದ್ದು, ಮಕ್ಕಳಿಗೆ ಹಿಂಸೆ ಆಗದಂತೆ ಈ ಉತ್ಸವವನ್ನು ಆಯೋಜಿಸುವತ್ತ ಗಮನ ಹರಿಸಲಾಗಿದೆ. ಪೈಲ್ವಾನರು ಮಕ್ಕಳನ್ನು ಎತ್ತಿಕೊಳ್ಳುವಾಗ ತಾಯಿ-ತಂದೆಗೂ ಸಮಾಧಾನ ನೀಡುವಂತೆ ಎಚ್ಚರಿಕೆಯಿಂದ ನಡೆದುಕೊಳ್ಳುತ್ತಾರೆ. ಸುಮೋ ಪೈಲ್ವಾನರು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ವಿಚಿತ್ರ ಮುಖಭಾವ ಮಾಡುತ್ತಾ, ಅಳು ಬರುವಂತೆ ಮಾಡುತ್ತಾರೆ. ಅಳುವುದಕ್ಕೆ ಒತ್ತಾಯಿಸಲಾಗದೇ, ಮಕ್ಕಳಿಗೆ ವಿನೋದಪೂರ್ಣ ರೀತಿಯಲ್ಲಿ ಈ ಅನುಭವವನ್ನು ನೀಡುತ್ತಾರೆ. ಇತರ ಯಾವುದೇ ಸಂಸ್ಕೃತಿಯಲ್ಲಿ ಕಂಡುಬರದ ಈ ವಿಶಿಷ್ಟ ಆಚರಣೆಯು ಜಪಾನಿಗೆ ಮಾತ್ರ ಸೀಮಿತವಾಗಿರುವುದು ವಿಶೇಷ.

ಹನಿಟ್ರ್ಯಾಪ್ ಬಲೆಗೆ ಬಿದ್ದ ಆ ಸಚಿವರ ಮಕ್ಕಳು?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಸಹಕಾರ ಸಚಿವ ಕೆ.ಎನ್.ರಾಜಣ್ಣ ಮೊನ್ನೆ ವಿಧಾನಸಭೆಯಲ್ಲಿ ನಿಂತು ಹನಿಟ್ರ್ಯಾಪ್ ಬಗ್ಗೆ ಮಾತನಾಡಿದ ನಂತರ ದಿಲ್ಲಿಯ ಕಾಂಗ್ರೆಸ್ ನಾಯಕರು ಮಂಕಾಗಿದ್ದಾರೆ. ಕಾರಣ? ರಾಜಣ್ಣ ಎಪಿಸೋಡಿನ ನಂತರ ಕರ್ನಾಟಕದಿಂದ ಅವರಿಗೆ ತಲುಪುತ್ತಿರುವ ಸಂದೇಶಗಳು ಹಿತಕರವಾಗಿಲ್ಲ.

ದಿಲ್ಲಿಯ ಕಾಂಗ್ರೆಸ್ ಮೂಲಗಳ ಪ್ರಕಾರ, ಹನಿಟ್ರ್ಯಾಪ್ ಜಾಲ ಕರ್ನಾಟಕದಲ್ಲಿ ಯಾವ ಮಟ್ಟಕ್ಕೆ ಸಕ್ರಿಯವಾಗಿದೆ ಎಂದರೆ ಮಂತ್ರಿ ರಾಜಣ್ಣ ಮತ್ತವರ ಮಗ ರಾಜೇಂದ್ರ ಅವರ ವಿರುದ್ಧ ಮಾತ್ರವಲ್ಲ, ಹಲವು ಸಚಿವರು, ಮತ್ತವರ ಮಕ್ಕಳನ್ನೂ ತನ್ನ ಮುಷ್ಟಿಗೆ ಸಿಲುಕಿಸಿಕೊಳ್ಳಲು ಯತ್ನಿಸಿದೆ. ಹಾಗಂತ ಈ ಜಾಲಕ್ಕೆ ಎಲ್ಲರೂ ಸಿಕ್ಕು ಬಿದ್ದಿದ್ದಾರೆ ಅಂತಲ್ಲ. ರಾಜಧಾನಿ ಬೆಂಗಳೂರಿನ ಒಬ್ಬ ಸಚಿವರನ್ನು ಜಾಲಕ್ಕೆ ಸಿಲುಕಿಸುವ ಯತ್ನ ನಡೆದಿದೆಯಾದರೂ ಇದರ ಸುಳಿವು ಪಡೆದ ಸಚಿವರು ಜಾಗೃತರಾಗಿದ್ದಾರೆ. ಅಷ್ಟೇ ಅಲ್ಲ, ಹನಿಟ್ರ್ಯಾಪ್ ನಡೆಸಲು ಬಂದ ತಂಡದವರನ್ನೇ ಲಾಕ್ ಮಾಡಿ, ಅವರಿಂದ ತಪ್ಪೊಪ್ಪಿಗೆ ಹೇಳಿಕೆ ಪಡೆದು ರೆಕಾರ್ಡ್ ಮಾಡಿಕೊಂಡಿದ್ದಾರೆ.

ಹೀಗೆ ತಮ್ಮನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಲು ಸುಪಾರಿ ನೀಡಿದವರ್‍ಯಾರು? ಎಂಬುದೂ ಸೇರಿದಂತೆ ಹಲವು ಮಾಹಿತಿಗಳನ್ನು ರೆಕಾರ್ಡ್ ಮಾಡಿಕೊಂಡು ಅದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದಿದ್ದಾರೆ ಎಂಬುದು ಈ ಮೂಲಗಳ ಮಾತು. ಈ ಮಧ್ಯೆ ರಾಜಧಾನಿಯ ಮತ್ತೊಬ್ಬ ಸಚಿವರು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಲ್ಲವಾದರೂ ಅವರ ಪುತ್ರನನ್ನು ಖೆಡ್ಡಾಕ್ಕೆ ಕೆಡವುದರಲ್ಲಿ ಹನಿಟ್ರ್ಯಾಪ್ ಗ್ಯಾಂಗ್ ಯಶಸ್ವಿಯಾಗಿದೆ.

ಇದೇ ರೀತಿ ಉತ್ತರ ಕರ್ನಾಟಕ ಭಾಗದ ಸಚಿವರೊಬ್ಬರ ಕಿರಿ ವಯಸ್ಸಿನ ಪುತ್ರನನ್ನೂ ಹನಿಟ್ರ್ಯಾಪ್ ಜಾಲ ತನ್ನ ತೆಕ್ಕೆಗೆ ಸಿಲುಕಿಸಿಕೊಂಡಿದೆ. ಹೀಗೆ ತಮ್ಮ ಪುತ್ರನನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿರುವ ಬಗ್ಗೆ ಸಿಟ್ಟಿಗೆದ್ದಿರುವ ಆ ಸಚಿವರು ನೇರವಾಗಿ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಈ ಮಧ್ಯೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಮತ್ತವರ ಪುತ್ರ ರಾಜೇಂದ್ರ ರಾಜಣ್ಣ ಅವರ ಎಪಿಸೋಡು ಸೇರಿದ ನಂತರ ಹನಿಟ್ರ್ಯಾಪ್ ಹೊಡೆತಕ್ಕೆ ಸಿಲುಕಿದವರೆಲ್ಲ ಒಂದಾಗಿದ್ದಾರೆ.

ಅಷ್ಟೇ ಅಲ್ಲ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿರುವಾಗಲೇ ತಮ್ಮನ್ನು ಮುಗಿಸುವ ಯತ್ನ ಮಾಡಲಾಗಿದೆ. ಅಂದ ಮೇಲೆ ಸಿದ್ದರಾಮಯ್ಯ ಕೆಳಗಿಳಿದರೆ ತಮ್ಮ ಗತಿ ಏನಾಗಬಹುದು ಅಂತ ಯೋಚಿಸಿದ್ದಾರೆ. ಮೂಲಗಳ ಪ್ರಕಾರ, ಇನ್ನು ಸಿದ್ದರಾಮಯ್ಯ ಅವರನ್ನು ಹೊರತುಪಡಿಸಿ ಬೇರೊಬ್ಬರಿಗೆ ಅಧಿಕಾರ ಹಸ್ತಾಂತರ ಮಾಡುವುದನ್ನು ಸಹಿಸಲು ಈ ಸಚಿವರ್‍ಯಾರೂ ಸಿದ್ಧರಿಲ್ಲ. ಹಾಗೊಂದು ವೇಳೆ ಅಂತಹ ಸಂದರ್ಭ ಬಂದರೆ ತಾವು ಸೂಚಿಸುವ ಹೆಸರಿಗೆ ಪಟ್ಟ ಸಿಗಬೇಕು. ಇಲ್ಲದಿದ್ದರೆ ದೊಡ್ಡ ಸಂಖ್ಯೆಯ ಶಾಸಕರೊಂದಿಗೆ ಕಾಂಗ್ರೆಸ್ ತೊರೆಯಬೇಕು ಎಂಬುದು ಅವರ ಯೋಚನೆ.

ಅಂದ ಹಾಗೆ ಪಕ್ಷ ತೊರೆಯುವವರು ಅಗತ್ಯಕ್ಕನುಗುಣವಾಗಿ ಬಿಜೆಪಿ ಇಲ್ಲವೇ ಜೆಡಿಎಸ್ ಪಕ್ಷಕ್ಕೆ ಸೇರಬಹುದು. ಹೀಗೆ ಕಾಂಗ್ರೆಸ್‌ನಿಂದ ಹೊರಬರುವವರನ್ನು ಸ್ವೀಕರಿಸಲು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ತಯಾರಾಗಿಯೇ ಇವೆ. ಒಂದು ಸಲ ಈ ಕಾರ್ಯಕ್ಕೆ ಚಾಲನೆ ಸಿಕ್ಕ ನಂತರ ಸರಕಾರ ಉಳಿಸಿಕೊಳ್ಳುವ ಯತ್ನ ಕಾಂಗ್ರೆಸ್‌ನಿಂದ ನಡೆಯುವುದು ಸಹಜ. ಆದರೆ ಅದು ಯಶಸ್ವಿಯಾಗಲು ಬಿಡದೆ ಕರ್ನಾಟಕದ ಮೇಲೆ ರಾಷ್ಟ್ರಪತಿ ಆಳ್ವಿಕೆ ಹೇರುವ ವಾತಾವರಣ ನಿರ್ಮಿಸಬೇಕು. ಹೀಗೆ ಒಂದು ಸಲ ಕರ್ನಾಟಕ ರಾಷ್ಟ್ರಪತಿ ಆಳ್ವಿಕೆಯ ತೆಕ್ಕೆಗೆ ಹೋದರೆ ವಿಧಾನಸಭೆಗೆ ಮಧ್ಯಂತರ ಚುನಾವಣೆ ಅನಿವಾರ್ಯವಾಗುತ್ತದೆ. ಹಾಗೇನಾದರೂ ಆದರೆ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಅದ್ದೂರಿ ಗೆಲುವು ಗಳಿಸಿ ಅಧಿಕಾರಕ್ಕೆ ಬರುತ್ತದೆ ಎಂಬುದು ಈ ಪಡೆಯ ಬಹುತೇಕರ ಯೋಚನೆ. ಪರಿಣಾಮ? ಕರ್ನಾಟಕದಲ್ಲಿ ನಡೆಯುತ್ತಿರುವ ಹನಿಟ್ರ್ಯಾಪ್ ಸಂಘರ್ಷ ಯಾವ ಲೆವೆಲ್ಲಿಗೆ ಹೋಗಬಹುದು? ಎಂಬ ಚಿಂತೆ ದಿಲ್ಲಿಯ ಕಾಂಗ್ರೆಸ್ ವರಿಷ್ಠರನ್ನು ಕಾಡುತ್ತಿದೆ.

ಅಂದ ಹಾಗೆ ಅವರ ಚಿಂತೆಗೂ ಕಾರಣವಿದೆ. ಇವತ್ತು ದೇಶದ ಬಹುತೇಕ ರಾಜ್ಯಗಳು ಬಿಜೆಪಿಯ ಹಿಡಿತದಲ್ಲಿವೆ. ಹೀಗಾಗಿ ರಾಷ್ಟ್ರಮಟ್ಟದಲ್ಲಿ ಬಿಜೆಪಿಯ ಹೊಡೆತವನ್ನು ಸಹಿಸಿಕೊಂಡು ಮೇಲೆದ್ದು ನಿಲ್ಲಲು ಯತ್ನಿಸಬೇಕೆಂದರೆ ಪಕ್ಷಕ್ಕೆ ಕರ್ನಾಟಕ ಎಂಬ ಸೇನಾ ನೆಲೆ ಬೇಕೇ ಬೇಕು. ಒಂದು ವೇಳೆ ಈ ಸೇನಾ ನೆಲೆ ಕುಸಿದು ಬಿದ್ದರೆ ರಾಷ್ಟ್ರ ರಾಜಕಾರಣದಲ್ಲಿ ಇನ್ನು ತಲೆ ಎತ್ತುವುದು ಕಷ್ಟ ಎಂಬುದು ಅವರ ಆತಂಕ.

ಆದರೆ ಮುಂದೇನು ಕತೆಯೋ ಕಾದು ನೋಡಬೇಕು.

ಅಮಿತ್ ಶಾ ಕಿರಿಕ್ ಮಾಡಿದ್ದೇಕೆ?

ಅಂದ ಹಾಗೆ ಹನಿಟ್ರ್ಯಾಪ್ ಬಗ್ಗೆ ಸಚಿವ ಕೆ.ಎನ್.ರಾಜಣ್ಣ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದರಲ್ಲ? ಈ ವಿಷಯವನ್ನು ಹಿಡಿದುಕೊಂಡು ಅಂದೇ ಸಂಘಟಿತ ಹೋರಾಟಕ್ಕಿಳಿಯಬೇಕಿದ್ದ ಪ್ರತಿಪಕ್ಷ ಬಿಜೆಪಿ ಆ ಕೆಲಸ ಮಾಡಲಿಲ್ಲ. ಇದಕ್ಕೆ ತಮ್ಮ ಪಕ್ಷದ ನಾಯಕರಿಗೆ ಸರಕಾರದ ಟಾಪ್ ಲೀಡರ್‌ಗಳ ಜತೆಗಿರುವ ಸಂಪರ್ಕವೇ ಕಾರಣ ಅಂತ ಬಿಜೆಪಿಯ ಹಲ ಶಾಸಕರೂ ಕಿಡಿ ಕಾರಿದ್ದರಂತೆ. ಅವರ ಪ್ರಕಾರ, ಸಚಿವ ರಾಜಣ್ಣ ಹನಿಟ್ರ್ಯಾಪ್ ವಿಷಯ ಪ್ರಸ್ತಾಪಿಸಿದ ನಂತರ, ಆ ವಿಷಯವನ್ನು ಹಿಡಿದುಕೊಂಡು ಅಂದೇ ವಿಧಾನಸಭೆಯಲ್ಲಿ ಧರಣಿ ಪ್ರಾರಂಭಿಸಿ, ಆಡಳಿತ ಪಕ್ಷವನ್ನು ಪೇಚಿಗೆ ಸಿಲುಕಿಸಬೇಕಿತ್ತು.

ಆದರೆ ಹಾಗೆ ಮಾಡುವ ಬದಲು ಪ್ರತಿಪಕ್ಷ ನಾಯಕ ಅಶೋಕ್ ಅವರಿಂದ ಹಿಡಿದು ಒಬ್ಬೊಬ್ಬ ನಾಯಕರು ಒಂದೊಂದು ಬಗೆಯ ಮಾತನಾಡುತ್ತಾ ಹೋದರು. ಒಬ್ಬರು ನ್ಯಾಯಾಧೀಶರಿಂದ ತನಿಖೆಯಾಗಲಿ ಎಂದರೆ, ಮತ್ತೊಬ್ಬರು ಸಿಬಿಐ ತನಿಖೆಯಾಗಲಿ ಎಂದರು. ಇನ್ನೊಬ್ಬರು ಮಗದೊಂದು ರೀತಿಯ ತನಿಖೆಗೆ ಒತ್ತಾಯಿಸಿದರು. ಹೀಗೆ ಮಾಡುವ ಬದಲು ಹನಿಟ್ರ್ಯಾಪಿನ ಬಗ್ಗೆ ಸಚಿವರೇ ಆತಂಕ ವ್ಯಕ್ತಪಡಿಸಿರುವುದರಿಂದ ಈ ಸರಕಾರ ವಿಫಲವಾಗಿದೆ ಎಂದು ದೂರಿ ಧರಣಿ ಆರಂಭಿಸಿದ್ದರೆ ಆಟವೇ ಬೇರೆಯಾಗುತ್ತಿತ್ತು. ಇಡೀ ರಾಷ್ಟ್ರದ ಗಮನ ಸೆಳೆಯಲು ಸಾಧ್ಯವಾಗುತ್ತಿತ್ತು. ಆದರೆ ಅದನ್ನು ಮಾಡದೆ ಪಕ್ಷದ ಮುಂಚೂಣಿ ನಾಯಕರು ಕೈ ಚೆಲ್ಲಿದರು ಎಂಬುದು ಈ ಶಾಸಕರ ಸಿಟ್ಟು.

ಯಾವಾಗ ಅವರ ಸಿಟ್ಟು ಬಹಿರಂಗವಾಗಿಯೇ ವ್ಯಕ್ತವಾಯಿತೋ? ಇದಾದ ನಂತರ ವಿಷಯ ಪಕ್ಷದ ವರಿಷ್ಠರ ಕಿವಿಗೆ ತಲುಪಿದೆ. ಹೀಗಾಗಿ ರಾಜ್ಯ ಬಿಜೆಪಿಯ ಇಬ್ಬರು ನಾಯಕರಿಗೆ ಫೋನು ಮಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಕಿರಿಕಿರಿ ಮಾಡಿದ್ದಾರೆ. ಸರಕಾರವನ್ನು ಸಂಕಷ್ಟಕ್ಕೆ ಸಿಲುಕಿಸುವ ಒಂದು ಅವಕಾಶವನ್ನೂ ನೀವು ಕೈ ಬಿಡಬಾರದು. ಹಾಗೆ ಮಾಡಿ ಅಂತಲೇ ನಿಮ್ಮನ್ನು ಈ ಜಾಗದಲ್ಲಿ ಕೂರಿಸಲಾಗಿದೆ ಅಂತ ಅವರು ಯಾವಾಗ ಗದರಿಕೊಂಡರೋ? ಇದಾದ ಮರುದಿನ ವಿಧಾನಸಭೆಯಲ್ಲಿ ಬಿಜೆಪಿ ಪಡೆ ತೋರುಗಾಣಿಕೆಗಾದರೂ ಸಂಘಟಿತವಾಗಿ ಅಬ್ಬರಿಸಿದೆ. ಆದರೆ ಮೊದಲ ದಿನ ಅವಕಾಶ ಕೈ ಚೆಲ್ಲಿದ ಪರಿಣಾಮವಾಗಿ ಎರಡನೇ ದಿನದ ಅದರ ಹೋರಾಟ ಹೇಳಿಕೊಳ್ಳುವಷ್ಟು ಸದ್ದು ಮಾಡಲಿಲ್ಲ. ಬದಲಿಗೆ ಬಿಜೆಪಿಯ ಹದಿನೆಂಟು ಶಾಸಕರನ್ನು ಸದನದಿಂದ ಅಮಾನತು ಮಾಡಿ ಸ್ಪೀಕರ್ ಯು.ಟಿ.ಖಾದರ್ ಸದ್ದು ಮಾಡಿದರು ಎಂಬುದು ಪಕ್ಷದ ಹಲ ಶಾಸಕರ ಅಸಮಾಧಾನ.

ವಿಜಯೇಂದ್ರ ಪದಚ್ಯುತಿಗೆ ಹೊಸ ತಂತ್ರ

ಈ ಮಧ್ಯೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿ.ವೈ.ವಿಜಯೇಂದ್ರ ಕೆಳಗಿಳಿಯುವುದಿಲ್ಲ ಎಂಬುದು ಖಚಿತವಾಗುತ್ತಿದ್ದಂತೆಯೇ ವಿರೋಧಿ ಪಾಳಯದಲ್ಲಿ ಮೌನ ನೆಲೆಸಿದೆ. ಹಾಗಂತ ಅದು ಹತಾಶೆಯಿಂದಾದ ಮೌನ ಅಂತಲ್ಲ. ಬದಲಿಗೆ ವಿಜಯೇಂದ್ರ ಅವರನ್ನು ಕೆಳಗಿಳಿಸಲು ಹೊಸ ತಂತ್ರ ರೆಡಿಯಾಗಿದೆ ಎಂಬ ಸಂದೇಶದ ಹಿನ್ನೆಲೆಯಲ್ಲಿ ನೆಲೆಸಿದ ಮೌನ. ಅಂದ ಹಾಗೆ ದಿಲ್ಲಿಯ ಬಿಜೆಪಿ ವರಿಷ್ಠರು ವಿಜಯೇಂದ್ರ ಅವರನ್ನು ಬದಲಿಸದಿರಲು ಏನು ಕಾರಣ ಅನ್ನುವುದು ರಹಸ್ಯವಲ್ಲ. ಅದೆಂದರೆ ರಾಜ್ಯದಿಂದ ಅಮಿತ್ ಶಾ ತರಿಸಿರುವ ಸರ್ವೆ ರಿಪೋರ್ಟ್. ಈ ರಿಪೋರ್ಟ್ ವಿಜಯೇಂದ್ರ ಅವರಿಗೆ ಬಹುಪರಾಕ್ ಎಂದಿದೆ.

ಇಂತಹ ಸ್ಥಿತಿಯಲ್ಲಿ ವಿಜಯೇಂದ್ರ ಅವರನ್ನು ಬದಲಿಸಲು ಸಾಧ್ಯವಿಲ್ಲ ಅಂತ ನಡ್ಡಾ, ಅಮಿತ್ ಶಾ ಹೇಳಿದ ಮೇಲೆ ಆರು ತಿಂಗಳ ಕದನ ವಿರಾಮಕ್ಕೆ ವಿಜಯೇಂದ್ರ ವಿರೋಧಿ ಪಡೆ ಸಜ್ಜಾಗಿದೆ. ಆದರೆ ಈ ಆರು ತಿಂಗಳ ಅವಧಿಯಲ್ಲಿ ಜಿಲ್ಲಾ ಮಟ್ಟದಲ್ಲಿ ವಿಜಯೇಂದ್ರ ವಿರುದ್ಧ ಅಸಹನೆಯ ಗಾಳಿ ಶುರುವಾಗಬೇಕು, ಪಕ್ಷದಲ್ಲಿರುವ ಹಿರಿಯರು, ಮಾಜಿ ಸಚಿವರು ಸೇರಿದಂತೆ ಯಾರನ್ನೂ ವಿಜಯೇಂದ್ರ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬ ಕೂಗು ದಟ್ಟವಾದರೆ ವರಿಷ್ಠರು ಅದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಎಂಬುದು ವಿರೋಧಿ ಪಡೆಯ ಟಾಪ್ ಲೀಡರುಗಳ ಲೆಕ್ಕಾಚಾರ.

ಅಂದ ಹಾಗೆ ಇಂತಹ ಲೆಕ್ಕಾಚಾರ ಹಾಕಿರುವ ಪಡೆ ಅದೇ ಕಾಲಕ್ಕೆ ಮತ್ತೊಂದು ಕೆಲಸ ಮಾಡಿದೆ. ಅದೆಂದರೆ ಮಾಜಿ ಸಚಿವ ಮುರುಗೇಶ್ ನಿರಾಣಿ ಅವರನ್ನು ತಮ್ಮ ಕಡೆ ಸೆಳೆದುಕೊಂಡಿರುವುದು. ಇದಕ್ಕಿರುವ ಮುಖ್ಯ ಕಾರಣ ಎಂದರೆ ನಿರಾಣಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾಅವರಿಗೆ ಆಪ್ತರಾಗಿರುವುದು. 2021ರಲ್ಲಿ ಯಡಿಯೂರಪ್ಪ ಅವರನ್ನು ಸಿಎಂ ಹುದ್ದೆಯಿಂದ ಕೆಳಗಿಳಿಸುವ ಮುನ್ನ ನಿರಾಣಿ ಅವರನ್ನು ಕರೆಸಿಕೊಂಡಿದ್ದ ಅಮಿತ್ ಶಾ ಅವರು 'ನಿಮ್ಮನ್ನು ಸಿಎಂ ಹುದ್ದೆಯಲ್ಲಿ ಕೂರಿಸುತ್ತೇವೆ' ಎಂದಿದ್ದರು.

ಆದರೆ ಹಲವು ಲೆಕ್ಕಾಚಾರಗಳ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಸವರಾಜ ಬೊಮ್ಮಾಯಿ ಹೆಸರಿಗೆ ಗ್ರೀನ್ ಸಿಗ್ನಲ್ ನೀಡಿದ್ದರಿಂದ ನಿರಾಣಿ ನಿರಾಸೆ ಅನುಭವಿಸಬೇಕಾಯಿತು. ಹಾಗಂತ ಅಮಿತ್ ಶಾ ಅವರು ತಮಗೆ ಕೊಟ್ಟ ಮಾತು ಈಡೇರಿಲ್ಲ ಅಂತ ನಿರಾಣಿ ಅವರೇನೂ ಮುನಿಸಿಕೊಂಡಿಲ್ಲ. ಬದಲಿಗೆ ಅಮಿತ್ ಶಾ ಬಯಸಿದ್ದನ್ನು ಮಾಡುತ್ತಾ, ಈಗಲೂ ಅವರ ಅತ್ಯಾಪ್ತ ಬಳಗದಲ್ಲಿದ್ದಾರೆ. ಹೀಗಾಗಿ ಅವರ ಮೇಲೆ ಕಣ್ಣಿಟ್ಟಿರುವ ವಿಜಯೇಂದ್ರ ವಿರೋಧಿ ಪಡೆ,ಮೆಲ್ಲಗೆ ನಿರಾಣಿ ಅವರ ಕೈ ಹಿಡಿದು ತನ್ನ ಶಿಬಿರಕ್ಕೆ ಎಳೆದುಕೊಂಡಿದೆ. ಅಲ್ಲಿಗೆ ಕರ್ನಾಟಕ ಬಿಜೆಪಿಯ ವಿಷಯದಲ್ಲಿ ವರಿಷ್ಠರು ಮೌನವಾಗಿರುವುದು ನಿಶ್ಚಿತವಾದರೂ ವಿಜಯೇಂದ್ರ ವಿರೋಧಿ ಪಡೆ ಹೊಸ ಲೆಕ್ಕಾಚಾರದೊಂದಿಗೆ ನಿರ್ಧರಿಸಿದೆ. ಒಟ್ಟಿನಲ್ಲಿ ಈಗಲ್ಲದಿದ್ದರೂ ಮುಂದಿನ ವಿಧಾನಸಭಾ ಚುನಾವಣೆಯ ಸಾರಥ್ಯ ವಿಜಯೇಂದ್ರ ಅವರ ಕೈಲಿರಬಾರದು ಎಂದು ಶಪಥ ಮಾಡಿದೆ.

ರಾಮಮೂರ್ತಿಗೆ ಕೋಪ ಬಂದಿದೆ

ಇನ್ನು ಜಯನಗರದ ಶಾಸಕ ಸಿ.ಕೆ.ರಾಮಮೂರ್ತಿ ಅವರಿಗೆ ಕೆಂಡದಂತ ಕೋಪ ಬಂದಿದೆಯಂತೆ. ಅವರ ಈ ಕೋಪಕ್ಕೆ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಕಾರಣ. ಅಂದ ಹಾಗೆ ಜಯನಗರ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ ಅವರ ವಿರುದ್ಧ ಅಂತಿಮ ಕ್ಷಣದಲ್ಲಿ ರಾಮಮೂರ್ತಿ ಅವರು ಗೆದ್ದಿದ್ದಾರೆ ಅಂತ ಘೋಷಿಸಲಾಯಿತಲ್ಲ? ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲು ಹತ್ತಿ ಇನ್ನೇನು ಅಂತಿಮ ತೀರ್ಪು ಬರುವ ಕಾಲ ಹತ್ತಿರವಾಗಿದೆ. ಹೀಗೆ ಬರುವ ತೀರ್ಪು ರಾಮಮೂರ್ತಿ ಅವರಿಗೆ ಮಾರಕವಾಗಲಿದ್ದು, ಇದರ ಪರಿಣಾಮವಾಗಿ ಜಯನಗರ ಕ್ಷೇತ್ರದ ಮುಂದಿನ ಚುನಾವಣೆಯಲ್ಲಿ ಸಂದೀಪ್ ರವಿ ಬಿಜೆಪಿ ಕ್ಯಾಂಡಿಡೇಟ್ ಆಗಲಿದ್ದಾರೆ ಎಂಬ ಸುದ್ದಿ ಸುನಾಮಿಯಂತೆ ಹಬ್ಬಿದೆ. ಅಂದ ಹಾಗೆ ಬಿಜೆಪಿಯ ರಾಜ್ಯ ಯುವ ಮೋರ್ಚಾದ ಮುಂಚೂಣಿಯಲ್ಲಿರುವ ಸಂದೀಪ್ ರವಿ ಅವರು ಸಂಸದ ತೇಜಸ್ವಿ ಸೂರ್ಯ ಅವರ ಆಪ್ತ. ಹೀಗೆ ತಮ್ಮ ಆಪ್ತರಾಗಿರುವ ಕಾರಣಕ್ಕಾಗಿಯೇ ತೇಜಸ್ವಿಸೂರ್ಯ ಅವರು ಸಂದೀಪ್ ರವಿ ಅವರ ಹೆಸರನ್ನು ಫೀಲ್ಡಿಗೆ ಬಿಟ್ಟಿದ್ದಾರೆ ಎಂಬುದು ಶಾಸಕ ಸಿ.ಕೆ. ರಾಮಮೂರ್ತಿ ಅವರ ಅನುಮಾನ. ಹಾಗಂತಲೇ ಅವರೀಗ ತೇಜಸ್ವಿ ಸೂರ್ಯ ಅವರ ಮೇಲೆ ಕೋಪ ಮಾಡಿಕೊಂಡಿದ್ದಾರೆ. ಅಷ್ಟೇ ಅಲ್ಲ, ತಮ್ಮ ಕೋಪವನ್ನು ತೇಜಸ್ವಿ ಸೂರ್ಯ ಅವರ ಎದುರು ತೋರಿಸಿ ಬಂದಿದ್ದಾರೆ ಎಂಬುದು ಲೇಟೆಸ್ಟು ಸುದ್ದಿ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವೇತನ ಹೆಚ್ಚಳದಲ್ಲಿ ಒಗ್ಗಟ್ಟು !

ಅಧಿವೇಶನದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಹೆಚ್ಚಿನ ಮಸೂದೆಗಳಿಗೆ ಆಕ್ಷೇಪ ಎತ್ತುವುದು ಸರ್ವೇಸಾಮಾನ್ಯ. ಆದರೆ ಶಾಸನ ಸಭೆಯ ಸದಸ್ಯರುಗಳ ವೇತನ ಡಬಲ್ ಮಾಡುವ ಮಸೂದೆಯು ಯಾವುದೇ ಆಕ್ಷೇಪವಿಲ್ಲದೆ/ಸದ್ದುಗದ್ದಲವಿಲ್ಲದೆ ಪಾಸ್! ಹೇಗಿದೆ ನಮ್ಮ ಚುನಾಯಿತ ಸದಸ್ಯರ ಒಗ್ಗಟ್ಟು ಪ್ರದರ್ಶನ!

ಇಡೀ ರಾಜ್ಯದಲ್ಲಿ ಅನೇಕ ಮಂದಿ ಬಡವರು ಸಂಕಷ್ಟದಲ್ಲಿದ್ದಾರೆ. ಸರಕಾರಿ ಇಲಾಖೆಗಳಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಇಂದು ಹೊರಗುತ್ತಿಗೆ ನೌಕರರು. ಇವರು ಅತಿ ಕಡಿಮೆ ವೇತನದಲ್ಲಿ ದುಡಿಯುತ್ತಿದ್ದಾರೆ. ಅಲ್ಲದೆ ಗುತ್ತಿಗೆ ಶಿಕ್ಷಕರು/ಉಪನ್ಯಾಸಕರುಗಳ ಪಾಡೂ ಇದೇ. ಈ ಮಂದಿಗೆ ಬಡ್ತಿ ಇಲ್ಲ, ವೇತನ ಹೆಚ್ಚಳವಿಲ್ಲ ಮಾತ್ರವಲ್ಲದೆ ಉದ್ಯೋಗ ಭದ್ರತೆಯಂತೂ ಇಲ್ಲವೇ ಇಲ್ಲ. ಯಾವಾಗ ಬೇಕಾದರೂ ಅವರನ್ನು ಕೆಲಸದಿಂದ ತೆಗೆದುಬಿಡಬಹುದು. ಇಂತಹ ಅತಂತ್ರ ಸ್ಥಿತಿಯಲ್ಲಿರುವ ನೌಕರರ ವೇತನ/ಸೌಲಭ್ಯ ಹೆಚ್ಚಳದ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಆದರೆ ನಮ್ಮನ್ನು ಆಳುವ ಚುನಾಯಿತ ಸದಸ್ಯರ ವೇತನ/ಭತ್ಯೆಗಳ ಹೆಚ್ಚಳದ ಬಗ್ಗೆ ಯಾವ ಚರ್ಚೆಯೂ ಇಲ್ಲ. ಪ್ರಾಯಶ: ಈ ಬಗ್ಗೆ ಸಾರ್ವಜನಿಕರೂ ತಲೆಕೆಡಿಸುತ್ತಿಲ್ಲವೇನೋ ? ಧ್ವನಿ ಎತ್ತಿದರೂ ಅದಕ್ಕೆ ಬೆಲೆಯಾದರೂ ಎಲ್ಲಿದೆ? ಇದು ಕೇವಲ ರಾಜ್ಯಗಳ ವಿಧಾನ ಸಭೆಯಷ್ಟೇ ಅಲ್ಲ, ಲೋಕಸಭೆಯಲ್ಲೂ ಸಾಮಾನ್ಯವಾಗಿ ಸಂಸದರ ವೇತನ ಹೆಚ್ಚಳದ ವಿಧೇಯಕ ತಕ್ಷಣವೇ ಪಾಸ್! ಹಾಗಾದರೆ ಅಸೆಂಬ್ಲಿಯಲ್ಲಿ/ಲೋಕಸಭೆಯಲ್ಲಿ ಮಸೂದೆಗಳು ಮಂಡನೆಯಾಗುವಾಗ ವಿರೋಧ ಪಕ್ಷಗಳ ಆಕ್ಷೇಪಗಳು ಒಂದು ರೀತಿಯ ನಾಟಕದಂತೆ ಭಾಸವಾಗುತ್ತಿಲ್ಲವೇ? ಪ್ರಾಮಾಣಿಕವಾಗಿ ದುಡಿಯುವ ಮಂದಿ ಮೌನವಾಗಿಯೇ ತಮ್ಮ ನೋವನ್ನು ನುಂಗಿಕೊಳ್ಳಬೇಕು, ನುಂಗಿಕೊಳ್ಳದೇಅನ್ಯಮಾರ್ಗವಿಲ್ಲ. ಇವರುಸಂಘಟಿತರಾಗಿಹೋರಾಡುವ ಧೈರ್ಯ ಮಾಡುವಂತೆಯೂ ಇಲ್ಲ. ಇದು ನಮ್ಮ ಹಣೆಬರಹ ಎಂದುಕೊಳ್ಳುವವರೇ ಹೆಚ್ಚು. ಈ ನಿಟ್ಟಿನಲ್ಲಿ ನಮ್ಮ ಜನಪ್ರತಿನಿಧಿಗಳು ಇಂತಹ ಅಸಂಘಟಿತ ಬಡವರ ವೇತನ ಹೆಚ್ಚಳದ ಬಗ್ಗೆ ಯೋಚಿಸದೇ ತಮ್ಮ ವೇತನ/ಭತ್ಯೆಗಳನ್ನು ಯಾವುದೇ ಚರ್ಚೆ/ವಿಮರ್ಶೆಗಳಿಲ್ಲದೆ ಪಾಸ್ ಮಾಡುವಲ್ಲಿ ಕಿಂಚಿತ್ತೂ ಆತ್ಮಾವಲೋಕನ ಮಾಡದಿರುವುದು ನಿಜಕ್ಕೂ ಬೇಸರದ ಸಂಗತಿ. ಇದಕ್ಕೆ ಪರಿಹಾರವೇನಾದರೂ ಇದೆಯೇ?

ಎನ್.ರಾಮ ಭಟ್ , ವಿಶ್ವಸ್ಥರು, ಬಳಕೆದಾರರ ವೇದಿಕೆ ಉಡುಪಿ

ಮತದಾರರು ಅಸಹಾಯಕರು

ಶಾಸಕರ ಅಮಾನತು ಕ್ಷೇತ್ರದ ಜನತೆಗೆ ಮಾಡಿದ ಅಪಮಾನ ಹೌದು. ಆದರೆ ಅಪಮಾನ ಯಾರಿಂದ ಅಂದರೆ ಅದು ಮೊದಲನೆಯದಾಗಿ ಅಮಾನತುಗೊಂಡ ಶಾಸಕರಿಂದ. ಕಳೆದ ಸುಮಾರು 10-15 ವರ್ಷಗಳಿಂದ ವಿಧಾನಸಭೆ/ಪರಿಷತ್ತಿನಲ್ಲಿ ಹೆಚ್ಚಿನಂಶ ನಮ್ಮ ಪ್ರತಿನಿಧಿಗಳ ನಡವಳಿಕೆ ನೋಡಿದರೆ ಹೀಗೆ ಅನ್ನಿಸುತ್ತದೆ. ಇದಕ್ಕೆ ಪಕ್ಷಬೇಧವಿಲ್ಲ. ಕೆಲವರು ಸೆಗಣಿಯಾದರೆ ಮಿಕ್ಕವರು ಗೋಮಯ. ಗೋಮಯ ಸೆಗಣಿಗಿಂತ ಸ್ವಲ್ಪ ಉತ್ತಮ ಅಷ್ಟೇ. ತಮ್ಮ ಕ್ಷೇತ್ರದ ಮತ್ತು ರಾಜ್ಯದ ಅಭಿವೃದ್ಧಿ ಕುರಿತಾದ ಚರ್ಚೆಮಾಡುವುದನ್ನು ಬಿಟ್ಟು ಬರೀ ಆಡಳಿತ ಪಕ್ಷವನ್ನು ಬೈಯುವುದು, ಗಲಾಟೆ ಮಾಡುವುದು, ಸಾಕ್ಷಾಧಾರವಿಲ್ಲದೇ ಇಲ್ಲಸಲ್ಲದ ಆರೋಪ ಮಾಡುವುದು ಇವೇ ಮುಂತಾದವು ಆಗಿದೆ. ಇಲ್ಲದಿದ್ದರೆ ನೀಲಿ ಚಿತ್ರ ನೋಡುವುದು ಅಥವಾ ಅದರ ಬಗ್ಗೆ ಸಿಡಿ, ಪೆನ್ ಡ್ರೈವ್ ಇದೆ, ತೋರಿಸಿಯೇ ಬಿಡುತ್ತೇವೆ ಎಂದು ಹೆದರಿಸುವುದು. ನಂತರ ತಮ್ಮತಮ್ಮಲ್ಲೇ ಒಳಗಿಂದೊಳಗೇ ರಾಜಿಯಾಗುವುದು. ಇಲ್ಲಿ ಎಲ್ಲರೂ ಒಂದೇ. ಸದನದಲ್ಲಿ ಗಲಾಟೆ ಮಾಡಿದರು ಎಂದು ಅಮಾನತು ಮಾಡುವುದು ಆಡಳಿತ ಪಕ್ಷದ ಸದಸ್ಯರಾದ ಸ್ಪೀಕರ್. ಈ ಅಮಾನತಿಗಾದರೂ ಒಂದು ಬೆಲೆ ಇದೆಯೇ? ಯಾರೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ, ಗೆಲ್ಲಿಸಿದ ಮತದಾರನ ಬಿಟ್ಟು. ಶಿಕ್ಷೆ-ದೈಹಿಕವಾಗಿ ಅಥವಾ ಆರ್ಥಿಕವಾಗಿ ಆಗುತ್ತದೆಯೇ? ನನಗೆ ತಿಳಿದ ಮಟ್ಟಿಗೆ ಇದ್ಯಾವುದೂ ಇಲ್ಲ. ಮತದಾರರಿಗೆ ಈ ರೀತಿ ಅನ್ಯಾಯ ಮುಂದುವರಿಯುತ್ತಲೇ ಇರುತ್ತದೆ ಎಂಬುದು ನಿತ್ಯ ಸತ್ಯ ಮತ್ತು ವಿಷಾದನೀಯ. ಕ್ಷೇತ್ರದ ಅಭಿವೃದ್ಧಿಯ ನಿರೀಕ್ಷೆಯಲ್ಲಿರುವ ಮತದಾರ ಕೈಕಟ್ಟಿ ಕುಳಿತುಕೊಳ್ಳುವಂತಹ ಅಸಹಾಯಕ ಪರಿಸ್ಥಿತಿಗೆ ದೂಡಲ್ಪಟ್ಟಿದ್ದಾನೆ.

ರಘುಪತಿ ಬಿ.ಜಿ. ಬೆಂಗಳೂರು

ಮರಳಿ, ಮರಳಿ ಬರುತ್ತಿದೆ ಕ್ಷಯ ರೋಗ

ತನ್ನಿಮಿತ್ತ

ಡಾ. ಮುರಲೀ ಮೋಹನ ಚೂಂತಾರು
vveditoped@gmail.com

ವಿಶ್ವದಾದ್ಯಂತ ಮಾರ್ಚ್ 24ರ ದಿನವನ್ನು ವಿಶ್ವ ಕ್ಷಯ ರೋಗ ದಿನ ಎಂದು ಆಚರಿಸಲಾಗುತ್ತಿದೆ. ಕ್ಷಯ ರೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಈ ಆಚರಣೆಯನ್ನು ವಿಶ್ವಸಂಸ್ಥೆ 1982ರಿಂದ ಜಾರಿಗೆ ತಂದಿತು. ಪ್ರತಿ ವರ್ಷ ಯಾವುದಾದರೊಂದು ಧ್ಯೇಯ ಇದ್ದುಕೊಂಡು ಈ ಆಚರಣೆ ಮಾಡಲಾಗುತ್ತಿದ್ದು, ಈ ವರ್ಷದ ಧ್ಯೇಯವಾಕ್ಯ, 'ಹೌದು! ನಾವು ಕ್ಷಯರೋಗವನ್ನು ಕೊನೆಗೊಳಿಸಬಹುದು: ಬದ್ಧರಾಗಿರಿ, ಹೂಡಿಕೆ ಮಾಡಿ, ತಲುಪಿಸಿ' ಎಂಬುದು ಭರವಸೆ, ತುರ್ತು ಮತ್ತು ಹೊಣೆಗಾರಿಕೆಗೆ ನೀಡಿದ ದಿಟ್ಟ ಕರೆಯಾಗಿದೆ.

ವಿಶ್ವದ ಅತ್ಯಂತ ಮಾರಕ ಸಾಂಕ್ರಾಮಿಕ ರೋಗವಾದ ಕ್ಷಯರೋಗ ಈಗ ಗಣನೀಯವಾಗಿ ತಗ್ಗಿದೆ. ಆದರೆ ಕ್ಷಯರೋಗವು ಈಗಲೂ ಜಾಗತಿಕವಾಗಿ ಲಕ್ಷಾಂತರ ಜನರನ್ನು ಧ್ವಂಸಗೊಳಿಸುತ್ತಲೇ ಇದೆ. ಪ್ರತಿ ವರ್ಷ ಸುಮಾರು 9 ಮಿಲಿಯನ್ ಮಂದಿ ವಿಶ್ವದಾದ್ಯಂತ ಈ ರೋಗಕ್ಕೆ ತುತ್ತಾಗುತ್ತಿದ್ದು, ಮೂರು ಮಿಲಿಯನ್ ರೋಗಿಗಳಿಗೆ ಯಾವುದೇ ರೀತಿಯ ಚಿಕಿತ್ಸಾ ಸೌಲಭ್ಯ ದೊರಕುತ್ತಿಲ್ಲ. ಮಾರಣಾಂತಿಕ ಅಂಟು ರೋಗಗಳಲ್ಲಿ ಏಡ್ಸ್ ಬಳಿಕದ ಸ್ಥಾನ ಕ್ಷಯ ರೋಗದ್ದು. 1882ನೇ ಇಸವಿಯಲ್ಲಿ ಮಾರ್ಚ್ 24ರಂದು ಡಾ। ರಾಬರ್ಟ್ ಕ್ಷಯ ರೋಗಕ್ಕೆ ಕಾರಣವಾದ ರೋಗಾಣು ಮೈಕೊ ಬ್ಯಾಕ್ಟೀರಿಯಾ ಟ್ಯುಬರ್ ಕ್ಯುಲೋಸಿಸ್ ಎಂಬ ರೋಗಾಣುವನ್ನು ಕಂಡು ಹಿಡಿದರು. ಈ ದಿನದ ನೆನಪಿಗಾಗಿ ಪ್ರತಿ ವರ್ಷ 24 ರಂದು ವಿಶ್ವ ಕ್ಷಯರೋಗ ದಿನ ಎಂದು ಆಚರಿಸಲಾಗುತ್ತಿದೆ. ಈಗಲೂ ಕೂಡ ಕ್ಷಯ ರೋಗ ಬಡ ರಾಷ್ಟ್ರಗಳು ಮತ್ತು ಮುಂದುವರಿಯುತ್ತಿರುವ ರಾಷ್ಟ್ರಗಳ ಬಹುದೊಡ್ಡ ಮಾರಣಾಂತಿಕ ಖಾಯಿಲೆಯಾಗಿರುವುದು ಬಹಳ ವಿಷಾದನೀಯ ಸಂಗತಿ.

ಜಾಗತಿಕ ಆರೋಗ್ಯ ಸಂಸ್ಥೆ ಇತ್ತೀಚೆಗೆ ಬಿಡುಗಡೆ ಮಾಡಿದ ವರದಿ ಬೆಚ್ಚಿ ಬೀಳಿಸುವಂತಿದೆ. 2023ರ ಅಂಕಿಅಂಶಗಳ ಪ್ರಕಾರ 1.08 ಕೋಟಿ ಜನರು ಕ್ಷಯರೋಗದಿಂದ ಬಳಲುತ್ತಿದ್ದರು. 1.25 ಲಕ್ಷ ಮಂದಿ ಸಾವನ್ನಪ್ಪಿದ್ದಾರೆ. ಇವರಲ್ಲಿ 60 ಲಕ್ಷ ಪುರುಷರು , 36 ಲಕ್ಷ ಹೆಣ್ಣು ಮಕ್ಕಳು ಸೇರಿದ್ದಾರೆ. ಕ್ಷಯ ಭಾದೆ ಯಾವ ದೇಶವನ್ನೂ ಬಿಟ್ಟಿಲ್ಲ. ಆದರೆ ಜಗತ್ತಿನ ಒಟ್ಟು ಕ್ಷಯ ರೋಗಿಗಳಲ್ಲಿ ಮೂರನೇ ಎರಡರಷ್ಟು ರೋಗಿಗಳು ಭಾರತ, ಇಂಡೋನೇಷಿಯಾ, ಚೀನಾ, ಫಿಲಿಪ್ಪೀನ್ಸ್, ಪಾಕಿಸ್ತಾನ, ಬಾಂಗ್ಲಾದೇಶ, ನೈಜೀರಿಯಾದವರು. ಈ ಪೈಕಿ ಹೆಚ್ಚಿನ ಪ್ರಮಾಣದ ಸಾವು ನೋವು ಭಾರತದಲ್ಲಿಯೇ ಆಗಿದೆ ಎನ್ನುವುದು ವಿಷಾದದ ವಿಚಾರ.

ಭಾರತದಲ್ಲಿ ಸಮಸ್ಯೆಯ ಪ್ರಮಾಣ

ಕ್ಷಯ ರೋಗದಿಂದ ಸಂಭವಿಸುವ ಶೇ. 95ರಷ್ಟು ಸಾವು ಬಡ ಮತ್ತು ಮಧ್ಯಮ ವರ್ಗದ ಜನರಲ್ಲಿ ಸಂಭವಿಸುತ್ತದೆ. 15 ರಿಂದ 45 ವರ್ಷದ ಮಹಿಳೆಯರ ಸಾವಿಗೆ ಮೂರನೇ ಪ್ರಮುಖ ಕಾರಣ ಕ್ಷಯ ರೋಗ. ಅಂದಾಜಿನ ಪ್ರಕಾರ, ಸುಮಾರು 22 ಲಕ್ಷ ರೋಗಿಗಳು ನಮ್ಮಲ್ಲಿದ್ದು ಪ್ರತಿ ದಿನವೂ ಸರಾಸರಿ 960 ಜನರು (ಪ್ರತಿ ಗಂಟೆಗೆ 90 ಜನ) ಈ ಕಾಯಿಲೆಯಿಂದ ಸಾಯುತ್ತಿದ್ದಾರೆ. ಯಾವ ಔಷಧವೂ ನಾಟದಂಥ ಹೊಸ ಹೊಸ ಕ್ಷಯತಳಿಗಳು ಸೃಷ್ಟಿ ಆಗುತ್ತಿರುವುದರಿಂದ ರೋಗ ನಿಯಂತ್ರಣ ವರ್ಷ ವರ್ಷಕ್ಕೆ ಕಠಿಣವಾಗುತ್ತ ಹೋಗುತ್ತಿದೆ. ಎಚ್‌ಐವಿ ಸೋಂಕಿತರಲ್ಲಿ ಕ್ಷಯ ರೋಗದ ಪ್ರಕರಣಗಳು ಸುಮಾರು 63,000ದಷ್ಟು ಕಂಡು ಬಂದಿವೆ. ಇದರಲ್ಲಿ ಸಾಯುವವರ ಪ್ರಮಾಣ 11,000.

ಸಂಪೂರ್ಣ ಚಿಕಿತ್ಸೆ ಪಡೆಯದ ವ್ಯಕ್ತಿ ವರ್ಷಕ್ಕೆ 10 ರಿಂದ 15 ಜನರಿಗೆ ಕ್ಷಯರೋಗವನ್ನು ಉಡುಗೊರೆ ನೀಡಬಲ್ಲ. ಔಷಧಿಗಳನ್ನು ಸರಿಯಾಗಿ ದೊರಕದ ಕಾರಣ ಅಥವಾ ಸರಿಯಾಗಿ ಸೇವಿಸದ ಕಾರಣ ರೋಗ ಉಲ್ಬಣವಾಗುತ್ತದೆ.

ಅನಕ್ಷರತೆ, ಅಜ್ಞಾನ, ಮೂಢನಂಬಿಕೆ, ಮೂಲಭೂತ ಸೌಕರ್ಯಗಳ ಕೊರರತೆಯಿಂದಾಗಿ ಈ ರೋಗದ ಪರಿಣಾಮಕಾರಿ ಚಿಕಿತ್ಸೆಗೆ ತೊಡಕಾಗಿರುವುದಂತೂ ಸತ್ಯವಾದ ಸಂಗತಿ. ನರೇಂದ್ರ ಮೋದಿ ಸರಕಾರ ಐದು ವರ್ಷಗಳ ಹಿಂದೆ 2025 ಕ್ಷಯ ಮುಕ್ತ ಭಾರತಕ್ಕೆ ಸಂಕಲ್ಪ ತೊಟ್ಟರೂ ಗುರಿಯನ್ನು ಸಾಧಿಸಲು ನಾವು ತುಂಬಾ ದೂರ ಕ್ರಮಿಸಬೇಕಾಗಿದೆ.

ಕ್ಷಯ ರೋಗ ಸಾಂಕ್ರಾಮಿಕವಾಗಿ ಹರಡುವ ಅಂಟುರೋಗವಾಗಿದ್ದು ರೋಗಾಣುಗಳು ಗಾಳಿಯಿಂದ ಹರಡುತ್ತದೆ. ಎಲ್ಲೆಂದರಲ್ಲಿ ಉಗುಳುವುದು. ಪರಿಸರ ಮಾಲಿನ್ಯ, ಔದ್ಯೋಗಿಕರಣ, ಬಡತನ, ಅನಕ್ಷರತೆ, ಜನದಟ್ಟಣೆ, ಕೊಳಗೇರಿ ಪ್ರದೇಶ, ಪ್ರಾಥಾಮಿಕ ಸೌಲಭ್ಯಗಳ ಕೊರತೆ, ರೊಗದ ಬಗೆಗಿನ ಮಾಹಿತಿಯ ಕೊರತೆ ಇತ್ಯಾದಿಗಳು ರೋಗವನ್ನು ಹರಡುವಂತೆ ಮಾಡುತ್ತದೆ. ಜೋರಾಗಿ ಕೆಮ್ಮುವುದು, ಸೀನುವುದು, ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು ಮುಂತಾದವುಗಳಿಂದ ರೋಗಾಣು ಗಾಳಿಯಲ್ಲಿ ಹರಡಿ ವ್ಯಕ್ತಿಯಿಂದ ವ್ಯಕ್ತಿಗೆ ಹರಡುತ್ತದೆ.

ರೋಗದ ಲಕ್ಷಣಗಳು

ನಿರಂತರವಾದ ಕೆಮ್ಮು ಮತ್ತು ಕಫ, ಮೂರು ನಾಲ್ಕು ವಾರಗಳಿಗೂ ಅಧಿಕವಾದ ನಿರಂತರ ಕೆಮ್ಮು, ಎದೆನೋವು, ಉಸಿರಾದಲ್ಲಿ ಏರುಪೇರು, ಕಫದೊಡನೆ ರಕ್ತ ಮಿಶ್ರಿತವಾಗುವುದು, ಸಣ್ಣ ಜ್ವರ, ಸಾಯಂಕಾಲದಲ್ಲಿ ಸಮಯದಲ್ಲಿ ಜ್ವರ ಮತ್ತು ಮೈ ಬೆವರುವುದು, ಅನಾಸಕ್ತಿ ಹಸಿವಿಲ್ಲದಿರುವುದು, ರುಚಿ ಇಲ್ಲದಿರುವುದು, ವಾಂತಿ, ಸುಸ್ತು ದೇಹದ ತೂಕ ಕಡಿಮೆಯಾಗುವುದು ಇತ್ಯಾದಿ. ಈ ಮೇಲೆ ತಿಳಿಸಿದ ಯಾವುದಾದರೂ ಲಕ್ಷಣಗಳಿದ್ದಲ್ಲಿ ತಕ್ಷಣ ವೈದ್ಯರಿಗೆ ತೋರಿಸತಕ್ಕದ್ದು.

ಕ್ಷಯರೋಗದ ಬಗೆಗಿನ ಮಿಥ್ಯಗಳು

ಕ್ಷಯರೋಗ ಅನುವಂಶಿಕ ಕಾಯಿಲೆ ಎಂದು ಕೆಲವರು ಇನ್ನೂ ನಂಬಿದ್ದಾರೆ. ಕ್ಷಯ ರೋಗ ಅನುವಂಶಿಕ ಕಾಯಿಲೆಯಲ್ಲ. ಕುಟುಂಬದಲ್ಲಿ ಯಾರಿಗಾದರೂ ಕಾಯಿಲೆ ಇದ್ದಲ್ಲಿ ರೋಗಾಣುಗಳು ಗಾಳಿಯ ಮೂಲಕವೇ ಹರಡ ಬಹುದೇ ಹೊರತು ರಕ್ತ ಸಂಬಂಧಿಗಳಲ್ಲಿ ಅನುವಂಶಿಕವಾಗಿ ಹರಡುವುದಿಲ್ಲ. ಒಟ್ಟಿಗೆ ಊಟ ಮಾಡುವುದರಿಂದ ಒಂದೇ ತಟ್ಟೆ, ಲೋಟಗಳನ್ನು ಬಳಸುವುದಿಂದ ಕ್ಷಯ ರೋಗ ಹರಡುವುದಿಲ್ಲ. ಆರಂಭಿಕ ಹಂತದಲ್ಲಿ ಗುರುತಿಸಿ ಚಿಕಿತ್ಸೆ ನೀಡಿದಲ್ಲಿ ಪರಿಣಾಮಕಾರಿಯಾಗಿ ಗುಣಪಡಿಸಬಹುದು. ನಿರ್ಲಕ್ಷ್ಯ ಮಾಡಿದಲ್ಲಿ ರೋಗ ಉಲ್ಬಣವಾಗಬಹುದು. ಹಿಂದಿನ ಕಾಲದಲ್ಲಿ ಒಂದೆರಡು ಬಗೆಯ ಮಾತ್ರೆಗಳನ್ನು ಮಾತ್ರ ಬಳಸಲಾಗುತ್ತಿತ್ತು. ಆದರೆ ಈಗ ಬಹು ಔಷಧಿ ಪ್ರತಿರೋಧ ಕ್ಷಯ ರೋಗ (ಒಆಖಿಖಿ) ಬಂದಿರುವುದಿಂದ ಕನಿಷ್ಠ 4ರಿಂದ 5 ಔಷಧಿಗಳನ್ನು ಬಳಸಬೇಕಾಗುತ್ತದೆ. ಈ ರೀತಿಯ ಕ್ಷಯ ರೋಗಕ್ಕೆ ಕನಿಷ್ಠ 2ರಿಂದ 3 ವರ್ಷ ಔಷಧಿ ಸೇವಿಸಬೇಕಾಗಬಹುದು. ಯಾರು ನಿಯಮಿತ ಮತ್ತು ಪೂರ್ಣಕಾಲಿಕ ಚಿಕಿತ್ಸೆ ಪಡೆಯುವುದಿಲ್ಲವೋ ಅವರ ಕ್ಷಯ ರೋಗ ಖಂಡಿತವಾಗಿಯೂ ವಾಸಿಯಾಗದು ಮತ್ತು ರೋಗ ಲಕ್ಷಣಗಳು ಮರುಕಳಿಸುತ್ತವೆ. ವೈದ್ಯರ ಸೂಚನೆಯಂತೆ ಅವರು ನೀಡಿದ ಔಷಧಿಯನ್ನು ನಿಗಧಿ ಪಡಿಸಿದ ಅವಧಿ ಪೂರ್ತಿ ತೆಗೆದುಕೊಳ್ಳಲೇಬೇಕು.

ಚಿಕಿತ್ಸೆ ಹೇಗೆ?

ಮೇಲೆ ತಿಳಿಸಿದ ರೋಗದ ಲಕ್ಷಣಗಳು ಕಾಣಿಸಿಕೊಂಡ ಕೂಡಲೇ ಅಲಕ್ಷ್ಯ ಮಾಡದೇ ತಜ್ಞ ವೈದ್ಯರ ಸಲಹೆ ಪಡೆಯತಕ್ಕದ್ದು. ರೋಗದ ಪತ್ತೆಗಾಗಿ ಕೆಲವೊಂದು ನಿಗದಿತ ಪರೀಕ್ಷೆಗಳಿದ್ದು ವೈದ್ಯರು ಈ ಪರೀಕ್ಷೆ ನಡೆಸಿದ ಬಳಿಕವೇ ತೀರ್ಮಾನಕ್ಕೆ ಬರುತ್ತಾರೆ. ಕ್ಷಯ ರೋಗ ಪರೀಕ್ಷೆ ಮತ್ತು ಚಿಕಿತ್ಸೆಗಾಗಿ ಪ್ರತೀ ಸರಕಾರಿ ಆಸ್ಪತ್ರೆಯಲ್ಲಿ ಉಚಿತವಾದ ಸೌಲಭ್ಯವಿದೆ. ಪ್ರತೀ ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಡಾಟ್ಸ (ಆಔಖಿಖ) ಸೆಂಟರ್ ಬಳಿ ಇದ್ದು ಉಚಿತವಾಗಿ ಔಷಧಿ ನೀಡಲಾಗುತ್ತದೆ. ಇಂತಹ ರೋಗಿಗಳನ್ನು ಒಳ ರೋಗಿಯಾಗಿ ವೈದ್ಯರು ಮತ್ತು ದಾದಿಯರ ತಜ್ಞರ ಮಾರ್ಗದರ್ಶನದಲ್ಲಿ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ. ಚಿಕಿತ್ಸೆ ಆರಂಭಿಸಿದ ವಾರದ ಒಳಗೆ ರೋಗ ಹರಡುವಿಕೆ ನಿಂತುಹೋಗುತ್ತದೆ. ಆದರೆ ಸಂಪೂರ್ಣ ಗುಣಮುಖವಾಗಲು ವೈದ್ಯರ ಸಲಹೆಯಂತೆ ಸಂಪೂರ್ಣವಾದ ಅವಧಿಗೆ ಸರಿಯಾದ ರೀತಿಯಲ್ಲಿ ಔಷಧಿ ಸೇವಿಸಲೇಬೇಕು. ಇಲ್ಲವಾದಲ್ಲಿ ಕ್ಷಯ ರೋಗ ಮರುಕಳಿಸಬಹುದು.

ಕೊನೆ ಮಾತು

ಕ್ಷಯ ರೋಗ ಮನುಕುಲದ ಬಹುದೊಡ್ಡ ವೈರಿ. ಬಡ ಮತ್ತು ಮಧ್ಯಮ ವರ್ಗದ ನಡು ವಯಸ್ಸಿನ ದುಡಿಯುವ ಮಂದಿಯನ್ನು ಕಾಡುವ ಕ್ಷಯ ರೋಗ ದೇಶದ ಪ್ರಗತಿಗೆ ಬಹಳ ಮಾರಕವಾದ ರೋಗ. ದಿನ ಬೆಳಗಾಗುವುದರೊಳಗೆ ಸಾಯದಿದ್ದರೂ ಕ್ಷಣ ಕ್ಷಣಕ್ಕೂ ವ್ಯಕ್ತಿಯನ್ನು ಕ್ಷೀಣ ಗೊಳಿಸಿ ದೇಶದ ಆರ್ಥಿಕತೆಗೆ ಹೊಡೆತ ನೀಡುತ್ತದೆ. ದುಡಿಯುವ ಕೈಗಳನ್ನು ರೋಗ ಬಾಧಿಸಿ ಕುಟುಂಬದ ಆಧಾರ ಸ್ತಂಭವಾದ ಯಜಮಾನನನ್ನು ಹಿಂಡಿ ಹಿಪ್ಪೆಮಾಡಿ ಇಡೀ ಕುಟುಂಬವನ್ನು ದುರ್ಗತಿಗೆ ತಳ್ಳುತ್ತದೆ.

ಜಗತ್ತಿನಾದ್ಯಂತ ಎಲ್ಲಾ ಆರೋಗ್ಯ ಸಂಸ್ಥೆಗಳು ಸಾರ್ವಜನಿಕ ಸಂಸ್ಥೆಗಳು ಸರಕಾರಿ ಸಾಮ್ಯದ ಆರೋಗ್ಯ ಕೇಂದ್ರಗಳು ಮತ್ತು ಇನ್ನೂ ಹತ್ತು ಹಲವಾರು ಸರಕಾರೇತರ ಸಂಸ್ಥೆಗಳಾದ ರೋಟರಿ ಲಯನ್ಸ್ ರೆಡ್‌ಕ್ರಾಸ್ ಮುಂತಾದ ಸಂಸ್ಥೆಗಳ ಜೊತೆಗೂಡಿ ಕ್ಷಯರೋಗದ ಸಂಪೂರ್ಣ ನಿರ್ನಾಮಗೊಳಿಸಲು ಟೊಂಕ ಕಟ್ಟಿ ನಿಂತಿದೆ. ಕ್ಷಯ ರೋಗ ಗುಣಪಡಿಸಬಹುದಾದ ಮತ್ತು ಚಿಕಿತ್ಸೆಗೆ ಸ್ಪಂದಿಸುವ ರೋಗವಾಗಿದ್ದು ಸಕಾಲದಲ್ಲಿ ಸೂಕ್ತ ಚಿಕಿತ್ಸೆ ನೀಡಿ ಪ್ರಾಣ ಹಾನಿಯನ್ನು ತಡೆಗಟ್ಟಬಹುದು.

ಆದರೆ ಜಗತ್ತಿನ 25 ರಿಂದ 30 ಲಕ್ಷ ಮಂದಿಗೆ ಅನಕ್ಷರತೆ, ಬಡತನ, ಮೂಢನಂಬಿಕೆ, ಅಜ್ಞಾನ ಮತ್ತು ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಚಿಕಿತ್ಸೆ ದೊರಕದಿರುವುದೇ ಬಹಳ ದೌರ್ಭಾಗ್ಯದ ಸಂಗತಿ. ಇತ್ತೀಚಿನ ದಿನಗಳಲ್ಲಿ ಏಡ್ಸ್ , ಹೆಪಟೈಟೀಸ್ ಮುಂತಾದ ಮಾರಣಾಂತಿಕ ರೋಗಗಳ ಸಂಖ್ಯೆಯೂ ಜಾಸ್ತಿಯಾಗುತ್ತಿದ್ದು ಮನುಷ್ಯನ ರಕ್ಷಣಾ ವ್ಯವಸ್ಥೆ ಹದಗೆಟ್ಟು ಮತ್ತಷ್ಟು ಕ್ಷಯ ರೋಗಿಗಳು ಹುಟ್ಟಿಕೊಳ್ಳಲು ಕಾರಣವಾಗಿದೆ. ಸಾಮಾನ್ಯ ರೋಗಿಗಳಿಗಿಂತ ಈ ಏಡ್ಸ್ ರೋಗಿಗಳು 30 ಪಟ್ಟು ಹೆಚ್ಚು ಕ್ಷಯ ರೋಗಕ್ಕೆ ತುತ್ತಾಗುವ ಸಾಧ್ಯತೆ ಇದ್ದು ಮುಂಬರುವ ದಿನಗಳಲ್ಲಿ ನಾವು ಇನ್ನಷ್ಟು ಎಚ್ಚರಿಕೆ ಮತ್ತು ಜಾಗೃತಿ ವಹಿಸದಿದ್ದಲ್ಲಿ ಏಡ್ಸ್ ಮತ್ತು ಕ್ಷಯ ರೋಗಗಳು ಮನುಕೂಲವನ್ನು ನುಂಗಿ ನೀರು ಕುಡಿಯುವುದರಲ್ಲಿ ಎಳ್ಳಷ್ಟೂ ಸಂಶಯವೇ ಇಲ್ಲ. ಈ ನಿಟ್ಟಿನಲ್ಲಿ ವೈದ್ಯರು ಮಾತ್ರವಲ್ಲದೇ ಸಾರ್ವಜನಿಕರು ಮತ್ತು ರೋಗಿಗಳು ತಮ್ಮ ಹೊಣೆಗಾರಿಕೆಯನ್ನು ಅರಿತು ನಿಬಾಯಿಸಿದ್ದಲ್ಲಿ ಕ್ಷಯ ರೋಗವನ್ನು ಮತ್ತು ಇನ್ನಾವುದೇ ರೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟ ಬಹುದು. ಅದರಲ್ಲಿಯೇ ಮನುಕುಲದ ಒಳಿತು ಇದೆ. ಹಾಗಾದಲ್ಲಿ ಮಾತ್ರ ವಿಶ್ವ ಕ್ಷಯರೋಗದ ಆಚರಣೆಗೆ ಹೆಚ್ಚು ಮೌಲ್ಯ ಬರಬಹುದು. ಕ್ಷಯ ರೋಗ ಪತ್ತೆಗೆ ಕಾರಣೀಭೂತವಾದ ರೋಗಾಣು ಕಂಡು ಹಿಡಿದ ಪುಣ್ಯಾತ್ಮ ಡಾ. ರಾಬರ್ಟ್‌ನ ಆತ್ಮಕ್ಕೆ ಶಾಂತಿ ದೊರಕಬಹುದು.

ಭಟ್ಟರ್ ಸ್ಕಾಚ್

- **ರಾಜೇಶ ಶೆಟ್ಟಿ, ಬ್ರಹ್ಮಾವರ**
ಭಟ್ರೇ, ಬೇಸಿಗೆ ಕಾಲದಲ್ಲಿ ನೀರನ್ನು ಉಳಿಸುವ ಸುಲಭ ಉಪಾಯ ಅಂದ್ರೆ ಏನು?
– **ಬಿಯರನ್ನು ಕುಡಿಯುವುದು!**

- **ನಿಂಗರಾಜು ಆರ್, (ಇಮೇಲ್ ಮೂಲಕ)**
ಭಟ್ರೇ, ಹೆಣ್ಣಿಗೆ ಒಳ್ಳೆಯ ಉಡುಪು ನೈಟಿನೋ, ಸೀರೇನೋ, ಚೂಡಿದಾರವೋ?
– **ಪ್ಯಾಂಟು, ಬಿಕಿನಿಯನ್ನು ಯಾಕೆ ಬಿಟ್ರಿ?!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ನಮ್ಮ ಡಿಕೆಶಿ ನಮ್ಮ ಹೆಮ್ಮೆ ಅಂತ ಹೇಳ್ತೇನೆ, ನೀವೇನು ಹೇಳ್ತೀರಾ?
– **ದೇಶದ ಅತ್ಯಂತ ಶ್ರೀಮಂತ ಶಾಸಕರ ಪೈಕಿ ಎರಡನೇ ಸ್ಥಾನದಲ್ಲಿರುವ ಅವರು ಹೆಮ್ಮೆಯೇ!**

- **ನೀಲಕಂಠಪ್ಪ ಚಿಕ್ಕಮುದ್ದೆ, ಬೀರೂರು**
ಭಟ್ರೇ, ಜಪಾನಿನ ಕಥೆಯನ್ನೆಲ್ಲ ಪೇಪರಿನಲ್ಲೇ ಹೇಳಿಬಿಟ್ಟರೆ ಬರಲಿರುವ ಪುಸ್ತಕಕ್ಕಾಗಿ ಏನು ಉಳಿಯುತ್ತದೆ?
– **ಹೇಳದೇ ಇರುವ ಕಥೆಗಳು ಇನ್ನೂ ಸಾಕಷ್ಟಿವೆ !**

- **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ಹೆಂಡತಿ ಇಲ್ಲದ ಜಗತ್ತಿನಲ್ಲಿ ಮತ್ಯಾರು ಇರುತ್ತಾರೆ?
– **ಗರ್ಲ್ ಫ್ರೆಂಡ್!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಬಡ್ಡಿಗೆ ಸಾಲ ಕೊಡುವ ಒಂದು ನೆಗೆಟಿವ್ ಪಾಯಿಂಟ್ ಅಂದ್ರೆ ಏನು?
– **ಬಡ್ಡಿ ಕೊಡಲು 'ಇಂಟರೆಸ್ಟ್' ಇಲ್ಲದಿರುವುದು!**

- **ನಾಗರಾಜ ಬಣ್ಣದಮಠ, (ಇಮೇಲ್ ಮೂಲಕ)**
ಭಟ್ರೇ, ಎಷ್ಟು ಬಿಯರ್ ಕುಡಿದರೆ ಜಾಸ್ತಿ?
– **ಬಿಯ ವಿಷಯದಲ್ಲಿ ಜಾಸ್ತಿ ಎಂಬುದೇ ಇಲ್ಲ!**

- **ವೆಂಕಟ್ ಎಂ. ರಾವ್, ಬೆಂಗಳೂರು**
ಭಟ್ರೇ, ಕಾಫಿ ಮತ್ತು ವಿಸ್ಕಿಯನ್ನಿಟ್ಟಾಗ ಯಾವುದನ್ನು ಕುಡಿಯಬಹುದು?
– **ಕಾಫಿಗಿಂತ ಹೆಚ್ಚು ಸ್ಟ್ರಾಂಗ್ ಇರುವುದನ್ನು!**

- **ಸಿದ್ದೇಶ ಸಿ., ತುಮಕೂರು**
ಭಟ್ರೇ, ಬೆಳಗ್ಗೆ ಬೇಗ ಏಳಲು ಕಾರಣ ಬೇಕಾ?
– **ಅದಕ್ಕೂ ಕೆಲವರು ಎಣ್ಣೆ ಕಾರಣ ಕೊಡ್ತಾರೆ !**

- **ಚಂದ್ರಶೇಖರ ಕೊಪ್ಪದ, ಧಾರವಾಡ**
ಭಟ್ರೇ, ಪ್ರೀತಿ ಅಂದ್ರೆ ಏನು?
– **ನಮ್ಮ ಐಸ್ ಕ್ರೀಮ್, ಪಿಜ್ಜಾವನ್ನು ಶೇರ್ ಮಾಡಿಕೊಳ್ಳುವುದು!**

ಗಗನದಲ್ಲಿ ಸಖಿ; ಬದುಕಿನಲ್ಲಿ ಅಸುಖಿ

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಇತ್ತೀಚೆಗೆ ಕಾರ್ಯನಿಮಿತ್ತ ಹಾಂಗ್‌ಕಾಂಗ್‌ಗೆ ಹೋಗಿದ್ದೆ. ಕೊನೇ ಘಳಿಗೆಯಲ್ಲಿ ನಿರ್ಣಯಿಸಿದ್ದರಿಂದ ಟಿಕೆಟ್ ದರವೂ ವಿಮಾನದಷ್ಟೇ ಎತ್ತರಕ್ಕೆ ಹಾರುತ್ತಿತ್ತು. ಸ್ವಲ್ಪ ಕಡಿಮೆ ದರದಲ್ಲಿ ಟಿಕೆಟ್ ಬೇಕು ಎಂದರೆ ಹೆಚ್ಚು ಪರ್ಯಟನೆ ಮಾಡಿಕೊಂಡು ಹೋಗಬೇಕಾಗಿತ್ತು. ಹೋಗುವಾಗ ಹೇಗೋ ಹದಿನೈದು ಗಂಟೆಯಲ್ಲಿ ಹೋಗಿ ತಲುಪಿದೆ. ಬರುವಾಗ ಮಾತ್ರ ಅವಸ್ಥೆ ಹರಡಿಹೋಗಿತ್ತು. ಹಾಂಗ್‌ಕಾಂಗ್‌ನಿಂದ ಸಿಂಗಾಪುರ, ಕತಾರ್ ಮಾರ್ಗವಾಗಿ ಬಹ್ರೈನ್‌ಗೆ ಬಂದು ತಲುಪುವಾಗ ಮೂವತ್ತು ಗಂಟೆ ಪ್ರಯಾಣಕ್ಕೆ ಮೂವತ್ತು ನಿಮಿಷ ಮಾತ್ರ ಬಾಕಿ ಇತ್ತು. ಲಾಂಜ್ ಒಳಗೆ ಸ್ನಾನ, ಊಟತಿಂಡಿ ಮಾಡುವ ವ್ಯವಸ್ಥೆ ಇದ್ದಿದರಿಂದ ಪ್ರಯಾಣದ ದಣಿವಿನ ಅರಿವಾಗಲಿಲ್ಲ.

ಆದರೂ ಪ್ರತಿ ಬಾರಿ ವಿಮಾನದ ಬದಲಿಸುವಾಗಲು ಭದ್ರತಾ ತಪಾಸಣೆಗೆ ಒಳಪಡಬೇಕಾಗಿತ್ತು. ಬೆಲ್ಟು, ಬೂಟು, ಜ್ಯಾಕೆಟ್ಟು, ಪ್ಯಾಕೆಟ್ಟು ಎಲ್ಲವನ್ನು ಬಿಚ್ಚುವುದು, ಪುನಃ ಅದನ್ನು ತೊಟ್ಟುಕೊಳ್ಳುವುದು ಒಂದು ರೀತಿಯ ಹಿಂಸೆಯಾದರೆ, ವಿಮಾನದ ಒಳಗೆ ಕುಳಿತು ತಾಸುಗಟ್ಟಲೆ ಪ್ರಯಾಣಿಸುವದು ಇನ್ನೊಂದು ರೀತಿಯ ತ್ರಾಸು. ವಿಮಾನ ಪ್ರಯಾಣದಲ್ಲಿ ಯಾರಾದರೂ ಜತೆಗಿದ್ದರೆ ಸ್ವಲ್ಪವಾದರೂ ಸಮಯ ಕಳೆಯಬಹುದು. ಒಬ್ಬಂಟಿ ಪ್ರಯಾಣಿಸುವುದಾದರೆ, ಅದರಲ್ಲೂ ವಿಮಾನದಲ್ಲಿ ನಿದ್ರೆ ಬರದವರಾದರಂತೂ ಕಥೆ ಗೋವಿಂದ!

ಹಾಗಂತ ಎಲ್ಲ ಪ್ರಯಾಣವೂ ಹಿಂಸೆ ಎಂದು ಹೇಳುವಂತಿಲ್ಲ. ನಾನು ಹೇಳುತ್ತಿರುವುದು ದೂರದ ಪ್ರಯಾಣದ ಬಗ್ಗೆ ಮಾತ್ರ. ಸಣ್ಣ ಅವಧಿಯ ವಿಮಾನಯಾನವನ್ನು ಆರಾಮಾಗಿ ಕಳೆದುಬಿಡಬಹುದು. ಅದಕ್ಕಿಂತ ಹೆಚ್ಚಾದರೆ ಮಾತ್ರ ತೊಂದರೆ. ಕೆಲವು ವಿಮಾನ ನಿಲ್ದಾಣಗಳಂತೂ ಸಮಯ ಕಳೆಯಲು ಅದ್ಭುತ ತಾಣ. ಅಲ್ಲಿ ಮೂರು-ನಾಲ್ಕು ಗಂಟೆ ಕಳೆದು ಹೋಗಿದ್ದು ಗೊತ್ತೇ ಆಗುವುದಿಲ್ಲ. ಒಂದು ಮೂಲೆಯಲ್ಲಿ ಕುಳಿತು, ಹೋಗಿ ಬರುವ ಜನರನ್ನು ನೋಡಿದರೂ ಸಾಕು, ಈ ಜಗತ್ತು ಎಷ್ಟು ವಿಚಿತ್ರವಾಗಿದೆ, ವರ್ಣರಂಜಿತವಾಗಿದೆ, ವೇದನೆಯಿಂದ ಕೂಡಿದೆ, ಎಲ್ಲದರದ್ದೂ ಒಂದು ಝಲಕ್ ಅಲ್ಲಿ ಸಿಗುತ್ತದೆ. ಕೆಲವೊಮ್ಮೆ ವಿಮಾನದ ಒಳಗೂ ವಿಚಿತ್ರ, ವಿಶೇಷ ಜನರು ನಮ್ಮ ಕಣ್ಣಿಗೆ ಬೀಳುತ್ತಾರೆ. ವಿಮಾನದ ಒಳಗೆ ನಡೆಯುವ ಕೆಲವು ಘಟನೆಗಳು ಪ್ರಯಾಣದ ಕಷ್ಟವನ್ನು ಕಡಿಮೆ ಮಾಡುವುದರೊಂದಿಗೆ ದೂರವನ್ನು ಮುಟಕುಗೊಳಿಸುತ್ತದೆ. ಹಾಗೆಯೇ ಬೇಡದವರು ಸಿಕ್ಕರೆ ಸಣ್ಣ ಪ್ರಯಾಣವೂ ಪ್ರಯಾಸದ್ದಾಗಿರುತ್ತದೆ. ಇದು ನಮ್ಮ-ನಿಮ್ಮ ಕಥೆಯಾದರೆ, ಗಗನಸಖಿಯರ ಪಾಡೇನು?

ಹಾಂಗ್ ಕಾಂಗ್ ನಿಂದ ಸಿಂಗಾಪುರಕ್ಕೆ ಬರುತ್ತಿರುವಾಗ ವಿಮಾನ ಆಕಾಶಕ್ಕೆ ಹಾರಿ ಒಂದು ತಾಸು ಆಗಿತ್ತು. ಇದ್ದಕ್ಕಿದ್ದಂತೆ ಒಬ್ಬ ಮಹಿಳೆ ತೀರಾ ವೇದನೆಯಿಂದ ನರಳುತ್ತಿದ್ದಂತೆ ಕಂಡು ಬಂತು. ಕೂಡಲೇ ಇಬ್ಬರು ಗಗನಸಖಿಯರು ಅವಳ ಬಳಿ ಧಾವಿಸಿದರು. ಆ ಮಹಿಳೆಯನ್ನು ವಿಮಾನದ ಹಿಂಭಾಗಕ್ಕೆ ಕರೆದುಕೊಂಡು ಹೋದರು. ಮಹಿಳೆಯ ವೇದನೆ ನೋಡಿದವರೆಲ್ಲ ಬಹುಶಃ ಆಕೆ ಗರ್ಭವತಿ ಇರಬಹುದು ಅಂದುಕೊಂಡರು. ಆದರೆ, ಹೊಟ್ಟೆಯ ಕಡೆ ನೋಡಿದರೆ ಹಾಗೆ ಕಾಣುತ್ತಿರಲಿಲ್ಲ. ಇರಲಿ, ಅದಾಗಿ ಒಂದು ತಾಸಿನ ನಂತರ ಮಹಿಳೆ ತಿರುಗಿ ಬಂದು ತನ್ನ ಸ್ಥಾನದಲ್ಲಿ ಕುಳಿತುಕೊಂಡಳು. ನಾನು ಕುತೂಹಲಕ್ಕಾಗಿ ಗಗನಸಖಿಯಲ್ಲಿ ಏನಾಗಿತ್ತು ಎಂದು ಕೇಳಿದಾಗ, 'ಮಹಿಳೆಯರ ಋತುಚಕ್ರದ ಸಮಯದಲ್ಲಿ ಕೆಲವೊಮ್ಮೆ ಹೀಗೆ ಆಗುವುದಿದೆ. ಸ್ನಾಯುಗಳು ಸೆಟೆದುಕೊಂಡು ತುಂಬಾ ನೋವು ಕಾಣಿಸಿಕೊಳ್ಳುತ್ತದೆ, ರಕ್ತಸ್ರಾವ ಹೆಚ್ಚುತ್ತದೆ....' ಇತ್ಯಾದಿ ವಿವರಣೆ ನೀಡಿದಳು. 'ಇಷ್ಟು ಬೇಗ ಗುಣವಾಗಲು ಏನು ಮಾಡಿದಿರಿ?' ಎಂದೆ. 'ಏನಿಲ್ಲ, ಹಿಂದೆ ಇರುವ ಜಾಗದಲ್ಲಿ ಕೆಳಗೆ ಮಲಗಿಸಿದೆವು, ನೋವು ನಿವಾರಕ ಮಾತ್ರೆ ನೀಡಿದೆವು, ಕೆಲವೊಮ್ಮೆ ಕುಳಿತುಕೊಂಡಾಗ ನೋವು ಹೆಚ್ಚಾಗುತ್ತದೆ, ಮಲಗಿದರೆ ಕಡಿಮೆಯಾಗುತ್ತದೆ, ಈ ಮಹಿಳೆಗೆ ಆದದ್ದು ಅದೇ, ನಾವು ಮಾಡಿದ್ದು ಅಷ್ಟೇ...' ಎಂದಳು. 'ನಿಮಗೆ ಈ ರೀತಿಯ ಮಾಹಿತಿ ಮತ್ತು ತರಬೇತಿಯನ್ನು ನೀಡಿರುತ್ತಾರೆಯೇ?' ಎಂದು ಕೇಳಿದಾಗ, 'ಹೌದು, ಇದು ನಮ್ಮ ಕೆಲಸದ ಒಂದು ಭಾಗ' ಎಂದು ತನ್ನ ಆಸನದತ್ತ ನಡೆದಳು.

ಇಂಥ ತುರ್ತು ಪರಿಸ್ಥಿತಿಯನ್ನು ಎದುರಿಸುವುದು ಗಗನಸಖಿಯರಿಗೆ ಹೊಸತೇನೂ ಅಲ್ಲ. ಅವರ ಜೀವನದಲ್ಲಿ ಇಂತಹ ಸಾಕಷ್ಟು ಘಟನೆಗಳನ್ನು ಎದುರಿಸಿರುತ್ತಾರೆ. ಇಂತಹ ಸಂದರ್ಭಗಳನ್ನು ನಿಭಾಯಿಸಲು ಅವರಿಗೆ ತರಬೇತಿ ನೀಡಿರುತ್ತಾರೆ. ಪ್ರತಿ ವಿಮಾನದಲ್ಲೂ ವೈದ್ಯರನ್ನೂ, ದಾದಿಯರನ್ನೂ ಕರೆದುಕೊಂಡು ಹೋಗಲು ಅಸಾಧ್ಯವಾದದ್ದರಿಂದ, ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ಕೃತಕ ಉಸಿರಾಟ, ಪ್ರಥಮ ಚಿಕಿತ್ಸೆ ನೀಡುವುದಕ್ಕೆ ಅವರು ಸಜ್ಜಾಗಿರುತ್ತಾರೆ. ತೀರಾ ಅಂತಹ ಪರಿಸ್ಥಿತಿ ಬಂದರೆ ಹೆರಿಗೆಗೆ ಸಹಾಯ ಮಾಡಲೂ ಸಹ ಅವರಿಗೆ ತರಬೇತಿ ನೀಡಿರುತ್ತಾರೆ. ಸಾಮಾನ್ಯವಾಗಿ ಯಾವುದೇ ವೈದ್ಯಕೀಯ ಸಲಹೆ ಅಥವಾ ಸಹಕಾರದ ಅವಶ್ಯಕತೆಯಿದ್ದರೆ, ವಿಮಾನದಲ್ಲಿ ಯಾರಾದರೂ ವೈದ್ಯರು ಇದ್ದಾರೆಯೇ ಎಂದು ಕೇಳಲಾಗುತ್ತದೆ. ಒಂದು ವೇಳೆ ವೃತ್ತಿಪರ ವೈದ್ಯರು ಇಲ್ಲದಿದ್ದರೆ, ವಿಮಾನದ ಸಿಬ್ಬಂದಿಗಳೇ ಆ ಕೆಲಸವನ್ನು ಮಾಡುತ್ತಾರೆ. ವೈದ್ಯರಷ್ಟು ನಾಜೂಕಾಗಿ ಅವರಿಂದ ಚಿಕಿತ್ಸೆ ನೀಡಲು ಆಗದಿರಬಹುದು, ಆದರೆ ಮೂವತ್ತು ಸಾವಿರ ಅಡಿ ಎತ್ತರದಲ್ಲಿ ಸಾಮಾನ್ಯ ರೋಗಕ್ಕೆ ಪ್ರಥಮ ಚಿಕಿತ್ಸೆ ಅಥವಾ ತುರ್ತು ಚಿಕಿತ್ಸೆ ನೀಡುವ ತರಬೇತಿಯನ್ನಂತೂ ಅವರು ಪಡೆದಿರುತ್ತಾರೆ.

ಇದಿಷ್ಟನ್ನೂ ಹೇಳುವಾಗ, ಸಖಿ ಕೆಳಗಡೆ ಮಂಡಿಯೂರಿ ಕುಳಿತುಕೊಂಡೇ ಹೇಳಿದ್ದಳು. ನಿಜ, ಗಗನಸಖಿಯರು ನಿಂತು ಮಾತನಾಡಬಹುದು ಅಥವಾ ಕೆಳಗೆ ಕುಳಿತು ಮಾತನಾಡಬಹುದು, ಆದರೆ ನಮ್ಮ ಪಕ್ಕದ ಆಸನವಾಗಲಿ ಅಥವಾ ಇನ್ಯಾವುದೇ ಆಸನವಾಗಲಿ ಖಾಲಿ ಇದ್ದರೂ ಅಲ್ಲಿ ಕುಳಿತುಕೊಳ್ಳುವ ಹಾಗಿಲ್ಲ. ಅವರಿಗೆ ಎಂದು ನಿಗದಿಪಡಿಸಿದ ಆಸನದಲ್ಲಿಯೇ ಕುಳಿತುಕೊಳ್ಳಬೇಕು.

ನೋಡುಗರ ಕಣ್ಣಿಗೆ ಗಗನಸಖಿಯರ ಕೆಲಸ ತುಂಬಾ ಸರಳವಾದದ್ದು, ಸುಖಕರವಾದದ್ದು, ಸಂತೋಷದಾಯಕವಾದದ್ದು. ಆದರೆ ನಿಜ ಸ್ಥಿತಿ ಹಾಗಿಲ್ಲ. ಅವರು ತಮ್ಮ ಕೆಲಸದ ಬಗ್ಗೆ ತೀರಾ ಬೇಜಾರುಪಟ್ಟುಕೊಳ್ಳದಿರಬಹುದು. ಆದರೆ ತೀರ ಸುಖಿಗಳೇನೂ ಆಗಿರುವುದಿಲ್ಲ. ಅವರು ಮಾಡುವ ಕೆಲಸ, ಅವರಿಗೆ ಬರುವ ಸಂಬಳ, ಅವರು ಪಡುವ ಶ್ರಮ, ಅವರಿಗೆ ಸಿಗುವ ಭತ್ಯೆ, ಅವರಿಗೆ ಸಿಗುವ ಅನಾರೋಗ್ಯ, ಇವನ್ನೆಲ್ಲ ಹೊಂದಿಸಿ ನೋಡಿದಾಗ ಯಾರಿಗಾದರೂ ಇದು ಅರ್ಥವಾಗುತ್ತದೆ.

ಸುಮ್ಮನೆ ಹೇಳುವುದಾದರೆ, ಕೆಲಸಕ್ಕೆ ಸೇರುವಾಗ ಇವರ ಸಂಬಳ 25ರಿಂದ ರಿಂದ ಐವತ್ತು ಸಾವಿರದವರೆಗೆ ಇರುತ್ತದೆ. ಕ್ರಮೇಣ ಅನುಭವದ ಆಧಾರದ ಮೇಲೆ ಒಂದು ಲಕ್ಷದವರೆಗೂ ತಲುಪುವ ಸಾಧ್ಯತೆ ಇರುತ್ತದೆ. ಅಂತಾರಾಷ್ಟ್ರೀಯ ವಿಮಾನಗಳಲ್ಲಿ, ಒಳ್ಳೆಯ ಸಂಸ್ಥೆಯಲ್ಲಿ ಕೆಲಸ ಸಿಕ್ಕರೆ, ಒಂದೂವರೆಯಿಂದ ಮೂರು ಲಕ್ಷದವರೆಗೂ ಸಂಬಳ ಇರುತ್ತದೆ. ಅದರಲ್ಲಿ ಮನೆ, ವಾಹನ, ತಿರುಗಾಟ, ಊಟೋಪಚಾರ, ಇತರೆ ಭತ್ಯೆ ಎಲ್ಲವೂ ಸೇರಿರುತ್ತದೆ. ಆದರೆ ಈ ಸಂಬಳ ಪಡೆಯಲು ಅವರು ಚಾಲಕರ, ಪ್ರಯಾಣಿಕರ ಕಡೆಗೆ ಸದಾ ಗಮನಹರಿಸುವುದರ ಜತೆಗೆ, ಊಟ ಬಡಿಸಬೇಕು, ತಟ್ಟೆ ಎತ್ತಬೇಕು, ಅದನ್ನೆಲ್ಲ ನೀಟಾಗಿ ಜೋಡಿಸಿ ಇಡಬೇಕು, ಗಂಟೆಗೆ ಒಮ್ಮೆಯಾದರೂ ಕಕ್ಕಸು ತೊಳೆಯಬೇಕು. ಪ್ರಯಾಣಿಕರು ಕರೆದಾಗಲೆಲ್ಲ ಅವರ ಬಳಿ ಓಡಬೇಕು, ಕೇಳಿದಾಗೆಲ್ಲ ನೀರು, ಕಂಬಳಿ, ಚಹಾ-ಕಾಫಿ ಇತ್ಯಾದಿಗಳನ್ನು ಸರಬರಾಜು ಮಾಡಬೇಕು. ತುರ್ತು ಪರಿಸ್ಥಿತಿಯಲ್ಲಿ, ಅವಘಡ ಸಂಭವಿಸಿದಲ್ಲಿ, ಪ್ರಯಾಣಿಕರೆಲ್ಲ ಹೊರಗೆ ಹೋದ ನಂತರ, ಕೊನೆಯಲ್ಲಿ ಇವರು ವಿಮಾನ ಬಿಟ್ಟು ಹೊರಗೆ ಬರಬೇಕು. ಒಂದೇ, ಎರಡೇ? ಸಖಿಯರಾಗಲಿ, ಸಖರಾಗಲಿ, ವಿಮಾನದ ಕರ್ಮಚಾರಿಗಳು ಸದಾ ಜಾಗೃತಾವಸ್ಥೆಯಲ್ಲಿಯೇ ಇರಬೇಕು.

ವೈದ್ಯರಂತೆಯೇ ಇವರೂ ಕೂಡ ತತ್ಕಾಲದಲ್ಲಿ ಕೆಲಸಕ್ಕೆ ಹಾಜರಾಗುವಂತೆ ಸಿದ್ಧರಿರಬೇಕಾಗುತ್ತದೆ. ಕೆಲವೊಮ್ಮೆ ಎರಡು ಗಂಟೆಯ ಮುಂಚಿತವಾಗಿ ಕೆಲಸಕ್ಕೆ ಕರೆದರೂ ಹೊರಡಬೇಕಾಗುತ್ತದೆ. ಅವರ ಸಂಬಳ ತಿಂಗಳಿಗೆ ಇಂತಿಷ್ಟು ಎಂದು ಹೇಳಿದರೂ, ಅದು ಇತರರಂತೆ ಮೂವತ್ತು ದಿನ ಅಥವಾ ವಾರದಲ್ಲಿ ಐದೋ ಆರೋ ದಿನ ಅಥವಾ ದಿನಕ್ಕೆ ಎಂಟು ತಾಸು ಕೆಲಸ, ಈ ರೀತಿಯ ಸಾಮಾನ್ಯ ಲೆಕ್ಕಾಚಾರವಲ್ಲ. ಅವರಿಗೆ ತಿಂಗಳ ಕೊನೆಗೆ ಒಂದಿಷ್ಟು ಸಂಬಳ ಕೈಗೆ ಸಿಗುತ್ತದೆ ಎಂದು ಹೇಳಬಹುದಾದರೂ ಅದು ಕಡಾಕಡಿ ಸಂಖ್ಯೆಯಲ್ಲ. ಅವರಿಗೆ ಸಂಬಳ ಸಿಗುವುದು ಅವರು ಎಷ್ಟು ಗಂಟೆ ಕೆಲಸ ಮಾಡಿದ್ದಾರೆ ಎನ್ನುವ ಲೆಕ್ಕದಲ್ಲಿ. ಪ್ರಯಾಣಿಕರೆಲ್ಲ ವಿಮಾನದೊಳಗೆ ಕುಳಿತು ವಿಮಾನ ಹಾರುವುದಕ್ಕೂ ಮೊದಲು ಬಾಗಿಲು ಹಾಕಿಕೊಂಡಾಗ ಅವರ ಕೆಲಸದ ಅವಧಿ ಆರಂಭವಾಗುತ್ತದೆ. ವಿಮಾನ ಭೂಮಿಯನ್ನು ಸ್ಪರ್ಶಿಸಿ, ನಿಲ್ದಾಣದಲ್ಲಿ ನಿಂತು ಬಾಗಿಲು ತೆಗೆದರೆ ಇವರ ಕೆಲಸದ ಅವಧಿ ಮುಗಿಯುತ್ತದೆ. ಕೆಲವೊಮ್ಮೆ ಒಂದು ಗಂಟೆ ವಿಮಾನ ಆಕಾಶದಲ್ಲಿ ಹಾರಿದರೆ, ಮೊದಲು ಒಂದುವರೆಯಿಂದ ಎರಡು ಗಂಟೆ ಇವರು ನಿಂತ ವಿಮಾನದಲ್ಲಿ ಕೆಲಸ ಮಾಡುತ್ತಾರೆ, ನಂತರವೂ ಅರ್ಧ-ಒಂದು ಗಂಟೆ ವಿಮಾನದಲ್ಲಿ ಇರಬೇಕಾಗುತ್ತದೆ. ಆದರೆ ಇದ್ಯಾವುದೂ ಲೆಕ್ಕಕ್ಕೆ ಬರುವುದಿಲ್ಲ. ಲೆಕ್ಕಕ್ಕೆ ಬರುವುದು ಒಂದು ಗಂಟೆ ವಿಮಾನ ಹಾರಿದ ಅವಧಿ ಮಾತ್ರ. ಇತ್ತೀಚೆಗೆ ಕೆಲವು ಸಂಸ್ಥೆಗಳು ವಿಮಾನ ಭೂಮಿಯ ಮೇಲೆ ನಿಂತ ಅವಧಿಯನ್ನೂ ಪರಿಗಣಿಸಿ ಸ್ವಲ್ಪ ಮಟ್ಟಿನ ಹಣವನ್ನು ಪರಿಗಣಿಸುತ್ತಿವೆ.

ಸುಮಾರು ಮೂರು ದಶಕದ ಹಿಂದೆ ನಾನು ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದಾಗ ಕೆಲವು ದೃಶ್ಯಗಳು ಮಾಮೂಲಾಗಿದ್ದವು. ವಿಮಾನದಲ್ಲಿ ಸೀಟ್ ಬೆಲ್ಟ್ ಹಾಕಿಕೊಳ್ಳಲು ಹೇಳಿದಾಗ ಬರದವರಂತೆ ನಟಿಸಿ ಗಗನಸಖಿಯರನ್ನು ಹತ್ತಿರ ಕರೆಯುವುದು, ಆಗಾಗ ನೀರು, ಟೀ-ಕಾಫಿ ಅಥವಾ ಮದ್ಯ ಸರಬರಾಜು ಮಾಡುವಂತೆ ಕೇಳುವುದು, ಆ ನೆಪದಲ್ಲಾದರೂ ಸ್ವಲ್ಪ ಮೈ-ಕೈ ಮುಟ್ಟುವುದು, ಇತ್ಯಾದಿ, ಇತ್ಯಾದಿ. ತಿಳಿದೂ ತಿಳಿಯದವರಂತೆ ವರ್ತಿಸುವ ಸಾಕಷ್ಟು ಜನರನ್ನು ನಾನು ಕಂಡಿದ್ದೇನೆ. ಅದು ಇತ್ತೀಚೆಗೆ ತೀರಾ ಕಡಿಮೆಯಾಗಿದೆ ಎಂದರೆ ತಪ್ಪಲ್ಲ. ಇತ್ತೀಚೆಗೆ ಬಹಳಷ್ಟು ವಿಮಾನದಲ್ಲಿ ಮದ್ಯದ ಸರಬರಾಜು ಕೂಡ ಕಡಿಮೆಯಾಗಿದೆ ಎನ್ನುವುದು ಇನ್ನೊಂದು ವಿಚಾರ.

ಅಷ್ಟಕ್ಕೂ ಈ ಗಗನಸಖಿಯರ ಮೂಲ ಕೆಲಸ ಪ್ರಯಾಣಿಕರಿಗೆ ಚಾಕರಿ ಮಾಡಿಕೊಂಡಿರುವುದು ಅಲ್ಲವೇ ಅಲ್ಲ. ಇವರನ್ನು ಮೊದಲು ನೇಮಿಸಿದ್ದು ಅಥವಾ ಇಂದಿಗೂ ಅವರು ಪ್ರಮುಖವಾಗಿ ಮಾಡಬೇಕಾದದ್ದು, ವಿಮಾನದ ಚಾಲಕ ಮತ್ತು ಸಹಚಾಲಕರ (ಪೈಲಟ್ ಮತ್ತು ಕೋ-ಪೈಲಟ್) ಕಣ್ಣು, ಬಾಯಿ, ಕಿವಿಯಾಗಿ, ಅವರ ಸಂದೇಶವನ್ನು ಪ್ರಯಾಣಿಕರಿಗೆ ರವಾನಿಸುವುದು. ಅದು ಇವರ ಪ್ರಮುಖ ಕರ್ತವ್ಯ. ಮೊದಮೊದಲು ನನಗೆ 'ಈ ಗಗನಸಖಿಯರು ಆಗಾಗ ಕಾಕ್ ಪಿಟ್‌ಗೆ ಏಕೆ ಹೋಗಿ ಬರುತ್ತಿರುತ್ತಾರೆ?' ಎಂದು ಅನ್ನಿಸುತ್ತಿತ್ತು. ಆಮೇಲೆ ನನಗೆ ಅರ್ಥವಾದದ್ದೇನೆಂದರೆ, ಅದು ಅವರ ಕೆಲಸದ ಒಂದು ಭಾಗ. ಪ್ರತಿ ಗಂಟೆಗೆ ಒಮ್ಮೆಯಾದರೂ ಅವರು ಚಾಲಕ ಮತ್ತು ಸಹಚಾಲಕರನ್ನು ಮಾತನಾಡಿಸಿ, ಅಲ್ಲಿ ಏನಾದರೂ ಸಂದೇಶವಿದ್ದರೆ ರವಾನಿಸಿ, ಅವರಿಗೆ ತಿನಿಸು, ಪಾನೀಯದ ಅವಶ್ಯಕತೆ ಇದ್ದರೆ ಪೂರೈಸಬೇಕಾದದ್ದು ಅವರ ಕೆಲಸದ ಒಂದು ಭಾಗ. ಅದು ಪ್ರಮುಖಭಾಗವೂ ಆಗಿತ್ತು. ಆದರೆ ಅದಕ್ಕೆ ಒಬ್ಬರೋ-ಇಬ್ಬರೋ ಸಾಕಾಗುತ್ತಿದ್ದರು. ನಂತರದ ದಿನಗಳಲ್ಲಿ ಪ್ರಯಾಣಿಕರ ಕಡೆಗೂ ಲಕ್ಷ್ಯವಹಿಸಬೇಕು, ಪ್ರಯಾಣಿಕರು ಅತಿಥಿಗಳು, ಅತಿಥಿಗಳೆಂದ ಮೇಲೆ ಸತ್ಕಾರವನ್ನೂ ಮಾಡಬೇಕು, ಅವರ ಬಗ್ಗೆ ಕಾಳಜಿಯೂ ಇರಬೇಕು ಎಂಬ ವಿಚಾರಗಳೆಲ್ಲ ಜೀವ ಪಡೆದುಕೊಂಡವು.

ಅಷ್ಟಕ್ಕೂ 'ಗಗನಸಖಿ' ಎಂಬ ಪದ ಹುಟ್ಟಿಕೊಂಡದ್ದು 1930 ರಲ್ಲಿ. ಅದಕ್ಕೂ ಮೊದಲು ಈ ಕೆಲಸವನ್ನು ಗಂಡಸರೇ ಮಾಡುತ್ತಿದ್ದರು. ಈಗಲೂ ಕೆಲವು ವಿಮಾನದಲ್ಲಿ ಒಂದು-ಎರಡು ಸಹಾಯಕರನ್ನು ಕಾಣಬಹುದು. ಈ ಕೆಲಸಕ್ಕೆ ಈಗ ಲಿಂಗಭೇದ ಇಲ್ಲ. 1930 ರಲ್ಲಿ ಮೊತ್ತಮೊದಲ ಬಾರಿಗೆ 'ಎಲೆನ್ ಚರ್ಚ್' ಹೆಸರಿನ ಮಹಿಳೆ ಗಗನಸಖಿಯಾಗಿ ಯುನೈಟೆಡ್ ಏರ್‌ಲೈನ್ಸ್ ವಿಮಾನದ ಒಳಗೆ ಕಾಲಿಟ್ಟಿದ್ದಳು. 25 ವರ್ಷ ವಯಸ್ಸಿನ ಎಲೆನ್ ವೃತ್ತಿಯಲ್ಲಿ ದಾದಿಯಾಗಿದ್ದಳು. ನಂತರ ಎಲ್ಲ ಸಂಸ್ಥೆಗಳೂ ನಿಧಾನವಾಗಿ ಮಹಿಳೆಯರನ್ನು ಈ ಕಾರ್ಯಕ್ಕೆ ಆಯೋಜಿಸಿಕೊಳ್ಳಲು ತೊಡಗಿದವು. ಅದರಲ್ಲಿ ಬಹುತೇಕ ದಾದಿಯರನ್ನೇ ಆರಿಸಿಕೊಳ್ಳಲಾಗುತ್ತಿತ್ತು. 1935ರ ವೇಳೆಗೆ ಈ ಕೆಲಸಕ್ಕೆ ಭಾರಿ ಬೇಡಿಕೆ ಬಂದಿತ್ತು. ಆ ಕಾಲದಲ್ಲೇ ಒಂದು ಹುದ್ದೆಗೆ ಐವತ್ತು ಜನರಂತೆ ಅರ್ಜಿ ಹಾಕುತ್ತಿದ್ದರು. ಆ ಕಾಲದಲ್ಲಿ, ಗಗನಸಖಿಯರ ಕೆಲಸಕ್ಕೆ ಎಲ್ಲರನ್ನೂ ಸೇರಿಸಿಕೊಳ್ಳುತ್ತಿರಲಿಲ್ಲ. ಗಗನಸಖಿಯರಾಗಲು ಬಯಸುವವರು ನೋಡಲು ಸುಂದರವಾಗಿರಬೇಕು, ಐದರಿಂದ ಐದೂವರೆ ಅಡಿ ಎತ್ತರವಿರಬೇಕು, ಅವರ ತೂಕ 55ರಿಂದ 60 ಕಿಲೋ ಒಳಗೆ ಇರಬೇಕು ಇತ್ಯಾದಿ ನಿಯಮಗಳಿದ್ದವು. ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬಳೇ ಇರಬೇಕು ಎಂಬ ನಿಯಮವಿತ್ತು. ಮದುವೆಯಾಗದೇ ಇರುವವರಿಗೆ ಪ್ರಾಶಸ್ತ್ಯ. ವಿಧವೆ ಅಥವಾ ವಿಚ್ಛೇದಿತ ಮಹಿಳೆಯಾದರೂ ಅಡ್ಡಿಯಿಲ್ಲ, ಮಕ್ಕಳು ಇರಬಾರದು ಎಂದಿತ್ತು. ಅದರ ಜತೆಗೆ, ಮೂರು ತಿಂಗಳಿಗೆ ಒಮ್ಮೆ, ವರ್ಷದಲ್ಲಿ ನಾಲ್ಕು ಬಾರಿ ವೈದ್ಯಕೀಯ ತಪಾಸಣೆಗೆ ಒಳಪಡಬೇಕಾಗಿತ್ತು. ಈಗ ಆ ನಿಯಮಗಳೆಲ್ಲವೂ ಬಹುತೇಕ ಸಡಿಲಗೊಂಡಿವೆ.

ಆದರೆ, 2018 ರಲ್ಲಿ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ, ಸಾಮಾನ್ಯ ಜನರಿಗಿಂತ ಗಗನಸಖಿಯರಲ್ಲಿ ಕ್ಯಾನ್ಸರ್ ರೋಗ ಹೆಚ್ಚಾಗಿ ಕಂಡುಬರುತ್ತದೆಯಂತೆ. ಅವರ ಶ್ವಾಸಕೋಶ ಉಳಿದವರಿಗಿಂತ ಬೇಗ ಕೃಶವಾಗುತ್ತದೆ, ಅವರಿಗೆ ಉಸಿರಾಟದಲ್ಲಿ ತೊಂದರೆ ಕಾಣಿಸಿಕೊಳ್ಳುತ್ತದೆ, ನಿದ್ರಾಹೀನತೆ, ಚರ್ಮದ ರೋಗಗಳು ಕಾಣಿಸಿಕೊಳ್ಳುವ ಸಂಭವ ಹೆಚ್ಚಾಗಿರುತ್ತದೆ, ಸಂತಾನೋತ್ಪತ್ತಿಯಲ್ಲಿ ತೊಂದರೆ ಕಾಣಿಸಿಕೊಳ್ಳುತ್ತದೆ ಎಂದೆಲ್ಲ ಸಮೀಕ್ಷೆಯ ವರದಿ ಹೇಳುತ್ತದೆ. ಇದಕ್ಕೆಲ್ಲ ಕಾರಣ ಅವರು ಇತರರಿಗಿಂತ ಹೆಚ್ಚು ವಿಮಾನದಲ್ಲಿ ಹಾರಾಡುವುದು ಕಾರಣ ಎಂಬ ವರದಿ ನೀಡಿದೆ. ಇನ್ನೂ ಒಂದು ವರದಿಯ ಪ್ರಕಾರ ಶೇ.65ರಷ್ಟು ಗಗನಸಖಿಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಾರಂತೆ. ಅದರಲ್ಲಿ ಸಹಕರ್ಮಿಗಳೂ ಪ್ರಯಾಣಿಕರೂ ಸೇರಿರುತ್ತಾರೆ ಎಂದು ವರದಿ ಹೇಳುತ್ತದೆ. ಈಗ ಸಖಿಯರ ಸುಖದುಃಖದ ಲೆಕ್ಕಾಚಾರ ನೀವೇ ಮಾಡಿ. ನಿಜವಾಗಿಯೂ ಅವರು ಉಳಿದವರಿಗಿಂತ ಸುಖಿಗಳೇ? ನಿರ್ಣಯ ನಿಮಗೇ ಬಿಟ್ಟದ್ದು.

ಪ್ರತಿಕ್ರಿಯೆ

ಕೆ.ಎಸ್ ನಾಗರಾಜ್

ನಾಗರಿಕರ ಅವಮಾನಕ್ಕೇನು ಪರಿಹಾರವಿದೆಯೇ?

ಚುನಾಯಿತ ಪ್ರತಿನಿಧಿಗಳಿಗೆ ಅವಮಾನವಾದರೆ ಕಾಳಜಿ ತೋರುವ ಸದನ ನಾಗರಿಕರಿಗೆ ಕಚೇರಿಗಳಲ್ಲಿ ಆಗುವ ಅವಮಾನಕ್ಕೆ ದಂಡ ವಿಧಿಸುವವರು ಯಾರು ?

ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಸ್ಪಂದಿಸದೆ ನಿರ್ಲಕ್ಷ್ಯದಿಂದ ವರ್ತಿಸಿದರು ಎಂದು ಸದನದಲ್ಲಿ ಗಂಭೀರವಾಗಿ ಚರ್ಚೆಯಾಗಿ ಸದಸ್ಯರ ಗೌರವಕ್ಕೆ ಧಕ್ಕೆಯಾಗಿದೆ ಎಂದು ತೀರ್ಮಾನಿಸಿ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ನಿರ್ಣಯವನ್ನು ತೆಗೆದುಕೊಂಡಿರುವುದು ಓದಿದಾಗ, ಈ ಪ್ರಶ್ನೆ ಸಹಜವಾಗಿ ಮೂಡಿಬಂದಿದೆ. ಸಾರ್ವಜನಿಕರಿಗೆ ಸರಕಾರಿ ಕಚೇರಿಗಳಲ್ಲಿ ಬೆಳಗಿನ ವೇಳೆಯಲ್ಲಿ ಅಧಿಕಾರಿಗಳು ಭೇಟಿ ಮಾಡಲು ಅವಕಾಶವನ್ನು ನೀಡುವುದಿಲ್ಲ, ಇನ್ನು ಮಧ್ಯಾಹ್ನದ ಅವಧಿಯಲ್ಲಿ ಅವರು ಕಚೇರಿಯಲ್ಲಿ ಇರುವುದಿಲ್ಲ, ಇದ್ದರೂ ಸಭೆಗಳಲ್ಲಿ ಇದ್ದಾರೆ, ಎಂದು ನೆಪ ಹೇಳುತ್ತಾರೆ. ಒಂದು ವೇಳೆ ಭೇಟಿಗೆ ಅವಕಾಶವನ್ನು ನೀಡಿದರೂ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸುವ ಮತ್ತು ಅವರ ಹಿರಿತನಕ್ಕೆ ಗೌರವವನ್ನು ನೀಡುವ ಸಂಸ್ಕೃತಿಯೇ ಇರುವುದಿಲ್ಲ. ಸಾರ್ವಜನಿಕರನ್ನು ಪ್ರಾಣಿಗಳಂತೆ ಕಾಣುತ್ತಾರೆ. ಕುರ್ಚಿಗಳ ಮೇಲೆ ಕೂಡಿಸಿ ಮಾತನಾಡುವ ಸೌಜನ್ಯವೂ ಇರುವುದಿಲ್ಲ. ಪ್ರತಿದಿನವೂ ಸಾರ್ವಜನಿಕರಿಗೆ ಇಂತಹ ಸಹಸ್ರಾರು ಅವಮಾನಗಳು ನಡೆಯುತ್ತಲೇ ಇರುತ್ತದೆ. ಐಎಎಸ್ ಮತ್ತು ಐಪಿಎಸ್ ಹಾಗೂ ಕೆಎಎಸ್ ಅಧಿಕಾರಿಗಳು ದೇವಲೋಕದಿಂದ ಇಳಿದು ಬಂದವರಂತೆ ನಡೆದುಕೊಳ್ಳುತ್ತಾರೆ. ಇವರು ಜನರ ತೆರಿಗೆಯ ಹಣದಲ್ಲಿ ಸಂಬಳವನ್ನು ಮತ್ತು ಸೌಕರ್ಯವನ್ನು ಪಡೆದುಕೊಳ್ಳುತ್ತಾರೆ ಎನ್ನುವುದನ್ನು ಮರೆತುಬಿಟ್ಟಿರುತ್ತಾರೆ. ಇವರನ್ನು ನಿಯೋಜಿಸಿ ಉದ್ಯೋಗವನ್ನು ನೀಡಿರುವುದೇ ಜನಗಳ ಹಿತಕ್ಕಾಗಿ ಆಡಳಿತವನ್ನು ನಡೆಸಲು ಮತ್ತು ಸೂಕ್ತ ಆದೇಶಗಳನ್ನು ಹೊರಡಿಸಲು.

ಬಹಳಷ್ಟು ಅಧಿಕಾರಿಗಳು ಕಚೇರಿಯಲ್ಲಿ ಇದ್ದರೂ ತಮ್ಮ ನೆಂಟರು ಇಲ್ಲವೇ ತಮ್ಮ ಆತ್ಮೀಯರನ್ನು ಚೇಂಬರ್‌ಗಳಲ್ಲಿ ಕೂಡಿಸಿಕೊಂಡು ಹರಟುತ್ತ ಕಾಲ ಕಳೆಯುತ್ತಾರೆ, ಮಧ್ಯಾಹ್ನದ ವೇಳೆಯಲ್ಲಿ ಊಟ ಮಾಡುತ್ತಿದ್ದಾರೆ . ನಂತರದ ಸಮಯದಲ್ಲಿ ವಿಶ್ರಾಂತಿಯಲ್ಲಿದ್ದಾರೆ ಎಂಬ ಮಾತುಗಳು ಸಹಜವಾಗಿ ಕೇಳಿ ಬರುತ್ತದೆ. ಇನ್ನೂ ಇವರು ಕಚೇರಿಯಿಂದ ಹೊರಗೆ ಬಂದರೆ ಇವರ ಎದುರಿಗೆ ಯಾರು ನಿಲ್ಲಬಾರದು. ಇವರು ಬರುತ್ತಿದ್ದಂತೆ ಎಲ್ಲರು ಎದ್ದು ನಿಲ್ಲಬೇಕು. ಇವರು ಮಾತ್ರ ಯಾರ ಕಡೆಗೂ ಕಣ್ಣು ಹಾಯಿಸದೆ ತಮ್ಮ ಪಾಡಿಗೆ ತಾವು ಹೋಗುತ್ತಾರೆ. ಕಚೇರಿಗಳಲ್ಲಿ ಅಟೆಂಡರ್‌ಗಳು ಒಂದೊಂದು ಬಾರಿ ಆಡುವ ರೀತಿಯನ್ನು ನೋಡಿದಾಗ ಆಕ್ರೋಶ ಉಂಟಾಗುತ್ತದೆ. ಇವರ ಪಾಲಿಗೆ ಅಧಿಕಾರಿಗಳು ಆಕಾಶದಿಂದ ಇಳಿದು ಬಂದವರಂತೆ ವರ್ತಿಸುತ್ತಾರೆ. ಜನಸಾಮಾನ್ಯರನ್ನು ಕೀಳಾಗಿ ಕಾಣುತ್ತಾರೆ. ಬಹಳಷ್ಟು ಮಂತ್ರಿಗಳು ಕಚೇರಿಯಲ್ಲಿ ಯಾರನ್ನು ಭೇಟಿ ಮಾಡುವುದಿಲ್ಲ, ಮನೆಗಳಲ್ಲಿ ಯಾರನ್ನು ಸೇರಿಸುವುದಿಲ್ಲ, ಇನ್ನು ಇವರು ವಿಧಾನಸೌಧದ ಕಾರಿಡಾರ್‌ನಲ್ಲಿ ಬಂದರೆ ಹಿರಿಯ ನಾಗರಿಕರಿಗೂ ಎದ್ದು ನಿಲ್ಲುವಂತೆ ಇವರ ಅಂಗರಕ್ಷಕರು ಆದೇಶ ನೀಡುತ್ತಾರೆ. ಇವರು ನಡೆದುಕೊಂಡು ಬಂದರೆ ಊರಿನ ದೇವರ ಪಲ್ಲಕ್ಕಿ ಬಂದಂತೆ ಜನರೆಲ್ಲರೂ ಎದ್ದುನಿಂತು ನಮಸ್ಕರಿಸಬೇಕು ಎನ್ನುವ ದರ್ಪವನ್ನು ತೋರಿಸುತ್ತಾರೆ. ಸೌಜನ್ಯಕ್ಕಾದರೂ ಯಾವ ನಾಯಕರು ಕಾರಿಡಾರ್‌ಗಳಲ್ಲಿ ಕುಳಿತಿರುವ, ನಿಂತಿರುವ ಜನರಿಗೆ ಒಂದು ಬಾರಿಯೂ ತಿರುಗಿ ನಮಸ್ಕರಿಸುವುದಿಲ್ಲ.

ಚುನಾಯಿತ ಪ್ರತಿನಿಧಿಗಳಿಗೆ ಮರ್ಯಾದೆ ನೀಡಲಿಲ್ಲವೆಂದು ಚರ್ಚಿಸುವ ಚುನಾಯಿತ ಪ್ರತಿನಿಧಿಗಳು, ಇಂತಹ ನೂರಾರು ಘಟನೆಗಳನ್ನು ಸಾರ್ವಜನಿಕರು ತಮ್ಮಿಂದ ಮತ್ತು ಅಧಿಕಾರಿಗಳಿಂದ ಅನುಭವಿಸುತ್ತಿರುತ್ತಾರೆ. ಇದರ ಬಗ್ಗೆ ಯಾರಿಗೆ ದೂರ ಬೇಕು. ಅಪರೂಪಕ್ಕೆ ಒಂದಷ್ಟು ಅಧಿಕಾರಿಗಳು ಜನರನ್ನು ಪ್ರೀತಿಯಿಂದ ಗೌರವದಿಂದ ನಡೆಸಿಕೊಳ್ಳುತ್ತಾರೆ. ಅದೇ ರೀತಿಯಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಮಂತ್ರಿಗಳು ಇದ್ದಾರೆ. ಆದರೆ ಅವರ ಸಂಖ್ಯೆ ಬೆರಳೆಣಿಕೆಯಷ್ಟು ಅಷ್ಟೇ. ಮಧ್ಯಾಹ್ನದ ವೇಳೆಯಲ್ಲಿ ಕಚೇರಿಗಳಲ್ಲಿ ಅಧಿಕಾರಿಗಳು ಸಾರ್ವಜನಿಕರನ್ನು ಭೇಟಿ ಮಾಡಬೇಕೆಂಬ ನಾಮಫಲಕ ಗೋಡೆಗಳ ಮೇಲೆ ಅಷ್ಟೇ ಇದೆ. ಅದೇ ರೀತಿಯಲ್ಲಿ ಕಚೇರಿಗಳಲ್ಲಿ ಹಿರಿಯ ನಾಗರಿಕರನ್ನ ಕೂಡಿಸಿ ಮಾತನಾಡಿಸಬೇಕೆಂಬ ಆದೇಶವು ದಾಖಲೆಗಳಲ್ಲಿ ಇದೆ ಅಷ್ಟೇ. ವಯಸ್ಸಿನ ಅಂತರವಿಲ್ಲದೆ ಸಾರ್ವಜನಿಕರನ್ನು ಏಕವಚನದಲ್ಲಿ ಮಾತನಾಡಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಕೊರತೆ ಇಲ್ಲ. ಮುಗ್ಧ ನಾಗರಿಕರು ಇವರು ದೇವರೆಂದು ಭಾವಿಸಿ, ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಇವರ ಮುಂದೆ ಕೈಮುಗಿದು ನಿಲ್ಲುವ ದೃಶ್ಯವನ್ನು ನೋಡಿದಾಗ. ಇವರಿಗೆ ಗೌರವಕ್ಕೆ ಧಕ್ಕೆಯಾದಾಗ ಕೇಳುವವರು ಯಾರು ಎಂಬ ಪ್ರಶ್ನೆ, ಉತ್ತರವಿಲ್ಲದೆ ಉಳಿದುಕೊಂಡಿದೆ.

ವಿವಿಗಳನ್ನು ಬೆಳೆಸುವ ಕುಲಪತಿಗಳು ಬೇಕಾಗಿದ್ದಾರೆ !

ಪ್ರಸ್ತುತ

ಡಾ.ಡಿ.ಸಿ. ನಂಜುಂಡ
vveditoped@gmail.com

ಸರ್ಕಾರದ ಅನುದಾನ ವಿವಿಗಳಿಗೆ ಅವಶ್ಯಕ. ಆದರೆ ಇಂದು ಸರಕಾರದ ಅನುದಾನಕ್ಕಾಗಿ ಕಾಯದೆ ಭಾರತದಲ್ಲಿನ ವಿಶ್ವವಿದ್ಯಾನಿಲಯಗಳನ್ನು ಸುಧಾರಿಸಲು ನವೀನ ತಂತ್ರಗಳು, ಪಾಲುದಾರಿಕೆಗಳು ಮತ್ತು ಹೆಚ್ಚು ಸ್ವಾವಲಂಬಿ ಮಾದರಿಗಳತ್ತ ಬದಲಾವಣೆಯ ತುರ್ತು ಅಗತ್ಯವಿದೆ. ಮುಂದಾಲೋಚನೆಯುಳ್ಳ ಮತ್ತು ಅಂತಹ ಸವಾಲಿಗೆ ಶ್ರೀಕಾರ ಹಾಡಲು ಸಿದ್ಧವಿರುವ ಕುಲಪತಿಗಳು ಇಂದಿನ ಪರಿಸ್ಥಿತಿಯಲ್ಲಿ ವಿವಿಗಳಿಗೆ ಅತ್ಯಗತ್ಯವಾಗಿದ್ದಾರೆ. ಕೈಗಾರಿಕೆಗಳೊಂದಿಗೆ ಪಾಲುದಾರಿಕೆಗಳು, ಸಂಶೋಧನಾ ಅನುದಾನಗಳು, ಕೌಶಲ್ಯ-ಆಧಾರಿತ ಕಾರ್ಯಕ್ರಮಗಳಂತಹ ಪರ್ಯಾಯ ಕೋರ್ಸ್‌ಗಳ ಮೂಲಕ ಆಂತರಿಕ ಆದಾಯವನ್ನು ಗಳಿಸುವಲ್ಲಿ ಗಮನಹರಿಸುವ ದೀರ್ಘಾವಧಿಯ ಯೋಜನೆ ಮತ್ತು ವಿವಿಯನ್ನು ನಾವೀನ್ಯತೆ, ಸಂಶೋಧನಾ ಕೇಂದ್ರವಾಗಿ ಪರಿವರ್ತಿಸುವಲ್ಲಿ ಅವಶ್ಯಕ ಸುಧಾರಣೆಗಳ ಜಾರಿ, ಶಿಕ್ಷಣದ ಗುಣಮಟ್ಟ ಮತ್ತು ಹಣಕಾಸಿನ ಅವಕಾಶಗಳನ್ನು ಸುಧಾರಿಸಲು ವಿದೇಶಿ ವಿಶ್ವವಿದ್ಯಾಲಯಗಳು, ಕಂಪನಿಗಳು ಮತ್ತು ಸಂಶೋಧನಾ ಸಂಸ್ಥೆಗಳೊಂದಿಗೆ ಜಾಗತಿಕ ಪಾಲುದಾರಿಕೆಯನ್ನು ರೂಪಿಸುವ ಯೋಜನೆ ಇಂತಹ ಉಪಕ್ರಮಗಳನ್ನು ಜಾರಿಗೆ ತರಲು ಧೈರ್ಯ ಮತ್ತು ಮನಸ್ಸಿರುವ ಉಪಕುಲಪತಿಗಳು ಇಂದು ರಾಜ್ಯಕ್ಕೆ ತುರ್ತಾಗಿ ಬೇಕಾಗಿದ್ದಾರೆ.

ಹಾಗಾದರೆ ಸರಕಾರದ ಅನುದಾನವನ್ನು ಕಾಯದೆ ವಿವಿಗಳನ್ನು ಕುಲಪತಿಗಳು ಹೇಗೆ ಬೆಳಸಬಹುದು ?

ವಿವಿಗಳಿಗೆ ನಾವೀನ್ಯತೆ ಮತ್ತು ಸಂಶೋಧನೆಯ ಮೇಲೆ ಕೇಂದ್ರೀಕರಣ ಇಂದಿನ ಅಗತ್ಯ. ವಿವಿಗಳು ಉದ್ಯಮ ಸಹಯೋಗಗಳನ್ನು ಪ್ರೋತ್ಸಾಹಿಸುವ ಸಂಶೋಧನೆಯನ್ನು ವಾಣಿಜ್ಯೀಕರಣಗೊಳಿಸುವ ಗುರಿಯನ್ನು ಕುಲಪತಿ ಹೊಂದಿರಬೇಕು. ಮುಖ್ಯವಾಗಿ ಅಂತರ್-ಶಿಸ್ತಿನ ಸಂಶೋಧನೆಗಳನ್ನು ಕಡ್ಡಾಯವಾಗಿ ಉತ್ತೇಜಿಸಬೇಕು. ಪ್ರವೇಶ ಮತ್ತು ಕಲಿಕೆಯ ಫಲಿತಾಂಶಗಳನ್ನು ಸುಧಾರಿಸಲು ಆನ್‌ಲೈನ್ ಕೋರ್ಸ್‌ಗಳಿಂದ ಹಿಡಿದು ಸ್ಮಾರ್ಟ್ ಕ್ಲಾಸ್‌ರೂಮ್‌ಗಳವರೆಗೆ ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಸಂಯೋಜಿಸುವ ದೃಷ್ಟಿ ಹೊಂದಿರುವ ವಿಸಿಗಳು ಇಂದು ಅಗತ್ಯವಾಗಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ಸುಸ್ಥಿರ ಅಭ್ಯಾಸಗಳನ್ನು ಮಾಡಿದರೆ ಆಂತರಿಕ ಖರ್ಚು-ವೆಚ್ಚವನ್ನು ಕಡಿತಗೊಳಿಸಬಹುದು ಮತ್ತು ಆದಾಯವನ್ನು ಸಹ ಗಳಿಸಬಹುದು. ಖಾಸಗಿ ನಿಧಿ ಮತ್ತು ಕಾರ್ಪೊರೇಟ್ ಪ್ರಾಯೋಜಕತ್ವ ಮತ್ತು ಪಾಲುದಾರಿಕೆ ಇಂದು ಬಹಳ ಅಗತ್ಯ. ಸಂಶೋಧನಾ ಕೇಂದ್ರಗಳು, ತರಬೇತಿ ಕಾರ್ಯಕ್ರಮಗಳು ಮತ್ತು ಇಂಟರ್ನ್‌ಶಿಪ್‌ಗಳನ್ನು ಸ್ಥಾಪಿಸಲು ಪ್ರಮುಖ ಕೈಗಾರಿಕೆಗಳೊಂದಿಗೆ ಸಹಕಾರ ಬೇಕು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಗಳನ್ನು ವಿವಿಗಳು ಬಳಸಿಕೊಳ್ಳಬಹುದು. ಪ್ರಾಧ್ಯಾಪಕರು ಸರಕಾರದ ಪ್ರಾಯೋಜಿತ ಸಂಶೋಧನೆ ಯೋಜನೆಗಳನ್ನು ಹೆಚ್ಚಾಗಿ ಪಡೆಯಲು ಪ್ರೋತ್ಸಾಹಿಸಬೇಕು.

ವಿವಿಗಳು ಹೆಚ್ಚುವರಿ ಆದಾಯವನ್ನು ಸೃಷ್ಟಿಸಲು ಉನ್ನತ ಗುಣಮಟ್ಟದ ಆನ್‌ಲೈನ್ ಕೋರ್ಸ್‌ಗಳ ಸರಣಿಯನ್ನು ಅಭಿವೃದ್ಧಿಪಡಿಸಿ, ಆರಂಭಿಸಬೇಕು. ಐಐಟಿ ರೀತಿಯಲ್ಲಿ ವಿವಿಗಳ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಸ್ಟಾರ್ಟ್-ಅಪ್‌ಗಳಲ್ಲಿ ಕೆಲಸ ಮಾಡಲು ನಾವೀನ್ಯತೆ ಕೇಂದ್ರಗಳು ಮತ್ತು ಇನ್ಕ್ಯುಬೇಟರ್‌ಗಳನ್ನು ತೆರೆಯಬೇಕು. ಇದು ಸಹ ಉತ್ತಮ ಆದಾಯವನ್ನು ವಿವಿಗೆ ತರಬಹುದು. ನಿರ್ದಿಷ್ಟ ರಾಷ್ಟ್ರೀಯ/ಅಂತರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳಂತಹ ಸಂಸ್ಥೆಗಳಿಂದ ಅಂತರಾಷ್ಟ್ರೀಯ ಸಂಶೋಧನಾ ನಿಧಿಗಾಗಿ ವಿಶ್ವವಿದ್ಯಾನಿಲಯಗಳು ಅರ್ಜಿ ಸಲ್ಲಿಸಬಹುದು. ಜಂಟಿ ಪೇಟೆಂಟ್‌ಗಳು, ವಾಣಿಜ್ಯೀಕರಣ ಮತ್ತು ಹಂಚಿಕೆಯ ನಿಧಿಗೆ ಕಾರಣವಾಗುವ ಸಂಶೋಧನಾ ಯೋಜನೆಗಳನ್ನು ಕೈಗೊಳ್ಳಲು ಪ್ರಾಧ್ಯಾಪಕರು ಕೈಗಾರಿಕೆಗಳೊಂದಿಗೆ ಸಹಕರಿಸಬೇಕು. ಡೇಟಾ ಸೈನ್ಸ್ ಮುಂತಾದ ಉದಯೋನ್ಮುಖ ಕ್ಷೇತ್ರಗಳಲ್ಲಿ ವಿಶೇಷ ಕೋರ್ಸ್‌ಗಳನ್ನು ಆರಂಭಿಸಬೇಕು. ಇದು ವಿದ್ಯಾರ್ಥಿಗಳಿಗೆ ಮತ್ತು ವೃತ್ತಿಪರರಿಗೆ ಅಮೂಲ್ಯವಾದ ಕೌಶಲ್ಯಗಳನ್ನು ನೀಡುವುದರೊಂದಿಗೆ ವಿವಿಗೆ ಆದಾಯವನ್ನು ಒದಗಿಸುತ್ತದೆ. ನಿಯಮಿತ ಇಂಟರ್ನ್‌ಶಿಪ್‌ಗಾಗಿ ಕೈಗಾರಿಕೆಗಳೊಂದಿಗೆ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ಖಾಸಗಿ ವಲಯದ ಪಾಲುದಾರಿಕೆಯನ್ನು ಪ್ರೋತ್ಸಾಹಿಸುವ ಸರಕಾರಿ ಯೋಜನೆಗಳನ್ನು ಬಳಸಿಕೊಳ್ಳಬೇಕು. ವಿಶ್ವವಿದ್ಯಾನಿಲಯದ ಪರಿಸರ ವ್ಯವಸ್ಥೆಯೊಳಗೆ ಉದ್ಯಮಶೀಲ ಯೋಜನೆಗಳು ಮತ್ತು ವ್ಯಾಪಾರ ಅಭಿವೃದ್ಧಿಯನ್ನು ಬಲಪಡಿಸಲು ವಿವಿಗಳ ಪ್ರಾಧ್ಯಾಪಕರನ್ನು ಪ್ರೋತ್ಸಾಹಿಸಬೇಕು.

ಇಂದು ಕ್ರೌಡ್ ಫಂಡಿಂಗ್ ಎಲ್ಲೆಡೆ ಸಾಮಾನ್ಯವಾಗಿದೆ. ವಿವಿಗಳ ನಿರ್ದಿಷ್ಟ ಅಭಿವೃದ್ಧಿ ಅಗತ್ಯಗಳಿಗಾಗಿ (ಸಂಶೋಧನಾ ಪ್ರಯೋಗಾಲಯಗಳು, ಮೂಲಸೌಕರ್ಯ, ಇತ್ಯಾದಿ) ಕ್ರೌಡ್-ಸೋರ್ಸಿಂಗ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಹಣವನ್ನು ಸಂಗ್ರಹಿಸಲು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ಪ್ರೋತ್ಸಾಹಿಸಬೇಕು. ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮೂಲಕ ವಿಶ್ವವಿದ್ಯಾಲಯದ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವ ಕಡೆಯೂ ವಿವಿಗಳು ಚಿಂತಿಸಬೇಕು. ವಿಶೇಷವಾಗಿ ಹೊಸ ಕ್ಯಾಂಪಸ್‌ಗಳನ್ನು ರಚಿಸುವಾಗ ಅಥವಾ ಲ್ಯಾಬ್‌ಗಳು, ಲೈಬ್ರೆರಿಗಳು ಮತ್ತು ಕ್ರೀಡಾ ಸಂಕೀರ್ಣಗಳಂತಹ ಅತ್ಯಾಧುನಿಕ ಸೌಲಭ್ಯಗಳನ್ನು ಆರಂಭಿಸಲು ಹೊಸ ಮೂಲಸೌಕರ್ಯ ಅಥವಾ ಅಸ್ತಿತ್ವದಲ್ಲಿರುವ ಸೌಲಭ್ಯಗಳನ್ನು ನವೀಕರಿಸಲು ಖಾಸಗಿ ವಲಯದೊಂದಿಗೆ ಬಲವಾದ ಸಂಬಂಧಗಳನ್ನು ನಿರ್ಮಿಸುವುದು ವಿವಿಗಳಿಗೆ ಇಂದು ಅಗತ್ಯ.

ವಿವಿಗಳಿಗೆ ಹೊಸ ಪ್ರಾಧ್ಯಾಪಕರನ್ನು ಆಯ್ಕೆ ಮಾಡುವ ಸಮಯದಲ್ಲಿ ಆರ್ಥಿಕ ಸಮರ್ಥನೀಯತೆಯನ್ನು ನಿರ್ವಹಿಸುವಲ್ಲಿ ಪ್ರಾಯೋಗಿಕ ಅನುಭವವನ್ನು ಹೊಂದಿರುವ ಅಭ್ಯರ್ಥಿಗಳನ್ನು ಆರಿಸಬೇಕು. ಖಾಸಗಿ ವಲಯದ ಧನಸಹಾಯ, ಸಂಶೋಧನಾ ಸಹಯೋಗ ಮತ್ತು ಉದ್ಯಮಶೀಲತೆಯೊಂದಿಗಿನ ಅವರ ಅನುಭವವು ಪ್ರಮುಖವಾಗಿರುತ್ತದೆ. ಶೈಕ್ಷಣಿಕ ಸಂಸ್ಥೆಗಳಿಗೆ ಪರ್ಯಾಯ ನಿಧಿಯ ಮಾದರಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಸಕ್ರಿಯವಾಗಿ ಕೆಲಸ ಮಾಡಿದ ಅಭ್ಯರ್ಥಿಗಳನ್ನು ಗುರುತಿಸಿ ಆಯ್ಕೆ ಮಾಡುವುದನ್ನು ಕುಲಪತಿಗಳು ರೂಡಿಸಿಕೊಳ್ಳಬೇಕು.

ವಿಶ್ವವಿದ್ಯಾನಿಲಯಗಳು ಸಹಕಾರಿ ಸಂಶೋಧನೆ ಅಥವಾ ತರಬೇತಿ ಕಾರ್ಯಕ್ರಮಗಳಿಂದ ಉತ್ಪತ್ತಿಯಾಗುವ ಆದಾಯದ ಪಾಲನ್ನು ಸಂಶೋಧನಾ ಮತ್ತು ಕೈಗಾರಿಕೆಗಳೊಂದಿಗೆ ದೀರ್ಘಾವಧಿಯ ಪಾಲುದಾರಿಕೆಯನ್ನು ರಚಿಸಬಹುದು. ಪೇಟೆಂಟ್‌ಗಳ ಪರವಾನಗಿ ಅಥವಾ ತರಬೇತಿ ಶುಲ್ಕದಂತಹ ಫಲಿತಾಂಶಗಳಿಂದ ಉತ್ಪತ್ತಿಯಾಗುವ ಆದಾಯದ ಒಂದು ಭಾಗವನ್ನು ಸಹ ವಿವಿ ಪಡೆಯಬಹುದು. ವಿದೇಶಗಳಲ್ಲಿರುವಂತೆ ಭಾರತೀಯ ವಿವಿಗಳು ಮಾರುಕಟ್ಟೆಯಲ್ಲಿ ಸಾಫ್ಟ್ ಬಾಂಡ್‌ಗಳನ್ನು ನೀಡಬಹುದು. ಅಲ್ಲಿ ಹಳೆಯ ವಿದ್ಯಾರ್ಥಿಗಳು ಅಥವಾ ಹೂಡಿಕೆದಾರರು ಈ ಬಾಂಡ್‌ಗಳನ್ನು ಸಾಮಾಜಿಕ ಹೂಡಿಕೆಯ ರೂಪವಾಗಿ ಖರೀದಿಸಬಹುದು. ಪ್ರತಿಯಾಗಿ ವಿವಿಗಳು ಅವರಿಗೆ ಸಾಧಾರಣ ಬಡ್ಡಿಯನ್ನು ಪಾವತಿಸಬಹುದು ಅಥವಾ ಸಂಶೋಧನಾ ವರದಿಗಳು, ಪ್ರಕಟಣೆಗಳು ಅಥವಾ ಇನ್ನಿತರ ಶೈಕ್ಷಣಿಕ ವಿಚಾರದಲ್ಲಿ ಸಹಾಯ ನೀಡಬಹುದು.

ವಿದೇಶದಲ್ಲಿ ಹೆಚ್ಚಿನ ವಿವಿಗಳು ಸಾಮಾನ್ಯವಾಗಿ ಸಂಶೋಧನೆ ಮತ್ತು ನಾವೀನ್ಯತೆಯ ಮೂಲಕ ಹಣವನ್ನು ಪಡೆಯುತ್ತವೆ. ಆದರೆ ಭಾರತದಲ್ಲಿ ಸಂಶೋಧನೆಯ ವಾಣಿಜ್ಯೀಕರಣವು ಹೆಚ್ಚಾಗಿ ಅಭಿವೃದ್ಧಿಯಾಗಿಲ್ಲ. ಪೇಟೆಂಟ್, ಪರವಾನಗಿ, ಅಥವಾ ಉದ್ಯೋಗಗಳಿಗೆ ಈ ನಾವೀನ್ಯತೆಗಳನ್ನು ಮಾರಾಟ ಮಾಡಲು ಮೀಸಲಾದ ಘಟಕವನ್ನು ವಿವಿಗಳು ಆರಂಭಿಸಬೇಕು. ವಿಶ್ವವಿದ್ಯಾನಿಲಯಗಳು ತಮ್ಮ ತಂತ್ರಜ್ಞಾನವನ್ನು ಸಂಬಂಧಿಸಿದ ಕಂಪನಿಗಳಿಗೆ ಪರವಾನಗಿ ನೀಡುವ ಮೂಲಕ ಆದಾಯವನ್ನು ಗಳಿಸಬಹುದು. ವಿವಿಗಳು ವಿವಿಧ ಆಂತರಿಕ ಖರ್ಚುವೆಚ್ಚವನ್ನು ಮೊದಲು ನಿಯಂತ್ರಿಸಬೇಕು. ಪೇಪರ್ ಲೆಸ್ ಆಡಳಿತ ಬರಬೇಕು. ಇ-ಗರ್ವನೆನ್ಸ್ ದೇಶದ ಎಲ್ಲಾ ವಿವಿಗಳಲ್ಲಿ ಜಾರಿಯಾಗಬೇಕು. ಶಕ್ತಿಯ ಬಳಕೆ, ತ್ಯಾಜ್ಯ ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಗಳ ಹಾಜರಾತಿಯನ್ನು ನೈಜ-ಸಮಯದ ಡೇಟಾ ವಿಶ್ಲೇಷಣೆಗಳ ಮೂಲಕ ಮೇಲ್ವಿಚಾರಣೆ ಮಾಡುವ ಸ್ಮಾರ್ಟ್ ಕ್ಯಾಂಪಸ್ ರಚನೆಗೆ ಕುಲಪತಿಗಳು ಕ್ರಮವಹಿಸಬೇಕು. ಈ ಎಲ್ಲಾ ಉಪಕ್ರಮಗಳು ಕಾರ್ಯಾಚರಣೆಯ ವೆಚ್ಚವನ್ನು ಕಡಿಮೆ ಮಾಡಬಹುದು ಮತ್ತು ವಿವಿಗಳನ್ನು ಅದರ ಮೂಲಭೂತ ವ್ಯವಸ್ಥೆಗಳನ್ನು ನಡೆಸುವಲ್ಲಿ ಸಂಪೂರ್ಣವಾಗಿ ಸ್ವಾವಲಂಬಿಯಾಗಿಸಬಹುದು. ಇದೆಲ್ಲದಕ್ಕೂ ಕೃತಕ ತಂತ್ರಜ್ಞಾನದ ನೆರವು ಅವಶ್ಯಕ.

ವಿವಿಯೊಳಗೆ ಬಹುಪಯೋಗಿ ನಾವೀನ್ಯತೆ ಲ್ಯಾಬ್‌ಗಳನ್ನು ಸ್ಥಾಪಿಸುವುದು ಇಂದು ಅಗತ್ಯ. ನವೀಕರಿಸಬಹುದಾದ ಇಂಧನ, ಅಥವಾ ನಗರಾಭಿವೃದ್ಧಿಯಂತಹ ನಿರ್ದಿಷ್ಟ ಕ್ಷೇತ್ರಗಳ ಮೇಲೆ ವಿವಿಗಳು ಹೂಡಿಕೆ ಮಾಡಬೇಕು. ಇದಕ್ಕೆ ಸರಕಾರಿ ಮತ್ತು ಖಾಸಗಿ ವಲಯದ ಹೂಡಿಕೆಯನ್ನು ಆಕರ್ಷಿಸಬಹುದು. ಈ ಲ್ಯಾಬ್‌ಗಳು ಸಂಶೋಧನೆ ನಡೆಸುವುದು ಮಾತ್ರವಲ್ಲದೆ ಹೊಸ ಸ್ಟಾರ್ಟ್‌ಅಪ್‌ಗಳಿಗೆ ಇನ್‌ಕ್ಯುಬೇಟರ್‌ಗಳಾಗಿಯೂ ಕಾರ್ಯನಿರ್ವಹಿಸುವಂತಿರಬೇಕು. ವಿವಿಗಳು ಕಂಪನಿಗಳು ಅಥವಾ ಸ್ಟಾರ್ಟ್-ಅಪ್‌ಗಳೊಂದಿಗೆ ಪಾಲುದಾರಿಕೆ ಮಾಡುವ ಮೂಲಕ ಸಂಶೋಧನಾ ಪ್ರಯೋಗಾಲಯಗಳಿಂದ ಆವಿಷ್ಕಾರಗಳು ಮತ್ತು ಪೇಟೆಂಟ್‌ಗಳನ್ನು ಸರಿಸಲು ಸಹಾಯ ಮಾಡುವ ತಂತ್ರಜ್ಞಾನ ವರ್ಗಾವಣೆಯ ಜವಾಬ್ದಾರಿಯುತ ಜಾಲವನ್ನು ರಚಿಸಿ ಬಲಪಡಿಸಬೇಕು. ಈ ಪ್ರಕ್ರಿಯೆಯಲ್ಲಿ, ವಿವಿಗಳು ಪ್ರಾರಂಭಿಕ ಉದ್ಯಮಗಳಲ್ಲಿ ರಾಯಧನ, ನಿಧಿ ಅಥವಾ ಇಕ್ವಿಟಿಯನ್ನು ಸಂಗ್ರಹಿಸಬಹುದು.

ತಮ್ಮ ಆಲೋಚನೆಗಳನ್ನು ವಾಣಿಜ್ಯೀಕರಣಗೊಳಿಸಲು ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ಬೆಂಬಲಿಸುವ ಅಸ್ತಿತ್ವದಲ್ಲಿರುವ ಸ್ಟಾರ್ಟ್-ಅಪ್ ಇನ್ಕ್ಯುಬೇಟರ್‌ಗಳನ್ನು ಸ್ಥಾಪಿಸಬೇಕು. ಈ ಇನ್ಕ್ಯುಬೇಟರ್‌ಗಳು ವೆಂಚರ್ ಕ್ಯಾಪಿಟಲ್ ಫಂಡಿಂಗ್, ಕಾರ್ಪೊರೇಟ್‌ಗಳಿಂದ ಪ್ರಾಯೋಜಕತ್ವಗಳು ಮತ್ತು ಸರಕಾರದ ಅನುದಾನಗಳನ್ನು ವಿವಿಗೆ ತರಬಹುದು. ಉದ್ಯಮಶೀಲ ಜಗತ್ತನ್ನು ಪ್ರವೇಶಿಸಲು ಬಯಸುವ ವಿದ್ಯಾರ್ಥಿಗಳಿಗೆ ಇದು ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ವಿವಿಗಳ ಪ್ರಿಂಟಿಂಗ್ ಪ್ರೆಸ್, ಮೈದಾನ, ಆಡಿಟೋರಿಯಂ ಗಳನ್ನು ಖಾಸಗಿಯವರಿಗೆ ಬಾಡಿಗೆಗೆ ನೀಡಿ ಹಣ ಪಡೆಯಬಹುದು. ಅನೇಕ ಉನ್ನತ ವಿಶ್ವವಿದ್ಯಾನಿಲಯಗಳು ಅಂತರಾಷ್ಟ್ರೀಯ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಅವಳಿ ಡಿಗ್ರಿ ಕಾರ್ಯಕ್ರಮಗಳನ್ನು ನೀಡುತ್ತವೆ. ಭಾರತೀಯ ವಿವಿಗಳು ಇದೇ ರೀತಿಯ ಕಾರ್ಯಕ್ರಮಗಳನ್ನು ಸ್ಥಾಪಿಸಬಹುದು. ಇದು ಭಾರತದಲ್ಲಿ ಅಧ್ಯಯನ ಮಾಡಲು ಬಯಸುವ ವಿದೇಶ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತವೆ. ಇದಕ್ಕಾಗಿ ವಿದೇಶಿ ವಿವಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು.

ಅನೇಕ ಅಂತರಾಷ್ಟ್ರೀಯ ಏಜೆನ್ಸಿಗಳು ತಮ್ಮ ಜಾಗತಿಕ ಅಭಿವೃದ್ಧಿ ಗುರಿಗಳಾದ ಆರೋಗ್ಯ, ಸುಸ್ಥಿರತೆ ಮತ್ತು ಶಿಕ್ಷಣದಂತಹ ಸಂಶೋಧನಾ ಕಾರ್ಯಕ್ರಮಗಳಿಗೆ ಭಾರತದಂತಹ ದೇಶಗಳಿಗೆ ನಿಧಿಯನ್ನು ನೀಡುತ್ತವೆ. ಭಾರತೀಯ ವಿವಿಗಳು ವಿದೇಶಿ ವಿಶ್ವವಿದ್ಯಾನಿಲಯಗಳು, ಅಂತರಾಷ್ಟ್ರೀಯ ಸಂಸ್ಥೆಗಳಿಂದ ಅಂತರರಾಷ್ಟ್ರೀಯ ಅನುದಾನಗಳು ಮತ್ತು ನಿಧಿಗಳನ್ನು ಸಕ್ರಿಯವಾಗಿ ಪಡೆಯುವಂತೆ ಶಿಕ್ಷಕರನ್ನು ಪ್ರೋತ್ಸಾಹಿಸಬೇಕು.

ಭಾರತೀಯ ವಿಶ್ವವಿದ್ಯಾನಿಲಯಗಳು ವಿಶೇಷವಾಗಿ ಉತ್ತಮ ಗುಣಮಟ್ಟದ, ವೆಚ್ಚ-ಪರಿಣಾಮಕಾರಿ ಶಿಕ್ಷಣವನ್ನು ಹುಡುಕುತ್ತಿರುವ ಆಫ್ರಿಕಾ, ಮಧ್ಯಪ್ರಾಚ್ಯ ಮತ್ತು ಆಗ್ನೇಯ ಏಷ್ಯಾದಂತಹ ದೇಶಗಳ ಅಂತರರಾಷ್ಟ್ರೀಯ ವಿದ್ಯಾರ್ಥಿಗಳನ್ನು ಆಕರ್ಷಿಸಲು ಗಮನಹರಿಸಬಹುದು. ಕೆಲವು ಭಾರತೀಯ ವಿಶ್ವವಿದ್ಯಾನಿಲಯಗಳು ಈಗಾಗಲೇ ದುಬೈ, ಸಿಂಗಾಪುರ ಅಥವಾ ಮಾರಿಸಸ್ ನಂತಹ ಸ್ಥಳಗಳಲ್ಲಿ ಸಾಗರೋತ್ತರ ಕ್ಯಾಂಪಸ್‌ಗಳೊಂದಿಗೆ ಶೈಕ್ಷಣಿಕ ವಿನಿಮಯ ಚಟುವಟಿಕೆಗಳನ್ನು ಆರಂಭಿಸಿವೆ.

ವಿಶ್ವವಿದ್ಯಾನಿಲಯಗಳು ಸ್ಥಳೀಯ ಸಮುದಾಯಗಳಿಗೆ ಸೇವೆ ಸಲ್ಲಿಸುವ ಸಾಮಾಜಿಕ ಉದ್ಯಮಗಳನ್ನು ಪ್ರಾರಂಭಿಸಬಹುದು ಮತ್ತು ನಡೆಸಬಹುದು. ಕಡಿಮೆ-ವೆಚ್ಚದ ಆರೋಗ್ಯ ಕ್ಲಿನಿಕ್ ಅಥವಾ ಹಿಂದುಳಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಕ್ರಮಗಳು ಇತ್ಯಾದಿ. ಈ ಉಪಕ್ರಮಗಳಿಂದ ಉತ್ಪತ್ತಿಯಾಗುವ ಆದಾಯವನ್ನು ವಿಶ್ವವಿದ್ಯಾಲಯ ಮರುಹೂಡಿಕೆ ಮಾಡಬಹುದು. ವಿಶ್ವವಿದ್ಯಾನಿಲಯವು ಸ್ಥಳೀಯ ಹಳ್ಳಿಗಳಿಗೆ ಸೌರಶಕ್ತಿ ಉಪಕ್ರಮವನ್ನು ಅಭಿವೃದ್ಧಿಪಡಿಸಬಹುದು ಮತ್ತು ಸಮುದಾಯವು ಯೋಜನೆಯನ್ನು ಬೆಂಬಲಿಸಲು ಕಾರ್ಯಕ್ರಮಗಳಲ್ಲಿ ವಿವಿಗಳ ತಜ್ಞರು ಭಾಗವಹಿಸುವಂತೆ ಮಾಡಬೇಕು. ವಿಶ್ವವಿದ್ಯಾನಿಲಯಗಳು ಸಾವಯವ ಕೃಷಿ, ತ್ಯಾಜ್ಯದಿಂದ ಶಕ್ತಿಯ ಉತ್ಪಾದನೆ ಸೌರಶಕ್ತಿ ನೀರಿನ ಸಂರಕ್ಷಣೆ ಕಾರ್ಯಕ್ರಮಗಳಂತಹ ಸಮರ್ಥನೀಯ ಯೋಜನೆಗಳನ್ನು ಆರಂಭಿಸಿ ಅದು ಸಮುದಾಯಕ್ಕೆ ತಲುಪುವಂತೆ ಮಾಡಬೇಕು ಮತ್ತು ಇದರಿಂದ ಸಂಬಂಧಿಸಿದ ಬಳಕೆದಾರರಿಂದ/ ಸರಕಾರದಿಂದ ಶುಲ್ಕವನ್ನು ಪಡೆಯಬಹುದು. ಈ ತಂತ್ರಗಳನ್ನು ಅಳವಡಿಸಿಕೊಳ್ಳುವ ಮೂಲಕ, ವಿವಿಗಳ ಹಣಕಾಸಿನ ವ್ಯವಸ್ಥೆಯನ್ನು ಮರುರೂಪಿಸಬಹುದು ಮತ್ತು ಸರ್ಕಾರದ ಹಣಕಾಸಿನ ಬೆಂಬಲದ ಅವಲಂಬನೆಯಿಂದ ವಿವಿಗಳನ್ನು ವಿಸಿಗಳು ಕ್ರಮೇಣ ಹೊರತರಬಹುದು.

ಭಾರತದಲ್ಲಿ ಸರಕಾರದ ಅನುದಾನಕ್ಕಾಗಿ ಕಾಯದೆ ವಿಶ್ವವಿದ್ಯಾಲಯಗಳನ್ನು ಸುಧಾರಿಸುವ ಸವಾಲು ಗಣನೀಯವಾಗಿದೆ. ಆದರೆ ಇದು ಅಸಾಧ್ಯದ ಕೆಲಸವೇನೂ ಅಲ್ಲ. ಪಾಲುದಾರಿಕೆಗಳನ್ನು ನಿರ್ಮಿಸುವ ಮತ್ತು ಆದಾಯಕ್ಕಾಗಿ ಹೊಸ ಮಾರ್ಗಗಳನ್ನು ಅನ್ವೇಷಿಸುವ ಬಗ್ಗೆ ಮುಂದಾಲೋಚನೆ, ಚೇತರಿಸಿಕೊಳ್ಳುವ ಮತ್ತು ಪೂರ್ವಭಾವಿಯಾಗಿರುವ ಉಪಾಯಗಳನ್ನು ಕಂಡುಹಿಡಿಯುವುದು ಇಂದು ಅಗತ್ಯ. ಮುಖ್ಯವಾಗಿ ವಿವಿ ಕುಲಪತಿಗಳ ಆಯ್ಕೆ ಪಾರದರ್ಶಕವಾಗಿರಬೇಕು. ಆದರೆ ಇಂದು ಈ ಹುದ್ದೆ ಹಣ ಹೂಡಿಕೆ ಮಾಡಿ ವಾಪಸ್ ಪಡೆಯುವಂತಹ ಹುದ್ದೆಯಾಗಿದೆ. ಅಪಾತ್ರರೇ ಇಲ್ಲಿ ಹೆಚ್ಚಾಗಿ ತುಂಬಿದ್ದಾರೆ. ಮುಖ್ಯವಾಗಿ ಈಗಾಗಲೇ ನಾವೀನ್ಯತೆಯ ಇತಿಹಾಸವನ್ನು ಹೊಂದಿರುವ ಅಥವಾ ಇಂತಹ ರೂಪಾಂತರಗಳನ್ನು ಯಶಸ್ವಿಯಾಗಿ ಮುನ್ನಡೆಸಿದ ವ್ಯಕ್ತಿಗಳನ್ನು ಕುಲಪತಿಗಳನ್ನಾಗಿ ಆಯ್ಕೆ ಮಾಡಬೇಕು. ಇದು ಭಾರತದಲ್ಲಿ ಸಾಧ್ಯವೇ ಎನ್ನುವುದು ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

ಲೇಖಕರು, ಮೈಸೂರು ವಿವಿ ಸಹಾಯಕ ಪ್ರಾಧ್ಯಾಪಕರು

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 319

ಸಮಾಚಾರ ಸಣ್ಣದಲ್ಲ

ಪಾಕ್‌ನ 18 ಜಿಲ್ಲೆಗಳಲ್ಲಿ ಪೋಲಿಯೊ ಪ್ರಕರಣ

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಮತ್ತೆ ಪೋಲಿಯೊ ಪ್ರಕರಣಗಳು ದಾಖಲಾಗಿವೆ. ಇಸ್ತಾನ್‌ಬುಲ್ ಸೇರಿದಂತೆ 4 ಪ್ರಾಂತ್ಯಗಳಲ್ಲಿನ 18 ಜಿಲ್ಲೆಗಳಲ್ಲಿ 'ವೈಲ್ಡ್ ಪೋಲಿಯೊವೈರಸ್ ಟೈಪ್-1' ಪೋಲಿಯೊ ಪ್ರಕರಣಗಳು ಕಂಡುಬಂದಿರುವುದಾಗಿ ಪೋಲಿಯೊ ನಿರ್ಮೂಲನೆಗೆ ಸಂಬಂಧಿಸಿದ ಪಾಕಿಸ್ತಾನದ ಪ್ರಾದೇಶಿಕಮ ಪ್ರಯೋಗಾಲಯ ಹೇಳಿರುವುದಾಗಿ 'ಎಆರ್‌ವೈ' ನ್ಯೂಸ್ ವರದಿ ಮಾಡಿದೆ. ಸಿಂಧ್ ಪ್ರಾಂತ್ಯದಲ್ಲಿನ 12 ಜಿಲ್ಲೆಗಳು, ಪಂಜಾಬ್ ಪ್ರಾಂತ್ಯದಲ್ಲಿನ 2 ಜಿಲ್ಲೆಗಳು, ಬಲೂಚಿಸ್ತಾನದ ಒಂದು ಜಿಲ್ಲೆ, ಖೈಬರ್ ಫಖ್ತುಂತ್ವಾ ಮತ್ತು ಇಸ್ಲಾಮಾಬಾದ್‌ನಲ್ಲಿ ಪೋಲಿಯೊ ವೈರಸ್ ಪ್ರಕರಣಗಳು ಕಂಡುಬಂದಿವೆ.

ಚಾರ್‌ಧಾಮ್ ಯಾತ್ರೆ: 1.65 ಲಕ್ಷ ನೋಂದಣಿ

ಡೆಹರಾಡೂನ್: ಉತ್ತರಾಖಂಡ ರಾಜ್ಯದಲ್ಲಿನ ಚಾರ್‌ಧಾಮ್‌ಗಳಿಗೆ 2025ರಲ್ಲಿ ಯಾತ್ರೆ ಕೈಗೊಳ್ಳುವವರ ನೋಂದಣಿಗಾಗಿ ಆನ್‌ಲೈನ್ ಸೇವೆ ಆರಂಭಿಸಿದ ಮೊದಲ ದಿನವೇ 1.65 ಲಕ್ಷ ಮಂದಿ ನೋಂದಾಯಿಸಿಕೊಂಡಿದ್ದಾರೆ. ಇದು ದಾಖಲೆ ಪ್ರಮಾಣದ ನೋಂದಣಿಯಾಗಿದೆ. 2024ರಲ್ಲಿ ಮೊದಲ ದಿನ 1.50 ಲಕ್ಷ ಮಂದಿ ನೋಂದಾಯಿಸಿಕೊಂಡಿದ್ದರು. ಕೇದಾರ ಕ್ಷೇತ್ರದಲ್ಲಿನ ಶ್ರೀ ಕೇದಾರನಾಥ ಸ್ವಾಮಿಯ ದರ್ಶನಕ್ಕೆ ಹೆಚ್ಚು ಮಂದಿ, ಅಂದರೆ 53,570 ಮಂದಿ ನೋಂದಣಿ ಮಾಡಿಸಿದ್ದಾರೆ. ಉಳಿದಂತೆ ಬದರಿನಾಥಕ್ಕೆ 49,395, ಗಂಗೋತ್ರಿಗೆ 30,933, ಯಮುನೋತ್ರಿಗೆ 30,224 ಭಕ್ತರು ನೋಂದಾಯಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ದೋಡಾ: ಉಗ್ರರ ಅಡಗುದಾಣ ಪತ್ತೆ

ಶ್ರೀನಗರ: ಜಮ್ಮು-ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಭಾರತೀಯ ಸೇನೆ ಭಾನುವಾರ ಭಾರೀ ಕಾರ್ಯಾಚರಣೆ ನಡೆಸಿದ್ದು, ಉಗ್ರರ ದೊಡ್ಡದಾದ ಅಡಗುದಾಣವನ್ನು ಪತ್ತೆ ಮಾಡಿ ಧ್ವಂಸಗೊಳಿಸಿದೆ. ಅದಕ್ಕೂ ಮುನ್ನ ಅಡಗುತಾಣದಲ್ಲಿದ್ದ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆದಿದೆ. ಗುಪ್ತಚರ ಇಲಾಖೆಯ ನಿಖರ ಮಾಹಿತಿ ಆಧರಿಸಿ ಭದೇವಾರ್ದ ಭಲ್ರಾ ಅರಣ್ಯ ಪ್ರದೇಶದಲ್ಲಿ ಸ್ಥಳೀಯ ಪೊಲೀಸರು ಮತ್ತು ಸೇನೆ ವಿಶೇಷ ಕಾರ್ಯಾಚರಣೆ ಗುಂಪು(ಎಸ್‌ಒಜಿ) ಕಾರ್ಯಾಚರಣೆ ನಡೆಸುತ್ತಿವೆ. ಈವರೆಗೆ ಯಾರನ್ನು ಬಂಧನಕ್ಕೊಳಪಡಿಸಿಲ್ಲ. ಆದರೆ, ಸ್ಫೋಟಕ ವಸ್ತು ಹಾಗೂ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದುಬಂದಿದೆ.

ಮೀರತ್ ಹಂತಕರು ಮಾದಕ ವ್ಯಸನಿಗಳು

ಮೀರತ್: ಮರ್ಚೆಂಟ್ ನೇವಿ ಉದ್ಯೋಗಿಯಾಗಿದ್ದ ಪತಿ ಸೌರಭ್ ರಜಪೂತ್‌ನನ್ನು ಮೀರತ್‌ನಲ್ಲಿ ಕೊಂದು 15 ತುಂಡುಗಳಾಗಿ ಕತ್ತರಿಸಿ ಪ್ಲಾಸ್ಟಿಕ್ ಡ್ರಮ್‌ಗೆ ತುಂಬಿ ಕಾಂಕ್ರೀಟ್‌ನಿಂದ ಸೀಲ್ ಮಾಡಿದ್ದ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಪತ್ನಿ ಮುಸ್ಕಾನ್ ರಸ್ತೋಗಿ ಮತ್ತು ಆಕೆಯ ಪ್ರಿಯಕರ ಸಾಹಿಲ್ ಶುಕ್ಲಾ ಇಬ್ಬರೂ ಅತಿಯಾದ ಮಾದಕ ವ್ಯಸನಿಗಳು ಎಂಬುದು ಬಯಲಾಗಿದೆ. ಜೈಲಿನಲ್ಲಿಯೂ, 'ನಮಗೆ ಊಟ ಬೇಡ. ಡ್ರಗ್ಸ್ ಕೊಡಿ ಪ್ಲೀಸ್' ಎಂದು ವರಾತ ತೆಗೆದಿದ್ದಾರೆ ಎಂದು ಜೈಲಿನ ಅಧಿಕಾರಿಗಳೇ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಗಾಂಜಾ ಮತ್ತು ಮಾರ್ಫಿನ್ ಇಂಜೆಕ್ಷನ್‌ಗಳನ್ನು ಕೊಡಿ ಸಾಹಿಲ್ ವರಾತ ಹಚ್ಚಿದ್ದಾನೆ. ಮುಸ್ಕಾನ್ ಕೂಡಾ ಮಾದಕ ದ್ರವ್ಯ ಬೇಕು ಎನ್ನುತ್ತಿದ್ದಾಳೆ. ಇಬ್ಬರೂ ಆರೋಪಿಗಳು ಮಾದಕ ದ್ರವ್ಯವಿಲ್ಲದೇ ಬದುಕಲು ಸಾಧ್ಯವೇ ಇಲ್ಲ ಎನ್ನುವಂತೆ ವರ್ತಿಸುತ್ತಿದ್ದಾರೆ.

ದಕ್ಷಿಣ ಕೊರಿಯಾ: ಕಾಡ್ಗಿಚ್ಚಿಗೆ 4 ಸಾವು

ಉಲ್ಸಾನ್: ದಕ್ಷಿಣ ಕೊರಿಯದ ಆಗ್ನೇಯ ನಗರ ಉಲ್ಸಾನ್, ಸಮೀಪದ ಜಿಯೊಂಗ್ಸಾಂಗ್ ಪ್ರಾಂತ್ಯದಲ್ಲಿ ಕಾಡ್ಗಿಚ್ಚು ಹರಡಿದ್ದು, ಸ್ಯಾಂಚಿಯಾಂಗ್‌ನಲ್ಲಿ 4 ಜೀವಗಳು ಬಲಿಯಾಗಿವೆ. ವಿವಿಧೆಡೆ ಆರು ಮಂದಿ ಗಾಯಗೊಂಡಿದ್ದಾರೆ. ಸಾವಿರಾರು ನಿವಾಸಿಗಳು ಮನೆ ತೊರೆಯುವಂತಾಗಿದೆ ಎಂದು ಸುರಕ್ಷತಾ ಸಚಿವಾಲಯ ತಿಳಿಸಿದೆ. ಸ್ಯಾಂಚಿಯಾಂಗ್ ಪ್ರದೇಶದಲ್ಲಿ 260 ನಿವಾಸಿಗಳನ್ನು ತೆರವುಗೊಳಿಸಿ ಸುರಕ್ಷಿತ ಸ್ಥಳಗಳಿಗೆ ಕಳುಹಿಸಲಾಗಿದೆ. ಉಲ್ಸಾನ್ ಮತ್ತು ನೆರೆಯ ಜಿಯೊಂಗ್ಸಾಂಗ್ ಪ್ರಾಂತ್ಯದಲ್ಲಿ 620 ಜನರು ಮನೆ ತೊರೆದು ಆಶ್ರಯ ತಾಣಗಳಲ್ಲಿ ಆಶ್ರಯ ಪಡೆದಿದ್ದಾರೆ. ದಕ್ಷಿಣ ಸ್ಯಾಂಚಿಯಾಂಗ್ ಕೌಂಟಿಯಲ್ಲಿ ಕಾಡ್ಗಿಚ್ಚು ನಂದಿಸಲು ಅಗ್ನಿಶಾಮಕ ದಳದವರು ಶ್ರಮಿಸುತ್ತಿದ್ದಾರೆ. ಕಾಡ್ಗಿಚ್ಚು ನಂತರ ದಕ್ಷಿಣ ಕೊರಿಯ ಸರಕಾರ ಶನಿವಾರ ತುರ್ತು ಪರಿಸ್ಥಿತಿ ಘೋಷಿಸಿದೆ. ಕಾಡ್ಗಿಚ್ಚಿನಿಂದ ಶನಿವಾರ ರಾತ್ರಿ ವೇಳೆಗೆಲ್ಲಾ 847 ಹೆಕ್ಟೇರ್ ಸುಟ್ಟುಹೋಗಿದೆ.

{ ನವೀನ್ ಪಟ್ನಾಯಕ್ } ಒಡಿಶಾ ಮಾಜಿ ಸಿಎಂ

ಲೋಕಸಭಾ ಕ್ಷೇತ್ರಗಳ ಸಂಖ್ಯೆ ನಿರ್ಧರಿಸಲು ಜನಸಂಖ್ಯೆ ಮಾತ್ರ ಮಾನದಂಡ ಆಗಬಾರದು. ಒಡಿಶಾ ರಾಜ್ಯದ ಜನರ ಹಿತಾಸಕ್ತಿ ರಕ್ಷಿಸಲು ಬಿಜು ಜನತಾ ದಳ(ಬಿಜೆಡಿ) ಪಕ್ಷ ಸರ್ವ ರೀತಿಯ ಪ್ರಯತ್ನಗಳನ್ನು ಮಾಡಲಿದೆ. ಕ್ಷೇತ್ರ ಮರು ವಿಂಗಡಣೆ ಪ್ರಕ್ರಿಯೆ ಆರಂಭಿಸುವುದಕ್ಕೂ ಮುನ್ನ ಕೇಂದ್ರ ಸರಕಾರ ದೇಶದಲ್ಲಿನ ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ವಿಸ್ತೃತ ಚರ್ಚೆ ನಡೆಸಬೇಕು.

ಮತಗಟ್ಟೆ ಸಮಸ್ಯೆ ಪರಿಹಾರ ಯತ್ನ | 4123 ಇಆರ್‌ಒ, 36 ಸಿಇಒ, 788 ಡಿಇಒ ನಿಯೋಜನೆ

ಮತಗಟ್ಟೆ ಸಮಸ್ಯೆ ಪರಿಹಾರಕ್ಕೆ ದೇಶಾದ್ಯಂತ ಸರ್ವಪಕ್ಷ ಸಭೆ

ದೆಹಲಿ: ದೇಶದ ವಿವಿಧ ರಾಜ್ಯಗಳಲ್ಲಿನ ವಿಧಾನಸಭಾ ಕ್ಷೇತ್ರಗಳಲ್ಲಿ ಬಾಕಿ ಇರುವ ಬೂತ್(ಮತಗಟ್ಟೆ) ಮಟ್ಟದ ಸಮಸ್ಯೆಗಳನ್ನು ಪರಿಹರಿಸಲು 4000ಕ್ಕೂ ಹೆಚ್ಚು ಚುನಾವಣಾ ನೋಂದಣಿ ಅಧಿಕಾರಿಗಳನ್ನು (ಇಆರ್‌ಒ) ತೊಡಗಿಸಿಕೊಂಡು ದೇಶಾದ್ಯಂತ ಸರ್ವಪಕ್ಷ ಸಭೆಗಳನ್ನು ನಡೆಸಲು ಭಾರತೀಯ ಚುನಾವಣಾ ಆಯೋಗ ನಿರ್ಧರಿಸಿದೆ.

ರಾಜ್ಯಗಳಲ್ಲಿ ಬೂತ್ ಮಟ್ಟದ ಸಮಸ್ಯೆಗಳು, ದೂರುಗಳು ಬಾಕಿಯಾಗಿದ್ದು, ಅವುಗಳನ್ನು ಮುಂಬರುವ ಚುನಾವಣೆಗಳಿಗೂ ಮುನ್ನ ಪರಿಹರಿಸಲೆಂದೇ ಈ ಕ್ರಮ ಕೈಗೊಳ್ಳಲಾಗಿದೆ. ವಿಧಾನಸಭಾ ಕ್ಷೇತ್ರಗಳಲ್ಲಿ ಬಾಕಿ ಇರುವ ಮತಗಟ್ಟೆ ಮಟ್ಟದ ಸಮಸ್ಯೆಗಳನ್ನು ಪರಿಹರಿಸಲು 4,123 ಚುನಾವಣಾ ನೋಂದಣಿ ಅಧಿಕಾರಿ(ಇಆರ್‌ಒ)ಗಳು ಸರ್ವಪಕ್ಷ ಸಭೆಗಳನ್ನು ನಡೆಸಲು ಅದಾಗಲೇ ಆರಂಭಿಸಿದ್ದಾರೆ. ಈ ಸಭೆಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೂ ಅವಕಾಶವಿರಲಿದೆ. ಅವರ ಸಲಹೆಗಳನ್ನು ಪಡೆದುಕೊಂಡು ಆದ್ಯತೆ ಮೇರೆಗೆ ಪರಿಹಾರ ಕಂಡುಕೊಳ್ಳಲಾಗುವುದು. ಮತಗಟ್ಟೆ ಮಟ್ಟದ ಈ ಸಭೆಗಳನ್ನು ಮಾ.31ರವರೆಗೂ ನಡೆಸಲಾಗುವುದು ಎಂದು ಭಾರತೀಯ ಚುನಾವಣಾ ಆಯೋಗದ(ಇಸಿಐ) ಮೂಲಗಳು ತಿಳಿಸಿವೆ.

28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳ 788 ಜಿಲ್ಲಾ ಚುನಾವಣಾ ಅಧಿಕಾರಿ(ಡಿಇಒ)ಗಳು ಮತ್ತು 36 ಮುಖ್ಯ ಚುನಾವಣಾ ಅಧಿಕಾರಿ(ಸಿಇಒ)ಗಳಿಗೂ ಜಿಲ್ಲೆ ಮತ್ತು ರಾಜ್ಯ ಹಾಗೂ ಕೇಂದ್ರಾಡಳಿತ ಮಟ್ಟದಲ್ಲಿ ಬಾಕಿಯಾಗಿರುವ ಮತಗಟ್ಟೆಗೆ ಸಂಭಂಧಿಸಿ ಸಮಸ್ಯೆಗಳೆಲ್ಲವನ್ನೂ ಪರಿಹರಿಸಲು ಸಭೆ ನಡೆಸುವಂತೆ ನಿರ್ದೇಶನ ನೀಡಲಾಗಿದೆ. 1950 ಮತ್ತು 1951ರ ಜನಪ್ರತಿನಿಧಿ ಕಾಯ್ದೆ(ಆರ್‌ಪಿಎ), 1960ರ ಮತದಾರರ ನೋಂದಣಿ ನಿಯಮಗಳು, 1961ರ ಚುನಾವಣಾ ನಡವಳಿಕೆ ನಿಯಮಗಳು ಮತ್ತು ಭಾರತೀಯ ಚುನಾವಣಾ ಆಯೋಗ ಹೊರಡಿಸಿದ ಮಾರ್ಗಸೂಚಿ, ಕೈಪಿಡಿ ಮತ್ತು ಸೂಚನೆಗಳನ್ನು ಅನುಸರಿಸಿ ನಿಯಮಗಳ ಚೌಕಟ್ಟಿನೊಳಗೆ ಮತಗಟ್ಟೆ ಮಟ್ಟದ ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ ಎಂದು ಆಯೋಗದ ಮೂಲಗಳು ತಿಳಿಸಿವೆ.

ಪಕ್ಷಗಳ ಸ್ವಾಗತ

ಮತಗಟ್ಟೆಗಳಲ್ಲಿ ಬಾಕಿ ಇರುವ ಸಮಸ್ಯೆಗಳನ್ನು ಪರಿಹರಿಸಲು ಚುನಾವಣಾ ಆಯೋಗ ತಳಮಟ್ಟದಲಿ ಈ ಅಭಿಯಾನ ಹಮ್ಮಿಕೊಂಡಿರುವುದನ್ನು ಎಲ್ಲಾ ರಾಜಕೀಯ ಪಕ್ಷಗಳು ಸ್ವಾಗತಿಸಿ ಮೆಚ್ಚುಗೆ ವ್ಯಕ್ತಪಡಿಸಿವೆ ಎಂದು ಆಯೋಗ ಹೇಳಿಕೊಂಡಿದೆ. ಬಾಕಿ ಇರುವ ಯಾವುದೇ ಮತಗಟ್ಟೆ ಸಮಸ್ಯೆಗಳನ್ನು ಕಾಲಮಿತಿಯಲ್ಲಿ ಪರಿಹರಿಸಲು ಚುನಾವಣಾ ಅಧಿಕಾರಿಗಳೊಂದಿಗೆ ತೊಡಗಿಸಿಕೊಳ್ಳುವಂತೆ ಎಲ್ಲಾ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳಿಗೆ ಮನವಿ ಮಾಡಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಪಕ್ಷ ಪ್ರತಿನಿಧಿಗಳ ಪಾತ್ರ ಪ್ರಮುಖ

ದೆಹಲಿಯಲ್ಲಿ(ಮಾ.4) ನಡೆದ ಎಲ್ಲಾ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳ ಸಿಇಒಗಳು ಮತ್ತು ಪ್ರತಿ ರಾಜ್ಯದ ಒಬ್ಬ ಡಿಇಒ ಮತ್ತು ಇಆರ್‌ಒ ಸಭೆಗಳಲ್ಲಿ ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ಜ್ಞಾನೇಶ್ ಕುಮಾರ್ ನೇತೃತ್ವದ ಆಯೋಗದ ನಿರ್ದೇಶನಗಳಿಗೆ ಅನುಗುಣವಾಗಿ ಇಂತಹ ಕ್ರಮ ಕೈಗೊಳ್ಳುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಅಲ್ಲದೆ, ಬೂತ್ ಮಟ್ಟದ ರಾಜಕೀಯ ಪಕ್ಷಗಳ ಏಜೆಂಟ್‌ಗಳು, ಪೋಲಿಂಗ್ ಏಜೆಂಟ್‌ಗಳು, ಮತ ಎಣಿಕೆ ಕೇಂದ್ರದ ಏಜೆಂಟ್‌ಗಳು ಮತ್ತು ಚುನಾವಣಾ ಏಜೆಂಟ್‌ಗಳು, ಪಕ್ಷಗಳ ಅಧಿಕೃತ ಪ್ರತಿನಿಧಿಗಳು ಈ ಪ್ರಕ್ರಿಯೆಯ ಭಾಗವಾಗಿದ್ದಾರೆ. ಚುನಾವಣಾ ಪ್ರಕ್ರಿಯೆಗಳಲ್ಲಿ ನಿರ್ದಿಷ್ಟ ಪಾತ್ರ ವಹಿಸುತ್ತಾರೆ ಎಂದು ಆಯೋಗ ಹೇಳಿದೆ.

ನ.24ರಂದು ಮಸೀದಿ ಸರ್ವೆಗೆ ವಿರೋಧ- ಗಲಭೆ

ಸಂಭಾಲ್ ಹಿಂಸಾಚಾರ: ಮಸೀದಿ ಅಧ್ಯಕ್ಷ ಬಂಧನ

ಸಂಭಾಲ್: ಉತ್ತರ ಪ್ರದೇಶದ ಸಂಭಾಲ್‌ನಲ್ಲಿ ಕಳೆದ ನ.24ರಂದು ನಡೆದ ಹಿಂಸಾಚಾರಕ್ಕೆ ಸಂಬಂಧಿಸಿ ನಗರದ ಶಾಹಿ ಜಮಾ ಮಸೀದಿಯ ಸದರ್(ಅಧ್ಯಕ್ಷ) ಜಾಫರ್ ಅಲಿ ಅವರನ್ನು ಪೊಲೀಸರು ಭಾನುವಾರ ಬಂಧಿಸಿ ವಶಕ್ಕೆ ತೆಗೆದುಕೊಂಡಿದ್ದಾರೆ.

ಜಾಫರ್ ಅಲಿ ಅವರನ್ನು ಭಾನುವಾರ ಮಧ್ಯಾಹ್ನ ಅವರ ಮನೆಯಿಂದ ಸಂಭಾಲ್ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದೆ. ಅಲ್ಲಿ 2024ರ ನ.24ರ ಹಿಂಸಾಚಾರ ಘಟನೆಗಳಿಗೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ (ಎಸ್‌ಐಟಿ) ವಿಚಾರಣೆ ನಡೆಸಿದೆ. ಜಾಫರ್ ಅಲಿ ಅವರನ್ನು ಶೀಘ್ರವೇ ಚಂದೌರಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಬಂಧನ ಪ್ರಕ್ರಿಯೆಯನ್ನು ತೀವ್ರ ಸ್ವರೂಪದ ಪರಿಶೀಲನೆ ಮತ್ತು ಹಲವು ಸುತ್ತುಗಳ ವಿಚಾರಣೆಯ ಬಳಿಕವೇ ನಡೆಸಲಾಗಿದೆ ಎಂದು ಸಂಭಾಲ್ ಪೊಲೀಸರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ನ್ಯಾಯಾಲಯದ ಆದೇಶದ ಮೇರೆಗೆ ಉತ್ತರ ಪ್ರದೇಶದ ಸಂಭಾಲ್‌ನಲ್ಲಿ 2024ರ ನ.24ರಂದು ಶಾಹಿ ಜಮಾ ಮಸೀದಿಯ ಸರ್ವೆ ನಡೆಸಲಾಗಿತ್ತು. ಹಿಂದೂ ದೇವಾಲಯವಿದ್ದ ಸ್ಥಳದಲ್ಲಿ ಮಸೀದಿ ನಿರ್ಮಾಣವಾಗಿದೆ ಎಂದು ಹಿಂದೂ ಸಂಘಟನೆಗಳು ನ್ಯಾಯಾಲಯದಲ್ಲಿ ದಾವೆ ಹೂಡಿದ್ದವು. ವಿಚಾರಣೆ ನಡೆಸಿದ ಕೋರ್ಟ್, ಮಸೀದಿ ಮತ್ತು ಸುತ್ತಲಿನ ಪ್ರದೇಶಗಳ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಪ್ರಾಚೀನ ಮತ್ತು ಪುರಾತತ್ವ ಇಲಾಖೆ(ಎಎಸ್‌ಐ)ಗೆ ಆದೇಶಿಸಿತ್ತು. ಅಧಿಕಾರಿಗಳ ತಂಡ ಮಸೀದಿ ಸರ್ವೆ ಮಾಡಲು ಹೋದಾಗ ಸಾವಿರಾರು ಜನರು ಸೇರಿ ಕಲ್ಲುತೂರಿ ಹಿಂಸಾಚಾರ ಆರಂಭಿಸಿ ದ್ದರು. ಈ ಘಟನೆಯಲ್ಲಿ ಐವರು ಮೃತಪಟ್ಟು ಹಲವರು ಗಾಯಗೊಂಡರು. ಜಾಫರ್ ಅಲಿ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ್ದಾರೆಂದು ಪೊಲೀಸರು ಆರೋಪಿಸಿದ್ದಾರೆ.

ದೆಹಲಿ ಹೈಕೋರ್ಟ್ ನ್ಯಾ.ಮು ವಿರುದ್ಧ ಆರೋಪ

ಜಡ್ಜ್ ಮನೆಯಲ್ಲಿ ನಗದು ವರದಿ ಪ್ರಕಟಿಸಿದ ಸುಪ್ರೀಂ

ದೆಹಲಿ: ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಮನೆಯಲ್ಲಿ ಅಪಾರ ಪ್ರಮಾಣದ ನಗದು ಪತ್ತೆಯಾದ ಬಗ್ಗೆ ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಆಂತರಿಕ ತನಿಖೆ ನಡೆಸಿ ಅದರ ವರದಿಯನ್ನು ಸುಪ್ರೀಂಕೋರ್ಟ್ ಸಲ್ಲಿಸಿದ್ದಾರೆ.

ನ್ಯಾ.ಯಶವಂತ್ ವರ್ಮ ಮನೆಯಲ್ಲಿ ನಗದು ಪತ್ತೆ ಪ್ರಕರಣದಲ್ಲಿ ವಿಸ್ತೃತ ತನಿಖೆ ಅಗತ್ಯವಿದೆ ಎಂದು ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ತಮ್ಮ 25 ಪುಟಗಳ ತನಿಖಾ ವರದಿಯಲ್ಲಿ ಹೇಳಿದ್ದಾರೆ. ಈ ವರದಿ ಮತ್ತು ವಿಡಿಯೊವನ್ನು ಸುಪ್ರೀಂ ಕೋರ್ಟ್ ತನ್ನ ಅಧಿಕೃತ ವೆಬ್ ತಾಣದಲ್ಲಿ ಶನಿವಾರ ತಡರಾತ್ರಿ ಪ್ರಕಟಿಸಿದೆ.

ತನಿಖಾ ವರದಿಯಲ್ಲಿ ತಮ್ಮ ವಿರುದ್ಧ ಮಾಡಲಾಗಿರುವ ಎಲ್ಲಾ ಆರೋಪಗಳನ್ನು ನ್ಯಾ.ಯಶವಂತ್ ವರ್ಮಾ ನಿರಾಕರಿಸಿದ್ದಾರೆ. ಬೆಂಕಿ ಹೊತ್ತಿದಾಗ ಶಮನ ಕಾರ್ಯದಲ್ಲಿದ್ದ ಅಗ್ನಿಶಾಮಕ ದಳ ಸಿಬ್ಬಂದಿಗೆ ನಗದು ಕಂಡುಬಂದಿದೆ ಎಂದು ಹೇಳಲಾದ ಕೊಠಡಿ ನಮ್ಮ ಮನೆ ಅಲ್ಲ, ಅದೊಂದು ಔಟ್‌ಹೌಸ್. ನ್ಯಾಯಮೂರ್ತಿ ಮತ್ತು ಕುಟುಂಬದವರಯ ವಾಸಿಸುವ ಮುಖ್ಯ ಕಟ್ಟಡವಲ್ಲ ಎಂದು ಅವರು ಹೇಳಿಕೊಂಡಿದ್ದಾರೆ. ಕುಟುಂಬದ ಯಾರೊಬ್ಬರೂ ಅಲ್ಲಿ ಯಾವುದೇ ಹಣ ಇಟ್ಟಿಲ್ಲ ಎಂದು ವಾದಿಸಿದ್ದಾರೆ.

ಈ ಮಧ್ಯೆ, ಆ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯ ಮಾಡುವ ಪಾಲಿಕೆ ಸಿಬ್ಬಂದಿಗಳು ನ್ಯಾಯಮೂರ್ತಿಗಳ ಮನೆಯ ಸುತ್ತ ಮುತ್ತ ಕಸ ಗುಡಿಸುವಾಗ ಅರೆಬರೆ ಸುಟ್ಟಿರುವ 500 ರು. ನೋಟುಗಳ ಅಲ್ಲಲ್ಲಿ ಬಿದ್ದಿರುವುದು ನಮಗೆ ಕಂಡಿದೆ ಎಂದೂ ಸುದ್ದಿಸಂಸ್ಥೆಗಳ ಬಳಿ ಹೇಳಿದ್ದಾರೆ.

ಫೈಜರ್, ಕ್ವಾಲ್ಕಂ, ಬೋಯಿಂಗ್ ಸಿಇಒ ತಂಡ

ಸುಂಕ ಸಮರ: ಚೀನಾಕ್ಕೆ ಅಮೆರಿಕ ನಿಯೋಗ ಭೇಟಿ

ಬೀಜಿಂಗ್: ಚೀನಾ ಮತ್ತು ಅಮೆರಿಕ ಸಂಘರ್ಷ ನಡೆಸುವ ಬದಲು ಪರಸ್ಪರ ಮಾತುಕತೆ ನಡೆಸಬೇಕಿದೆ ಎಂದು ಚೀನಾ ಪ್ರಧಾನಿ ಲಿ ಕ್ವಿಯಾಂಗ್ ಭಾನುವಾರ ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಬಲ ಬೆಂಬಲಿಗ, ಸಂಸದ ಸ್ಟೀವ್ ಡೈನ್ಸ್ ಅವರನ್ನು ಬೀಜಿಂಗ್‌ನಲ್ಲಿ ಭಾನುವಾರ ಭೇಟಿ ಮಾಡಿದ ಪ್ರಧಾನಿ ಲಿ ಕ್ವಿಯಾಂಗ್ ಅವರು, ಎರಡೂ ದೇಶಗಳ ನಡುವಿನ ಸಂಘರ್ಷ ಕೊನೆಗೊಳಿಸಬೇಕಿದೆ. ಮುಖ್ಯವಾಗಿ ಆಮದು ಸುಂಕ ವಿಚಾರದಲ್ಲಿನ ಗೊಂದಲಗಳನ್ನು ಪರಿಹರಿಸಿಕೊಳ್ಳಬೇಕಿದೆ. ಅದಕ್ಕಾಗಿ ಮುಕ್ತ ಮಾತುಕತೆಯೊಂದೇ ಸರಿಯಾದ ಮಾರ್ಗ ಎಂದು ಹೇಳಿದರು.

ಡೊನಾಲ್ಡ್ ಟ್ರಂಪ್ 2.0 ಸರಕಾರ ಅಮೆರಿಕದಲ್ಲಿ ಆಡಳಿತ ಶುರು ಮಾಡಿದ ಬಳಿಕ ಚೀನಾಗೆ ಅಮೆರಿಕದಿಂದ ಸಂಸದರೊಬ್ಬರ ಅಧಿಕೃತ ಮೊದಲ ಭೇಟಿ ಇದಾಗಿದೆ. ಡೈನ್ಸ್ ಅವರೊಂದಿಗೆ ಫೆಡೆಕ್ಸ್ ಕಾರ್ಪೊರೇಷನ್ ಸಿಇಒ ರಾಜ್ ಸುಬ್ರಮಣಿಯನ್, ಬೋಯಿಂಗ್ ಕಂಪನಿ ಹಿರಿಯ ಉಪಾಧ್ಯಕ್ಷ ಬ್ರೆಂಡನ್ ನೆಲ್ಸನ್, ಕ್ವಾಲ್ಕಂ ಸಿಇಒ ಕ್ರಿಸ್ಟಿಯಾನೊ ಆಮನ್ ಮತ್ತು ಫಾರ್ಮಾ ಕ್ಷೇತ್ರದ ಫೈಜರ್ ಕಂಪನಿ ಸಿಇಒ ಆಲ್ಬರ್ಟ್ ಬೌರಿಯಾ ಸೇರಿದಂತೆ ಅಮೆರಿಕದ ಹಲವು ವಾಣಿಜ್ಯೋದ್ಯಮಿಗಳೂ ಬೀಜಿಂಗ್‌ಗೆ ಆಗಮಿಸಿದ್ದಾರೆ.

ಚೀನಾ ಸರಕುಗಳ ಮೇಲೆ ಅಮೆರಿಕದ ಡೊನಾಲ್ಡ್ ಟ್ರಂಪ್ ಸರಕಾರ ಶೇ.25ರಷ್ಟು ಆಮದು ಸುಂಕ ವಿಧಿಸಿದ್ದು, ಏ.2ರಿಂದ ಜಾರಿಗೆ ಬರಲಿದೆ. ಅದಕ್ಕೆ ಪ್ರತಿಯಾಗಿ ಚೀನಾ ಸರಕಾರವೂ ಅಮೆರಿಕದ ವಿವಿಧ ಉತ್ಪನ್ನಗಳಿಗೆ ಅಷ್ಟೇ ಪ್ರಮಾಣದ ಆಮದು ಸುಂಕ ವಿಧಿಸಿದೆ. ಈ ಸುಂಕ ಸಮರವನ್ನು ಕೊನೆಗೊಳಿಸಲೆಂದೇ ಸಂಸದ ಡೈನ್ಸ್ ನೇತೃತ್ವದಲ್ಲಿ ಉದ್ಯಮಿಗಳ ನಿಯೋಗ ಭೇಟಿ ನೀಡಿದೆ ಎನ್ನಲಾಗಿದೆ.

ಚೀನಾ ಪ್ರಧಾನಿ ಲೀ ಕ್ವಿಯಾಂಗ್ ಅವರನ್ನು ಅಮೆರಿಕ ಸಂಸದ ಸ್ಟೀವ್ ಡೈನ್ಸ್ ಭಾನುವಾರ ಭೇಟಿಯಾಗಿ ಮಾತುಕತೆ ನಡೆಸಿದರು.

ಬೆಲ್ಜಿಯಂನಲ್ಲಿ ವಂಚಕ ವಜ್ರೋದ್ಯಮಿ ಚೋಕ್ಸಿ

ಮುಂಬೈ: ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ಸಾವಿರಾರು ಕೋಟಿ ರು. ಸಾಲ ಪಡೆದು ಮರು ಪಾವತಿ ಮಾಡದೇ ದೇಶದಿಂದಲೇ ಓಡಿಹೋಗಿರುವ ವಂಚಕ ವಜ್ರೋದ್ಯಮಿ ಮೆಹುಲ್ ಚೋಕ್ಸಿ ಬೆಲ್ಜಿಯಂ ದೇಶದ ಆಂಟ್ವೆರ್ಪ್‌ನಲ್ಲಿ ನೆಲೆಸಿರುವುದು ದೃಢಪಟ್ಟಿದೆ. 65 ವರ್ಷದ ಚೋಕ್ಸಿ ಪತ್ನಿ ಪ್ರೀತಿ ಚೋಕ್ಸಿ ಜತೆಗೆ ಬ್ರೆಜಿಲ್‌ನಲ್ಲಿ ವಾಸಿಸುತ್ತಿದ್ದಾನೆ. ಘೋಷಿತ ಅಪರಾಧಿ ಚೋಕ್ಸಿಯನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಭಾರತ ಸರಕಾರ ಬೆಲ್ಜಿಯಂ ದೇಶಕ್ಕೆ ಮನವಿ ಮಾಡಿದೆ. ಅಲ್ಲದೇ, ಭಾರತೀಯ ಅಧಿಕಾರಿಗಳು, ಬೆಲ್ಜಿಯಂ ಸರಕಾರದ ಅಧಿಕಾರಿಗಳನ್ನು ಸಂಪರ್ಕಿಸಿ ಆದಷ್ಟೂ ಬೇಗ ಹಸ್ತಾಂತರ ಪ್ರಕ್ರಿಯೆ ಆರಂಭಿಸುವಂತೆ ಕೋರಿದ್ದಾರೆ ಎಂದು ವರದಿಯಾಗಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ 13,850 ಕೋಟಿ ರು.ಗಳನ್ನು ವಂಚಿಸಿದ ಆರೋಪದಡಿ ಮೆಹುಲ್ ಚೋಕ್ಸಿ ವಿರುದ್ಧ ಪ್ರಕರಣ ದಾಖಲಾಗಿದ್ದು, ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯ(ಇ.ಡಿ)ಕ್ಕೆ ಪ್ರಮುಖವಾಗಿ ಚೋಕ್ಸಿ ಬೇಕಾಗಿದ್ದಾನೆ, 2018ರಲ್ಲಿ ಭಾರತದಿಂದ ಫಲಾಯನ ಮಾಡಿ ಹಲವು ದೇಶಗಳಲ್ಲಿ ತಲೆ ಮರೆಸಿಕೊಂಡಿದ್ದ. ಈಗ 2023ರ ನ.15ರಿಂದ ರೆಸಿಡೆನ್ಸಿ ಪೌರತ್ವ ಕಾರ್ಡ್ ಪಡೆದು ಬೆಲ್ಜಿಯಂನಲ್ಲಿ ಕಾನೂನುಬದ್ಧವಾಗಿ ವಾಸಿಸುತ್ತಿದ್ದಾನೆ. ಆತನ ಪತ್ನಿ ಬೆಲ್ಜಿಯಂನವರಾಗಿರುವುದರಿಂದ ಪೌರತ್ವ ಕಾರ್ಡ್ ಪಡೆಯಲು ಚೋಕ್ಸಿಗೆ ಅವಕಾಶವಾಗಿದೆ ಎನ್ನಲಾಗಿದೆ. ಆರೋಗ್ಯ ಪೂರ್ಣ ಹದಗೆಟ್ಟಿದ್ದರಿಂದ ವೈದ್ಯಕೀಯ ಚಿಕಿತ್ಸೆಗಾಗಿ ಕೆರಿಬಿಯನ್ ದ್ವೀಪ ರಾಷ್ಟ್ರ ಆಂಟಿಗುವಾ ಮತ್ತು ಬಾರ್ಬುಡಾಕ್ಕೆ ತೆರಳಿದ್ದ ಚೋಕ್ಸಿ, ಬಳಿಕ ದ್ವೀಪರಾಷ್ಟ್ರದ ಪ್ರಜೆಯಾಗಿ ಕೆಲ ಕಾಲ ಅಲ್ಲಿಯೇ ಉಳಿದಿದ್ದ.



ವಂಚಕ ವಜ್ರೋದ್ಯಮಿಯ ಭಾರತಕ್ಕೆ ಕರೆತರಲು ಸಿದ್ಧತೆ

ವರ್ಜೀನಿಯ: ಗುಜರಾತ್ ತಂದೆ-ಪುತ್ರಿ ಹತ್ಯೆ

ವರ್ಜೀನಿಯ: ಅಮೆರಿಕದ ವರ್ಜೀನಿಯದ ಆಟೊಮ್ಯಾಕ್ ಕೌಂಟಿಯಲ್ಲಿ ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ ಕೆಲಸ ಮಾಡುತ್ತಿದ್ದ ಭಾರತ ಮೂಲದ ತಂದೆ-ಮಗಳನ್ನು ಬಂದೂಕುಧಾರಿಯೊಬ್ಬ ಗುಂಡಿಕ್ಕಿ ಕೊಂದಿದ್ದಾನೆ. ಪೊಲೀಸರು ತ್ವರಿತ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂದೂಕು ಸಮೇತ ಬಂಧಿಸಿದ್ದಾರೆ.

ಮಾ.20ರ ಬೆಳಗ್ಗೆ 5.30ಕ್ಕೆ ಕೊಲೆ ಆರೋಪಿ ಮದ್ಯ ಖರೀದಿಸಲು ಅಂಗಡಿಗೆ ಬಂದಿದ್ದ. ನಂತರ, ಅಂಗಡಿಯನ್ನು ರಾತ್ರಿ ಏಕೆ ತೆರೆಯಲಿಲ್ಲ ಎಂದು ಅಂಗಡಿ ನಿರ್ವಹಿಸುವ ಪ್ರದೀಪ್ ಭಾಯ್ ಪಟೇಲ್ ಜತೆ ಜಗಳವಾಡಿದ. ಬಳಿಕ ಬಂದೂಕು ತೆಗೆದು ತಂದೆ ಮತ್ತು ಮಗಳ ಮೇಲೆ ಗುಂಡು ಹಾರಿಸಿದ. ಗುಜರಾತ್ ಮೂಲದ ಪ್ರದೀಪ್ ಭಾಯ್ ಪಟೇಲ್ (56) ಮತ್ತು ಮಗಳು ಉರ್ವಿ ಪಟೇಲ್(24) ಗುಂಡೇಟಿನಿಂದ ಗಂಭೀರವಾಗಿ ಗಾಯಗೊಂಡ ರಕ್ತದ ಮಡುವಿನಲ್ಲಿ ಬಿದ್ದಿದ್ದಾರೆ. ತಲೆಗೆ ಗುಂಡು ಹೊಕ್ಕಿದ್ದರಿಂದ ಪ್ರದೀಪ್ ಬಾಯ್ ಸ್ಥಳದಲ್ಲೇ ಸಾವನ್ನಪ್ಪಿದರೆ, ಗಂಭೀರವಾಗಿ ಗಾಯಗೊಂಡಿದ್ದ ಮಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಆಕೆ ಆಸ್ಪತ್ರೆಯಲ್ಲಿ ಅಸುನೀಗಿದ್ದಾಳೆ ಎಂದು ವರ್ಜೀನಿಯ ಪೊಲೀಸರು ಹೇಳಿದ್ದಾರೆ. ತಂದೆ-ಮಗಳು ಗುಜರಾತ್ ರಾಜ್ಯದ ಮೆಹ್ಸಾನಾದ ಕನೋಡಾ ಗ್ರಾಮದವರು. ಪಾಟಿದಾರ್ ಸಮುದಾಯಕ್ಕೆ ಸೇರಿದವರು. ಪ್ರದೀಪ್ ಪಟೇಲ್, ಅವರ ಪತ್ನಿ ಹಂಸಬೆನ್ ಮತ್ತು ಮಗಳು ಉರ್ವಿ 6 ವರ್ಷಗಳ ಹಿಂದೆ ಅಮೆರಿಕಕ್ಕೆ ಹೋಗಿ ನೆಲೆಸಿದ್ದರು. ತಮ್ಮ ಸಂಬಂಧಿಕರ ಒಡೆತನದ ಡಿಪಾರ್ಟ್ಮೆಂಟಲ್ ಸ್ಟೋರ್‌ನಲ್ಲಿ ತಂದೆ-ಮಗಳು ಕೆಲಸ ಮಾಡುತ್ತಿದ್ದರು. ಮೃತ ಪ್ರದೀಪ್‌ಗೆ ಇನ್ನೂ ಇಬ್ಬರು ಹೆಣ್ಣು ಮಕ್ಕಳಿದ್ದು, ಒಬ್ಬರು ಅಹಮದಾಬಾದ್‌ನಲ್ಲಿ, ಇನ್ನೊಬ್ಬರು ಕೆನಡಾದಲ್ಲಿ ಇದ್ದಾರೆ ಎಂದು ತಿಳಿದುಬಂದಿದೆ.



ಬೆಂಗಳೂರಿನ ಪ್ರಕಾಶ್ ರಾಜ್-ಸರಿತಾ 2018ರಲ್ಲಿ ವಿಚ್ಛೇದನ | ಮಗು ತಂದೆ ವಶಕ್ಕೆ

11ರ ಮಗನ ಕೊಂದು ತಾಯಿ ಆತ್ಮಹತ್ಯೆ ಯತ್ನ

ನ್ಯೂಯಾರ್ಕ್: ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಭಾರತ ಮೂಲದ ಸರಿತಾ ರಾಮರಾಜು(48) 11 ವರ್ಷದ ಮಗ ಯತಿನ್ ರಾಮರಾಜುವನ್ನು ಡಿಸ್ನಿಲ್ಯಾಂಡ್‌ಗೆ 3 ದಿನಗಳ ಪ್ರವಾಸಕ್ಕೆ ಕರೆದೊಯ್ದು, ಅಲ್ಲಿ ಹೋಟೆಲ್ ಕೊಠಡಿಯಲ್ಲಿ ಮಗನ ಕತ್ತು ಸೀಳಿ ಕೊಲೆ ಮಾಡಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಗನನ್ನು ನೋಡಿದ ಬಳಿಕ ತಾವೂ ವಿಷದ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಆ ಬಳಿಕ ಮಹಿಳೆ ಪೊಲೀಸರಿಗೆ ಕರೆ ಮಾಡಿ ತಾವು ಮಾಡಿದ ಕೃತ್ಯದ ಮಾಹಿತಿ ನೀಡಿದ್ದಾರೆ. ದೌಡಾಯಿಸಿ ಬಂದ ಪೊಲೀಸರು ತಕ್ಷಣವೇ 11 ವರ್ಷದ ಬಾಲಕನನ್ನು ಆಸ್ಪತ್ರೆಗೆ ಕರೆದೊಯ್ದು ಸೇರಿಸಿದ್ದಾರೆ. ಆದರೆ ಬಾಲಕನ ಜೀವ ಉಳಿಸಲು ಸಾಧ್ಯವಾಗಿಲ್ಲ.

ಸರಿತಾ ರಾಮರಾಜು ಮತ್ತು ಬೆಂಗಳೂರಿನ ಪ್ರಕಾಶ್ ರಾಜ್ 2018ರಲ್ಲಿ ವಿಚ್ಛೇದನ ಪಡೆದಿದ್ದರು. ಪೋಷಕರಿಬ್ಬರ ಸಿಟ್ಟು 4 ವರ್ಷದ ಬಾಲಕನ ಭವಿಷ್ಯಕ್ಕೆ ಮಾರಕವಾಗುತ್ತದೆ ಎಂಬುದನ್ನು ಕಂಡುಕೊಂಡ ಆರೆಂಜ್ ಕೌಂಟಿ ಜಿಲ್ಲಾ ನ್ಯಾಯಾಲಯ, ಬಾಲಕನನ್ನು ತಂದೆಯ ಸ್ವಾದೀನಕ್ಕೆ ಕೊಟ್ಟಿತ್ತು. ತಾಯಿ ನಿಯಮಿತವಾಗಿ ಮಗನ ಭೇಟಿ ಮಾಡಬಹುದು ಅಷ್ಟೇ ಎಂದು ಆದೇಶಿಸಿತ್ತು. ಬಳಿಕ ಸರಿತಾ ಬೇರೆ ರಾಜ್ಯಕ್ಕೆ ತೆರಳಿ ನೆಲೆಸಿದ್ದರು.

ನಿಗದಿಯಂತೆ ಮಾ.17ರಂದು ಮಗನ ಭೇಟಿಗೆ ತೆರಳಿದ ಸರಿತಾ, ಕೆಲವು ದಿನ ಪ್ರವಾಸಕ್ಕೆ ತೆರಳುವುದಾಗಿ ಹೇಳಿ ಮಗನನ್ನು ತಮ್ಮ ಜತೆ ಕರೆದೊಯ್ದಿದ್ದರು. ತಾಯಿ-ಮಗ, ಸ್ಯಾಂಟಾ ಅನಾ ಎಂಬಲ್ಲಿ ಹೋಟೆಲ್‌ನಲ್ಲಿ ತಂಗಿದ್ದರು. ಡಿಸ್ನಿಲ್ಯಾಂಡ್ ಸುತ್ತಾಟಕ್ಕೆ 3 ದಿನಗಳ ಪಾಸ್ ಕೂಡಾ ಖರೀದಿಸಿದ್ದರು. ಬಾಲಕ ಕೂಡ ತಾಯಿ ಜತೆ ಖುಷಿಯಿಂದಿದ್ದ. ಮಾ.19ರಂದು ಮಗನನ್ನು ತಂದೆಯ ವಶಕ್ಕೆ ಒಪ್ಪಿಸಬೇಕಿತ್ತು. ಆದರೆ, ಅದಕ್ಕೂ ಮುನ್ನವೇ ಹರಿತವಾದ ಚಾಕುವಿನಿಂದ ಮಗನ ಕತ್ತು ಸೀಳಿ ಕೊಂದಿದ್ದಾರೆ. ಬಳಿಕ ಮಾತ್ರೆ ನುಂಗಿ ಆತ್ಮಹತ್ಯೆಗೆ ಮುಂದಾಗಿದ್ದಾರೆ. ಅದೇ ವೇಳೆ, ಪೊಲೀಸರಿಗೆ ಕರೆಮಾಡಿ ವಿಷಯ ತಿಳಿಸಿದ್ದಾರೆ.

ಸರಿತಾ ತಮ್ಮ ಮಗನನ್ನು ಕೊಲ್ಲಲು ಕಾರಣ ಏನು ಎಂಬುದನ್ನು ತಿಳಿಯಲು ತನಿಖೆ ನಡೆಸಲಾಗುತ್ತಿದೆ.

ಪ್ರಕಾಶ್ ರಾಜು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವರು ಎಂಬುದು ನ್ಯಾಯಾಲಯದ ದಾಖಲೆಗಳಿಂದ ತಿಳಿದುಬಂದಿದೆ.

ನರೇಂದ್ರ ಮೋದಿ ಏ.5 ಲಂಕಾ ಪ್ರವಾಸ

ಕೊಲಂಬೊ: ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಏ.5ರಂದು ಶ್ರೀಲಂಕಾಗೆ ಭೇಟಿ ನೀಡಲಿದ್ದಾರೆ ಎಂದು ಲಂಕಾ ಅಧ್ಯಕ್ಷ ಅನುರ ಕುಮಾರ ದಿಸಾನಾಯಕೆ ಸಂಸತ್ತಿನಲ್ಲಿ ಹೇಳಿದ್ದಾರೆ.

2024ರಲ್ಲಿ ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸಾನಾಯಕೆ ದೆಹಲಿಗೆ ಭೇಟಿ ನೀಡಿದ್ದರು. ಆ ಸಂದರ್ಭ ಭಾರತ-ಶ್ರೀಲಂಕಾ ನಡುವೆ ಮಾಡಿಕೊಳ್ಳಲಾದ ಹಲವು ಮಹತ್ವದ ಒಪ್ಪಂದಗಳನ್ನು ಅಂತಿಮಗೊಳಿಸಲು ಪ್ರಧಾನಿ ಮೋದಿ ಏ.5ರಂದು ಕೊಲಂಬೊಗೆ ಬರಲಿದ್ದಾರೆ. ಬಳಿಕ ಪೂರ್ವ ಬಂದರು ಜಿಲ್ಲೆ ತ್ರಿಸ್ಮಾಯಿಲಿಯಲ್ಲಿ ಸಂಪೂರ್ ವಿದ್ಯುತ್ ಸ್ಥಾವರ ನಿರ್ಮಾಣ ಕಾರ್ಯಕ್ಕೂ ಇದೇ ವೇಳೆ ಆರಂಭಿಸಲಾಗುವುದು ಎಂದು ಅಧ್ಯಕ್ಷರು ಸಂಸತ್ತಿನಲ್ಲಿ ತಿಳಿಸಿದ್ದಾರೆ. ಈ ವಿಚಾರವನ್ನು ಕೊಲಂಬೊ ಮಾಧ್ಯಮಗಳು ವರದಿ ಮಾಡಿವೆ. ಭಾರತ ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ ಸೌರ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಒಪ್ಪಿಕೊಂಡಿದೆ. ಲಂಕಾ ಸರಕಾರ ಮತ್ತು ಭಾರತ ಸರಕಾರ ಟ್ರಿಂಕಾಮಲಿಯ ಸಂಪೂರ್‌ನಲ್ಲಿ 50 ಮೆಗಾವಾಟ್(ಹಂತ 1) ಮತ್ತು 70 ಮೆಗಾವಾಟ್ (ಹಂತ 2) ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಒಪ್ಪಿದೆ ಎಂದು ಸಚಿವೆ ನಲಿಂದಾ ಜಯಥಿಸ್ಸಾ ಈ ಮೊದಲೇ ಹೇಳಿದ್ದರು.

ಇಸ್ರೇಲ್ ದಾಳಿಯಲ್ಲಿ ಹಮಾಸ್ ನಾಯಕ ಹತ

ಡಿಯರ್‌ಅಲ್-ಬಲಹ್: ಗಾಜಾ ಪಟ್ಟಿಯ ದಕ್ಷಿಣ ಭಾಗದಲ್ಲಿ ಶನಿವಾರ ರಾತ್ರಿ ಇಸ್ರೇಲ್ ವಾಯುಪಡೆ ದಾಳಿ ಮುಂದುವರಿಸಿದ್ದು, ಹಮಾಸ್‌ನ ಹಿರಿಯ ರಾಜಕೀಯ ನಾಯಕ ಸಲಾಹ್ ಬರ್ದಾವಿಲ್ ಮತ್ತು ಪತ್ನಿ ಹತರಾಗಿದ್ದಾರೆ. ಇತರೆ 17 ಪ್ಯಾಲೆಸ್ತೀನಿಯನ್ ಪ್ರಜೆಗಳೂ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಇದೇ ವೇಳೆ, ಗಾಜಾ ನಗರದಿಂದ ಜನರನ್ನು ಸ್ಥಳಾಂತರಿಸಲು ಆದೇಶಿಸಲಾಗಿದೆ. ಕಟ್ಟಡ ಗುರಿಯಾಗಿಸಿ ಇಸ್ರೇಲ್ ಸೈನ್ಯ ದಾಳಿ ನಡೆಸಿದೆ. ಇಸ್ರೇಲ್ ಬಾಂಬ್ ದಾಳಿಯಿಂದ ಹಲವು ಮಕ್ಕಳು ಗಾಯಗೊಂಡಿದ್ದು, ಮಕ್ಕಳನ್ನು ಗಾಜಾ ಆಸ್ಪತ್ರೆಗೆ ದಾಖಲಿಸಲಾಗಿದೆ. ದಕ್ಷಿಣ ಗಾಜಾದಲ್ಲಿರುವ ಯುರೋಪ್ ಮತ್ತು ಕುವೇತ್ ಆಸ್ಪತ್ರೆಗಳಲ್ಲಿ 17 ಶವಗಳನ್ನು ಇರಿಸಲಾಗಿದೆ. ಬರ್ದಾವಿಲ್ ಗುಂಪಿನ ರಾಜಕೀಯ ವಿಭಾಗದ ಪ್ರಸಿದ್ಧ ಸದಸ್ಯರಾಗಿದ್ದರು. ಪ್ಯಾಲೆಸ್ತೀನ್ ಸಂಸತ್ ಸದಸ್ಯ ಸಲಾಹ್ ಬರ್ದಾವಿಲ್, ದಕ್ಷಿಣ ನಗರ ಖಾನ್ ಯೂನಿಸ್ ಬಳಿ ನಡೆದ ದಾಳಿಯಲ್ಲಿ ಹತರಾದರು ಎಂದು ಹಮಾಸ್ ರಾಜಕೀಯ ವಿಭಾಗ ಹೇಳಿದೆ. ಇನ್ನೊಂದೆಡೆ, ಹಮಾಸ್ ಜತೆ ಮೈತ್ರಿ ಮಾಡಿಕೊಂಡಿರುವ ಯೆಮೆನ್‌ನ ಹೌತಿ ಉಗ್ರರು ಇಸ್ರೇಲ್ ಮೇಲೆ ಮತ್ತೊಂದು ಕ್ಷಿಪಣಿ ಉಡಾಯಿಸಿದ್ದಾರೆ.

ಉ.ಪ್ರ: ಪತ್ನಿ-ಮಕ್ಕಳಿಗೆ ಬಿಜೆಪಿ ನಾಯಕ ಗುಂಡು

ಸಹರಾನ್‌ಪುರ: ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ ಬಿಜೆಪಿ ನಾಯಕ ಯೋಗೇಶ್ ರೋಹಿಲ್ಲಾ ಎಂಬವರು ಪತ್ನಿ ಹಾಗೂ ಮೂರು ಮಕ್ಕಳ ಮೇಲೆ ಗುಂಡು ಹಾರಿಸಿದ್ದು, ಇಬ್ಬರು ಮಕ್ಕಳು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮತ್ತೋರ್ವ ಮಗ ಹಾಗೂ ಪತ್ನಿ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಗೋ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಗುಂಡಿಕ್ಕಿದದ ನಂತರ ರೋಹಿಲ್ಲಾ ಅವರೇ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಯೋಗೇಶ್‌ರನ್ನು ಬಂಧಿಸಿ ಕೃತ್ಯಕ್ಕೆ ಬಳಸಿದ ಪಿಸ್ತೂಲನ್ನು ವಶಪಡಿಸಿಕೊಂಡಿದ್ದಾರೆ. ವಿಧಿವಿಜ್ಞಾನ ತಂಡ ಸ್ಥಳಕ್ಕೆ ಆಗಮಿಸಿ ಸಾಕ್ಷ್ಯ ಸಂಗ್ರಹ ನಡೆಸಿದೆ. ಮಾಹಿತಿ ಸಿಕ್ಕ ಬಳಿಕ ಸಹರಾನ್‌ಪುರ ಎಸ್‌ಎಸ್‌ಪಿ ರೋಹಿತ್ ಸಜ್ವಾನ್ ಮತ್ತು ಇತರೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಸ್ಥಳ ಪರಿಶೀಲನೆ ನಡೆಸಿದರು. ಪತ್ನಿ ಮೇಲೆ ಅನುಮಾನಗೊಂಡಿದ್ದ ಯೋಗೇಶ್ ನಿತ್ಯ ಜಗಳವಾಡುತ್ತಿದ್ದ. ಯೋಗೇಶ್ ಕೆಲ ದಿನಗಳಿಂದ ತೀವ್ರ ಮಾನಸಿಕ ಒತ್ತಡದಲ್ಲಿದ್ದರು. ಭಾನುವಾರ ಬೆಳಗ್ಗೆ ಶುರುವಾದ ಜಗಳ ಅತಿರೇಕಕ್ಕೆ ಹೋಗಿದೆ. ಸಿಟ್ಟಿನ ಭರದಲ್ಲಿ ಪಿಸ್ತೂಲ್ ಹೊರತೆಗೆದ ಯೋಗೇಶ್, ಹೆಂಡತಿ, 3 ಮಕ್ಕಳಿಗೂ ಗುಂಡಿಕ್ಕಿದ್ದಾರೆ.

ರಜೆ ಚೀಟಿಯಿಂದಲೇ ಪಿಎಸ್‌ಐ ಕೆಲಸಕ್ಕೆ ಕುತ್ತು!

ಜೈಪುರ: ರಾಜಸ್ಥಾನದ ಜುಂಜುನು ನಗರದಲ್ಲಿನ ಪೊಲೀಸ್ ಠಾಣೆಯೊಂದರ ಮಹಿಳಾ ಸಬ್ ಇನ್‌ಸ್ಪೆಕ್ಟರ್(ಪಿಎಸ್‌ಐ) ರಜೆ ಚೀಟಿ ಬರೆದು ಕೆಲಸವನ್ನೇ ಕಳೆದುಕೊಳ್ಳುವ ಅಪಾಯಕ್ಕೆ ಸಿಲುಕಿದ್ದಾರೆ. ಕೇವಲ ಒಂದು ರಜೆ ಚೀಟಿಯಿಂದ ಪಿಎಸ್‌ಐ ಹುದ್ದೆಯನ್ನೇ ಕಳೆದುಕೊಳ್ಳಲು ಸಾಧ್ಯವೇ ಎಂದು ಬಹಳಷ್ಟು ಮಂದಿ ಅಚ್ಚರಿಗೊಳಗಾಗಿದ್ದಾರೆ.

ರಜೆ ಚೀಟಿಯಲ್ಲಿದ್ದ ವಿಪರೀತ ತಪ್ಪುಗಳು(ಸ್ಪೆಲ್ಲಿಂಗ್ ಮಿಸ್ಟೇಕ್) ಮಹಿಳಾ ಪಿಎಸ್‌ಐ ಪ್ರತಿಭೆಯನ್ನು ಅನುಮಾನಿಸುವಂತೆ ಮಾಡಿದೆ. ಅಷ್ಟೇ ಅಲ್ಲದೇ, ವಂಚನೆ ಆರೋಪದಡಿ ಸದ್ಯ ಮಹಿಳಾ ಪಿಎಸ್‌ಐ ಮೋನಿಕಾ ಬಂಧನಕ್ಕೊಳಗಾಗಿದ್ದಾರೆ. ಪಿಎಸ್‌ಐ ಮೋನಿಕಾ ರಜೆ ಚೀಟಿಯಲ್ಲಿನ ವಿಪರೀತ ದೋಷಗಳನ್ನು ಕಂಡು ಹಿರಿಯ ಪೊಲೀಸ್ ಅಧಿಕಾರಿಗಳು ಅನುಮಾನಗೊಂಡು ತನಿಖೆ ನಡೆಸಿದಾಗ ಆಕೆ 2021ರಲ್ಲಿ ಪಿಎಸ್‌ಐ ಹುದ್ದೆಗೆ ನಡೆದ ಲಿಖಿತ ಪರೀಕ್ಷೆಯಲ್ಲಿ ಬ್ಲ್ಯೂ ಟೂತ್ ಸಾಧನ ಬಳಸಿ ನಕಲು ಮಾಡಿರುವುದು ಪತ್ತೆಯಾಗಿದೆ. ಪರೀಕ್ಷೆಯಲ್ಲಿ ನಕಲು ಮಾಡಲು ಅವಕಾಶ ಮಾಡಿಕೊಡಲು 15 ಲಕ್ಷ ರು. ಲಂಚ ಕೊಟ್ಟಿರುವುದೂ ಬೆಳಕಿಗೆ ಬಂದಿದೆ. ಹೀಗೆ ನಕಲು ಮಾಡಿದ್ದರಿಂದಲೇ ಮೋನಿಕಾಗೆ ಹಿಂದಿಯಲ್ಲಿ 184, ಸಾಮಾನ್ಯ ಜ್ಞಾನದಲ್ಲಿ 161 ಅಂಕ ಬಂದಿವೆ. ಆದರೆ ಸಂದರ್ಶನದಲ್ಲಿ ಕೇವಲ 15 ಅಂಕ ಸಿಕ್ಕಿದೆ. ಲಿಖಿತ ಪರೀಕ್ಷೆ ಅಂಕ ಆಧರಿಸಿ ಕೆಲಸ ಗಿಟ್ಟಿಸಿಕೊಂಡಿದ್ದ ಮೋನಿಕಾ ರಜೆ ಚೀಟಿಯಲ್ಲಿ ಬರೆದು ಸಿಕ್ಕಿಬಿದ್ದಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ

ಬಾಗಲಕೋಟೆ: ಪ್ರಸಕ್ತ ಸಾಲಿನಲ್ಲಿ ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಜಾತಿಗೆ ಸೇರಿದ 292 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 162 ಅಭ್ಯರ್ಥಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳಾದ ಮೈಸೂರು ಫುಡ್ ಕ್ರಾಫ್ಟ್ ಇನ್ಸಿಟ್ಯೂಟ್ ಹಾಗೂ ಬೆಂಗಳೂರು ಇನ್ಸಿಟ್ಯೂಟ್ ಆಫ್ ಹೋಟೆಲ್ ಮ್ಯಾನೆಜಮೆಂಟ್ ಇವರ ಮೂಲಕ ವಸತಿ ಸಹಿತ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ತರಬೇತಿ ಕಾರ್ಯಕ್ರಮದಡಿ ಮಲ್ಟಿ ಕ್ಯೂಸಿನ್ ಕುಕ್ ವಿಭಾಗದಲ್ಲಿ 2ನೇ ಹಂತದ ತರಬೇತಿಯನ್ನು ಏ. 15 ರಿಂದ ಪ್ರಾರಂಭಿಸಲಾಗುತ್ತಿದೆ. ಈ ತರಬೇತಿಗೆ ಕನಿಷ್ಠ ವಯಸ್ಸು 20 ರಿಂದ 45 ವರ್ಷ ಮೀರಿರಬಾರದು. ತರಬೇತಿಯ ಅವಧಿಯು 5 ತಿಂಗಳು ಆಗಿದ್ದು, ತರಬೇತಿಯ ವೇಳೆ 2 ಸಾವಿರ ರು.ಗಳ ಜತೆಗೆ ವಸತಿ, ಊಟೋಪಚಾರ ಮತ್ತು ಯೂನಿಫಾರ್ಮ ನೀಡಲಾಗುವುದು. ತರಬೇತಿ ಜತೆಗೆ ರಾಜ್ಯದ ವಿವಿಧ ಪಂಚತಾರಾ ಹಾಗೂ ಇತರೆ ಹೋಟೆಲ್‌ಗಳಲ್ಲಿ ಆನ್‌ಲೈನ್ ಜಾಬ್ ಟ್ರೈನಿಂಗ್ ಸಹ ನೀಡಲಾಗುವುದು. ಮಾಹಿತಿಗೆ ದೂ ಸಂ.08354-235709ಕ್ಕೆ ಕಚೇರಿ ಸಮಯದಲ್ಲಿ ಸಂಪರ್ಕಿಸಿ.

ಪಿಎಂ ಅವಾರ್ಡ್ ಫಾರ್ ಯೋಗಾ ಪ್ರಶಸ್ತಿಗೆ ಅರ್ಜಿ

ಬಾಗಲಕೋಟೆ: ಕೇಂದ್ರ ಸರಕಾರದ ವತಿಯಿಂದ ಯೋಗ ಕ್ರೀಡೆಯಲ್ಲಿ ಅತ್ಯುನ್ನತವಾದ ಕೊಡುಗೆಯನ್ನು ನೀಡಿರುವಂತಹ ಕ್ರೀಡಾಪಟುಗಳಿಗೆ ಅಥವಾ ಯೋಗ ಸಂಸ್ಥೆಗಳಿಗೆ ಪ್ರಧಾನಮಂತ್ರಿಗಳು ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಮಟ್ಟದ ಅತ್ಯುನ್ನತ ಯೋಗ ಪ್ರಶಸ್ತಿಯನ್ನು ಘೋಷಿಸಿದೆ. ಅದರಂತೆ ಪಿ.ಎಂ ಅವಾರ್ಡ ಫಾರ್ ಯೋಗ-2025 ಪ್ರಶಸ್ತಿಗಾಗಿ ಯೋಗ ಕ್ರೀಡಾಪಟುಗಳು ಅಥವಾ ಯೋಗ ಕ್ರೀಡಾ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ ಮೂಲಕ ಇದೇ 31 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ ಸಂ.08354-235896, ಮೊ ನಂ. 97397-22700, 99452-84771ಗೆ ಸಂಪರ್ಕಿಸುವಂತೆ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ ತಿಳಿಸಿದರು.

ಕ್ರೀಡಾಗಂಟು ವಿತರಣೆಗೆ ಅರ್ಜಿ ಆಹ್ವಾನ

ಬಾಗಲಕೋಟೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕೇಂದ್ರ ಕಚೇರಿಯಿಂದ ಜಿಲ್ಲೆಗೆ ಸರಬರಾಜದ ಕ್ರೀಡಾ ಗಂಟುಗಳನ್ನು ಅರ್ಹತೆಯನ್ನೊಳಗೊಂಡ ಎಸ್ಸಿ, ಎಸ್ಟಿ ಸಂಘ ಸಂಸ್ಥೆಗಳಿಗೆ ಕ್ರೀಡಾಗಂಟುಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ಶೈಕ್ಷಣಿಕ, ಕ್ರೀಡಾ, ಸಾಂಸ್ಕೃತಿಕ ಹಾಗೂ ಸಮುದಾಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ 15 ರಿಂದ 35 ವರ್ಷ ವಯೋಮಿತಿಯ ಯುವಜನರು ಕಾನೂನು ಬದ್ದವಾಗಿ ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯಿದೆ 1960ರಡಿಯಲ್ಲಿ ಜಿಲ್ಲಾ ಸಹಕಾರ ಇಲಾಖೆಯಲ್ಲಿ 2024-25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಹೊಸದಾಗಿ ನೋಂದಾಯಿಸಿ ಕೊಂಡಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡು ಪ್ರಮಾಣ ಪತ್ರ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದ ಯುವಜನ ಸಂಘ ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.

ಪರಶುರಾಮ ಚವ್ಹಾಣಗೆ ಪಿಎಚ್.ಡಿ ಪದವಿ

ಬಾಗಲಕೋಟೆ; ತಾಲೂಕಿನ ತಿಮ್ಮಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಪರಶುರಾಮ ಚವ್ಹಾಣ ಅವರು ಮಂಡಿಸಿದ ಮಹಾಪ್ರಬಂಧಕ್ಕೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ನೀಡಿದೆ. ಕವಿವಿ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕ ಡಾ. ಎನ್.ಎಚ್. ಕಲ್ಲೂರ ಮಾರ್ಗದರ್ಶನದಲ್ಲಿ ಹೈಬ್ರಿಡಿಟಿ ಆಂಡ್ ಕಲ್ಚರಲ್ ಕಾನ್ ಫ್ರಂಟೇಶನ್ಸ್ ಇನ್ ಭಾರತಿ ಮುಖರ್ಜಿಸ್ ಫಿಕ್ಷನ ವಿಷಯದ ಮೇಲೆ ಪರಶುರಾಮ ಚವ್ಹಾಣ ಮಹಾ ಪ್ರಬಂಧ ಮಂಡಿಸಿದ್ದರು. ಇದಕ್ಕೆ ಧಾರವಾಡ ಕವಿವಿ ಡಾಕ್ಟರೇಟ್ ಪದವಿ ನೀಡಿದೆ.

ಶಿವಾಜಿ ಜಯಂತಿ: ಭವ್ಯ ಶೋಭಾಯಾತ್ರೆ

ಗುಳೇದಗುಡ್ಡ: ವಿವಿಧ ಹಿಂದೂಪರ ಸಂಘಟನೆಗಳಿಂದ ನಗರದಲ್ಲಿ ರವಿವಾರ ಛತ್ರಪತಿ ಶಿವಾಜಿಮಹಾರಾಜರ 395ನೇ ಜಯಂತ್ಯೋತ್ಸವದ ಅಂಗವಾಗಿ ಭ್ಯವ ಶೋಭಾಯಾತ್ರೆ ನೆರವೇರಿತು. ನಗರದ ಬನ್ನಿಕಟ್ಟಿಯಿಂದ ತ್ರೈಯಂಭಕೇಶ್ವರ ದೇವಸ್ಥಾನದಿಂದ ಆರಂಭಗೊಂಡ ಛತ್ರಪತಿ ಶಿವಾಜಿಮಹಾರಾಜರ ಮೂರ್ತಿಯ ಶೋಭಾಯಾತ್ರೆಗೆ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಗುರುಸಿದ್ದೇಶ್ವರ ಮಠದ ಶ್ರೀಗುರುಸಿದ್ಧ ಪಟ್ಟದಾರ್ಯ ಸ್ವಾಮಿಗಳು ಚಾಲನೆ ನೀಡಿದರು.

{ಎನ್.ಎಸ್. ಬೋಸರಾಜು, } ಸಚಿವ

ಭಾರತೀಯ ಜನತಾ ಪಾರ್ಟಿಯ ಶಾಸಕರು ಪೀಠಕ್ಕೆ ಅಗೌರವ ತೋರಿದ ಕಾರಣ ಅವರನ್ನು ಸ್ಪೀಕರ್ ಅಮಾನತುಗೊಳಿಸಿದ್ದಾರೆ. ವಿಧಾನ ಪರಿಷತ್‌ನಲ್ಲಿ ಸಭಾಪತಿಗಳು ಎದ್ದುನಿಂತರೆ ನಾವು ಎದ್ದು ನಿಲ್ಲಬೇಕು. ನಿಯಮಗಳನ್ನು ಪಾಲನೆ ಮಾಡಬೇಕು. ಅದನ್ನು ಮೀರಿ ಯಾರೂ ನಡೆದುಕೊಳ್ಳಬಾರದು. ವಿಧಾನಮಂಡಲದಲ್ಲಿ ಸರಕಾರಕ್ಕೆ ಯಾವುದೇ ವಿಶೇಷ ಅಧಿಕಾರ ಇರುವುದಿಲ್ಲ.



ಕನ್ನಡ ಸಾಹಿತ್ಯ ಸಮ್ಮೇಳನ ಸಮಾರೋಪ ಸಮಾರಂಭ | ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಭಾಗಿ

ಪತ್ರಕರ್ತರು ಸತ್ಯಾಸತ್ಯತೆ ಅರಿಯಲಿ

ಬಾಗಲಕೋಟೆ: ಸಮಾಜದ ಬಹುಮುಖ್ಯವಾಗಿರುವ ಸಮೂಹ ಮಾಧ್ಯಮದಲ್ಲಿರುವ ಸೇವೆ ಸಲ್ಲಿಸುವ ಪತ್ರಕರ್ತರು ಸುದ್ದಿಯ ಬರೆಯುವ ಮುನ್ನ ಸತ್ಯಾಸತ್ಯೆತೆಯನ್ನು ಅರಿಯುವುದು ಮಹಳಷ್ಟು ಮಹತ್ವದ್ದಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ಬಾದಾಮಿ ತಾಲೂಕಿನ ನೀರಬೂದಿಹಾಳದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಹಾಗೂ ಬಾದಾಮಿ ತಾಲೂಕು ಘಟಕಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮೂಹ ಮಾಧ್ಯಮ ಸಮಸ್ಯೆ-ಪರಿಹಾರ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ನೀರಬೂದಿಹಾಳದಲ್ಲಿ ಹಮ್ಮಿಕೊಂಡಿದ್ದ 12ನೇ ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರನ್ನು ಸತ್ಕರಿಸಲಾಯಿತು.

ಮಾಧ್ಯಮವು ಮನ-ಮನೆಗಳಿಗೆ ಸುದ್ದಿ ತಲುಪಿಸುವ ಮಹತ್ವದ ಜವಾಬ್ದಾರಿಯನ್ನು ಹೊಂದಿದ್ದು, ಮಾಧ್ಯಮದಲ್ಲಿ ಕೆಲಸ ಮಾಡುವ ಪತ್ರಕರ್ತರು ತಾವು ಮಾಡುವ ಸುದ್ದಿಯ ಬಗ್ಗೆ ಮೊದಲು ಸತ್ಯಾಸತ್ಯತೆಯನ್ನು ಅರಿಯಬೇಕು. ಸುಳ್ಳು ಸುದ್ದಿ ಮಾಡುವುದರಿಂದ ಸಮಾಜದ ಹಾಗೂ ವ್ಯಕ್ತಿಯ ಮೇಲೆ ಆಗುವ ದುಷ್ಪರಿಣಾಮವಾಗುತ್ತದೆ. ಮಾಧ್ಯಮವು ಇಂದು ದೊಡ್ಡ ದೊಡ್ಡ ಕಂಪನಿಗಳ ಸ್ವತ್ತಾಗಿವೆ. ಅವರ ಕೈಬೊಂಬೆಯ ರೀತಿಯಲ್ಲಿ ಸುದ್ದಿಯ ಬರೆಯುವ ವ್ಯವಸ್ಥೆ ಇಂದು ಹುಟ್ಟಿಕೊಂಡಿದೆ ಹೀಗಾಗಿಯೇ ಪತ್ರಕರ್ತರ ಮೇಲಿನ ಗೌರವ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತದೆ ಎಂದರು.

ನಾನು ಮೊದಲ ಬಾರಿಗೆ ಶಾಸಕನಾದ ಸಂದರ್ಭದಲ್ಲಿ ನನ್ನ ಬೆಂಬಲ ಕೆ.ಎಚ್. ರಂಗನಾಥ ಅವರಿಗಿದೆ ಎಂದು ಸುಳ್ಳು ಸುದ್ದಿ ಬರೆದಿದ್ದರು ಇದರ ಪರಿಣಾಮದಿಂದ ಮುಖ್ಯಮಂತ್ರಿಯಾಗಿದ್ದ ಎಸ್.ಬಂಗಾರಪ್ಪ ಅವರು ನನ್ನನ್ನು ಅವರ ಅವಧಿ ಮುಗಿಯುವ ವರೆಗೂ ನೋಡಲೇ ಇಲ್ಲ. ಮುಂದೆ ಎದುರಾದ ಚುನಾವಣೆಯಲ್ಲಿ ನಾನು ಸೋತೆ ಎಂದು ಹೇಳಿದರು.

ಕಾನಿಪ ಜಿಲ್ಲಾಧ್ಯಕ್ಷ ಆನಂದ ದಲಭಂಜನ ಮಾತನಾಡಿ, ಸಾಹಿತ್ಯ-ಮಾಧ್ಯಮ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಜನರು ಯಾವ ಸುದ್ದಿಯನ್ನು ಇಷ್ಟ ಪಡುತ್ತಾರೆ ಅದೇ ಸುದ್ದಿಗಳನ್ನು ತೋರಿಸುವ ವ್ಯವಸ್ಥೆ ಮಾಧ್ಯಮದಲ್ಲಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ನಿರ್ಣಯಗಳು

ರಾಷ್ಟ್ರೀಯ ಚಾಲುಕ್ಯ ಉತ್ಸವ ಇದೇ ವರ್ಷದಿಂದ ಆರಂಭಿಸಬೇಕು. ಬಾಗಲಕೋಟೆ ನವನಗರದಲ್ಲಿ ಸರಕಾರ ಪದವಿ ಪೂರ್ವ ಕಾಲೇಜು ಪ್ರಾರಂಭಿಸಬೇಕು. ಬಾದಾಮಿ, ಮುಧೋಳ ತಾಲೂಕಾ ಕೇಂದ್ರಗಳನ್ನು ಹೊರತುಪಡಿಸಿ ಉಳಿದೆಲ್ಲ ತಾಲೂಕಾ ಕೇಂದ್ರಗಳಲ್ಲಿ ಸಾಂಸ್ಕೃತಿಕ, ಸಾಹಿತ್ಯ ಚಟುವಟಿಕೆಗಳನ್ನು ನಡೆಸಲು ಕಸಾಪ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಬೇಕು. ಆಲಮಟ್ಟಿ ಹಿನ್ನೀರಿನ ಪ್ರದೇಶಗಳಲ್ಲಿ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ಹಾಗೂ ಅಭಿವೃದ್ಧಿಪಡಿಸಲು ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸಬೇಕು. ಸಂಖ್ಯಾ ಕೊರತೆಯಿರುವ ಕನ್ನಡ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚದಂತೆ ಸರ್ಕಾರವು ನಿರ್ಧಾರ ತೆಗೆದುಕೊಳ್ಳಬೇಕು. ಉತ್ತರ ಕರ್ನಾಟಕದ ಜನಪದ ಕಲಾವಿದರಿಗೆ ಸರ್ಕಾರಗಳು ಆಯೋಜಿಸುವ ರಾಜ್ಯ ಮತ್ತು ರಾಷ್ಟ್ರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವಕಾಶ ನೀಡಬೇಕು. ಜಿಲ್ಲಾ ಗೌರವ ಕೋಶಾಧ್ಯಕ್ಷ ಡಾ.ಸಿ.ಎಂ.ಜೋಶಿ ನಿರ್ಣಯ ಮಂಡಿಸಿದರು. ಗೌರವ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ ಅನುಮೋದಿಸಿದರು.

ಎಲ್ಲ ಕ್ಷೇತ್ರದಲ್ಲೂ ಮಹಿಳೆಯರ ಸಾಧನೆ

ಗುಳೇದಗುಡ್ಡ: ಆದರ್ಶ ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಅಪಾರವಾಗಿದೆ. ಮಹಿಳೆ ಮೂಲಕ ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಸಂಸ್ಕೃತಿ ಮೂಡುತ್ತದೆ. ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆ ಅಮೋಘ ಸಾಧನೆ ಮಾಡಿದ್ದಾಳೆ. ಆದರ್ಶ ಸಮಾಜಕ್ಕೆ ಮಹಿಳೆ ಕಣ್ಣು ಆಗಿದ್ದಾಳೆ ಎಂದು ಶ್ರೀಶಾರದಾ ಸಂಸ್ಕೃತ ಶಾಠಶಾಲೆ ಶಿಕ್ಷಕಿ ಮಾಲಾ ತಾಂಡೂರ ಹೇಳಿದರು.

ಅವರು ಸ್ಥಳೀಯ ಮರಡಿಮಠದಲ್ಲಿ ಪಟ್ಟಸಾಲಿ ನೇಕಾರ ಮಹಿಳಾ ಘಟಕ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಆದರ್ಶ ಸಮಾಜಕ್ಕೆ ಮಹಿಳೆ ಪಾತ್ರ ಕುರಿತು ಮಾತನಾಡಿದ ಅವರು, ಮಹಿಳೆ ಅಬಲೆ ಅಲ್ಲ. ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ದಾಪುಗಾಲು ಇಟ್ಟು ಸಾಕಷ್ಟು ಪ್ರಗತಿ ಸಾಧಿಸಿ ಇತರೆ ಮಹಿಳೆಯರಿಗೆ ಮಾದರಿಯಾಗಿದ್ದಾಳೆ. ಒಂದು ಗಂಡಿನ ಸಾಧನೆ ಹಿಂದೆ ಹೆಣ್ಣಿನ ಶ್ರಮವಿದೆ ಎನ್ನುವುದನ್ನು ಯಾವತ್ತೂ ಮರೆಯಬಾರದು. ಹೆಣ್ಣನ್ನು ಕೀಳಾಗಿ ಕಾಣಬಾರದು ಎಂದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮಾಲಾ ತಾಂಡೂರ, ಗಾಯಿತ್ರಿ ರಾಜನಾಳ, ಜಯಶ್ರೀ ಅಂಕದ ಅವರನ್ನು ಸನ್ಮಾನಿಸಲಾಯಿತು.

ಪ್ರಾಧ್ಯಾಪಕಿ ಗಾಯಿತ್ರಿ ರಾಜನಾಳ ಮಾತನಾಡಿದ ಅವರು, ಹೆಣ್ಣೊಂದು ಕಲಿತರೆ ಮನೆಯೊಂದು ಕಲಿತಂತೆ ಎನ್ನುವ ಮಾತಿನಂತೆ ಮನೆಯಲ್ಲಿ ಸಂಸ್ಕಾರ, ಸಂಸ್ಕೃತಿಯೊಂದಿಗೆ ಗುಣಾತ್ಮಕ ಶಿಕ್ಷಣ ಹೆಣ್ಣಿನ ಮೂಲಕವೇ ಮಗುವಿಗೆ ದೊರೆಯುತ್ತದೆ. ಹೆಣ್ಣು ಸಾಧನೆ ಮಾಡದ ಕ್ಷೇತ್ರಗಳಿಲ್ಲ. ಭೂಮಿಯಿಂದ ಆಕಾಶದವರೆಗೆ ಮಹಿಳೆ ಬೆಳೆದು ನಿಂತಿದ್ದಾಳೆ ಎಂದರು.ಪಟ್ಟಸಾಲಿ ನೇಕಾರ ಮಹಿಳಾ ಸಂಘದ ತಾಲೂಕು ಅಧ್ಯಕ್ಷೆ ಗೌರಮ್ಮ ಕಲಬುರ್ಗಿ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಶಿಕ್ಷಕಿ ಮಾಲಾ ತಾಂಡೂರ, ಗಾಯಿತ್ರಿ ರಾಜನಾಳ, ಜಯಶ್ರೀ ಅಂಕದ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ತಾರಾಮತಿ ರೋಜಿ, ನಾಗರತ್ನಾ ಎಣ್ಣಿ, ವೇದಾ ಶೀಪ್ರಿ, ಶಶಿಕಲಾ ಭಾವಿ, ಅನಸೂಯಾ ಅಲದಿ, ಮೀನಾಕ್ಷಿ ಜಿಡಗಿ, ಮಂಜುಳಾ ತಿಪ್ಪಾ, ಸ್ವರೂಪಾ ಜವಳಿ, ರೇಖಾ ತಿಪ್ಪಾ, ಪ್ರಿಯಾ ಜವಳಿ, ಸುವರ್ಣಾ ತಟ್ಟಿ, ವೈಶಾಲಿ ಮೆಂತೆದ ಇತರರು ಇದ್ದರು.

ಉಚಿತ ಕಣ್ಣಿನ ತಪಾಸಣೆ ಶಿಬಿರ

ಇಳಕಲ್: ನಗರದ ಖ್ಯಾತ ನೇತ್ರತಜ್ಞ ಡಾ.ಸುಶೀಲ ಕಾಖಂಡಕಿ ಪ್ರತಿವರ್ಷ ದೃಷ್ಠಿಹೀನರಿಗೆ ಬೆಳಕನ್ನು ಕೊಡುವ ಕಾರ್ಯ ನಿಜವಾಗಿಯೂ ಶ್ಲಾಘನೀಯ ಎಂದು ಸುಕ್ಷೇತ್ರ ಸಿದ್ದನಕೊಳ್ಳದ ಪೂಜ್ಯ ಡಾ. ಶಿವಕುಮಾರ ಸ್ವಾಮಿಜಿಯವರು ಹೇಳಿದರು.

ನಗರದ ಜೋಷಿಗಲ್ಲಿಯ ಪಾಂಡುರಂಗ ದೇವಸ್ಥಾನದ ಸಮುದಾಯ ಭವನದಲ್ಲಿ ಇಲ್ಲಿಯ ಸುಭಾಷ ಕಾಖಂಡಕಿ ಕಣ್ಣಿನ ಆಸ್ಪತ್ರೆಯಿಂದ ಹಮ್ಮಿಕೊಳ್ಳಲಾದ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿ ಅವರು ಮಾತನಾಡಿದರು. ಪ್ರತಿವರ್ಷವು ಇಳಕಲ್ಲ ತಾಲೂಕಿನ ಸುಕ್ಷೇತ್ರ ಸಿದ್ದನಕೊಳ್ಳದ ನಮ್ಮ ಭಕ್ತರಿಗೆ ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ನೀಡುತ್ತಿದ್ದು, ಈ ಕಾರ್ಯ ನಿರಂತರಾಗಿ ಸಾಗಲಿ ಸಿದ್ದಪ್ಪ ಜನ ಕೃಪಾ ಕಾಕ್ಷ ಕಾಖಂಡಕಿ ಪರಿವಾರ ಯಾವತ್ತೂ ಇರಲಿ ಎಂದು ಆಶೀರ್ವದಿಸುತ್ತ ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವೈದ್ಯ ಡಾ. ಸುಶೀಲ ಕಾಖಂಡಕಿ ಮಾತನಾಡಿದ ಅವರು. ಪೂಜ್ಯರ ಆಶೀರ್ವಾದದಿಂದಲೇ ಇಂತಹ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯ ಎಂದು ಹೇಳಿದರು. ಕುಷ್ಟಗಿಯ ಸಮಾಜ ಸೇವಕ ರವಿ ಹಿರೇಮಠ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಪೂಜ್ಯರನ್ನು ಸಮಾಜ ಸೇವಕ ರವಿ ಹಿರೇಮಠ, ಮಾಜಿ ಸೈನಿಕ ಶರಣಯ್ಯ ಹಿರೇಮಠ ಹಾಗೂ ಮಹಾದೇವ ಕಂಬಾಗಿ ಅವರನ್ನು ಕಾಖಂಡಕಿ ಪರಿವಾರದ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 61 ಜನರಿಗೆ ಶಸ್ತ್ರಚಿಕಿತ್ಸೆ ನೀಡಲಾಯಿತು, ಮತ್ತು ಸಾಂಕೇತಿಕವಾಗಿ ವೇದಿಕೆ ಮೇಲಿದ್ದ ಗಣ್ಯರು ಐದು ಜನರಿಗೆ ಕನ್ನಡಕವನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಕುಷ್ಟಗಿ ಪುರಸಭೆ ಅಧ್ಯಕ್ಷ ಮಹಾಂತೇಶ ಕೆಲಭಾವಿ, ವಿರೇಶ ಕಲಕಬಂಡಿ, ಶಿವು ಚಲವಾದಿ, ಕೇದರನಾಥ ತುರಕಾಣಿ, ಆಸ್ಪತ್ರೆಯ ಸಿಬ್ಬಂದಿ ಹುಸೇನ ಮುದಗಲ್ಲ, ಕಂದಕೂರಪ್ಪ ಬಡಗಿ, ವನಿತಾ ಲಮಾಣಿ, ಅನಿತಾ, ಮಹಾದೇವಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಬಿಸಿಲಿಗೆ ಬಸವಳಿದ ಜನತೆ

ರಬಕವಿ-ಬನಹಟ್ಟಿ: ಉರಿಯಂಥ ಬಿಸಿಲು, ಹಿಂದೆಂದೂ ಇರದಂಥ ತಾಪಮಾನ ರಬಕವಿ-ಬನಹಟ್ಟಿ ತಾಲೂಕಿನ ಜನತೆಯು ಮಧ್ಯಾಹ್ನ ಹೊತ್ತು ಹೊರಗೆ ಬರದಂತೆ ಬಿಸಿಲು ಎಚ್ಚರಿಕೆ ನೀಡುತ್ತಿದೆ. ಬರೋಬ್ಬರಿ 39 ಡಿಗ್ರಿಯಷ್ಟು ಬಿಸಿಲಿನ ತಾಪ ವಯಸ್ಕರು ಮನೆ ಬಿಟ್ಟು ಹೊರಗೆ ಬರುತ್ತಿಲ್ಲ. ಮಕ್ಕಳಿಗೆ ಬಿಸಿಲಿನ ಭಯದಿಂದ ಸಂಚಾರ ನಡೆಸುತ್ತಿಲ್ಲ. ಮನೆ ಹೊರಗೆ ಕಾಲಿಟ್ಟರೆ ಬರೆ ಎಳೆಯುವ ಬಿಸಿಲು, ಎಷ್ಟು ನೀರು, ತಂಪು ಪಾನಿಯ ಕುಡಿದರೂ ನೆಮ್ಮದಿ ಸಿಗುತ್ತಿಲ್ಲ. ಉರಿ ಬಿಸಿಲಿಗೆ ತಲೆ ಹೋಗುತ್ತದೋ ಎಂಬ ಭಯ ಒಟ್ಟಾರೆ ಜನ ಬಿಸಿಲಿಗೆ ಬವಸಳಿದು ಹೋಗಿದ್ದಂತು ಸತ್ಯ.

ಹವಾಮಾನ ನೋಡಿದರೆ ಮಳೆಯಾಗುವ ಸಂಭವ ಕಡಿಮೆ. ಕಾರಣ ತಾಪಮಾನ ಮತ್ತಷ್ಟು ಹೆಚ್ಚಳಗೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ. ಉರಿ ಬಿಸಿಲಿನಿಂದ ಮನೆ ಬಿಟ್ಟು ಹೊರಗೆ ಬಂದರೆ ಹಿಂದೆ ಮುಂದೆ ನೋಡುವ ಸ್ಥಿತಿ. ನೇಕಾರಿಕೆ ವೃತ್ತಿಯನ್ನೇ ಹೊಂದಿರುವ ಅವಳಿ ನಗರದ ಜನತೆಯ ಮನೆಗಳು ಹೆಚ್ಚಿನ ಪ್ರಮಾಣದಲ್ಲಿ ಪತ್ರಾಸ್ ಶೆಡ್‌ಗಳಿಂದಲೇ ಕೂಡಿವೆ. ಮನೆಯೊಳಗೆ ಕಾಲಿಟ್ಟರೂ ಸಹಿತಕಾದ ಕಬ್ಬಿಣದ ಪತ್ರಾಸದಿಂದ ಮತ್ತಷ್ಟು ಕಾವು ಬೆವರಿನ ಸ್ನಾನ ಮಾಡಿಸುವಲ್ಲಿ ಕಾರಣವಾ ಗುತ್ತಿದೆ. ಕ್ರಾಂಕ್ರೀಟ್ ಮನೆಯಿದ್ದರೂ ಸಹಿತ ಕಾದು ಕಬ್ಬಿಣದ ಕಡಲೆ ಕಡಲೆಗಳಾಗಿವೆ. ರಾತ್ರಿಯಾದರೂ ಬೆಂಕಿಯ ಮನೆಯಲ್ಲಿ ಕುಳಿತಿ ಅನುಭವ ನೇಕಾರರದ್ದಾಗಿದೆ. ಇದರಿಂದ ಜನ ರಾತ್ರಿ ಹೊತ್ತು ಮನೆಯಿಂದ ಹೊರಗೆ ತಣ್ಣನೆ ಗಾಳಿಗೆ ಮೈಯೊಡ್ಡಿ ಕುಳಿತುಕೊಂಡರೆ, ಕೆಲವರು ವಿಹಾರಕ್ಕೆ ಹೋಗುತ್ತಾರೆ.

ತಂಪು ಪಾನೀಯಕ್ಕೆ ಬೇಡಿಕೆ: ಬಿಸಿಲಿನ ತಾಪಕ್ಕೆ ಜನತೆ ತಂಪು ಪಾನೀಯ, ಹಣ್ಣುಗಳಿಗೆ ಮಾರು ಹೋಗುತ್ತಿದ್ದಾರೆ. ಎಳೆ ನೀರಿಗೆ ಸದ್ಯ ಹೆಚ್ಚಿನ ಬೇಡಿಕೆ ಬಂದಿದ್ದು, 30 ರು.ಗೆ ಒಂದರಂತೆ ಉತ್ತಮ ಎಳೆ ನೀರನ್ನು ನೀಡುವಲ್ಲಿ ಸ್ಥಳೀಯರು ಯಶಸ್ಸು ಕಾಣುತ್ತಿದ್ದು, ಕೂಡ್ರಿಂಕ್ಸ್‌ಗಿಂತಲೂ ಎಳೆ ನೀರಿಗೆ ಬೇಡಿಕೆ ಹೆಚ್ಚಿದೆ. ಅಲ್ಲದೆ ಲಿಂಬು ಸೋಡಾ, ಶರಬತ್, ಮಜ್ಜಿಗೆ ಸೇರಿದಂತೆ ತಂಪು ಪಾನೀಯಗಳಿಗೂ ಜನ ಮುಗಿ ಬಿದ್ದಿದ್ದಾರೆ.

ಬಿಸಿಲಿನ ತಾಪಕ್ಕೆ ಎಲ್ಲಿ ಕುಳಿತರೂ, ನಿಂತರೂ ಚಟಪಡಿಸುವ ಜನ, ಬೆವರಿನ ಸ್ನಾನದಿಂದ ಬಸವಳಿದು ಹೋಗಿ, ಬೆಳಗ್ಗೆ 8 ಗಂಟೆ ಯಾಗುತ್ತಿದ್ದಂತೆ ಬಿರು ಬಿಸಿಲು ಜನರನ್ನು ಭಯಗೊಳಿಸುವಲ್ಲಿ ಕಾರಣವಾಗಿದೆ. ಮನೆ ಯಲ್ಲಿ ತಿರುಗುವ ಫ್ಯಾನ್‌ಗಳಿಗೆ ವಿಶ್ರಾಂತಿಯೇ ಇಲ್ಲ. ಕರೆಂಟು ಕೈಕೊಟ್ಟರೆ ಜನ ವಿಲ ವಿಲ ಒದ್ದಾಡುವ ಸ್ಥಿತಿಯಿಂದ ಹೆಸ್ಕಾಂ ಇಲಾಖೆಗೆ ಹಿಡಿಶಾಪ ಹಾಕುತ್ತಿದ್ದರೆ, ವಯೋವೃದ್ಧರು, ರೋಗಿಗಳ ಸ್ಥಿತಿ ದೇವರೇ ಬಲ್ಲ.

ಉತ್ತಮ ಶಿಕ್ಷಕರಾಗಲು ಮಾನವೀಯ ಮೌಲ್ಯ ಅಗತ್ಯ

ಬಾಗಲಕೋಟೆ: ಮೌಲ್ಯಗಳು ತುಂಬಿರುವ ಶಿಕ್ಷಕ ಹುದ್ದೆ ಅತ್ಯಂತ ಗೌರವ ಹಾಗೂ ಪವಿತ್ರವಾದ್ದು ಎಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿ ಕನ್ನಡ ಪ್ರಾಧ್ಯಾಪಕ ಜಿ.ಜಿ.ಹಿರೇಮಠ ಹೇಳಿದರು.

ನಗರದ ಪ್ರತಿಷ್ಠಿತ ಬಿವಿವಿ ಸಂಘದ ಬಿ.ವಿ.ವಿ.ಎಸ್ ಶಿಕ್ಷಣ ಮಹಾವಿದ್ಯಾಲಯದ 2024-25ನೇ ಸಾಲಿನ ಪಠ್ಯಪೂರಕ ಚಟುವಟಿಕೆಗಳ ಹಾಗೂ ವಿದ್ಯಾರ್ಥಿ ಒಕ್ಕೂಟದ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗುರುಗಳಾದಂತವರು ಶಿಷ್ಯನ ಸಾಮರ್ಥ್ಯಕ್ಕೆ ಇಳಿಯುವುದನ್ನು ರೂಡಿಸಿಕೊಳ್ಳಬೇಕು. ನನ್ನ ಗುರುಗಳ ಎತ್ತರಕ್ಕೆ ನಾನು ಏರಿದಾಗ ಬದುಕು ಸಾರ್ಥಕತೆ ಪಡೆದುಕೊಳ್ಳುತ್ತದೆ. ನನ್ನ ಶಿಷ್ಯನ ಕೆಳಮಟ್ಟದ ಸ್ಥಿತಿಗೆ ಇಳಿದು ಗುರುತಿಸುವಂತ ಪ್ರಯತ್ನ ಮಾಡುವುದರಿಂದ ನಮಗೆ ಯೋಗ್ಯತೆ ಲಭಿಸುತ್ತದೆ. ಈ ಎರಡು ಪ್ರಯತ್ನವನ್ನು ಈ ಮಹಾವಿದ್ಯಾಲಯ ಮಾಡುತ್ತಿರುವುದರಿಂದ ನಾಡಿನ ತುಂಬೆಲ್ಲ ಇಲ್ಲಿ ಕಲಿತ ಹೋದ ವಿದ್ಯಾರ್ಥಿಗಳು ಶಿಕ್ಷಕರಾಗಿ ಇಂದು ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಬಾಗಲಕೋಟೆಯಲ್ಲಿ ಬಿವಿವಿಎಸ್ ಶಿಕ್ಷಣ ಮಹಾವಿದ್ಯಾಲಯದ 2024-25ನೇ ಸಾಲಿನ ಪಠ್ಯಪೂರಕ ಚಟುವಟಿಕೆಗಳ ಹಾಗೂ ವಿದ್ಯಾರ್ಥಿ ಒಕ್ಕೂಟದ ಉದ್ಘಾಟನಾ ಸಮಾರಂಭದಲ್ಲಿ ಜಿ.ಜಿ.ಹಿರೇಮಠ ಮಾತನಾಡಿದರು.

ಶಿಕ್ಷಕರು ನಮಗೆ ಕಲಿಸಿರುವ ಜ್ಞಾನದಿಂದ ನಾವು ಇಷ್ಟೆಲ್ಲ ಕಲಿತೆವು ಎಂಬ ಕೃತಘ್ನತೆ ಭಾವದಿಂದ ನಾನು ಮುಂದಿನ ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಅವರು ಉತ್ತಮ ಶಿಕ್ಷಣ ನೀಡಿ ಸಮಾಜಕ್ಕೆ ನನ್ನದೆಯಾದ ಕೊಡುಗೆ ನೀಡಬಲ್ಲೆ ಎಂಬ ಭಾವ ನಿಮ್ಮಲ್ಲಿ ಅರಳಲಿ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಆರ್.ಜಿ.ತೆಗ್ಗಿ ಮಾತನಾಡಿದ ಅವರು, ಉತ್ತಮ ಶಿಕ್ಷಕರಾಗಲು ಮಾನವಿಯ ಮೌಲ್ಯಗಳ ಜೊತಗೆ ನಿರಂತರ ಅಧ್ಯಯನ ಮುಖ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಪ್ರಶಿಕ್ಷಣಾರ್ಥಿಗಳಿಗೆ ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಯಿತು, ಇದಕ್ಕೂ ಮುಂಚೆ ವಿದ್ಯಾರ್ಥಿ ಒಕ್ಕೂಟದ ಪ್ರತಿನಿಧಿಗಳಿಗೆ ಪ್ರಮಾಣ ವಚನ ಭೋಧಿಸಿದರು. ಬಿ.ಇಡಿ ಪ್ರಶಿಕ್ಷಣಾರ್ಥಿಗಳಾದ ಅಶ್ವಿನಿ ಹೆಬ್ಬಾರ, ಸಹನಾ ಕುಲಕರ್ಣಿ, ಡಾ.ಶಿದ್ದಪ್ಪ ಭೂಮಣ್ಣವರ, ರಾಘವೇಂದ್ರ ಕುಲಕರ್ಣಿ, ಡಾ.ರಮೇಶ ಯಾನಮಶೆಟ್ಟಿ ಇತರರಿದ್ದರು.

ಸಹಕಾರಿ ಸಂಘದಿಂದ ಆರ್ಥಿಕ ಸಮಸ್ಯೆ ಪರಿಹಾರ ಸಾಧ್ಯ

ರಬಕವಿ-ಬನಹಟ್ಟಿ: ಸರಕಾರಿ ನೌಕರರು ತಮ್ಮ ಆರ್ಥಿಕ ತೊಂದರೆಗಳಿಗೆ ಆದಷ್ಟು ಬೇಗನೆ ಪರಿಹಾರ ಕಂಡುಕೊಳ್ಳುವಲ್ಲಿ ಸರಕಾರಿ ನೌಕರರ ಸಹಕಾರ ಸಂಘವು ಸರಳವಾಗಿ ಸಾಲದ ಸೌಲಭ್ಯಗಳನ್ನು ನೀಡುವಲ್ಲಿ ಕ್ರಮ ತೆಗೆದುಕೊಳ್ಳಬೇಕು. ಸಂಘದ ಸದಸ್ಯರು ತಾವು ಪಡೆದುಕೊಂಡ ಸಾಲವನ್ನು ಸಕಾಲದಲ್ಲಿ ಮರುಪಾವತಿ ಸಿದರೆ ಸಂಘಗಳು ಅಭಿವೃದ್ಧಿ ಯಾಗುತ್ತವೆ. ಸಂಘದ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬ ರು ಜವಾಬ್ದಾರಿ ಮುಖ್ಯವಾಗಿದೆ. ಎಂದು ರಬಕವಿ ಬನಹಟ್ಟಿ ತಹಸೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.

ಅವರು ಭಾನುವಾರ ರಬಕವಿಯ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ರಬಕವಿ ಸರಕಾರಿ ನೌಕರರ ಸಹಕಾರ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಮಖಂಡಿ ಸಹಕಾರ ಸಂಘಗಳ ಸಹಾಯಕ ಉಪನಿಬಂಧಕ ರಾಮನಗೌಡ ಪಾಟೀಲ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಸಂಘಗಳನ್ನು ಸ್ಥಾಪಿಸುವುದು ಕಷ್ಟ ಸಾಧ್ಯ, ನಂತರ ಅವುಗಳನ್ನು ಮುಂದುವರೆಸಿಕೊಂಡು ಹೋಗುವುದು ಅಷ್ಟೆ ಜವಾಬ್ದಾರಿಯುತವಾಗಿದೆ. ಸಂಘದ ಮುಂದಾಳುಗಳ ಮೇಲೆ ಸಾಕಷ್ಟು ಹೊಣೆಗಾರಿಕೆಗಳು ಇರುತ್ತವೆ. ಸಹಕಾರ ಸಂಘದ ಏಳ್ಗೆಗೆ ಪ್ರತಿಯೊಬ್ಬರ ಸಹಕಾರ ಮುಖ್ಯವಾಗಿದೆ ಎಂದರು.

ಬಿ.ಬಿ.ಮುಧೋಳ ಮಾತನಾಡಿದರು, ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಸವದಿ ಕಾರ್ಯಕ್ರಮ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಬಿ.ಡಿ.ನೇಮಗೌಡ ಅಧ್ಯಕ್ಷತೆ ವಹಿಸಿದ್ದರು. ಯಲ್ಲಟ್ಟಿ ಮರೆಗುದ್ದಿಯ ನಿರೂಪಾಧೀಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವೇದಿಕೆಯ ಮೇಲೆ ನಗರಸಭೆಯ ಅಧ್ಯಕ್ಷೆ ವಿದ್ಯಾ ಸವದಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವೆಂಕನಗೌಡ ಪಾಟೀಲ, ಜಮಖಂಡಿ ಖಜಾನೆ ಅಧಿಕಾರಿ ಎಸ್.ಎಸ್. ಬಿರಾದಾರ, ಧರೆಪ್ಪ ಉಳ್ಳಾಗಡ್ಡಿ, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಬಸವರಾಜ ಹನಗಂಡಿ, ಸಂಜೀವ ಜೋತಾವರ, ಗೋಪಾಲ ಕಾಬರಾ, ಶಾಲಾ ಶಿಕ್ಷಕರ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಬಾಗೇನವರ, ಸಂಘದ ಉಪಾಧ್ಯಕ್ಷ ಬಸವರಾಜ ಹೊಸೂರ, ಎಂ.ಎಚ್. ಲಾಡಖಾನ್, ಪ್ರಕಾಶ ಹೊಸಮನಿ, ಶಿರಸ್ತೆದಾರ ಶ್ರೀಕಾಂತ ಮಾಯನ್ನವರ ಸೇರಿದಂತೆ ವಿವಿಧ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಇದ್ದರು.

ಆಧ್ಯಾತ್ಮದ ಕಡೆಗೆ ಒಲವು ಇರಲಿ

ಮಹಾಲಿಂಗಪುರ: ಜನ ಸೇವೆಗೆ ಸಂಸ್ಕಾರ ಉತ್ತಮವಾದದ್ದು. ತ್ರಿವಿಧ ದಾಸೋಹದ ಕಡೆಗೆ ನಿಮ್ಮ ಒಲವಿದ್ದರೆ ಬದುಕು ಬದಲಾವಣೆಯಾಗುತ್ತದೆ. ಶ್ರಮವಹಿಸಿ ಕೆಲಸ ಮಾಡಿ, ಸಮಾಜಕ್ಕೆ ಏನಾದರೂ ಕೊಡುಗೆ ನೀಡಿ ಜೊತೆಗೆ ಆರೋಗ್ಯ ಮತ್ತು ಆಧ್ಯಾತ್ಮದ ಕಡೆಗೆ ಒಲವನ್ನು ತೋರಿಸಿ ದೇಹವನ್ನು ಸದೃಢಪಡಿಸಿಕೊಳ್ಳಿ ಎಂದು ಧಾರವಾಡದ ಮನಗುಂಡಿಯ ಬಸವಾನಂದ ಶ್ರೀ ಹೇಳಿದರು.

ಸ್ಥಳೀಯ ಬಸವನಗರದ ಬಸವ ಸಮುದಾಯ ಭವನದಲ್ಲಿ ಸಿಎಂ ಹುರಕಡ್ಲಿ ಫೌಂಡೇಶನ್ ವತಿಯಿಂದ ಉಚಿತ ಯೋಗ ಶಿಬಿರ ಮತ್ತು ನಿಸರ್ಗ ಚಿಕಿತ್ಸಾ ಶಿಬಿರ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ,ಮನುಷ್ಯನ ಆರೋಗ್ಯಕ್ಕೆ ಉಪವಾಸ ಮುಖ್ಯ ಎಂದರು.

ಆಯುರ್ವೇದಿಕ ವೈದ್ಯ ಸತೀಶ್ ವಾಸನ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಒತ್ತಡದ ಮನಸ್ಸಿಟ್ಟುಕೊಂಡು ಬದುಕುತ್ತಿದ್ದೇವೆ. ಅದರಲ್ಲೂ ಮಾನಸಿಕವಾಗಿ ಮತ್ತು ದೈಹಿಕವಾಗಿ ಅನೇಕ ರೋಗಗಳಿಂದ ಬಳಲುತ್ತಿದ್ದೇವೆ. ಇವುಗಳಿಗೆ ಒಂದೇ ಪರಿಹಾರ ವಾರಕ್ಕೆ ಒಮ್ಮೆಯಾದರೂ ಉಪವಾಸ ಮಾಡಿ, ಕಡಿಮೆ ಆಹಾರ ಆರೋಗ್ಯಕ್ಕೆ ಉತ್ತಮ. ಆಹಾರ ಶುದ್ಧಿಯಿದ್ದರೆ ಮನಸ್ಸು ಶುದ್ಧಿ ಎಂದರು.

ಈ ಸಂದರ್ಭದಲ್ಲಿ ಫೌಂಡೇಶನ್ ಮುಖ್ಯಸ್ಥ ಚನ್ನಬಸು ಹುರಕಡ್ಲಿ, ವೈದ್ಯ ವಿನಾಯಕ ಹಳ್ಳಿ, ಕಾನಿಪ ಸಂಘದ ಅಧ್ಯಕ್ಷ ಮಹೇಶ್ ಮನ್ನಯ್ಯನವರಮಠ, ಅರವಿಂದ ಮಾಲಬಸರಿ, ಆರ್ ಬಿ ಪಾಟೀಲ್, ಸಂತೋಷ್ ಪಾನಶೆಟ್ಟಿ, ಗೋವಿಂದಗೌಡ ಪಾಟೀಲ್, ಚೆನ್ನಪ್ಪ ಪಟ್ಟಣಶೆಟ್ಟಿ, ಕುಮಾರ್ ಮನವಡೆ, ಈರಪ್ಪ ಕಡಕೋಳ, ಕೆರೂರ, ಮಲ್ಲು ಹನಗಂಡಿ, ವೆಂಕಣ್ಣ ಬಿರಾದಾರ. 'ಂತೋಷ ಬಿದರಿ, ಬಸವರಾಜ ಗಿರಿಸಾಗರ, ರವಿ ಗಿರಿಸಾಗರ, ಮಲ್ಲು ದಡೂತಿ, ಸವಿತಾ ಹುರಕಡ್ಲಿ, ತಾಯವ್ವ ಪಾಟೀಲ, ಸೇರಿದಂತೆ ಎಂಡಿ ಆನಂದ ಪ್ರಾರ್ಥಿಸಿದರು. ಮಹಾಂತೇಶ ಪಡಸಲ್ಕರ ನಿರೂಪಿಸಿ, ವಂದಿಸಿದರು.

ಸಂಪ್ರದಾಯ, ಸಂಸ್ಕೃತಿ ರಕ್ಷಣೆ ಅತ್ಯವಶ್ಯ

ಗುಳೇದಗುಡ್ಡ: ಜಂಗಮರು ಬಡತನ ದಲ್ಲಿದ್ದರು ಸಮಾಜದಲ್ಲಿ ಅವರಿಗೆ ಅತ್ಯುನ್ನತ ಸ್ಥಾನವಿದೆ. ಆ ಸ್ಥಾನಕ್ಕೆ ತಕ್ಕಂತೆ ನಾವು ನಮ್ಮ ಸಂಪ್ರದಾಯ, ಸಂಸ್ಕೃತಿ ಯನ್ನು ಕಾಪಾಡಿಕೆ ೊಂಡು ಬೆಳೆಸಿಕೊಂಡು ಬರುವುದು ನಮ್ಮ ಜವಾಬ್ದಾರಿಯಾಗಿದೆ. ನಮ್ಮ ಹಿರಿಯರು ಹಾಕಿಕೊಟ್ಟ ಸಂಪ್ರದಾಯವನ್ನು ಉಳಿಸಿಕೊಂಡರೆ ಮಾತ್ರ ನಮ್ಮ ಸಮಾಜ, ನಮ್ಮಧರ್ಮವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆಎಂದು ಮಾಜಿ ಶಾಸಕ, ಕಾಂಗ್ರೆಸ್ ಪಕ್ಷದ ಬಾಗಲಕೋಟ ಜಿಲ್ಲಾಧ್ಯಕ್ಷ ಎಸ್.ಜಿ. ನಂಜಯ್ಯನಮಠ ಹೇಳಿದರು.

ಅವರು ರವಿವಾರ ಮುರುಘಾಮಠದ ಕುಮಾರೇಶ್ವರ ಕಲ್ಯಾಣಮಂಟಪದಲ್ಲಿ ಹಮ್ಮಿಕೊಂಡಿದ್ದ ಗುಳೇದಗುಡ್ಡ ತಾಲೂಕು ವೀರಶೈವ ಜಂಗಮಕ್ಷೇಮಾಭಿವೃದ್ಧಿ ಸಂಸ್ಥೆ ಯ ವತಿಯಿಂದ ಶ್ರೀ. ಜ.ರೇಣುಕಾಚಾ ರ್ಯರು, ಶ್ರೀ ಬಸವೇಶ್ವರರು ಹಾಗೂ ಶ್ರೀ ಹಾನಗಲ್ ಕುಮಾರ ಶಿವಯೋಗಿಗಳ ತಾಲೂಕು ಮಟ್ಟದಜಯಂತೋತ್ಸವ ಸಮಾ ರಂಭದಲ್ಲಿ ಮಾತನಾಡಿದ ಅವರು, ವೀರಶೈವ ಎಲ್ಲ ಒಳಪಂಗಡಗಳನ್ನು ಕರೆದುಕೊಂಡು ಹೋಗುವ ಜವಾಬ್ದಾರಿ ಜಂಗಮರ ಮೇಲಿದೆ. ಶ್ರೇಷ್ಠ ಸಮಾಜದಲ್ಲಿ ಹುಟ್ಟಿದ ನಾವುಗಳು ನಮ್ಮತನವ ಕಾಯ್ದು ಕೊಳ್ಳಬೇಕು ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಟಿ. ಪಾಟೀಲ ಮಾತನಾಡಿ, ಮಠಾಧೀಶರು ಸಮಾಜಗಳ ಅಭಿವೃದ್ಧಿಗಾಗಿ ತಮ್ಮ ತಂದೆ, ತಾಯಿ, ಸಂಬಂಧಿಕರನ್ನು ತೊರೆದು ಇಡೀ ಜೀವನವನ್ನು ಸಮಾಜದ ಒಳಿತಿಗಾಗಿ ಮುಡಿಪಾಗಿಟ್ಟಿದ್ದಾರೆ. ಅವರ ತ್ಯಾಗವನ್ನು ನಾವು ಸ್ಮರಿಸೋಣ ಎಂದರು. ಸಾನಿಧ್ಯ ವಹಿಸಿದ್ದ ಮುರುಘಾಮಠದ ಶ್ರೀ ಕಾಶೀನಾಥ ಮಹಾಸ್ವಾಮಿಗಳು ಮಾತನಾಡಿ, ಜಂಗಮ ಸಮಾಜ ಎಲ್ಲರನ್ನು ಅಪ್ಪಿಕೊಂಡು ಬದುಕು ವ ಸಮಾಜವಾಗಿದ್ದು, ಸಮಾಜ ಬಾಂಧವರು ಸಮಷ್ಠಿ ಪ್ರಜ್ಞೆಯಿಂದ ಸಮಾಜದೊಂದಿಗೆ ಮನಸ್ಸುಗಳನ್ನು ಕಟ್ಟುವ ಕೆಲಸ ಮಾಡಬೇಕು.

ಈ ಸಂದರ್ಭದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಮಹಾಂತೇಶ ಸರಗಣಾಚಾರಿ, ಬಂಡಯ್ಯ ಹಿರೇಮಠ, ಮುಪ್ಪಯ್ಯ ಘಂಟಿಮಠ, ಪಡದಯ್ಯ ಕಕ್ಕಯ್ಯನಮಠ, ಚನಬಸಯ್ಯ ಸಿಂದಗಿಮಠ, ಪ್ರಭುತಟ್ಟಿಮಠ, ಜಗದೀಶ ಕಾರುಡಗಿಮಠ, ಜಗದೀಶ ಸರಗಣಾಚಾರಿ, ಉಮಾಶಂಕರ ಶಿವನಗೌಡರ, ಸಂಗಯ್ಯ ಗವಿಮಠ ಶಿವಕುಮಾರ ಸಾವಳಗಿಮಠ, ಈರಯ್ಯ ಚನ್ನಸಂಗಯ್ಯನಮಠ, ಶ್ರೀಕಾಂತ ಸರಗಣಾಚಾರಿ, ಸಿದ್ದು ಸಂಕಿನಮಠ, ಶಿವಯ್ಯ ಕಕ್ಕಯ್ಯನಮಠ, ನಿಂಗಯ್ಯ ಪೂಜಾರಿ, ಸಂಗಯ್ಯ ಶಿವಪ್ಪಯ್ಯನಮಠ, ಸಂಗಯ್ಯ ಹಿರೇಮಠ, ವಿಶ್ವನಾಥ ಹಿರೇಮಠ, ಅಕ್ಕಮ್ಮ ಶಿವಪ್ಪಯ್ಯನಮಠ, ಗೀತಾ ಸಾರಂಗಮಠ, ಹಾಗೂ ಬಾಂಧವರು ಉಪಸ್ಥಿತರಿದ್ದರು.

ಆರಾಮ
24-03-2025 ಸೋಮವಾರ
ವಿಶ್ವವಾಣಿ
@vishwavaninews
ಬೆಂಗಳೂರು

ಚಿತ್ತವಿಹಾರ

ಮಹಾ ಪುರುಷರು

● ಬೇಲೂರು ರಾಮಮೂರ್ತಿ

ನಾವೆಲ್ಲಾ ಸಾಮಾನ್ಯವಾಗಿ ಮಾತಾಡುವಾಗ ಕೆಲವರನ್ನು ಚುಡಾಯಿಸಲೋ, ಹೊಗಳಲೋ 'ನೀನೊಬ್ಬ ಮಹಾ ಪುರುಷ ಬಿಡಪ್ಪಾಟಿ ಅನ್ನುತ್ತೀವಿ. ಆದರೆ ವಾಸ್ತವವಾಗಿ ಮಹಾಪುರುಷ ಎನ್ನುವುದಕ್ಕೆ 'ಯೋಗವಾಸಿಷ್ಠ' ಕೃತಿಯಲ್ಲಿ ವಸಿಷ್ಠರು ಶ್ರೀರಾಮಚಂದ್ರನಿಗೆ ಹೀಗೆ ಹೇಳುತ್ತಾರೆ:

ಯಾರು ತಮ್ಮ ಸಾತ್ವಿಕವಾದ ಪುರಾಕೃತ ಕರ್ಮೋಪಾಸನೆಯಿಂದ ಈ ಭೂಮಿಯಲ್ಲಿ ಜನಿಸುವರೋ ಅಂತಹವರು ಗಗನ ಮಂಡಲದಲ್ಲಿ ಚಂದ್ರನಂತೆ ಸರ್ವದಾ ತೇಜೋವಂತರಾಗಿಯೂ ನಿತ್ಯಾನಂದಮಯವಾಗಿಯೂ ಇರುತ್ತಾರೆ. ಅಂತರಿಕ್ಷಕ್ಕೆ ಹೇಗೆ ಮಾಲಿನ್ಯ ಅಂಟುವುದಿಲ್ಲವೋ ಹಾಗೆ ಇಂಥವರಿಗೂ ಮಾನಸಿಕ ದು:ಖ ಇರುವುದಿಲ್ಲ. ಸುವರ್ಣಮಯವಾದ ಕಮಲ ರಾತ್ರಿ ಹೊತ್ತಿನಲ್ಲಿಯೂ ಕಳೆಗುಂದದೇ ವಿರಾಜಮಾನವಾಗಿರುವಂತೆ ಯಾವ ವಿಪತ್ತುಗಳಿಗೂ ಸಿಲುಕದೇ, ಶಾರೀರಿಕ ಕ್ಲೇಷವೂ ಇಲ್ಲದೇ ಇರುತ್ತಾರೆ. ಇಂಥವರು ತಮ್ಮ ಪ್ರಾಕೃತವಾದ ಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ಸಾಧನೋಪಾಯಗಳನ್ನು ಮಾತ್ರ ಆಶಿಸುವರಲ್ಲದೇ ಇನ್ಯಾವ ಸಂಪತ್ತನ್ನೂ ಆಶಿಸುವುದಿಲ್ಲ. ಇವರ ಬುದ್ಧಿಯು ಸದಾ ಶುಕ್ಲಪಕ್ಷದ ಚಂದ್ರನಂತೆ ಅತೀ ಮನೋಹರವಾಗಿ, ಶಮ ದಮ ಇತ್ಯಾದಿ ಅಮೃತರಸವು ವೃದ್ಧಿಹೊಂದುತ್ತಾ ಕ್ರಮಕ್ರಮವಾಗಿ ಅಭಿವೃದ್ಧಿಯಾಗುತ್ತಾ ಪರಿಪೂರ್ಣರಾಗುವರು. ಇದೇ ಮುಂದೆ ಇವರಿಗೆ ಮೋಕ್ಷಕ್ಕೂ ದಾರಿಯಾಗುವುದು. ಚಂದ್ರ ಹೇಗೆ ಎಂದೆಂದಿಗೂ ತನ್ನ ಸಹಜವಾದ ಶೈತ್ಯವನ್ನು ಬಿಟ್ಟಿರುವುದೇ ಇಲ್ಲವೋ ಹಾಗೆಯೇ ಈ ಮಹನೀಯರೂ ಎಂತಹ ದುಸ್ಸಹವಾದ ಆಪತ್ಕಾಲದಲ್ಲಿಯೂ ಕೂಡಾ ತಮ್ಮ ಸ್ವಾಭಾವಿಕವಾದ ಸೌಮ್ಯತೆಯನ್ನು ಬಿಡುವುದೇ ಇಲ್ಲ. ಆಗ ತಾನೇ ಹೊಸದಾಗಿ ಹೊಮ್ಮಿದ ಚಿಗುರುಗಳೊಂದಿಗೆ ಹೂ ಗೊಂಚಲುಗಳನ್ನು ಧರಿಸಿ ಕಂಗೊಳಿಸುವ ಲತೆಗಳಿಂದ ಶೋಭಿಸುವಂತೆ ಮೈತ್ರೀ, ಕರುಣಾ, ಮುದಿತಾ ಮುಂತಾದ ಭಾವನೆಗಳಿಂದ (ಗುಣಗಳಿಂದ) ಸುಂದರವಾದ ಪ್ರಕೃತಿಯಂತೆ ವಿಜೃಂಬಿಸುವರು. ಸಾಧುಗಳಲ್ಲೆಲ್ಲಾ ಪರಮಸಾಧುಗಳೆನ್ನಿಸಿಕೊಂಡಿರುವ ಅಂತಹ ಮಹಾಪುರುಷರು ಸರ್ವತ್ರ ಸಮರಾಗಿಯೂ, ಸುಖದು:ಖಾದಿ ಸಕಲ ದ್ವಂದ್ವಗಳಲ್ಲಿಯೂ ಒಂದೇ ಸಮನಾದ ಚಿತ್ರವೃತ್ತಿ ಉಳ್ಳವರಾಗಿಯೂ ಸೌಮ್ಯರಾಗಿಯೂ (ಪ್ರಶಾಂತ) ಸಮುದ್ರಗಳಂತೆ ಮರ್ಯಾದೆಯನ್ನು (ತಮ್ಮ ಎಲ್ಲೆಯನ್ನು) ಮೀರದವರಾಗಿ (ಅಂದರೆ ಲೋಕ ಮರ್ಯಾದೆಯನ್ನು) ಕೇವಲ ಅದನ್ನು ಅನುಸರಿಸುವರಾಗಿರುತ್ತಾರೆ. ಇದಾದ ನಂತರ ಕಡೆಯಲ್ಲಿ ಅವರು ಶ್ರೀರಾಮನಿಗೆ 'ನೀನೂ ಅಂತಹವರಂತೆ ಮಹಾಪುರುಷ ಎನಿಸಿಕೊಳ್ಳಲು ಸತತ ಪ್ರಯತ್ನ ಪಡುತ್ತಿರುಬೇಕು. ಅವರು ಇಂತಹ ಉತ್ತಮ ಗುಣಸಂಪನ್ನರಾಗಿರುವ ಕಾರಣವೇ ಅವರ ಸ್ಥಿತಿಯು ಯಾವುದೊಂದು ವಿಪತ್ತಿಗೂ ಈಡಾಗದೇ ನಿರುಪದ್ರವವಾಗಿರುವುದು. ಆದ್ದರಿಂದಲೇ ನೀನೂ ಸಹ ಅಂತಹ ಸ್ಥಿತಿಯನ್ನು ಪಡೆಯಲು ಸಂತತವಾಗಿ ಯತ್ನಿಸಬೇಕು. ಅಲ್ಲದೇ ವಿಪತ್ಸಾಗರದಲ್ಲಿ ಎಂದಿಗೂ ಹೋಗಿ ಬೀಳಬಾರದು' ಎನ್ನುತ್ತಾರೆ.

ನಾವುಗಳೂ ಇಂತಹ ಗುಣಗಳನ್ನು ಅಳವಡಿಸಿಕೊಂಡು ಮಹಾಪುರುಷರಾಗಲು ಸಾಧ್ಯವಿಲ್ಲದೇ ಹೊದರೂ ಮಹಾಪುರುಷರ ಒಂದು ಅಂಶ ಎನಿಸಕೊಳ್ಳಲು ಸಾಧ್ಯವಿದೆ.

ಬಾಯಾರಿದಾಗ ಕುಡಿಯಲು...

● ವಿಜಯಲಕ್ಷ್ಮೀ ಎಸ್ ಬೆಂಗಳೂರು

ಬಿಸಿಲಿನ ತಾಪಕ್ಕೆ ದೇಹವು ಬೆವರುತ್ತಾ ಇರುತ್ತದೆ; ದೇಹದ ನೀರು ಆವಿಯಾಗುತ್ತಾ ಇರುತ್ತದೆ. ಇದಕ್ಕೆ ಪೂರಕವಾಗಿ ನಾವು ಆಗಾಗ ದ್ರವ ರೂಪದ ಆಹಾರ, ಜ್ಯೂಸ್ ಸೇವಿಸುತ್ತಾ ಇರಬೇಕು. ಬೇಸಿಗೆಯಲ್ಲಿ ಆರೋಗ್ಯದಾಯಕ ಜ್ಯೂಸ್ ಹಾಗೂ ಪಾನಕಗಳನ್ನು ಹಲವಾರು ರೀತಿಯಲ್ಲಿ ಮಾಡಬಹುದು.

1) ದಾಸವಾಳದ ಹೂವಿನ ಶರಬತ್: ದಾಸವಾಳದ ಹೂವನ್ನು ರುಬ್ಬಿ ರಸ ತೆಗೆದು, ಅದಕ್ಕೆ ಸ್ವಲ್ಪ ನೀರು, ಬೆಲ್ಲ , ಏಲಕ್ಕಿ ಹಾಕಬೇಕು.
2) ಕಿತ್ತಳೆ ಹಣ್ಣನ್ನು ಬಿಡಿಸಿ, ರಸ ತೆಗೆದು, ಒಂದು ಚಿಟಿಕೆ ಹುರಿದ ಜೀರಿಗೆ ಪುಡಿ, ಒಂದು ಚಿಟಿಕೆ ಕಾಳುಮೆಣಸಿನ ಪುಡಿ, ಒಂದು ಚಿಟಿಕೆ ಉಪ್ಪು ಹಾಕಬೇಕು.
3) ನೀರು ಮಜ್ಜಿಗೆಗೆ ಬೆಲ್ಲ, ಜೀರಿಗೆ ಪುಡಿ, ಏಲಕ್ಕಿ ಪುಡಿ ಹಾಕುವುದು. ಇನ್ನೊಂದು ರೀತಿಯಲ್ಲಿ ನೀರು ಮಜ್ಜಿಗೆಗೆ ಸೈಂಧವ ಲವಣ ಜೀರಿಗೆ ಪುಡಿ, ಹಸಿಶುಂಠಿ ರಸ ಬೆರೆಸಿ ಸೇವಿಸುವುದು.
4) ಹುರಿದ ರಾಗಿಹಿಟ್ಟನ್ನು ನೀರಿನಲ್ಲಿ ಗಂಟಿಲ್ಲದಂತೆ ಸೇರಿಸಿ, ಬೆಲ್ಲದ ಪುಡಿ, ನಿಂಬೆರಸ ಹಾಕಿ ಕುಡಿಯುವುದು.
5) ತಣ್ಣನೆಯ ಹಾಲಿಗೆ, ಪುಡಿಮಾಡಿದ ಕೆಂಪುಕಲ್ಲುಸಕ್ಕರೆ, ಏಲಕ್ಕಿ ಪುಡಿ ಹಾಕುವುದು.
6) ಕಲ್ಲಂಗಡಿ ಹಣ್ಣಿನಿಂದ ಬೀಜಗಳನ್ನು ಬೇರ್ಪಡಿಸಿ ಅದರ ರಸಕ್ಕೆ ಸಕ್ಕರೆ ಹಾಗೂ ಏಲಕ್ಕಿಯನ್ನು ಹಾಕಿ ಸೇವಿಸುವುದು.
7) ಟೊಮೇಟೊಗಳನ್ನು ಮಿಕ್ಸಿಗೆ ಹಾಕಿ, ಸ್ವಲ್ಪ ನೀರು ಬೆರೆಸಿ, ಶೋಧಿಸಿ, ಬೆಲ್ಲ ಏಲಕ್ಕಿ ಪುಡಿ ಹಾಕಿ ಸೇವಿಸುವುದು.
8) ಅನಾನಸ್ ಹಣ್ಣು ಹೆಚ್ಚಿ, ಮಿಕ್ಸಿಗೆ ಹಾಕಿ ಸ್ವಲ್ಪ ನೀರು ಹಾಕಿ, ಬೆಲ್ಲದ ಪುಡಿ, ಶುಂಠಿ ರಸ ಸೇರಿಸುವುದು.
9) ಹೆಸರು ಕಾಳು ಜೂಸ್: 1/2 ಬಟ್ಟಲು ಹೆಸರುಕಾಳನ್ನು 3-4 ಗಂಟೆ ನೆನೆಸಿ, ಮಿಕ್ಸಿಗೆ ಹಾಕಿ ರುಬ್ಬಿ, ಅದಕ್ಕೆ ನೀರು, ಉಪ್ಪು, ಶುಂಠಿ, ಜೀರಿಗೆ ಪುಡಿ ಬೆರೆಸಿ ಕುಡಿಯಬಹುದು. ಇದಕ್ಕೆ ನೀರಿನ ಬದಲು ಮಜ್ಜಿಗೆ ಕೂಡ ಬೆರೆಸಬಹುದು.
10) ಪುದಿನಾ ಸೊಪ್ಪನ್ನು ಬಿಡಿಸಿಕೊಂಡು ಮಿಕ್ಸಿಗೆ ಹಾಕಿ, ನೀರು ಬೆರೆಸಿ, ಬೆಲ್ಲ, ಏಲಕ್ಕಿ ಪುಡಿಯನ್ನು ಬೆರೆಸಿ ಕುಡಿಯುವುದು.
11) ಬಾಳೆಹಣ್ಣನ್ನು ಮಿಕ್ಸಿಗೆ ಹಾಕಿ, ಸ್ವಲ್ಪ ಹಾಲನ್ನು ಬೆರೆಸಿ, ತೆಳುವಾಗಿ ಮಾಡಿಕೊಂಡು, ಅದಕ್ಕೆ ಬೆಲ್ಲ , ಏಲಕ್ಕಿ ಪುಡಿ ಹಾಕುವುದು.
12) ಕಬ್ಬಿನ ರಸಕ್ಕೆ ಚಿಟಿಕಿ ಕಾಳುಮೆಣಸು ಪುಡಿ ಶುಂಠಿ ರಸ ಹಾಕುವುದು.
13) ನೀರು, ಬೆಲ್ಲ, ನಿಂಬೆರಸ , ಏಲಕ್ಕಿ (ಬೇಕಿದ್ದರೆ ತೀರಾ ಸ್ವಲ್ಪ ಉಪ್ಪು) ಸೇರಿಸಿ ಪಾನಕ ಮಾಡುವುದು. ಇದು ಬಾಯಾರಿಕೆಯನ್ನು ಶೀಘ್ರವಾಗಿ ಹೋಗಲಾಡಿಸುತ್ತದೆ.
14) ಕಾಮಕಸ್ತೂರಿ ಪಾನಕ....1/2 ಬಟ್ಟಲು ಕಾಮಕಸ್ತೂರಿ ಬೀಜವನ್ನು ರಾತ್ರಿ ನೆನೆಸಿಟ್ಟರೆ ಬೆಳಿಗ್ಗೆಗೆ ಅರಳುವುದು. ಇದನ್ನು ಕಿವುಚಿ , ಜೊತೆಗೆ ಬೆಲ್ಲ, ನೀರು , ಹಾಲು ಹಾಕಿ ಕುಡಿಯಬೇಕು. ಇದು ಬಾಯಿಹುಣ್ಣಿಗೂ ಒಳ್ಳೆಯದು.
15) ಬೆರಕೆ ಹಣ್ಣುಗಳನ್ನು ಮಿಕ್ಸಿಗೆ ಹಾಕಿ, ಬೆಲ್ಲದ ಪುಡಿ , ಹಾಲು ಹಾಕಿ, ಕುಡಿಯುವುದು ಒಳ್ಳೆಯದು.

ತಂಪು ಪಾನೀಯ ಹಾಗೂ ಜ್ಯೂಸ್‌ಗಳನ್ನು ಈ ರೀತಿಯಾಗಿ ತಯಾರಿಸಿ ಬೇಸಿಗೆ ದಿನಗಳಲ್ಲಿ ಕೊಡುವುದರಿಂದ ಬಾಯಾರಿಕೆ ನೀಗುತ್ತದೆ, ಮನಸ್ಸು ಆಹ್ಲಾದಗೊಳ್ಳುತ್ತದೆ ಹಾಗೂ ದೇಹಕ್ಕೆ ಚೈತನ್ಯ ನೀಡುತ್ತದೆ. (ಸಾಧ್ಯವಾದಷ್ಟು ಕಡಿಮೆ ಬೆಲ್ಲ ಅಥವಾ ಸಕ್ಕರೆ ಸೇರಿಸಬೇಕು. ಸಕ್ಕರೆ ಸೇರಿಸದೇ ಇರುವ ಜ್ಯೂಸ್ ಆರೋಗ್ಯಕ್ಕೆ ಉತ್ತಮ.)

ಶ್ರಮ ಸಂಸ್ಕೃತಿಯ ಪ್ರತೀಕ

● ಹೊಸ್ಮನೆ ಮುತ್ತು

ಮಂಡಾಳೆ, ಮಂಡೆ ಹಾಳೆ, ಹಾಳೆ ಟೊಪ್ಪಿ ಎಂದೆಲ್ಲಾ ಕರೆಯುವ ಈ ಟೋಪಿ ಅಡಿಕೆ ಮರದ ಹಾಳೆಯಿಂದ ತಯಾರಾಗುವಂತಹದು. ಮಲೆನಾಡು ಮತ್ತು ಕರಾವಳಿ ಭಾಗದ ಕೃಷಿಕರು ಹಾಗೂ ಕೃಷಿ ಕಾರ್ಮಿಕರ ತೊಡುಗೆಯಾದ ಈ ವಿಶಿಷ್ಟ ಟೋಪಿ, ಬಿಸಿಲು, ಹನಿ ಮಳೆ ತಡೆಯುವಂತೆ ವಿನ್ಯಾಸಗೊಂಡಿದೆ. ತಲೆಗೆ ಭಾರ ಹೊತ್ತು ಸಾಗುವಾಗ ಉಂಟಾಗುವ ತೊಂದರೆಯನ್ನು ತಪ್ಪಿಸಲು ಮತ್ತು ದೇಹಕ್ಕೆ ಆರಾಮ ನೀಡಲು ಇದು ಸಹಾಯಕ. ಈ ಸಾವಯವ ಟೋಪಿ ತಯಾರಿಕೆಯು ಒಂದು ಸಾಂಪ್ರದಾಯಿಕ ಕಲೆ. ಸ್ವಲ್ಪ ತೆಳು ಹಾಗೂ ಗುಂಡಿ ಇರುವ, ಚೆನ್ನಾಗಿ ಒಣಗಿದ ಅಡಿಕೆ ಹಾಳೆಯನ್ನು ಆಯ್ದು ತಂದು, ಕೆಲ ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, ಮೆದುವಾದ ನಂತರ, ಒಳಭಾಗದ ಮೃದು ಪದರವನ್ನು ಹೆರೆದು ತೆಗೆದು ಹಾಳೆಯನ್ನು ತೆಳುವಾಗಿಸಬೇಕು. ತಲೆಯ ಅಳತೆಗೆ ಸರಿಯಾಗಿ ಕತ್ತರಿಸಿ, ಎರಡು ತುದಿಗಳನ್ನು ನೆರಿಗೆ ಆಕಾರದಲ್ಲಿ ಮಡುಚಿ ಕೈ ಹೊಲಿಗೆ ಹಾಕಬೇಕು. ಹೀಗೆ ಮಾಡಿದರೆ ಅಡಿಕೆ ಹಾಳೆಯ ಟೋಪಿ ಸಿದ್ಧ. ಮರದಿಂದ ನೆಲಕ್ಕೆ ಬೀಳುವ ಕಸಕ್ಕೆ ಹೋಲಿಸುವಂತಹ ವಸ್ತುವೊಂದು ಕುಶಲಕರ್ಮಿಯ ಕೈಚಳಕದಿಂದ ಕಲಾತ್ಮಕವಾಗಿ ಶೃಂಗಾರಗೊಂಡು ಹೊಸ ರೂಪ ಪಡೆಯುವ ಬಗೆ ವಿಶೇಷ. ಒಂದು ಹಾಳೆ ಟೊಪ್ಪಿ ಮಾಡಲು ಎರಡು ಹಾಳೆಗಳು ಬೇಕಾಗುತ್ತದೆ. ಹಾಳೆ ಟೋಪಿಗಳು ಸಂಪೂರ್ಣವಾಗಿ ಕೈಯಲ್ಲೇ ತಯಾರಾಗುತ್ತವೆ. ಈ ಟೋಪಿಗಳು ತಯಾರಾಗುವ ಪ್ರಕ್ರಿಯೆಯಲ್ಲಿ ಯಾವುದೇ ವಿಧದ ಹಾನಿಕರ ರಾಸಾಯನಿಕ ಬಳಸದೇ, ಶುದ್ಧ ಅಡಿಕೆ ಹಾಳೆ ಮಾತ್ರ ಇದರಲ್ಲಿ ಬಳಕೆಯಾಗುವುದರಿಂದ ವಿಲೇವಾರಿಯು ಸುಲಭ. ಅಡಿಕೆ ಹಾಳೆಗಳು ಮಣ್ಣಿನಲ್ಲಿ ಬೆರೆತು ಬಹು ಬೇಗ ಕೊಳೆತು ಗೊಬ್ಬರವಾಗುವ ಕಾರಣ ಹಾಳೆ ಟೊಪ್ಪಿ ಅಪ್ಪಟ ಪರಿಸರ ಸ್ನೇಹಿ. ಇದು ಶ್ರಮ ಸಂಸ್ಕೃತಿಯ ಪ್ರತೀಕವೂ ಹೌದು. ಅಡಿಕೆ ಹಾಳೆಯ ಟೊಪ್ಪಿ, ದಕ್ಷಿಣ ಕನ್ನಡದ ಸಂಸ್ಕೃತಿಯ ಅವಿಭಾಜ್ಯ ಅಂಗವಾ ಗಿದ್ದು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅತಿಥಿಗಳಿಗೆ ಅಡಿಕೆ ಹಾಳೆ ಟೊಪ್ಪಿಯನ್ನು ಗೌರವ ಸೂಚಕವಾಗಿ ತೊಡಿಸುವ ಸಂಪ್ರದಾಯ ಈಗ ತುಳುನಾಡಿನಲ್ಲಿದೆ.

ಮದುವೆ ಎಂಬ ಕಟ್ಟುಪಾಡು

● ಮೇಘನಾ ದುಶ್ಯಲಾ

ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಇಪ್ಪತ್ತೊಂದನೇ ಶತಮಾನದಲ್ಲೂ ಹೆಣ್ಣು ತನ್ನ ಮದುವೆಯ ವಿಷಯದಲ್ಲಿ ಗಂಡಿನಷ್ಟು ಸ್ವತಂತ್ರಳಲ್ಲ. ಇವತ್ತಿಗೂ ಎಷ್ಟೋ ಕಡೆಗಳಲ್ಲಿ ಹೆಣ್ಣೆಂದರೆ ಒಂದು ಮನೆಯಲ್ಲಿ ಹುಟ್ಟಿ ಬೆಳೆದು ನಂತರ ಮತ್ತೊಂದು ಮನೆ ಸೇರಿ ಆ ಮನೆತನದ ವಂಶ ಬೆಳೆಸುವ, ಆ ಮನೆಯವರ ಇಷ್ಟಾರ್ಥ ನೆರವೇರಿಸಲು ಶ್ರಮಿಸುವ ರೋಬೋಟ್ ಅಷ್ಟೇ?

ಹೆಣ್ಣು ಹೆತ್ತ ತಂದೆತಾಯಿಗಳಿಗೆ ಮಗಳ ಇಷ್ಟ ಕಷ್ಟಕ್ಕಿಂತ, ವಯಸ್ಸಿಗೆ ಬಂದ ಮಗಳನ್ನ ಮದುವೆ ಮಾಡಿ ಗಂಡನ ಮನೆಗೆ ಕಳಿಸಿದರೆ ಸಾಕು ಎಂಬ ಭಾವನ. ಆ ಸಂಬಂಧ ಅವಳಿಗೆ ಇಷ್ಟವಿದೆಯಾ? ಅವಳನ್ನ ಸಂತೋಷವಾಗಿ ನೋಡಿಕೊಳ್ಳುತ್ತಾರಾ? ಅವಳಿಗೆ ಆ ಮನೆಯಲ್ಲಿ ಸುರಕ್ಷತೆ ಇದೆಯಾ? ಯೋಚಿಸುವವರು ಕಡಿಮೆ. ಅವಳ ಬದುಕು ಚೆನ್ನಾಗಿದ್ದರೆ ತಮ್ಮ ನಿರ್ಧಾರದ ಬಗ್ಗೆ ಒಣ ಹೆಮ್ಮೆ. ಇಲ್ಲದಿದ್ದರೆ ಅದು ಅವಳ ಕರ್ಮ. ಅಲ್ಲಿಗೆ ಮಗಳು ಅವರ ಲಾಜಿಕಲ್ ಕಟ್ಟುಪಾಡುಗಳಿಗೆ ಕೊರಳೊಡ್ಡುವ ಬಲಿಪಶು!

ಅಕಸ್ಮಾತ್, ವಿಧಿಯ ಶಾಪಕ್ಕೆ ಗುರಿಯಾಗಿ ತನ್ನ ಚಿಕ್ಕ ವಯಸ್ಸಿನಲ್ಲೇ ವಿಧವೆಯಾದಳೊ ಅಥವಾ ಪತಿ ಹಾಗು ಮನೆಯವರಿಂದ ದೌರ್ಜನ್ಯಕ್ಕೆ ಸಿಕ್ಕು ಬಳಲಿದಳು ಆಗ ಮಗಳು ಹೆತ್ತವರ ಹಾಗು ಸಂಬಂಧಿಕರ ಇಲ್ಲಾಜಿಕಲ್ ಕಟ್ಟುಪಾಡುಗಳಿಗೆ ಶರಣಾಗುವ ಜೀವಚ್ಛವ!

ಮಾನಸಿಕವಾಗಿ ಜರ್ಜರಿತಳಾದ ಮಗಳಿಗೆ ಸಾಂತ್ವನ ನೀಡಿ, ಧೈರ್ಯ, ಸ್ಥೈರ್ಯ ತುಂಬುವ ಅವಳನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಬಲಳನ್ನಾಗಿ ಮಾಡುವ ಆಲೋಚನೆ ಹೆತ್ತವರಲ್ಲಿ ಬರುವುದೇ ಇಲ್ಲ. ಹಾಗೊಮ್ಮೆ ಮನದಲ್ಲಿ ಸುಳಿದು ಹೋದರೂ ನಕ್ಷತ್ರಿಕರಂತಹ ಸಂಬಂಧಿಕರು ಕಡ್ಡಿ ಅಲ್ಲಾಡಿಸದೇ ಇರಲ್ಲ.

ಸಾಂತ್ವನದ ನುಡಿಗಳು?

ನಾಲ್ಕು ಗೋಡೆಯ ನಡುವೆ ಗಂಡ ಹಾಗು ಆತನ ಮನೆಯವರಿಂದ ಅನುಭವಿಸಿದ ಕಿರುಕುಳವನ್ನು ಕೆಟ್ಟ ಕನಸೆಂದು ತಿಳಿದು ಮರೆತು ಬಿಡು ಎನ್ನುವ ಹೆತ್ತವರ ಹಾಗು ಸಂಬಂಧಿಕರ ಸಾಂತ್ವನದ ನುಡಿಗಳು (?)ಬದುಕಿನ ಬಹುದೊಡ್ಡ ವ್ಯಂಗ್ಯ. ವಿಚಿತ್ರ ಏನೆಂದರೆ ಅವಳು ದುಃಖದ ಒತ್ತಡ ತಡೆಯಲಾರದೆ ತೋಡಿಕೊಂಡ ಅಷ್ಟಿಷ್ಟು ಅಳಲು ಮಾತ್ರವೇ ಅವರ ಅರಿವಿಗೆ ನಿಲುಕುವುದು ಹೊರತು ಅವಳನ್ನು ಹೈರಾಣಾಗಿಸಿದ ಯಮಯಾತನೆಯ ತೀವ್ರತೆ ಕಿಂಚಿತ್ತೂ ಅರಿವಿರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಮಗಳು ಎರಡನೇ ಮದುವೆಗೆ ಒಪ್ಪದಿದ್ದರೆ ಅವಳನ್ನು ಒಪ್ಪಿಸಲು ಅಗತ್ಯವಿರುವ ಎಲ್ಲ ಬಗೆಯ ಎಮೋಷನಲ್ ಹೈಡ್ರಾಮ ಯಶಸ್ವಿಯಾಗಿರುತ್ತದೆ. ಪರಿಣಾಮ ಅವಳು ಡಿಪ್ರೆಶನ್‌ಗೆ ಬಲಿಯಾಗುವುದೊ, ಆತ್ಮಹತ್ಯೆಗೆ ಶರಣಾಗುವುದೊ ಇಲ್ಲಾ ಬಾಣಲೆಯಿಂದ ಬೆಂಕಿಗೆ ಬೀಳುವ ಸಾಧ್ಯತೆ ಇದೆ. ಅಲ್ಲಿಗೆ ಅವಳ ಬದುಕಿನಲ್ಲಿ ಮದುವೆ ಎಂಬ ಲಾಜಿಕಲ್ ಹಾಗು ಇಲ್ಲಾಜಿಕಲ್ ಕಟ್ಟುಪಾಡುಗಳ ನಡುವಿನ ಹೊಯ್ದಾಟದಲ್ಲಿ ಅರ್ಧ ಜೀವನ ಮುಗಿದಿರುತ್ತದೆ.

ಇಂಥದೆಲ್ಲ ಸನ್ನಿವೇಶಗಳು ಪರಿಸ್ಥಿತಿಗಳು ಹುಟ್ಟಿದಾರಾಭ್ಯ 'ನೀನು ಅಂದ್ರೆ ನಿಮ್ಮಪ್ಪ.. ಐ ಡೋಂಟ್ ಕೇರ್' ಎನ್ನುವಂಥ ಸ್ವಭಾವದ ಘಾಟಿ ಹೆಣ್ಣು ಮಕ್ಕಳಿಗೆ ಎದುರಾಗುವುದು ಇಲ್ಲ; ಒಂದೊಮ್ಮೆ ಆದರೂ ಸುಲಭವಾಗಿ ಮನಸ್ಸಿನಾಳಕ್ಕೆ ತಾಕುವುದಿಲ್ಲ.



ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	2		■	3	■	4		5
■		■	6				■	
7				■	■	8	9	
	■	■	10	11		■		■
12	13		■		■	14		15
■		■	16		17	■	■	
18		19	■	■	20		21	
	■	22		23		■		■
24			■		■	25		

ಎಡದಿಂದ ಬಲಕ್ಕೆ

1. ಕೊಡಗಿನಲ್ಲಿ ಹುಟ್ಟುವ ನದಿ (3)
4. ಆಗಸಕ್ಕೆ ಮತ್ತೊಂದು ಹೆಸರು (3)
6. ನೀರಿನಿಂದ ಕೂಡಿದ ಮೋಡ (4)
7. ಆತನ ಕುಲವಿದು (4)
8. ಹಣೆಗಿಟ್ಟುಕೊಳ್ಳುವ ಬೊಟ್ಟು (3)
10. ಅಲ್ಲಾಡು ಅಥವಾ ಚಲಿಸು ಎಂದರ್ಥ (3)
12. ಮೋಸ ಅಥವಾ ವಂಚನೆ (3)
14. ಅಣ್ಣ ಮಾಡಿದ ಅಪಹಾಸ್ಯ (3)
16. ಹಿಮಾಲಯದ ಸರೋವರದ ಮೊದಲ ಪದ (3)
18. ನೂಲುವ ಸಾಧನ (3)
20. ತಿರಸ್ಕಾರದ ಮಾತು (4)
22. ಬಳ್ಳಿಯ ಮಂಟಪವಿದು (4)
24. ಕತ್ತರಿಸುವಿಕೆ ಅಥವಾ ಕೊಯ್ಯುವಿಕೆ (3)
25. ಜನರ ಮಧ್ಯೆ, ಜೋಪಾನ (3)

ಮೇಲಿನಿಂದ ಕೆಳಕ್ಕೆ

2. ನೋವಿಗೆ ಇನ್ನೊಂದು ಹೆಸರು (3)
3. ಎರಡಕ್ಷರದ ಶಕ್ತಿಯಿದು (2)
4. ಗತಿಯ ನಡುವೆ ಪತಿವ್ರತೆ (3)
5. ಸ್ವರ್ಗದ ವಿರುದ್ಧಪದ (3)
6. ಸೀತಾಮಾತೆಯ ತಂದೆ (3)
7. ತಲೆಯ ಮೇಲಿನ ಕಿರೀಟ (3)
9. ಶ್ರೀರಾಮನ ಜೊತೆಗೆ ಕಾಡಿಗೆ ಹೋದ ಸಹೋದರ (3)
11. ಸುಡುವಿಕೆ ಮತ್ತೊಂದು ಹಸುವಿನ ನಡುವೆ ಇದೆ (3)
13. ಅಂತರಂಗಕ್ಕೆ ತಾಗುವ ಎಂದರ್ಥ (3)
15. ಮದುವೆಯಾಗದ ಹುಡುಗಿ (3)
17. ಗುಂಪು ಸಹ ಹೌದು (3)
18. ಕೆರೆ ಅಥವಾ ಜಲಾಶಯ (3)
19. ಮೂರಕ್ಷರದ ಹರಾಜು (3)
21. ಇದು ಬರೆದಂತಹ ಎಂದರ್ಥ (3)
23. ಮತ್ತೊಂದು ಹದ್ದು (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ಕಾವೇರಿ 4. ಗಗನ 6. ಜಲಧರ 7. ಮನೆತನ 8. ತಿಲಕ 10. ಕದಲು 12. ಟಮಾಳ 14. ಅಣಕ 16. ಮಾನಸ 18. ತಕಲಿ 20. ಮೂದಲಿಕೆ 22. ಲಾಕ್ಷಾಗೃಹ 24. ಕಟಾವು 25. ಜತನ

ಮೇಲಿನಿಂದ ಕೆಳಕ್ಕೆ: 2. ವೇದನೆ 3. ಬಲ 4. ಗರತಿ 5. ನರಕ 6. ಜನಕ 7. ಮಕುಟ 9. ಲಕ್ಷ್ಮಣ 11. ದಹನ 13. ಮಾರ್ಮಿಕ 15. ಕನ್ನಿಕೆ 17. ಸಮೂಹ 18. ತಟಾಕ 19. ಲಿಲಾವು 21. ಲಿಖಿತ 23. ಗೃಧ್ರ

ಸದಾ ಧರ್ಮದಲ್ಲಿ ನಡೆದ ಕೌರವಸಹೋದರಿ 'ದುಶ್ಯಲಾ'

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯುಟ್ಯೂಬ್ ಚಾನೆಲ್‌ನಲ್ಲಿ!

ಮಹಾಭಾರತದಲ್ಲಿ ಬರುವ 'ದುಶ್ಯಲಾ' ಧೃತರಾಷ್ಟ್ರ ಗಾಂಧಾರಿಯರ 101 ಜನ ಮಕ್ಕಳಲ್ಲಿ ಏಕೈಕ 101ನೇ ಮುದ್ದಿನ ಕುವರಿ. ಮಹಾಭಾರತದ ತೆರೆಮರೆಗೆ ಸರಿದ ಪಾತ್ರಗಳಲ್ಲಿ ಇವಳ ಪಾತ್ರವೂ ಒಂದು. ಕೌರವ ಪಾಂಡವರಿಬ್ಬರಿಗೂ ಇವಳು ಏಕೈಕ ಸಹೋದರಿ. ಸುಂದರಿ ದುಶ್ಯಲಾ ಪಿತಾಮಹ ಭೀಷ್ಮರಿಂದ ಸಮರ ಕಲೆಯನ್ನು ಕಲಿತಿದ್ದಳು. ರಾಜಕುಮಾರಿಯಾಗಿ ಅರಮನೆಯ ಸುಖ ಸಂಪತ್ತಿನಲ್ಲಿ ಬೆಳೆದವಳು. ವಿವಾಹದ ನಂತರ ಕಷ್ಟಗಳ ಸರಮಾಲೆಯನ್ನೇ ಎದುರಿಸಬೇಕಾಯಿತು.

ಇವಳನ್ನು ಪರಾಕ್ರಮಿ ರಾಜನಾದ ಜಯದ್ರಥನಿಗೆ ಮೂರನೇ ರಾಣಿಯಾಗಿ ವಿವಾಹ ಮಾಡಲಾಯಿತು. ಸಿಂಧುರಾಜ ಗುಣದಲ್ಲಿ ಕಾಮುಕ, ಹುಡುಕು ಸ್ವಭಾವದವನು. ಇಷ್ಟಾಗಿಯೂ ದುರ್ಯೋಧನನಿಗೆ ಭಾವನ ಮೇಲೆ ಅತೀವ ಪ್ರೀತಿ ಏಕೆಂದರೆ ಜಯದ್ರಥನಿಗೆ ಪಾಂಡವರ ಮೇಲೆ ದ್ವೇಷವಿದ್ದು ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ.

ಪಾಂಡವರು ದ್ರೌಪತಿ ಜೊತೆ ವನವಾಸದಲ್ಲಿದ್ದಾಗ ಒಮ್ಮೆ ಜಯದ್ರಥ ಪಾಂಡವರು ನೆಲೆಸಿದ್ದ ಕಾಡಿನ ಮಾರ್ಗದಲ್ಲಿ ಬಂದನು. ಅಕಸ್ಮಾತಾಗಿ ಅಲ್ಲಿ ದ್ರೌಪದಿಯನ್ನು ನೋಡಿ ಅವಳ ಸೌಂದರ್ಯಕ್ಕೆ ಮನ ಸೋತು ಅಪಹರಿಸಲು ಪ್ರಯತ್ನಪಟ್ಟಿದ್ದ. ಆದರೆ ಶಕ್ತಿಶಾಲಿಯಾದ ಪಾಂಡವರಿಂದ ಸೋತು ಶರಣಾದನು. ತಮ್ಮ ಸಹೋದರಿಯ ಗಂಡ ಎಂದು ಕ್ಷಮಿಸಿ, ಕೊಲ್ಲುವ ಬದಲು ಅವನ ತಲೆಯನ್ನು ಬೋಳಿಸಿ ಅವಮಾನ ಮಾಡಿದ್ದರು. ಜಯದ್ರಥನು ಈ ಅವಮಾನ ಸಹಿಸಿಕೊಳ್ಳಲಾರದೆ ಪಾಂಡವರ ಮೇಲೆ ಸೇಡು ತೀರಿಸಿ ಕೊಳ್ಳಲು ಅರಣ್ಯಕ್ಕೆ ಹೋಗಿ ಶಿವನ ಕುರಿತು ತಪಸ್ಸು ಮಾಡಿ ಶಿವನಿಂದ ತಾನು ಮಾಡಿದ ಪಾಪಗಳೆನ್ನೆಲ್ಲಾ ಪರಿಹಾರ ಮಾಡಿ ಕೊಂಡು, ಯುದ್ಧದಲ್ಲಿ ಪಾಂಡವರನ್ನು ತಡೆ ಹಿಡಿಯಬಲ್ಲಂಥಾ ವರ ಪಡೆದುಕೊಂಡಿದ್ದ.

ನಂತರ ಕುರುಕ್ಷೇತ್ರಯುದ್ಧ ಪ್ರಾರಂಭವಾದಾಗ ದುರ್ಯೋಧನನ ಪರವಾಗಿ ಯುದ್ಧ ಭೂಮಿಗಿಳಿದನು. ದ್ರೋಣರು ರಚಿಸಿದ ಚಕವ್ಯೂಹದ ಒಳಗೆ ಹೋಗದಂತೆ ಪಾಂಡವರನ್ನು ತಡೆದು ಅರ್ಜುನನ ಮಗ ಅಭಿಮನ್ಯುವಿನ ಸಾವಿಗೆ ಕಾರಣನಾದವನು ಶಿವನವರ ಪಡೆದ ಇದೇ ಜಯದ್ರಥ. ಇದನ್ನು ತಿಳಿದ ಅರ್ಜುನನು ಕೋಪದಿಂದ ಮರುದಿನ ಸೂರ್ಯಾಸ್ತದೊಳಗೆ ಜಯದ್ರಥನನ್ನು ಕೊಂದುಬಿಡುವುದಾಗಿ ಶಪಥ ಮಾಡಿ ಕೃಷ್ಣನ ಸಹಾಯದಿಂದ ಅವನ ತಲೆಯನ್ನು ಕತ್ತರಿಸಿ ಹಾಕಿದನು. ಈ ಯುದ್ಧದಲ್ಲಿ ಅರ್ಜುನನಿಗೆ ಗೊತ್ತಿಲ್ಲದೆ ದುಶ್ಯಲಾಳ ಮಗ 'ಸುರದ'ನು ಅವನ ಕೈಯಿಂದ ಹತನಾದನು. ಮಗನ ಸಾವಿನ ಸುದ್ದಿ ತಿಳಿದು ದುಶ್ಯಲಾಳಿಗೆ ಬಹಳ ದುಃಖವಾಯಿತು. ಆ ಸಮಯದಲ್ಲಿ ಅವಳಿಗೆ ಸಾಂತ್ವಾನ ಮಾಡಲು ಕೌರವರು ಪಾಂಡವರು ಇಬ್ಬರೂ ಇರಲಿಲ್ಲ.

ಕುರುಕ್ಷೇತ್ರ ಯುದ್ಧಾ ನಂತರ ಹಸ್ತಿನಾಪುರದಲ್ಲಿ ಯುಧಿಷ್ಠಿರ ರಾಜ್ಯಭಾರ ಮಾಡುತ್ತಾ ಅಶ್ವಮೇಧಯಾಗ ಕೈಗೊಂಡನು. ಯಾಗದ ಅಶ್ವವನ್ನು ಬಿಟ್ಟಾಗ ಅದರ ಹಿಂದೆ ಅರ್ಜುನನೇ ಹೊರಟನು. ಯಾಗದ ಕುದುರೆ ಸಿಂಧೂ ರಾಜ್ಯ ಪ್ರವೇಶಿಸಿತು. ಅಲ್ಲಿ ದುಶ್ಯಲಾಳ ಮೊಮ್ಮಗ ಅದನ್ನು ಬಂಧಿಸಿದನು. ದುಶ್ಯಲಾ ಅರ್ಜುನನ ಮೇಲಿನ ಸಿಟ್ಟಿನಿಂದ ಮೊಮ್ಮಗನೊಡನೆ ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸಿದಳು.

ಸಹೋದರಿ ದುಶ್ಯಲಾಳನ್ನು ನೋಡಿದ ಅರ್ಜುನನು ನೀನು ನಮ್ಮೆಲ್ಲರ ಒಬ್ಬಳೇ ಪ್ರೀತಿಯ ತಂಗಿ ನಿನ್ನೊಡನೆ ಯುದ್ಧ ಮಾಡಲು ಬಂದಿಲ್ಲ ಸಹೋದರನಾಗಿ ಬಂದಿದ್ದೇನೆ ಎಂದಾಗ ದುಶ್ಯಲಾ ಅವನ ಮಾತಿಗೆ ಸೋಲದೆ ನೀನು ನನ್ನ ಪತಿ ಹಾಗೂ ಮಗನನ್ನು ಕೊಂದಿರುವೆ ನಾನು ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಸಿಡಿದೆದ್ದಳು. ಆಗ ಅರ್ಜುನ ಆಕೆಗೆ ಕುರುಕ್ಷೇತ್ರದಲ್ಲಿ ಮೋಸದಿಂದ ತನ್ನ ಮಗ ಅಭಿಮನ್ಯು ಪ್ರಾಣ ಕಳೆದುಕೊಂಡದ್ದನ್ನೂ, ಜಯಾದ್ರತನ ಕುತಂತ್ರ ಎಲ್ಲವನ್ನೂ ವಿವರಿಸಿದನು.

ನಿಜಾಂಶವನ್ನು ಅರಿತ ದುಶ್ಯಲೆ ಅರ್ಜುನನಿಗೆ ಕ್ಷಮಾಪಣೆಯನ್ನು ಕೇಳಿದಳು. ಅರ್ಜುನ ದುಶ್ಯಲೆಯ ಮೊಮ್ಮಗನನ್ನು ಸಿಂಧು ರಾಜ್ಯಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಿದನು. ಕೌರವ ಸಹೋದರರೆಲ್ಲರೂ ಅಧರ್ಮೀಯರಾಗಿದ್ದರೂ ದುಶ್ಯಲಾ ಎಂದಿಗೂ ಧರ್ಮ ಮಾರ್ಗದಲ್ಲಿ ನಡೆದಳು. ಮಹಾಭಾರತದಲ್ಲಿ ಇವಳ ಪಾತ್ರ ತೆರೆಮರೆಯಲ್ಲಿದ್ದರೂ ಸಹ ಇಂದಿಗೂ ಜನಮನದಲ್ಲಿ ನೆಲೆಸಿದ್ದಾಳೆ. ಭಾರತದಲ್ಲಿ ಇವಳ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಕೇರಳದ ಒಂದು ದೇವಾಲಯ ಪ್ರಮುಖವಾಗಿದ್ದು ನಿತ್ಯವೂ ಇಲ್ಲಿ ದುಶ್ಯಲೆಗೆ ಪೂಜೆ ಸಲ್ಲುತ್ತದೆ. ನಾವು ಧರ್ಮ ಮಾರ್ಗದಲ್ಲಿ ನಡೆಯಬೇಕು ಎಂದು ನಿರ್ಧಾರ ಮಾಡಿದರೆ, ಎಂತಹ ಸಂದರ್ಭದಲ್ಲೂ ಅದನ್ನು ನಿಭಾಯಿಸಬಹುದು ಎನ್ನುವುದಕ್ಕೆ ದುಶ್ಯಲೆಯ ಕಥೆ ಒಳ್ಳೆಯ ಉದಾಹರಣೆ.

ಜ್ಞಾನವು ನಮ್ಮ ಅಂತರಂಗದಲ್ಲಿಯೇ ಇದೆ

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಯಾವುದನ್ನು ಪಡೆದ ನಂತರ ಮತ್ತಾವುದನ್ನೂ ಪಡೆಯಬೇಕಾಗಿಲ್ಲವೋ ಅಂತಹ ಜ್ಞಾನವನ್ನು ಎಲ್ಲಿ ಅಡಗಿಸಬೇಕೆಂದು ಒಮ್ಮೆ ಸೃಷ್ಟಿಕರ್ತ ಯೋಚಿಸುತ್ತಿದ್ದ. ಅವನ ಹೆಂಡತಿಯು ಎತ್ತರದ ಪರ್ವತ ಅಥವಾ ಆಳವಾದ ಮಹಾಸಾಗ ರವನ್ನು ಸೂಚಿಸಿದಳು. ಆದರೆ ಅವೆರಡನ್ನು ಅವನು ತಿರಸ್ಕರಿಸಿದ. ಯಾಕೆಂದರೆ ಮನುಷ್ಯ ಎತ್ತರಕ್ಕೆ ಏರಬಲ್ಲ ಆಳಕ್ಕೂ ಇಳಿಯಬಲ್ಲ. ಕೊನೆಗೆ ಅದನ್ನು ಮನುಷ್ಯನ ಒಳಗೇ ಇಡಬೇ ಕೆಂದು ನಿಶ್ಚಯಿಸಲಾಯಿತು. ಏಕೆಂದರೆ ಮನುಷ್ಯ ಅದನ್ನು ಜೀವನದ ಉದ್ದಕ್ಕೂ ಹೊರಗಡೆಯೇ ಹುಡುಕುತ್ತಿರುತ್ತಾನೆ. ಈ ಉದಾಹರಣೆಯಿಂದ ನಾವು ಕೃಷ್ಣನ ಹೇಳಿಕೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಜಗತ್ತಿನಲ್ಲಿ ಜ್ಞಾನದಷ್ಟು ಪವಿತ್ರವಾದದ್ದು ಮತ್ತಾವುದೂ ಇಲ್ಲ. ಕಾಲಕ್ರಮದಲ್ಲಿ ಯೋಗದಲ್ಲಿ ಪರಿಣಿತಿ ಹೊಂದಿದವನು ಅದನ್ನು ತನ್ನಲ್ಲಿ ಕಂಡುಕೊಳ್ಳುತ್ತಾನೆ. ಇದರ ಅರ್ಥವೆಂದರೆ ಜ್ಞಾನವು ನಮ್ಮ ಅಂತರಂಗದಲ್ಲಿ ಇದೆ. ಅದಕ್ಕಾಗಿಯೇ ಅದು ಎಲ್ಲರೊಳಗೆ ಇದೆ. ಅದನ್ನು ತನ್ನಲ್ಲಿ ಹಾಗೂ ಇತರರಲ್ಲಿ ಇರೋದನ್ನು ತಿಳಿಯುವುದೇ ಪ್ರಶ್ನೆಯಾಗಿದೆ.

ಮುಂದುವರಿದು ಕೃಷ್ಣ ಹೇಳುತ್ತಾನೆ ಶ್ರದ್ಧಾವಂತನು ಹಾಗೂ ಜಿತೇಂದ್ರಿಯನು ಅದನ್ನು ಪಡೆಯುತ್ತಾನೆ ಹಾಗೂ ಪರಮ ಶಾಂತಿಯನ್ನು ಹೊಂದುತ್ತಾನೆ. ಇದಕ್ಕೆ ವಿರುದ್ಧವಾಗಿ ಅವನು ಹೇಳುತ್ತಾನೆ ಅಜ್ಞಾನಿಯಾದವ, ಶ್ರದ್ಧೆ ಇಲ್ಲದವ ನಾಶ ಹೊಂದುತ್ತಾನೆ ಹಾಗೂ ಅವನಿಗೆ ಇಹ ಪರ ಎರಡರಲ್ಲಿಯೂ ಶಾಂತಿ ಸಿಗುವುದಿಲ್ಲ. ಶ್ರದ್ಧೆ ಗೀತೆಯ ಮೂಲ ತಿರುಳಾಗಿದೆ. ಭಕ್ತಿ ವಿಶ್ವಾಸ ಹಾಗೂ ಧನಾತ್ಮಕ ಚಿಂತನೆ ಇವು ಅದರ ಅತಿ ಹತ್ತಿರದ ಅರ್ಥಗಳಾಗಿವೆ ಕೃಷ್ಣ ಅನೇಕ ಸಂದರ್ಭದಲ್ಲಿ ಶ್ರದ್ಧೆಯ ಬಗ್ಗೆ ತಿಳಿಸಿ ಶ್ರದ್ಧಾವಾನ ಆಗುವಂತೆ ಅರ್ಜುನನಿಗೆ ಪ್ರೋತ್ಸಾಹಿಸು ತ್ತಾನೆ. ಶ್ರದ್ಧೆಯು ನಮ್ಮ ಆಯ್ಕೆಯ ಕರ್ಮಫಲವನ್ನು ಪಡೆಯಲು ಇರುವ ಧಾರ್ಮಿಕ ವಿಧಿ ವಿಧಾನವಲ್ಲ. ಆದರೆ ಬಂದದ್ದನ್ನು ಕೃತಜ್ಞತೆಯಿಂದ ಸ್ವೀಕರಿಸುವ ಹಾಗೂ ನಿಗದಿತ ಸಮಯದಲ್ಲಿ ಆಗಿದ್ದು ಅತ್ಯಂತ ಒಳ್ಳೆಯದೇ ಆಗಿರುವುದರಿಂದ ಅದನ್ನು ಸ್ವೀಕರಿಸುವ ಆಂತರಿಕ ಶಕ್ತಿಯೇ ಶ್ರದ್ಧೆಯಾಗಿದೆ. ನಮಗೆ ಅಸ್ತಿತ್ವವನ್ನು ಬಿಟ್ಟು ಬೇರೆ ಆಸೆಯೇ ಇಲ್ಲವೆಂದು ತಿಳಿದಿರಬೇಕು.

ನಮ್ಮ ಇಂದ್ರಿಯಗಳನ್ನು ನಮ್ಮ ಅಧೀನಮಾಡಿಕೊಳ್ಳ ಬೇಕೆನ್ನುವದು ಗೀತೆಯ ಅವಿಭಾಜ್ಯ ಅಂಶವಾಗಿದೆ. ಬೇರೆ ಸಂದರ್ಭದಲ್ಲಿ ಕೃಷ್ಣ ನಮ್ಮ ಇಂದ್ರಿಯಗಳನ್ನು ಕಾಡು ಕುದುರೆಗಳಿಗೆ ಹೋಲಿಸುತ್ತಾನೆ ಮತ್ತು ಅವುಗಳ ಸ್ವಭಾವ ಗೊತ್ತು ಮಾಡಿಕೊಂಡು ಅದನ್ನು ಸವಾರಿ ಮಾಡುವ ತರಬೇತಿದಾರನಂತೆ ನಾವು ಅದನ್ನು ನಿಯಂತ್ರಿಸಬೇಕೆಂದು ಹೇಳುತ್ತಾನೆ. ಖಂಡಿತವಾಗಿಯೂ ಇದು ಅರಿತುಕೊಳ್ಳುವದಾಗಿದೆಯೇ ವಿನಃ ದಮನ ಮಾಡುವುದಲ್ಲ.

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 e-mail: vishwavanimagazine@gmail.com

ವಿಶೇಷ
ವಿಶ್ವವಾಣಿ
vishwavani.news 24.03.2025 ಸೋಮವಾರ

ಕುಗ್ಗಿದ ಕರಾವಳಿ ಮೀನಿನ ಪ್ರಭಾವಳಿ

- ಮೀನು ಪ್ರಿಯರಿಗೆ ದರ ಏರಿಕೆ ಬರೆ ಕಡಲ ತೀರದ ಮತ್ಸ್ಯೋದ್ಯಮಕ್ಕೆ ಗರ

ಮೀನು ದರ ದುಬಾರಿ

ಫೆಬ್ರವರಿ ತಿಂಗಳಿನಲ್ಲಿ ಕೆ.ಜಿ. ಗೆ 700 ಆಸುಪಾಸಿದ್ದ ಅಂಜಲ್ ದರ 1200 ರೂ. ದಾಟಿದೆ. 150 ರೂ. ಇದ್ದ ಬಂಗುಡೆ ದರ 250ಕ್ಕೇರಿದೆ. 900 ರೂ. ಇದ್ದ ಪಾಂಪ್ಲೆಟ್ ದರ 1200 ರು.ಗೆ ಏರಿದೆ. ಬೊಳ್ಳಂಜಿರ್ ಬೆಲೆ 250ರಿಂದ 350 ರು., ಸೀಗಡಿ ದರ 500 ರು.ಗಳಿಂದ 700 ರು.ಗೆ ಜಂಪ್ ಆಗಿದೆ. ಬೂತಾಯಿ ದರ 100ರಿಂದ 200ಕ್ಕೇರಿದೆ.

ಜಿಲ್ಲಾ ನೋಟ

ರಾಮಚಂದ್ರ ಬರೆಪ್ಪಾಡಿ, ಉಡುಪಿ

ಸಾಂಪ್ರದಾಯಿಕ ಮೀನುಗಾರಿಕೆ ತೆರೆಮರೆಗೆ ಸರಿಯುತ್ತಿದ್ದು ಸ್ಪೀಡ್ ಇಂಜಿನ್ ಬೋಟ್‌ಗೆ ವೇಗ ದೊರೆತಿದೆ. ಇದರ ಪರಿಣಾಮ ಇದೀಗ ಮೀನುಗಳ ಇಳುವರಿ ಕುಸಿದು ಮೀನಿಗೆ ಅಭಾವ ಉಂಟಾಗಿದೆ. ಇನ್ನೊಂದೆಡೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿದ್ದರಿಂದ ಮೀನಿನ ದರವೂ ದುಬಾರಿಯಾಗಿದೆ.

ಕಾರಣ ಏನು

ಕರಾವಳಿಯಲ್ಲಿ ಮೀನಿಗೆ ಅಭಾವ ಉಂಟಾಗಲು ಮುಖ್ಯ ಕಾರಣ ಮೀನು ಸಂತತಿ ಬೆಳವಣಿಗೆಯ ಅವಧಿಯಲ್ಲೇ ಡೀಪ್ ಸೀ ಫಿಶಿಂಗ್, ಲೈಟ್ ಫಿಶಿಂಗ್, ಬುಲ್ ಟ್ರಾಲ್ ಮಾಡುವ ಮೂಲಕ ಮರಿ ಮೀನುಗಳನ್ನು ಹಿಡಿಯಲಾಗುತ್ತಿದೆ.

ನಿಷೇಧಿತ ಅವಧಿ

ಕೆಲ ವರ್ಷಗಳವರೆಗೆ ಮೀನು ಸಂತಾನೋತ್ಪತ್ತಿ ಅವಧಿ ಅಂದರೆ ಜೂನ್, ಜುಲೈ, ಆಗಸ್ಟ್ ತಿಂಗಳಲ್ಲಿ ಮೀನುಗಾರಿಕೆ ನಿಷೇಧವಿತ್ತು. ಆ ವೇಳೆ ಸಾಂಪ್ರದಾಯಿಕ ಶೈಲಿಯ ನಾಡದೋಣಿ ಮೀನುಗಾರಿಕೆ, ಬಲೆ ಬೀಸಿ ಮೀನು ಹಿಡಿಯುವ, ರಂಪನಿ ಬಲೆ ರೀತಿ ಮೀನುಗಾರಿಕೆ ಕಾರಣ ಮರಿಗಳ ರಕ್ಷಣೆ ಮಾಡಲಾಗುತ್ತಿತ್ತು.

ಮರಿ ಮೀನು ಸೆರೆ

ಮಳೆಗಾಲದಲ್ಲಿ ಸಣ್ಣ ಮೀನುಗಳು ಬಲೆಗೆ ಬೀಳದ ಹಾಗೆ ದೊಡ್ಡ ತೂತಿನ (ಕಣ್ಣು) ಬಲೆ ಬಳಕೆ ಮಾಡಲಾಗುತ್ತಿತ್ತು.

ಇದೀಗ ಮಾನವನ ಅತಿಯಾದ ಆಸೆಯಿಂದ ಸಣ್ಣ ಮರಿಗಳನ್ನು ತೀರಕ್ಕೆ ತರುವ ಕಾರ್ಯವಾಗುತ್ತಿದೆ. ಆಹಾರದ ಬದಲು ಈ ಮರಿ ಮೀನುಗಳನ್ನು ಗೊಬ್ಬರ ತಯಾರಿ ಹಾಗೂ ಎಣ್ಣೆ ತೆಗೆಯುವುದಕ್ಕಾಗಿ ಬಳಕೆ ಮಾಡಲಾಗುತ್ತಿದೆ.

ನೀರಿಗಿಳಿಯದ ಬೋಟು

ಕಳೆದ ಒಂದು ತಿಂಗಳಿನಿಂದ ಕಡಲಿನಲ್ಲಿ ಮೀನಿಗೆ ತೀವ್ರ ಬರ ಎದುರಾಗಿದೆ. ಬೇಸಿಗೆಯ ಬಿಸಿಲಿನ ಕಾರಣಕ್ಕೆ ಬಹುತೇಕ ಬೋಟುಗಳು ಕಡಲಿಗೆ ಇಳಿಯುತ್ತಿಲ್ಲ. ಕರಾವಳಿ ಯಲ್ಲಿ ಶೇ.20ರಷ್ಟು ಬೋಟು, ಸಣ್ಣದೋಣಿಗಳು ಮಾತ್ರ ಮೀನುಗಾರಿಕೆ ನಡೆಸುತ್ತಿದ್ದು ಮತ್ಸ್ಯೋದ್ಯಮ ಸಂಕಷ್ಟದಲ್ಲಿದೆ. ಮಂಗಳೂರು, ಮಲ್ಪೆ, ಗಂಗೊಳ್ಳಿ, ಕೊಡೇರಿ, ಕಾರವಾರ ಬಂದರುಗಳಲ್ಲಿ ಮೀನುಗಾರಿಕೆಗೆ ಗರ ಬಡಿದಂತಾಗಿದೆ. ಬೋಟುಗಳಿಗೂ ನಿರೀಕ್ಷೆಯಷ್ಟು ಮೀನು ಸಿಗುತ್ತಿಲ್ಲ. ಜೀವನೋಪಾಯಕ್ಕಾಗಿ ಮೀನುಗಾರಿಕೆಯನ್ನೇ ನಂಬಿಕೊಂಡ ಲಕ್ಷಾಂತರ ಮಂದಿ ಮೀನುಗಾರರು ಸಂಕಷ್ಟಕ್ಕೀಡಾಗಿದ್ದಾರೆ.

ಡೀಸೆಲ್‌ಗೆ ಐದು ಲಕ್ಷ

ಒಮ್ಮೆ ಬೋಟು ಕಡಲಿಗೆ ಇಳಿಯಲು ಕನಿಷ್ಠ 5 ಲಕ್ಷ ರು. ಬೆಲೆಯ ಡೀಸೆಲ್ ಖರ್ಚಾಗುವುದು. ಮೀನುಗಾರರ ಖರ್ಚು ಲೆಕ್ಕ ಹಾಕಿದಲ್ಲಿ 8 ಲಕ್ಷ ರು. ವೆಚ್ಚವಾಗುವುದು. ಈಗಿನ ಮೀನುಗಾರಿಕೆಯಿಂದ ಈ ಮೊತ್ತವನ್ನೂ ಭರಿಸುವುದು ಕಷ್ಟ. ದಶಕದ ಹಿಂದೆ ಇದ್ದ ಬೋಟುಗಳ ಸಂಖ್ಯೆ ಇದೀಗ 10 ಪಟ್ಟು ಹೆಚ್ಚಾಗಿವೆ. ಇದು ಕೂಡ ಮೀನುಗಾರಿಕೆ ಉದ್ಯಮವನ್ನು ಆತಂಕಕ್ಕೀಡು ಮಾಡಿದೆ. ಮೀನಿನ ಬರದಿಂದಾಗಿ ಮತ್ಸ್ಯೋದ್ಯಮ ಸಂಕಷ್ಟಕ್ಕೆ ಸಿಲುಕಿದೆ. ಮೀನು ಸಾಗಣೆಯಿಂದ ಜೀವನಕ್ಕೆ ಆಸರೆಯಾಗಿದ್ದ ಸಾವಿರಾರು ಟೆಂಪೋಗಳಿಗೂ ಬಾಡಿಗೆ ಇಲ್ಲದಂತಾಗಿದೆ. ಐಸ್ ಪ್ಲಾಂಟ್‌ಗಳು, ಫಿಶ್ ಮೀಲ್ ಘಟಕಗಳೂ ಸೊರಗುತ್ತಿವೆ.

ಬೂತಾಯಿಗೂ ಬರ

ಹಿಂದೆ ಕರಾವಳಿ ಜನತೆಗೆ ಬಂಗುಡಿ ಹಾಗೂ ಬೂತಾಯಿ ಮೀನಿನದ್ದು ಮಾತ್ರ ಪರಿಚಯವಿತ್ತು. ದೋಣಿಯವರಿಗೆ ಇದೇ ಮೀನುಗಳು ಹೇರಳವಾಗಿ ಸಿಗುತ್ತಿತ್ತು. ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಯಥೇಚ್ಛವಾಗಿ ದೊರೆಯುತ್ತಿದ್ದ ಬೂತಾಯಿ ಮೀನಿನ ಪ್ರಮಾಣ ಇತ್ತೀಚೆಗೆ ಕಡಿಮೆಯಾಗಿದೆ. ಅವೈಜ್ಞಾನಿಕ ಮೀನುಗಾರಿಕೆ ಯಿಂದಾಗಿ ವರ್ಷದಿಂದ ವರ್ಷಕ್ಕೆ ಮೀನಿನ ಸಂತತಿ ನಾಶವಾಗುತ್ತಿದೆ. ಇದು ಒಂದು ಕಡೆಯಾದರೆ ಮತ್ತೊಂದೆಡೆ ಬೂತಾಯಿ ಮೀನು ಕೂಡ ಕಣ್ಮರೆಯಾಗುತ್ತಿದೆ.

> ರಾಜ್ಯದ ಆರ್ಥಿಕತೆಗೆ ಮತ್ಸ್ಯೋದ್ಯಮದ ಕೊಡುಗೆಯೂ ಅಪಾರವಾಗಿದೆ. ಹೀಗಾಗಿ ಸರಕಾರ ಮೀನುಗಾರಿಕೆ ಉದ್ಯಮ ವನ್ನು ಗಂಭೀರವಾಗಿ ಪರಿಗಣಿಸಿ ಕಡಲ ಬಂದರಿಗೆ ಬೇಕಾದ ಮೂಲ ಸೌಲಭ್ಯ ಒದಗಿಸಿಕೊಡ ಬೇಕು. ಮೀನುಗಾರರಿಗೆ ಜೀವನ ಭದ್ರತೆ ನೀಡಬೇಕು.
> -**ಹರೀಶ್**, ಸಾಯಿಶ್ಯಾಮ್, ಮತ್ಸ್ಯೋದ್ಯಮಿ

> ಮೀನು ಆರೋಗ್ಯಕ್ಕೆ ಪೂರಕ ಆಹಾರ. ಮೀನುಗಾರಿಕೆ ಬಗ್ಗೆ ತಾತ್ಸಾರ ಮನೋಭಾವ ಹೊಂದದೆ ಸರಕಾರ ಕೃಷಿಗೆ ಕೊಡುವ ಪ್ರಾತಿನಿಧ್ಯವನ್ನು ಮೀನುಗಾರಿಕೆಗೂ ಕೊಡಬೇಕು. ರಾಜಕಾರಣಿಗಳು ಬಡ ಮೀನುಗಾರರ ಬದುಕಿನ ಬವಣೆ ಅರ್ಥಮಾಡಿಕೊಳ್ಳದಿರುವುದು ವಿಷಾದನೀಯ.
> -**ಶಂಕರ್ ಸಾಲ್ಯಾನ್**, ಮತ್ಸ್ಯೋದ್ಯಮಿ

ಕಾನೂನು ಬೇಕು

ಸರಕಾರ ಕಡಲಿನ ಮೀನುಗಾರಿಕೆ ಕುರಿತು ಅಧ್ಯಯನ ನಡೆಸಿ ಮೀನುಗಾರಿಕೆ ಸಂಬಂಧ ಅಗತ್ಯ ಕಾನೂನು ಜಾರಿಗೊಳಿಸು ವುದು ಅವಶ್ಯವಾಗಿದೆ. ಯಾಂತ್ರಿಕ ಮೀನುಗಾರಿಕೆ ಜೊತೆಗೆ ಸಾಂಪ್ರದಾಯಿಕ ಮೀನುಗಾರಿಕೆ ರಕ್ಷಣೆಗೂ ಒತ್ತು ನೀಡ ಬೇಕಿದೆ. ರಾಜ್ಯ ಸರಕಾರದ ಮೀನುಗಾರಿಕೆ ಇಲಾಖೆಯಿಂದ ಕೂಡ ಏಕರೂಪದ ನಿಯಮ ಅನುಷ್ಠಾನವಾಗಬೇಕಿದೆ.

ಕಾರವಾರ ಜಿಲ್ಲೆ ಜೇನು ತುಪ್ಪದ ಬೆಲೆ

- ಜೇನು ಉತ್ಪಾದನೆಯಲ್ಲಿ ನಾಲ್ಕನೇ ಸ್ಥಾನ
- ಯಲ್ಲಾಪುರದ ಜೇನು ದೇಶದಲ್ಲೇ ಶ್ರೇಷ್ಠ
- ವೈಜ್ಞಾನಿಕ ಜೇನು ಕೃಷಿ ಪದ್ಧತಿಗೆ ಉತ್ತೇಜನ

ಜಿಲ್ಲಾ ನೋಟ

ವಿನುತಾ ಹೆಗಡೆ ಶಿರಸಿ

ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮಘಟ್ಟ ಪ್ರದೇಶದಲ್ಲಿ ಪ್ರಾಕೃತಿಕವಾಗಿ ಸಾಕಷ್ಟು ಜೇನು ಲಭ್ಯವಾಗಲಿದೆ. ಹಾಗಾಗಿ ಈ ಜಿಲ್ಲೆ ದೆಹಲಿಯ ಜೇನು ಮಂಡಳಿ ವ್ಯಾಪ್ತಿಗೆ ಒಳಪಟ್ಟಿದೆ. ರಾಷ್ಟ್ರೀಯ ಜೇನು ಮಂಡಳಿ ಉತ್ತರ ಕನ್ನಡ ಜಿಲ್ಲಾದ್ಯಂತ ವೈಜ್ಞಾನಿಕ ಜೇನು ಬೇಸಾಯ ಪದ್ಧತಿ ಕುರಿತಂತೆ ಕಾರ್ಯಾಗಾರ ಏರ್ಪಡಿಸಿದೆ.

ಯಲ್ಲಾಪುರದ ಜೇನು

ಇಡೀ ದೇಶದಲ್ಲಿಯೇ ಉತ್ತಮವಾದ ಜೇನು ತುಪ್ಪ ಯಲ್ಲಾಪುರದಲ್ಲಿ ದೊರೆಯಲಿದೆ. ಅಂತೆಯೇ ಕೊಡಗಿನಲ್ಲಿಯೂ ಗುಣಮಟ್ಟದ ಜೇನು ಲಭ್ಯವಾಗಲಿದೆ. ಜೇನು ತುಪ್ಪದಿಂದ ಆರೋಗ್ಯ ವರ್ಧನೆ ಸಾಧ್ಯ ಕೂಡ. ಉತ್ತಮ ಜೇನು ತುಪ್ಪಕ್ಕೆ ಬೇಡಿಕೆ ಇದ್ದೇ ಇದೆ. ಇದೀಗ ವಾಣಿಜ್ಯ ಬೆಳೆಯಾಗಿಯೂ ಗೋಚರಿಸುತ್ತಿದೆ. ಪಾರಂಪರಿಕ ಜೇನು, ಸುಸ್ಥಿರ ಪದ್ಧತಿ ಜೇನು ಕೃಷಿ ಕುರಿತು ಜೇನು ಮಂಡಳಿ ಜಾಗೃತವಾಗಿದೆ.

ಜೇನು ಕೃಷಿ

ಈ ಜೇನು ಕೃಷಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಧುಕೇಶ್ವರ ಹೆಗಡೆಯವರ ಜೀವನವನ್ನೇ ಬದಲಾಯಿಸಿದೆ. ಹಲವು ಕಾರಣಗಳಿಗೆ ತಮ್ಮ ಆಸ್ತಿ ಕಳೆದು ಕೊಂಡಿದ್ದ ಹೆಗಡೆಯವರು ಈ ಜೇನು ಕೃಷಿಯಿಂದಾಗಿ ಕಳೆದುಕೊಂಡಿದ್ದಕ್ಕಿಂತ ಹತ್ತುಪಟ್ಟು ಗಳಿಸಿದ್ದಾರೆ. ಜೇನು ಕೃಷಿ, ಸಾಕಣೆಯಲ್ಲೇ ಪಳಗಿ ಗೌರವ ಡಾಕ್ಟರೇಟ್ ಕೂಡ ಪಡೆದಿದ್ದಾರೆ. ಇತ್ತೀಚೆಗಷ್ಟೇ ಪ್ರಧಾನಿ ನರೇಂದ್ರ ಮೋದಿ ಕೂಡ ಮನ್ ಕಿ ಬಾತ್‌ನಲ್ಲಿ ಜೇನು ಸಾಕಣೆ ಕುರಿತು ಮಾತನಾಡಿದ್ದಾರೆ.

ಜೇನಿನ ಕುರಿತು

ಹಲವು ಭಗೆಯ ಕೀಟಗಳಲ್ಲಿ ಜೇನು ನೊಣಗಳು ಮಾನವನಿಗೆ ಬಹು ಮುಖ್ಯ ಉಪಕಾರಿ. ಭಾರತ ಪ್ರತಿ ವರ್ಷ 27,000 ಟನ್ ಜೇನು ಉತ್ಪಾದಿಸುತ್ತದೆ. ಅದರಲ್ಲಿ ಶೇ.20ರಿಂದ 25ರಷ್ಟು (7,000 ಟನ್) ಜೇನನ್ನು ರಫ್ತು ಮಾಡಲಾಗುತ್ತಿದೆ. ಒಂದು ಅಂದಾಜಿನಂತೆ ಭಾರತದಲ್ಲಿ 120 ಮಿಲಿಯನ್ ಜೇನು ಕುಟುಂಬಗಳನ್ನು ಸಾಕಬಹುದಾಗಿದೆ. ಇದರಿಂದಾಗಿ 6 ಮಿಲಿಯನ್ ಜನರಿಗೆ ಉದ್ಯೋಗ, 1.2 ಮಿಲಿಯನ್ ಟನ್ ಜೇನು ಉತ್ಪಾದನೆ ಮತ್ತು 15,000 ಟನ್‌ನಷ್ಟು ಮೇಣ ತಯಾರಿಸಬಹುದು ಎಂಬ ಮಾಹಿತಿ ಇದೆ.

> ಉತ್ತರ ಕನ್ನಡ ಜಿಲ್ಲೆಯಲ್ಲಿ ಜೇನಿಗೆ ಅನುಕೂಲಕರವಾದ ವಾತಾವರಣವಿದೆ. ಅತ್ಯಮೂಲ್ಯವಾದ ಸಸ್ಯಗಳೂ ಇಲ್ಲಿದ್ದು ಇವುಗಳಿಂದ ಜೇನು ತಯಾರಾದರೆ ಇಲ್ಲಿಯ ಜೇನು ವಿಶೇಷ. ನಮ್ಮಲ್ಲಿಯ ಜೇನನ್ನು ರಫ್ತು ಮಾಡುವಂತಾಗಬೇಕು. ಆಗ ಆರ್ಥಿಕವಾಗಿ ಹೆಚ್ಚು ಲಾಭ ಮಾಡಬಹುದು. ನಾವು ಈ ಜೇನು ಕಲಬೆರಕೆಯಾಗದಂತೆ ನೋಡಿಕೊಳ್ಳಬೇಕು. ಇದು ಅಮೃತಕ್ಕೆ ಸಮಾನ.
> -**ಮಧುಕೇಶ್ವರ ಹೆಗಡೆ**, ಶಿರಸಿ. ಜೇನು ಕೃಷಿಕ

ಜೇನಿನ ಬಳಕೆ

ವಿದೇಶಗಳಲ್ಲಿ ಜೇನು ಬಳಕೆ 200 ಗ್ರಾಂ ಪ್ರತೀ ಮನುಷ್ಯನಿಗಾದರೆ, ಭಾರತದಲ್ಲಿ ಜೇನು ಬಳಕೆ ಕೇವಲ 8.4 ಗ್ರಾಂ ಮಾತ್ರ. ಹೆಚ್ಚಿನ ಜೇನಿನ ಬಳಕೆ ಔಷಧ ತಯಾರಿಕೆ, ಆಹಾರ ಪದಾರ್ಥಗಳಲ್ಲಿ, ಬೇಕರಿ ಮತ್ತು ಸೌಂದರ್ಯ ವರ್ಧಕಗಳಲ್ಲಿ ಬಳಕೆಯಾಗುತ್ತದೆ.

ನಿರ್ವಹಣೆ

ಜೇನುಕೃಷಿಗೆ ಲಾಭದಾಯಕವಾಗಲು ಜೇನುಕುಟುಂಬಗಳ ನಿರ್ವಹಣೆಯು ಆ ಪ್ರದೇಶದ ಹವಾಮಾನ ಮತ್ತು ಆಹಾರ ಮೇಲೆ ಅವಲಂಬಿತವಾಗಿದೆ. ಎಲ್ಲ ಕಡೆ ಒಂದೇ ರೀತಿಯ ನಿರ್ವಹಣೆ ಕ್ರಮ ಅನುಸರಿಸಲು ಸಾಧ್ಯವಿಲ್ಲ. ಉತ್ತರ ಕನ್ನಡ ಜಿಲ್ಲೆಗಳ ತೋಟದಲ್ಲಿ, ಗುಡ್ಡದಲ್ಲಿ ಜೇನು ಪೆಟ್ಟಿಗೆಯನ್ನು ಇಟ್ಟು ಜೇನು ಸಾಕಲಾಗುತ್ತದೆ.

ಜೇನು ಲಾಭದಾಯಕ

ಜೇನು ಒಂದು ಉದ್ದಿಮೆಯಾಗಿ ಕೈಗೊಂಡಿದ್ದೇ ಆದಲ್ಲಿ ವರ್ಷಪೂರ್ತಿ ಇದರದ್ದೇ ಕಾರ್ಯ ನಿರ್ವಹಿಸಿಕೊಂಡು ಸಾಕಷ್ಟು ಆದಾಯ ಗಳಿಸಬಹುದು. ರೈತ ಕುಟುಂಬಗಳು ಹಾಗೂ ನಿರುದ್ಯೋಗಿಗಳು ಈ ಉಪಕಸುಬನ್ನಾಗಿ ಕೈಗೊಂಡಿದ್ದಾರೆ.

ಜೇನು ಸಾಕಣೆಗೆ ಸೂಕ್ತ ಸ್ಥಳ

ಮಲೆನಾಡಲ್ಲಂತೂ ಯಥೇಚ್ಛವಾಗಿ ನಾನಾ ಬಗೆಯ ಹೂವುಗಳಿಂದ ತುಂಬಿರುವ ಜಾಗವಾದರೆ ಉತ್ತಮ. ಬಲವಾದ ಗಾಳಿ ಬೀಸುವ ಹಾಗೂ ಇರುವೆ, ಗೆದ್ದಲುಗಳಿಂದ ಮುಕ್ತವಿರುವ ಜಾಗ ಅನುಕೂಲ. ಶುದ್ಧ ನೀರು ಸಿಗುವಂತಿರಬೇಕು. ನೆರಳಿರುವ ಹಣ್ಣಿನ ತೋಟವಾದಲ್ಲಿ ಅತ್ಯಂತ ಸೂಕ್ತ.

ಔಷಧೀಯ ಗುಣ

ಜೇನುತುಪ್ಪದ ವಿಶಿಷ್ಟ ಮೌಲ್ಯವೆಂದರೆ ಅದನ್ನು ತಿಂದಾಕ್ಷಣ ಶರೀರದಲ್ಲಿ ಸೇರಿಕೊಳ್ಳಬಲ್ಲದು. ಅದು ಸ್ನಾಯುಗಳಿಗೆ ಬಲ ತುಂಬುವ ಶಕ್ತಿಶಾಲಿ ಇಂಧನ. ಒಂದು ಕಪ್ ತುಂಬಿದ ನೀರಿನಲ್ಲಿ ಎರಡು ಚಮಚದಷ್ಟು ಜೇನನ್ನು ಮಲಗುವ ಮುನ್ನ ಸೇವಿಸುವುದರಿಂದ ಸುಖ ನಿದ್ದೆ ಖಚಿತ. ದಮ್ಮು, ನೆಗಡಿ, ಕೆಮ್ಮು, ಗಂಟಲು ನೋವಿಗೂ ಜೇನು ರಾಮಬಾಣ.

ಹಳ್ಳಿ ಹುಡುಗಿಯಾದ ಸಪ್ತಮಿ

ಕಾಂತಾರದ ಲೀಲಾ, ಸಪ್ತಮಿ ಗೌಡ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ನೀನಾಸಂ ಸತೀಶ್ ಅಭಿನಯದ ರೈಸ್ ಆಫ್ ಅಶೋಕ ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ರೈಸ್ ಆಫ್ ಅಶೋಕ ಶೀರ್ಷಿಕೆಯಲ್ಲಿಯೇ ಕುತೂಹಲ ಮೂಡಿಸಿದೆ. ಟೈಟಲ್‌ನಂತೆಯೇ ಕಥೆಯೂ ಕೂಡ ವಿಭಿನ್ನವಾಗಿದೆ. ಈ ಹಿಂದೆಯೇ ಚಿತ್ರದ ಪೋಸ್ಟರ್ ಬಿಡುಗಡೆಯಾಗಿತ್ತು. ನೀನಾಸಂ ಸತೀಶ್ ರಗಡ್ ಲುಕ್‌ನಲ್ಲಿ ಮಿಂಚಿದ್ದ ಈ ಪೋಸ್ಟರ್ ಭರ್ಜರಿ ಕುತೂಹಲ ಮೂಡಿಸಿತ್ತು. ಈಗ ಚಿತ್ರದ ನಾಯಕಿನ್ನು ಚಿತ್ರತಂಡ ಪರಿಚಯಿಸಿದೆ.

ಈ ಚಿತ್ರದಲ್ಲಿ ಸಪ್ತಮಿ, ಹಳ್ಳಿ ಹುಡುಗಿಯಾಗಿ ನಟಿಸಿದ್ದು, ಅಂಬಿಕಾ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅಂಬಿಕಾ ಚಿತ್ರದುದ್ದಕ್ಕೂ ಲಂಗ ಧಾವಣಿಯಲ್ಲಿ ಮಿಂಚಿದ್ದಾರೆ. ಸಪ್ತಮಿ ಅಶೋಕನಿಗೆ ಅಂಬಿಕಾ ಹೇಳಿದ ಸಾಲುಗಳನ್ನು ಪೋಸ್ಟರ್‌ನಲ್ಲಿ ಹಂಚಿಕೊಂಡಿದ್ದಾರೆ. ನಿನ್ನ ಪ್ರತಿಯೊಂದು ಹೆಜ್ಜೆಯಲ್ಲೂ ನನ್ನ ಪಾಲಿರಲಿ.. ಒಂದು ನಿಂದಾದರೆ ಮತ್ತೊಂದು ನಂದು ಎಂಬ ಅಂಬಿಕಾ.. ಬರೆದುಕೊಂಡಿರುವ ಸಾಲುಗಳು ಸಿನಿಪ್ರಿಯರ ಮನಗೆದ್ದಿವೆ. ಯುವ ಚಿತ್ರದ ಬಳಿಕ ಸಪ್ತಮಿ ನಟಿಸುತ್ತಿರುವ ಸಿನಿಮಾ ಇದಾಗಿದ್ದು, ತೆರೆಯಲ್ಲಿ ತಮ್ಮ ನೆಚ್ಚಿನ ನಟಿಯನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ.

ಬದಲಾದ ಶೀರ್ಷಿಕೆ: ಸತೀಶ್ ನೀನಾಸಂ ನಟಿಸುತ್ತಿರುವ ಈ ಸಿನಿಮಾ ಹಲವು ಅಡೆತಡೆಗಳನ್ನು ಎದುರಿಸಿ, ಚಿತ್ರೀಕರಣವನ್ನು ಮುಗಿಸುವ ಹಂತಕ್ಕೆ ತಲುಪಿದೆ. ಈ ಚಿತ್ರವನ್ನು ನಿರ್ದೇಶಕ ವಿನೋದ್ ದೊಂಡಾಲೆ ನಿರ್ದೇಶನ ಮಾಡುತ್ತಿದ್ದರು. ಬಹುತೇಕ ಚಿತ್ರೀಕರಣ ಮುಗಿದಿದ್ದ ಸಂದರ್ಭ ವಿನೋದ್ ದೊಂಡಾಲೆ ನಿಧನರಾದರು. ಹಾಗಾಗಿ ಸಿನಿಮಾ ನಿಂತೆ ಹೋಯಿತು ಎನ್ನುವಾಗ ಸತೀಶ್ ಅವರೇ ಸಿನಿಮಾವನ್ನು ಟೇಕಾಫ್ ಮಾಡಿದ್ದರು. ಅಶೋಕ ಬ್ಲೇಡ್ ಎನ್ನುವ ಟೈಟಲ್ ಅನ್ನು ದಿ ರೈಸ್ ಆಫ್ ಅಶೋಕ ಅಂತ ಬದಲಾಯಿಸಿದರು. ಇತ್ತೀಚೆಗೆ ದಿ ರೈಸ್ ಆಫ್ ಅಶೋಕ ಸಿನಿಮಾದ ನಾಯಕನ ಪೋಸ್ಟರ್ ರಿಲೀಸ್ ಆಗಿತ್ತು. ಈ ಪೋಸ್ಟರ್‌ನಲ್ಲಿ ರಕ್ತ ಅಂಟಿಕೊಂಡಿದ್ದ ಮಚ್ಚ ಹಿಡಿದು ರಗಡ್ ಲುಕ್‌ನಲ್ಲಿ ಮಾಸ್ ಲುಕ್‌ನಲ್ಲಿ ಮಿಂಚಿದ್ದರು. ಇದು ತೊಂಬತ್ತರ ದಶಕದಲ್ಲಿ ಸಾಗುವ ಕಥೆಯಾಗಿದ್ದು, ಬಂಡಾಯದ ಕಥೆಯನ್ನು ಹೊತ್ತು ಬಂದಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಅಕ್ಟೋಬರ್ ವೇಳೆಗೆ ಸಿನಿಮಾ ತೆರೆಗೆ ಬರಲಿದೆ.



ಟಾಕ್ಸಿಕ್ ರಿಲೀಸ್ ಡೇಟ್ ಅನೌನ್ಸ್

ಕೆಜಿಎಫ್ ಬಳಿಕ ಯಶ್ ಟಾಕ್ಸಿಕ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಟಾಕ್ಸಿಕ್ ಸೆಟ್ಟೇರಿದಾಗಿನಿಂದಲೂ ಕುತೂಹಲ ಮೂಡಿಸುತ್ತಲೇ ಇದೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಟಾಕ್ಸಿಕ್ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಟಾಕ್ಸಿಕ್ ಯಾವಾಗ ತೆರೆಗೆ ಬರಲಿದೆ ಎಂದು ಸಿನಿಪ್ರಿಯರು ಕಾದುಕುಳಿತ್ತಿದ್ದರು, ಅಂತು ಈಗ ಟಾಕ್ಸಿಕ್ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ಟಾಕ್ಸಿಕ್ ಮುಂದಿನ ವರ್ಷದ ಮಾರ್ಚ್ 9 ರಂದು ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.ಈ ಕುರಿತಂತೆ ಕೆವಿಎನ್ ಪ್ರೊಡಕ್ಷನ್ಸ್ ಅಧಿಕೃತ ಬಿಡುಗಡೆಯ ದಿನಾಂಕವನ್ನು ಘೋಷಿಸಿದೆ.

ಟಾಕ್ಸಿಕ್ ಡ್ರಗ್ಸ್ ಮಾಫಿಯಾ ಕುರಿತ ಕಥೆಯನ್ನು ಒಳಗೊಂಡಿದ್ದು, ಯಶ್ ಭೂಗತ ಲೋಕದ ಡಾನ್ ಆಗಿ ಮಿಂಚಲಿದ್ದಾರೆ. ಈ ಹಿಂದೆಯೇ ಬಿಡುಗಡೆಯಾದ ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ನಲ್ಲಿ ಯಶ್ ಗನ್ ಹಿಡಿದು ಮಿಂಚಿದ್ದರು. ಬಳಿಕ ರಿಲೀಸ್ ಆದ ಟೀಸರ್ ಇನ್ನೂ ಅದ್ದೂರಿಯಾಗಿತ್ತು, ಯಶ್ ಗೆಟಪ್ ನೋಡಿ ಅಭಿಮಾನಿಗಳು ಬಹುಪರಾಕ್ ಎಂದಿದ್ದರು. ಈ ಚಿತ್ರದಲ್ಲಿ ಯಶ್ ಗೆ ಜತೆಯಾಗಿ ಬಾಲಿವುಡ್ ಬ್ಯೂಟಿ ಕಿಯಾರಾ ಅಡ್ವಾಣಿ ನಟಿಸುತ್ತಿದ್ದಾರೆ. ಬಹುಭಾಷಾ ನಟಿ ನಯನಾ ತಾರಾ ಪ್ರಮುಖ ಪಾತ್ರದಲ್ಲಿ ಬಣ್ಣಹಚ್ಚಿದ್ದು, ಹಾಲಿವುಡ್ ನ ಕೆಲವು ನಟರೂ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಈ ಚಿತ್ರಕ್ಕಾಗಿ ಬೆಂಗಳೂರಿನಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸಲಾಗಿತ್ತು. ಸದ್ಯ ಮುಂಬೈನಲ್ಲಿ ಬೀಡು ಬಿಟ್ಟಿರುವ ಚಿತ್ರತಂಡ ಅಲ್ಲಿಯೂ ಬೃಹತ್ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸುತ್ತಿದೆ. ಬಳಿಕ ಗೋವಾಗೆ ತೆರಳಲಿರುವ ಚಿತ್ರತಂಡ ಅಲ್ಲಿಂದ ಇಂಗ್ಲೆಂಡ್ ಗೂ ಹಾರಲಿದ್ದು ಪ್ರಮುಖ ಸನ್ನಿವೇಶಗಳ ಚಿತ್ರೀಕರಣ ನಡೆಸಲಿದೆ. ಟಾಕ್ಸಿಕ್ ನಲ್ಲಿ ಹಾಲಿವುಡ್ ತಂತ್ರಜ್ಞರ ತಂಡ ಕಾರ್ಯನಿರ್ವಹಿಸುತ್ತಿದ್ದು ಚಿತ್ರದ ಬಗ್ಗೆ ಕ್ಯೂರಿಯಾಸಿಟಿ ಮೂಡಲು ಪ್ರಮುಖ ಕಾರಣವಾಗಿದೆ. ಟಾಕ್ಸಿಕ್ ಪ್ಯಾನ್ ಗ್ಲೋಬಲ್ ಸಿನಿಮಾವಾಗಿದ್ದು ಕನ್ನಡ, ಹಿಂದಿ, ತಮಿಳು, ತೆಲುಗು, ಮಲೆಯಾಳಂ ಜತೆಗೆ ಇಂಗ್ಲೀಷ್ ನಲ್ಲಿಯೂ ಬಿಡುಗಡೆಯಾಗಲಿದೆ.

ಫೈರ್‌ಫ್ಲೈನ ಮಧುರ ಗಾನ

ಶ್ರೀಮುತ್ತು ಸಿನಿ ಸರ್ವೀಸಸ್ ಅಂಡ್ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ನಿವೇದಿತಾ ಶಿವರಾಜ್ ಕುಮಾರ್ ನಿರ್ಮಾಣದ ಚೊಚ್ಚಲ ಸಿನಿಮಾ ಫೈರ್ ಫ್ಲೈ ಪೋಸ್ಟರ್, ಟೀಸರ್‌ನಿಂದಲೇ ಕುತೂಹಲ ಮೂಡಿಸಿರುವ ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಇನ್ ದಿ ನೈಟ್ ಎಂಬ ಮೆಲೋಡಿ ಸಾಂಗ್ ರಿಲೀಸ್ ಗೀತೆಯನ್ನು ಅನಾವರಣ ಮಾಡಲಾಗಿದೆ. ಧನಂಜಯ್ ರಂಜನ್ ಸಾಹಿತ್ಯ ಬರೆದಿರುವ ಗೀತೆಗೆ ಸಾಹಿತ್ಯ ಬರೆದಿದ್ದು, ಕಪಿಲ್ ಕಪಿಲನ್ ದನಿಯಾಗಿದ್ದಾರೆ. ಚರಣ್ ರಾಜ್ ಸಂಗೀತ ನಿರ್ದೇಶನ ಮಾಡಿದ್ದಾರೆ. ಇನ್ ದಿ ನೈಟ್ ಎನ್ನುತ್ತಾ ವಂಶಿ ಹಾಗೂ ರಚನಾ ಹೆಜ್ಜೆ ಹಾಕಿದ್ದಾರೆ.

ನಿವೇದಿತಾ ನಿರ್ಮಾಣದ ಫೈರ್ ಫ್ಲೈ ಸಿನಿಮಾದಲ್ಲಿ ವಂಶಿ ನಾಯಕನಾಗಿ ನಟಿಸುವ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಅಚ್ಯುತ್ ಕುಮಾರ್, ಸುಧಾರಾಣಿ, ರಚನಾ ಇಂದರ್, ಶೀತಲ್ ಶೆಟ್ಟಿ, ಆನಂದ್ ನೀನಾಸಂ, ಚಿತ್ಕಳಾ ಬಿರಾದರ್, ಮೂಗು ಸುರೇಶ್ ಮುಂತಾದವರು ನಟಿಸಿದ್ದಾರೆ. ವರನಟ ಡಾ. ರಾಜ್ ಕುಮಾರ್ ಅವರ ಹುಟ್ಟುಹಬ್ಬದಂದೇ ನಿವೇದಿತಾ ನಿರ್ಮಾಣದ ಮೊದಲ ಸಿನಿಮಾ ತೆರೆಕಾಣುತ್ತಿದೆ. ಈ ಚಿತ್ರದ ಹಾಡುಗಳಿಗೆ ಚರಣ್ ರಾಜ್ ಸಂಗೀತ ನೀಡಿದ್ದಾರೆ. ರಘು ನಿಡುವಳ್ಳಿ ಅವರ ಸಂಭಾಷಣೆ ಈ ಸಿನಿಮಾಕ್ಕಿದೆ, ಅಭಿಲಾಷ್ ಕಳತ್ತಿ ಛಾಯಾಗ್ರಹಣವಿದೆ.

ಈ ವಾರ ರಾಬಿನ್ ಹುಡ್ ತೆರೆಗೆ

ಟಾಲಿವುಡ್‌ನ ಖ್ಯಾತ ನಟ ನಿತಿನ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ರಾಬಿನ್ ಹುಡ್ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಇದೇ ವಾರ ತೆಲುಗು ಸೇರಿದಂತೆ ಕನ್ನಡದಲ್ಲಿಯೂ ಸಿನಿಮಾ ತೆರೆಗೆ ಬರಲಿದೆ. ವಿಶೇಷ ಎಂದರೆ ಈ ಚಿತ್ರದಲ್ಲಿ ನಿತಿನ್‌ಗೆ ಜತೆಯಾಗಿ ಕನ್ನಡದತಿ ಶ್ರೀಲೀಲಾ ಬಣ್ಣಹಚ್ಚಿದ್ದಾರೆ. ಹಾಗಾಗಿಯೇ ಸಿನಿಮಾ ಕುತೂಹಲ ಮೂಡಿಸಿದೆ. ವೆಂಕಿ ಕುಡುಮುಲ ನಿರ್ದೇಶಿಸಿರುವ ಈ ಚಿತ್ರದಲ್ಲಿ ಆ್ಯಕ್ಷನ್ ಜತೆಗೆ ನವಿರಾದ ಪ್ರೇಮಕತೆಯೂ ಅಡಕವಾಗಿದೆ. ರಾಜೇಂದ್ರ ಪ್ರಸಾದ್, ವೆನ್ನೆಲಾ ಕಿಶೋರ್ ಮತ್ತು ಬ್ರಹ್ಮಾಜಿ ಸೇರಿದಂತೆ ಹಲವರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಸಿನಿಮಾದ ಹಾಡುಗಳಿಗೆ ಜಿ.ವಿ.ಪ್ರಕಾಶ್ ಕುಮಾರ್ ಸಂಗೀತ ಸಂಯೋಜಿಸಿದ್ದಾರೆ. ಸಾಯಿ ಶ್ರೀರಾಮ್ ಛಾಯಾಗ್ರಹಣ ಮತ್ತು ಪ್ರವೀಣ್ ಪುಡಿ ಅವರ ಸಂಕಲನ ಈ ಚಿತ್ರಕ್ಕಿದೆ. ಕರ್ನಾಟಕದಲ್ಲಿ ವಿಕೆ ಫಿಲಂಸ್ ವಿತರಣೆಯ ಜವಾಬ್ದಾರಿ ಹೊತ್ತಿದೆ.

ಠುಸ್ ಪಟಾಕಿ

ರೋಹಿತ್: ಶೂನ್ಯ ಸಂಪಾದನೆ

ಭಾನುವಾರದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಕಳಪೆ ದಾಖಲೆಯೊಂದನ್ನು ತಮ್ಮ ಹೆಸರಿಗೆ ಸೇರಿಸಿಕೊಂಡಿದ್ದಾರೆ. ಚೆನ್ನೈ ಸೂಪರ್ ಕಿಂಗ್-ಮುಂಬೈ ಇಂಡಿಯನ್ಸ್ ನಡುವಿನ ಪಂದ್ಯದಲ್ಲಿ ರೋಹಿತ್ ಶೂನ್ಯಕ್ಕೆ ಔಟಾಗುವ ಮೂಲಕ ಐಪಿಎಲ್‌ನಲ್ಲಿ ಅತ್ಯಧಿಕ ಬಾರಿ ಶೂನ್ಯ ಸುತ್ತಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಜಂಟಿ ಅಗ್ರಸ್ಥಾನಕ್ಕೇರಿದ್ದಾರೆ. ರೋಹಿತ್ ಐಪಿಎಲ್‌ನಲ್ಲಿ 18ನೇ ಬಾರಿಗೆ ಶೂನ್ಯ ಸುತ್ತಿದ್ದಾರೆ. ರೋಹಿತ್ ಹೊರತುಪಡಿಸಿ ದಿನೇಶ್ ಕಾರ್ತಿಕ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಕೂಡ 18 ಬಾರಿ ಶೂನ್ಯಕ್ಕೆ ಔಟ್ ಆಗಿದ್ದು, ಸದ್ಯ ಮೂವರು ಜಂಟಿ ಅಗ್ರಸ್ಥಾನದಲ್ಲಿದ್ದಾರೆ. ದಿನೇಶ್ ಕಾರ್ತಿಕ್ ನಿವೃತ್ತಿಯಾಗಿರುವ ಕಾರಣ ರೋಹಿತ್ ಮತ್ತು ಮ್ಯಾಕ್ಸ್‌ವೆಲ್ ಮುಂದಿನ ಪಂದ್ಯದಲ್ಲಿ ಶೂನ್ಯ ಸುತ್ತಿದರೆ ಅಗ್ರಸ್ಥಾನ ಪಡೆಯಲಿದೆ.

ಶತಕದ ಶ್ರೇಯಸ್ಸು ಅರ್ಪಣೆ

ರಾಜಸ್ಥಾನ್ ರಾಯಲ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಇಶಾನ್ ಕಿಶನ್ (47 ಎಸೆತಗಳಲ್ಲಿ 11 ಬೌಂಡರಿ ಮತ್ತು 6 ಸಿಕ್ಸರ್‌ಗಳೊಂದಿಗೆ ಔಟಾಗದೆ 106) ಅಜೇಯ ಶತಕ ಗಳಿಸಿದರು. ಸನ್‌ರೈಸರ್ಸ್ ಹೈದರಾಬಾದ್ ಪರ ಆಡಿದ ಇಶಾನ್ ಕಿಶನ್ ತಮ್ಮ ಚೊಚ್ಚಲ ಪಂದ್ಯದಲ್ಲೇ ಈ ಸಾಧನೆ ಮಾಡಿದರು,



ಇದು ಐಪಿಎಲ್‌ನಲ್ಲಿ ಅವರ ಮೊದಲ ಶತಕವೂ ಆಗಿದೆ. ಸನ್‌ರೈಸರ್ಸ್ ತಂಡದ ಇನ್ನಿಂಗ್ಸ್ ನಂತರ ಅಧಿಕೃತವಾಗಿ ಮಾತನಾಡಿದ ಇಶಾನ್ ಕಿಶನ್, ತಮ್ಮ ಶತಕದ ಶ್ರೇಯಸ್ಸು ತಂಡದ ಮ್ಯಾನೇಜ್‌ಮೆಂಟ್ ಮತ್ತು ಪ್ಯಾಟ್ ಕಮ್ಮಿನ್ಸ್‌ಗೆ ಸಲ್ಲುತ್ತದೆ ಎಂದು ಹೇಳಿದರು. ಈ ಶತಕ ನನಗೆ ಬಹಳಷ್ಟು ಸಂತೋಷ ತಂದಿದೆ, ಇದಕ್ಕಾಗಿ ಕೆಲವು ಸಮಯದಿಂದ ಕಾಯುತ್ತಿದ್ದೆ. ಕಳೆದ ಋತುವಿನಲ್ಲಿ ನಾನು ಶತಕ ಗಳಿಸಲು ಬಯಸಿದ್ದೆ, ಆದರೆ ಸಾಧ್ಯವಾಗಿರಲಿಲ್ಲ. ಆದರೆ ಈ ಋತುವಿನ ಮೊದಲ ಪಂದ್ಯದಲ್ಲೇ ಅದನ್ನು ಸಾಧಿಸಲು ಸಂತೋಷವಾಗಿದೆ. ತಂಡವು ನನ್ನ ಮೇಲೆ ಸಂಪೂರ್ಣ ನಂಬಿಕೆ ಇಟ್ಟಿದೆ, ಅದನ್ನ ಉಳಿಸಿಕೊಳ್ಳಲು ಬಯಸುತ್ತೇನೆ ಎಂದರು.

ಹೆಡ್ ಸಿಕ್ಸ್: 105 ಮೀಟರ್



ಸನ್‌ರೈಸರ್ಸ್-ರಾಜಸ್ಥಾನ್ ಪಂದ್ಯದ ವೇಳೆ ರಾಜಸ್ಥಾನ ತಂಡದ 5ನೇ ಓವರ್ ಅನ್ನು ಜೋಫ್ರಾ ಆರ್ಚರ್ ಬೌಲ್ ಮಾಡಿದರು, ಇದು ಪಂದ್ಯದಲ್ಲಿ ಅವರ ಮೊದಲ ಓವರ್ ಆಗಿತ್ತು. ಟ್ರಾವಿಸ್ ಹೆಡ್ ಮೊದಲ ಓವರ್‌ನ ಮೊದಲ ಚೆಂಡನ್ನು ಬೌಂಡರಿಗೆ ಹೊಡೆದರು. ಎರಡನೇ ಎಸೆತದಲ್ಲಿ ಬಂದಿದ್ದು ಸ್ಫೋಟಕ ಸಿಕ್ಸ್. ಈ ಚೆಂಡು ಕ್ರೀಸ್‌ನಿಂದ ಬರೋಬ್ಬರಿ 105 ಮೀಟರ್ ದೂರದಲ್ಲಿ ಬಿತ್ತು. ಈ ಸಿಕ್ಸ್ ಕಂಡು ಜೋಫ್ರಾ ಆರ್ಚರ್ ಕೂಡ ಶಾಕ್ ಆದರು, ಅದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ಚರಿತ್ರೆ ಸೃಷ್ಟಿಸಿದ ಸನ್‌ರೈಸರ್ಸ್

ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ಭಾನುವಾರ ಟಿ20 ಕ್ರಿಕೆಟ್‌ನಲ್ಲಿ ಇತಿಹಾಸ ನಿರ್ಮಿಸಿದೆ. ಈ ತಂಡವು ವಿಶ್ವದ ಮೊದಲ ತಂಡವಾಗಿ ಟಿ20 ಪಂದ್ಯಗಳಲ್ಲಿ ನಾಲ್ಕು ಬಾರಿ 250ಕ್ಕಿಂತ ಹೆಚ್ಚು ರನ್ ಗಳಿಸಿದ ಸಾಧನೆ ಮಾಡಿದೆ. ಭಾನುವಾರ ರಾಜಸ್ಥಾನ್ ವಿರುದ್ಧ 286 ರನ್‌ಗಳ ಮೂಲಕ ಎಸ್‌ಆರ್‌ಎಚ್ ಐಪಿಎಲ್ ಇತಿಹಾಸದ ಎರಡನೇ ಅತಿ ಹೆಚ್ಚು ಸ್ಕೋರ್ ದಾಖಲಿಸಿತು. ಇದಕ್ಕೂ ಮುಂಚೆ, ಐಪಿಎಲ್ 2024ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿರುದ್ಧ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 287 ರನ್ ಗಳಿಸಿತ್ತು. ಇನ್ನು ಒಟ್ಟಾರೆ ಟಿ20 ಕ್ರಿಕೆಟ್‌ನಲ್ಲಿ ಹೆಚ್ಚು ಬಾರಿ 250ಕ್ಕೂ ಹೆಚ್ಚು ರನ್ ಸಿಡಿಸಿದ ತಂಡ ಎಂಬ ವಿಶ್ವದಾಖಲೆಗೆ ಪಾತ್ರವಾಯಿತು. ಈ ಹಿಂದೆ ಸರ್ರೆ ಮತ್ತು ಭಾರತ ತಂಡಗಳೊಂದಿಗೆ ತಲಾ 3 ಬಾರಿ ಈ ಸಾಧನೆ ಮಾಡಿ ಅಗ್ರಸ್ಥಾನ ಹಂಚಿಕೊಂಡಿತ್ತು. ಇದೀಗ 4ನೇ ಬಾರಿಗೆ 250+ ಸ್ಕೋರ್ ಮಾಡುವ ಮೂಲಕ ಎಸ್‌ಆರ್‌ಎಚ್ ಆ ವಿಶ್ವದಾಖಲೆ ತನ್ನದಾಗಿಸಿಕೊಂಡಿದೆ.

ಪಾಕ್‌ಗೆ ಹೀನಾಯ ಸೋಲು

ವೆಲ್ಲಿಂಗ್‌ಟನ್: ಆರಂಭಿಕ ಫಿನ್ ಅಲೆನ್ ಅವರ ವೇಗದ ಅರ್ಧಶತಕದ ಮುಂದೆ ಮಂಕಾದ ಪಾಕಿಸ್ತಾನ ತಂಡವು ನ್ಯೂಜಿಲೆಂಡ್ ವಿರುದ್ಧ ಟಿ20 ಪಂದ್ಯದಲ್ಲಿ 115 ರನ್ ಗಳ ಬೃಹತ್ ಅಂತರದಿಂದ ಪರಾಭವಗೊಂಡಿದೆ, ಮಾತ್ರವಲ್ಲದೆ 5 ಪಂದ್ಯಗಳ ಟಿ20 ಸರಣಿಯನ್ನು ಇನ್ನೂ ಒಂದು ಪಂದ್ಯ ಬಾಕಿ ಉಳಿದಿರುವಾಗಲೇ 3-1 ಅಂತರದಿಂದ ಗೆದ್ದು ಬೀಗಿದೆ. ಭಾನುವಾರ ನಡೆದ 4ನೇ ಪಂದ್ಯದಲ್ಲಿ ಟಾಸ್ ಗೆದ್ದ ಪಾಕಿಸ್ತಾನ ಫೀಲ್ಡಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 220 ರನ್‌ಗಳನ್ನು ಕಲೆ ಹಾಕಿತು.



ಬೃಹತ್ ಮೊತ್ತ ಬೆಂಬತ್ತಿ ಹೊರಟ ಪಾಕಿಸ್ತಾನ 16.2 ಓವರ್‌ಗಳಲ್ಲಿ 105 ರನ್‌ಗಳಿಗೆ ಆಲೌಟ್ ಆಯಿತು. ಪಾಕ್ ಪರ ಇಬ್ದುಲ್ ಸಮದ್ ಮತ್ತು ಇರ್ಫಾನ್ ಖಾನ್ ಅವರನ್ನು ಹೊರತು ಪಡಿಸಿದರೆ ಬೇರಾವ ಬ್ಯಾಟರ್ ಸಹ ಎರಡಂಕೆಯ ಮೊತ್ತವನ್ನೂ ತಲುಪಲಿಲ್ಲ. ನ್ಯೂಜಿಲೆಂಡ್‌ನ ವೇಗಿ ಜಾಕೋಬ್ ಡಫಿ 20 ರನ್‌ಗಳಿಗೆ 4 ವಿಕೆಟ್ ಮತ್ತು ಜಕರಿ ಫಾಕ್ಸ್ ಅವರು 25 ರನ್ ಗಳಿಗೆ 3 ವಿಕೆಟ್ ಕಬಳಿಸಿದರು. ಒ ರೂರ್ಕ್, ಜೇಮ್ಸ್ ನೀಶಮ್, ಇಶ್ ಸೋಧಿ ತಲಾ 3 ವಿಕೆಟ್ ಗಳಿಸಿದರು.

ಸೈಫರ್ಟ್ - ಅಲೆನ್ ಭರ್ಜರಿ ಆರಂಭ: ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡದ ಆರಂಭಿಕರಾದ ಟಿಮ್ ಸೈಫರ್ಟ್(44) ಮತ್ತು ಫಿನ್ ಅಲೆನ್ (50) ಅವರು ಭರ್ಜರಿ ಆರಂಭ ಒದಗಿಸಿದರು. ಟಿಂ ಸೈಫರ್ಟ್ ಅವರು ಎಂದಿನಂತೆ ಆಕ್ರಮಣಕಾರಿಯಾಗಿ ಆಡಿದರು. ಕೇವಲ 3.5 ಓವರ್ ಗಳಲ್ಲೇ ತಂಡದ ಮೊತ್ತವನ್ನು 50ರ ಗಡಿ ದಾಡಿಸಿದರು. ಅವರ ಬ್ಯಾಟಿಂಗ್ ಶೈಲಿಗೆ ಪಾಕಿಸ್ತಾನದ ಬೌಲರ್‌ಗಳು ದಿಕ್ಕಾಪಾಲಾದರು. ಕೇವಲ 22 ಎಸೆತಗಳನ್ನು ಎದುರಿಸಿದ ಅರು 3 ಬೌಂಡರಿ ಮತ್ತು 4 ಸಿಕ್ಸರ್ ಗಳನ್ನು ಒಳಗೊಂಡ 44 ರನ್ ಗಳಿಸಿದರು. ಅವರ ವಿಕೆಟ್ ಪತನದ ಬಳಿಕ ಫಿನ್ ಅಲೆನ್ ಅವರು ಪಾಕಿಸ್ತಾನದ ಬೌಲರ್‌ಗಳಿಗೆ ಸಿಂಹಸ್ವಪ್ನರಾದರು. ಅವರ ಇನ್ನಿಂಗ್ಸ್‌ನಲ್ಲಿ 6 ಬೌಂಡರಿ 3 ಸಿಕ್ಸರ್‌ಗಳಿದ್ದವು. ಮಾರ್ಕ್ ಚಾಪ್ಮನ್(24), ಡೆರಿಲ್ ಮಿಚೆಲ್(29), ಮಿಚೆಲ್ ಬ್ರೇಸ್ ವೆಲ್(ಅಜೇಯ 46) ಅವರ ಉಪಯುಕ್ತ ನೆರವಿನಿದಾಗಿ ನ್ಯೂಜಿಲೆಂಡ್ ತಂಡ ನಿಗದಿತ 20 ಓವರ್ ಗಳಲ್ಲಿ 6 ವಿಕೆಟ್ ನಷ್ಟಕ್ಕೆ 220 ರನ್ ಪೇರಿಸಿತು. ಪಾಕಿಸ್ತಾನ ತಂಡದ ಪರ ಹ್ಯಾರಿಸ್ ರೌಫ್ 3 ವಿಕೆಟ್, ಅಬ್ರಾರ್ ಅಹ್ಮದ್ 2 ವಿಕೆಟ್ ತಮ್ಮದಾಗಿಸಿಕೊಂಡರು.

ಇಂದಿನ ಪಂದ್ಯ

7.30 PM

ಡಿಸಿ vs ಎಲ್‌ಎಸ್‌ಜಿ

ರಾಜಶೇಖರ ರೆಡ್ಡಿ ಕ್ರೀಡಾಂಗಣ ವಿಶಾಖಪಟ್ಟಣ



ಕೊಹ್ಲಿ ದಾಖಲೆ ಆದಾಯ

ಈ ಬಾರಿಯ ಐಪಿಎಲ್ ಸೀಸನ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದಿಂದ ವಿರಾಟ್ ಕೊಹ್ಲಿ 21 ಕೋಟಿ ರು. ಆದಾಯ ಪಡೆಯಲಿದ್ದಾರೆ. ಇದು ಅವರ ಕಳೆದ ವರ್ಷಕ್ಕಿಂತ ಶೇಕಡಾ 40ರಷ್ಟು ಹೆಚ್ಚಳ ಆದಾಯವಾಗಿದೆ. ಭಾರತದ ಆದಾಯ ತೆರಿಗೆ ನಿಯಮಗಳ ಪ್ರಕಾರ, ಉನ್ನತ ಆದಾಯ ಗಳಿಕೆದಾರರು ಗರಿಷ್ಠ ತೆರಿಗೆ ದರಕ್ಕೆ ಒಳಪಡುತ್ತಾರೆ. ಅವರ ಐಪಿಎಲ್ ಆದಾಯವು 15 ಲಕ್ಷ ರೂಪಾಯಿಗಿಂತ ಹೆಚ್ಚಿರುವುದರಿಂದ, 21 ಕೋಟಿ ರೂಪಾಯಿಗಳ ಮೇಲೆ ಶೇಕಡಾ 30ರಷ್ಟು ತೆರಿಗೆ ವಿಧಿಸಲಾಗುತ್ತದೆ. ಅದರ ಜೊತೆಗೆ, ಆರೋಗ್ಯ ಮತ್ತು ಶಿಕ್ಷಣ ಸೆಸ್‌ಗಾಗಿ ಶೇಕಡಾ 4ರಷ್ಟು ಹೆಚ್ಚುವರಿ ಶುಲ್ಕವೂ ಇರುತ್ತದೆ. ಒಂದು ಮೂಲದ ಪ್ರಕಾರ ವಿರಾಟ್ ಕೊಹ್ಲಿ ಅವರು ತಮ್ಮ 21 ಕೋಟಿ ರು. ಐಪಿಎಲ್ ಆದಾಯದಲ್ಲಿ 8.19 ಕೋಟಿ ರೂಪಾಯಿ ಆದಾಯ ತೆರಿಗೆಯನ್ನು ಪಾವತಿಸಬೇಕಾಗುತ್ತದೆ.

ಚೆನ್ನೈ ಬೌಲರ್‌ಗಳ ಪ್ರಾಬಲ್ಯ | ನೂರ್ ಅಹ್ಮದ್‌ಗೆ 4 ವಿಕೆಟ್ | ಮುಂಬೈ 155ಕ್ಕೆ ಆಲೌಟ್

ಅಲ್ಪ ಮೊತ್ತಕ್ಕೆ ಕುಸಿದ ಮುಂಬೈ

ಚೆನ್ನೈ: ಇಲ್ಲಿ ಭಾನುವಾರ ನಡೆದಿರುವ ಐಪಿಎಲ್‌ನ ಮುಂಬೈ ಇಂಡಿಯನ್ಸ್-ಚೆನ್ನೈ ಸೂಪರ್ ಕಿಂಗ್ಸ್ ನಡುವಿನ ಕದನದಲ್ಲಿ ಸಿಎಸ್‌ಕೆ ಪ್ರಾಬಲ್ಯ ಸಾಧಿಸಿದೆ. ಇಲ್ಲಿನ ಚಿದಂಬರಂ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಚೆನ್ನೈ ತಂಡದ ಬೌಲಿಂಗ್ ದಾಳಿಗೆ ಮುಂಬೈ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದರು. ಆರಂಭ ದಿಂದ ಅಂತ್ಯದವರೆಗೂ ಯಾವ ಹಂತದಲ್ಲೂ ಮುಂಬೈ ತಂಡ ನಿರೀಕ್ಷಿತ ಪ್ರದರ್ಶನ ತೋರು ವಲ್ಲಿ ವಿಫಲವಾಯಿತು. 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 155 ರನ್ ಗಳಿಸಿದೆ. 31 ರನ್ ಗಳಿಸಿದ ತಿಲಕ್ ವರ್ಮಾ ತಂಡದ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಚೆನ್ನೈ ತಂಡದ ಪರ ನೂರ್ ಅಹ್ಮದ್ 18 ರನ್ ನೀಡಿ 4 ಪ್ರಮುಖ ವಿಕೆಟ್ ಪಡೆದು ಮಿಂಚಿದರು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಮುಂಬೈ ತಂಡವು ಖಾತೆ ತೆರೆಯುವ ಮುನ್ನವೇ ರೋಹಿತ್ ಶರ್ಮಾ(0) ವಿಕೆಟ್ ಕಳೆದು ಕೊಂಡಿತು. ಖಲೀಲ್ ಅಹ್ಮದ್‌ರವರು ರೋಹಿತ್ ವಿಕೆಟ್ ಪಡೆಯುವ ಮೂಲಕ ಮುಂಬೈಗೆ ಶಾಕ್ ನೀಡಿದರು. ನಂತರ ಮತ್ತೆ 3ನೇ ಓವರ್‌ನಲ್ಲಿ 12 ರನ್‌ಗಳಿಸಿದ್ದ ರಿಕಲ್ಟನ್ ರನ್ನು ಬೌಲ್ಡ್ ಮಾಡುವ ಮೂಲಕ ಮತ್ತೊಂದು ಶಾಕ್ ನೀಡಿದರು. 11 ರನ್ ಗಳಿಸಿದ್ದ ವಿಲ್ ಜಾಕ್ಸ್ ಅಶ್ವಿನ್ ಸ್ಪಿನ್ ಮರ್ಮವನ್ನು ಅರಿಯದೇ ದುಬೆಗೆ ಕ್ಯಾಚ್ ನೀಡಿ ಔಟ್ ಆದರು.

36ಕ್ಕೆ 3 ವಿಕೆಟ್ ಕಳೆದುಕೊಂಡು ಅಲ್ಪಮೊತ್ತಕ್ಕೆ ಕುಸಿಯುವ ಭೀತಿಯಲ್ಲಿದ್ದ ಮುಂಬೈಗೆ ನಾಯಕ ಸೂರ್ಯಕುಮಾರ್ ಯಾದವ್ (29 ರನ್, 26 ಎಸೆತ, 2 ಬೌಂಡರಿ, 1 ಸಿಕ್ಸರ್) ಹಾಗೂ ತಿಲಕ್ ವರ್ಮಾ (31 ರನ್, 25 ಎಸೆತ, 2 ಬೌಂಡರಿ, 2 ಸಿಕ್ಸರ್), 36 ಎಸೆತಗಳಲ್ಲಿ 51 ರನ್ ಸೇರಿಸಿ ಚೇತರಿಕೆ ನೀಡಿದರು. ಆದರೆ ಸೂರ್ಯಕುಮಾರ್ ವಿಕೆಟ್ ಬೀಳುತ್ತಿದ್ದಂತೆ ಮುಂಬೈ ಪೆವಿಲಿಯನ್ ಪರೇಡ್ ನಡೆಸಿತು. ರಾಬಿನ್ ಮಿಂಜ್ (3), ನಮನ್ ಧೀರ್ (17), ಮಿಚೆಲ್ ಸ್ಯಾಂಟ್ನರ್ (11) ಹಾಗೂ ಟ್ರೆಂಟ್ ಬೌಲ್ಟ್ (1) ಅಲ್ಪಮೊತ್ತಕ್ಕೆ ವಿಕೆಟ್ ಒಪ್ಪಿಸಿದರು. ಕೊನೆಯಲ್ಲಿ ದೀಪಕ್ ಚಾಹರ್ 15 ಎಸೆತಗಳಲ್ಲಿ ತಲಾ 2 ಬೌಂಡರಿ, 2 ಸಿಕ್ಸರ್ ಸಹಿತ ಅಜೇಯ 28 ರನ್ ಗಳಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು.

ಎಂ.ಎಸ್. ಧೋನಿ ಆತ್ಮವಿಶ್ವಾಸದ ನುಡಿ

ಚೆನ್ನೈ: ಐಪಿಎಲ್‌ನ ಅತ್ಯಂತ ಯಶಸ್ವಿ ನಾಯಕ ಎನಿಸಿಕೊಂಡಿರುವ

ಎಂ.ಎಸ್. ಧೋನಿ ಭಾನುವಾರ ಮುಂಬೈ ಇಮಡಿಯನ್ಸ್ ವಿರುದ್ಧ 18ನೇ ಆವೃತ್ತಿಯ ಐಪಿಎಲ್‌ನ ಮೊದಲ ಪಂದ್ಯ ಆಡಿದ್ದಾರೆ. ಕಳೆದ ವರ್ಷದ ಐಪಿಎಲ್ ಟೂರ್ನಿಯು ಧೋನಿಯವರ ಕಡೆಯ ಐಪಿಎಲ್ ಎಂದು ಹೇಳಲಾಗಿತ್ತು. ಆ ಸಂದರ್ಭದಲ್ಲಿ ಧೋನಿ ನೀಡಿದ್ದ ಹೇಳಿಕೆಗಳೂ ಅದೇ ಧಾಟಿಯಲ್ಲೇ ಇದ್ದವು. ಆದರೆ ಅವೆಲ್ಲವನ್ನೂ ಸುಳ್ಳಾಗಿಸಿ ಮತ್ತೆ ಸಿಎಸ್‌ಕೆ ಪರ ಈ ಸಲವೂ ಅವರು ಆಡುತ್ತಿರುವುದು ಕ್ರಿಕೆಟ್ ಅಭಿಮಾನಿಗಳಲ್ಲಿ ಸಂತಸ ತಂದಿದೆ. ಮುಂಬೈ ವಿರುದ್ಧದ ಪಂದ್ಯಕ್ಕೂ ಮುನ್ನ ಭಾನುವಾರ ಎಂ.ಎಸ್.ಧೋನಿ ಮಾತನಾಡಿ, 'ತಾನು ಎಷ್ಟು ಕಾಲ ಬೇಕಾದರೂ ಸಿಎಸ್‌ಕೆ ಪರ ಆಡಬಹುದು, ಯಾಕೆಂದರೆ ಅದು ಫ್ರಾಂಚೈಸಿ. ಒಂದು ವೇಳೆ ನಾನು ವೀಲ್‌ಚೇರ್‌ನಲ್ಲಿದ್ದರೂ ಅವರು ನನ್ನನ್ನು ಮೈದಾನಕ್ಕೆ ಎಳೆದುಕೊಂಡು ಹೋಗುತ್ತಾರೆ' ಎಂದಿದ್ದಾರೆ.

50 ನಗರಗಳಲ್ಲಿ ಫ್ಯಾನ್‌ಪಾರ್ಕ್

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2025ರ 18ನೇ ಆವೃತ್ತಿಗೆ ಶನಿವಾರ ಚಾಲನೆ ಸಿಕ್ಕಿದೆ. ಮುಂದಿನ ಎಲ್ಲ ಪಂದ್ಯಗಳು ಪ್ರಮುಖ ನಗರಗಳಲ್ಲಿನ ಕ್ರೀಡಾಂಗಣದಲ್ಲಿ ಮಾತ್ರ ನಡೆಯಲಿವೆ. ಹೀಗಾಗಿ, ಇತರೆ ಕಡೆಗಳ ಕ್ರೀಡಾಭಿಮಾನಿಗಳಿಗೆ ಮನರಂಜನೆ ನೀಡಲು ಬಿಸಿಸಿಐ ಫ್ಯಾನ್ ಪಾರ್ಕ್‌ಗಳನ್ನು ಸ್ಥಾಪನೆ ಮಾಡುತ್ತಿದೆ.

2015ರಿಂದ ಪ್ರತಿ ವರ್ಷ ಫ್ಯಾನ್ ಪಾಕ್‌ಗಳನ್ನು ಸ್ಥಾಪನೆ ಮಾಡಲಾಗುತ್ತಿದೆಯಾದರೂ ಈ ಬಾರಿ, ಫ್ಯಾನ್ ಪಾರ್ಕ್‌ಗಳು ಮಾರ್ಚ್ 22ರಿಂದ ಮೇ 25ರ ವರೆಗೆ 23 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ 50 ನಗರಗಳಲ್ಲಿ ನಡೆಯಲಿದ್ದು, ಭಾರತದ ಪ್ರತಿಯೊಂದು ಮೂಲೆಯಲ್ಲಿಯೂ ಅಭಿಮಾನಿಗಳನ್ನು ರಂಜಿಸಲಿವೆ.

ರೋಹ್ಟಕ್, ಬಿಕಾನೇರ್ ಮತ್ತು ಗ್ಯಾಂಗ್ಟಕ್ ಬೀದಿಗಳಿಂದ ಹಿಡಿದು ಕಾಕಿನಾಡ, ದಿಮಾಪುರ ಮತ್ತು ಕಾರೈಕಲ್ ನಂತಹ ಹೊಸ ಸ್ಥಳಗಳಲ್ಲಿಯೂ ಈ ಬಾರಿ ಫ್ಯಾನ್ ಪಾರ್ಕ್ ಸ್ಥಾಪನೆಯಾಗಲಿವೆ. ಮೊದಲ ಬಾರಿಗೆ, ತಿನ್ಸುಕಿಯಾ (ಅಸ್ಸಾಂ) ಮತ್ತು ಪುರುಲಿಯಾ (ಪಶ್ಚಿಮ ಬಂಗಾಳ) ನಂತಹ ಪಟ್ಟಣಗಳಲ್ಲಿಯೂ ಅಭಿಮಾನಿಗಳಿಗೆ ಫ್ಯಾನ್ ಪಾರ್ಕ್ ಸ್ಥಾಪನೆಯಾಗಲಿವೆ.

ಎಲ್ಲೆಲ್ಲಿ? ಯಾವಾಗ?

ರಾಜ್ಯದಲ್ಲಿ ಈ ಬಾರಿ ನಾಲ್ಕು ನಗರಗಳಲ್ಲಿ ಫ್ಯಾನ್ ಪಾರ್ಕ್ ಸ್ಥಾಪನೆಯಾಗಲಿದೆ. ಏ.12 ಮತ್ತು 13 ರಂದು ಮೈಸೂರಿನಲ್ಲಿ ಫ್ಯಾನ್ ಪಾರ್ಕ್ ಸ್ಥಾಪನೆಯಾಗ ಲಿದೆ. ಏಪ್ರಿಲ್ 26 ಮತ್ತು 27ರಂದು ತುಮಕೂರಿನಲ್ಲಿ ಫ್ಯಾನ್ ಪಾರ್ಕ್ ಸ್ಥಾಪನೆ ಮಾಡಲಾ ಗುತ್ತದೆ. ಮೇ 3 ಮತ್ತು 4 ರಂದು ಬೆಳಗಾವಿಯಲ್ಲಿ ಫ್ಯಾನ್ ಪಾರ್ಕ್ ಸ್ಥಾಪನೆಯಾಗಲಿದ್ದು, ಮೇ 17 ಮತ್ತು 18 ರಂದು ಮಂಗಳೂರಿನಲ್ಲಿ ಫ್ಯಾನ್ ಪಾರ್ಕ್ ಸ್ಥಾಪನೆಯಾಗಲಿದೆ.

ಏನೇನಿರುತ್ತೆ?

ಫ್ಯಾನ್ ಪಾರ್ಕ್‌ನಲ್ಲಿ ದೊಡ್ಡ ಪರದೆ ಮೇಲೆ ಐಪಿಎಲ್ ಪಂದ್ಯಗಳ ನೇರ ಪ್ರಸಾರ, ಸಂಗೀತ, ಮನರಂಜನೆ, ಫುಡ್ ಕೋರ್ಟ್‌ಗಳು, ಮಕ್ಕಳ ಆಟದ ವಲಯ, ವರ್ಚುವಲ್ ಬ್ಯಾಟಿಂಗ್ ವಲಯ, ನೆಟ್‌ಗಳ ಮೂಲಕ ಬೌಲಿಂಗ್, ಫೇಸ್-ಪೇಂಟಿಂಗ್, ಪ್ರತಿಕೃತಿ ಡಗೌಟ್‌ಗಳು, ಚಿಯರ್-ಒ-ಮೀಟರ್ ಮತ್ತು ಉದ್ಯಾನವನಗಳಲ್ಲಿ 360 ಡಿಗ್ರಿ ಫೋಟೋ ಬೂತ್‌ಗಳು ಸೇರಿದಂತೆ ಅತ್ಯಾಕರ್ಷಕ ಚಟುವಟಿಕೆಗಳು ಇರುತ್ತವೆ.

ಡೆಲ್ಲಿಗೆ ಸಡ್ಡು ಹೊಡೆದೀತೇ ಜೈಂಟ್ಸ್?

ಡಿಸಿ

- ಡು ಪ್ಲೆಸಿಸ್
- ಜೇಕ್ ಫ್ರೇಸರ್
- ಅಭಿಷೇಕ್ ಪೊರೆಲ್
- ಟ್ರಿಸ್ಟನ್ ಸ್ಟಬ್ಸ್
- ಅಕ್ಷರ್ ಪಟೇಲ್ (ನಾಯಕ)
- ಅಶುತೋಷ್ ಶರ್ಮಾ
- ಸಮೀರ್ ರಿಜ್ವಿ
- ಕುಲ್ದೀಪ್ ಯಾದವ್
- ಮಿಚೆಲ್ ಸ್ಟಾರ್ಕ್
- ನಟರಾಜನ್
- ಮುಕೇಶ್ ಕುಮಾರ್

ಎಲ್‌ಎಸ್‌ಜಿ

- ಮಿಚೆಲ್ ಮಾರ್ಷ್
- ಐಡೆನ್ ಮಾರ್ಕ್‌ರಮ್
- ರಿಷಬ್ ಪಂತ್ (ನಾಯಕ)
- ನಿಕೋಲಸ್ ಪೂರನ್
- ಆಯುಶ್ ಬದೋನಿ
- ಡೇವಿಡ್ ಮಿಲ್ಲರ್
- ಶಾಬಾಜ್ ಅಹ್ಮದ್
- ಅಬ್ದುಲ್ ಸಮದ್
- ರವಿ ಬಿಷ್ಣೋಯ್
- ಆವೇಶ್ ಖಾನ್
- ಮಯಾಂಕ್ ಯಾದವ್

ವಿಶಾಖಪಟ್ಟಣಂ: ಸೋಮವಾರದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳು ಪರಸ್ಪರ ಸೆಣಸಾಟ ನಡೆಸಲಿವೆ. ದೆಹಲಿ ತಂಡಕ್ಕೆ ಕನ್ನಡಿಗ ಕೆ.ಎಲ್. ರಾಹುಲ್ ಈ ಪಂದ್ಯದಲ್ಲಿ ಅಲಭ್ಯರಾಗುವ ಸಾಧ್ಯತೆ ಇದೆ, ಹಾಗಾಗಿ ಅವರು ಡೆಲ್ಲಿ ಕ್ಯಾಂಪ್ ಸೇರಿಲ್ಲ. ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ತಂಡವು ಈ ಬಾರಿ ಸಮತೋಲಿತವಾಗಿದ್ದು, ಎಲ್ಲಾ ವಿಭಾಗದಲ್ಲೂ ಕೊಂಚ ಬಲಿಷ್ಠ ಎಂಬಂತೆ ತೋರುತ್ತಿದೆ. ಕಳೆದ ಬಾರಿ ಡೆಲ್ಲಿ ನಾಯಕನಾಗಿದ್ದ ರಿಷಭ್ ಪಂತ್ ಈ ಬಾರಿ ಲಖನೌ ತಂಡದ ನಾಯಕತ್ವ ವಹಿಸಿರುವುದು ವಿಶೇಷ, ಹಾಗೆಯೇ ಹೆಚ್ಚಿನ ಸಂಖ್ಯೆಯ ವಿದೇಶಿ ಆಟಗಾರರಿರುವುದು ಸೂಪರ್ ಜೈಂಟ್ಸ್ ತಂಡದ ಪ್ಲಸ್ ಪಾಯಿಂಟ್.

ಡೆಲ್ಲಿ ಸಮರ್ಥ ತಂಡ: ಡೆಲ್ಲಿ ಪರ ಫಾಫ್ ಡು ಪ್ಲೆಸಿ ಜತೆ ಜೇಕ್ ಫ್ರೇಸರ್ ಮೆಕ್‌ಗರ್ಕ್ ಇನ್ನಿಂಗ್ಸ್ ಆರಂಭಿಸುವ ನಿರೀಕ್ಷೆ ಇದೆ. ಅಭಿಷೇಕ್ ಪೊರೆಲ್, ಟ್ರಿಸ್ಟನ್ ಸ್ಟಬ್ಸ್, ಅಶುತೋಷ್ ಶರ್ಮಾ ಸ್ಫೋಟಕ ಬ್ಯಾಟಿಂಗ್‌ಗೆ ಖ್ಯಾತರಾಗಿದ್ದಾರೆ. ನೂತನ ನಾಯಕ ಅಕ್ಷರ್ ಪಟೇಲ್ ತಮ್ಮ ಪ್ರದರ್ಶನದ ಮೇಲೆ ನಾಯಕತ್ವದ ಒತ್ತಡ ಬೀಳದಂತೆ ಎಚ್ಚರಿಕೆ ವಹಿಸಬೇಕಿದೆ. ಸಮೀರ್ ರಿಜ್ವಿ ಕೂಡಾ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುವ ಕಾತರದಲ್ಲಿದ್ದಾರೆ. ದೆಹಲಿಯ ಬೌಲಿಂಗ್ ವಿಭಾಗ ಕೂಡ ಬಲಿಷ್ಠವಾಗಿದೆ. ಮಿಚೆಲ್ ಸ್ಟಾರ್ಕ್ ಜತೆ ಟಿ. ನಟರಾಜನ್, ಮುಕೇಶ್ ಕುಮಾರ್, ಸ್ಪಿನ್ ವಿಭಾಗದಲ್ಲಿ ಕುಲದೀಪ್ ಯಾದವ್, ಅಕ್ಷರ್ ಪಟೇಲ್ ಎದುರಾಳಿಗಳನ್ನು ಕಟ್ಟಿ ಹಾಕುವಲ್ಲಿ ಸಮರ್ಥರಿದ್ದಾರೆ.

ಲಖನೌ ಯುವ ಪಡೆ

ರಿಷಬ್ ಪಂತ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್, ಹೆಚ್ಚಿನ ಭಾರತೀಯ ಬ್ಯಾಟರ್‌ಗಳಿಗೆ ಈ ಸಲ ಮಣೆ ಹಾಕಿಲ್ಲ, ಆದರೆ ಟಿ20 ಬ್ಯಾಟರ್‌ಗಳಿಗೇನೂ ತಂಡದಲ್ಲಿ ಕೊರತೆಯಿಲ್ಲ. ಭಾರತದ ಯುವ ಬೌಲರ್‌ಗಳು ತಂಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆರಂಭಿಕರ ಕೊರತೆಯಿಂದಾಗಿ ಈ ಬಾರಿ ತಂಡ ಮಿಚೆಲ್ ಮಾರ್ಷ್ ಹಾಗೂ ಐಡನ್ ಮಾರ್ಕ್‌ರ್ಯಾಮ್‌ರನ್ನು ಕಣಕ್ಕಿಳಿಸುವ ಸಾಧ್ಯತೆ ಹೆಚ್ಚು. ನಿಕೋಲಸ್ ಪೂರನ್, ಡೇವಿಡ್ ಮಿಲ್ಲರ್ ಸ್ಫೋಟಕ ಆಟವು ಲಖನೌ ತಂಡದ ಆಧಾರಸ್ತಂಭ, ಆದರೆ ಹೊಸ ತಂಡದಲ್ಲಿ ರಿಷಭ್ ಪಂತ್ ತಮ್ಮ ನಾಯಕತ್ವವನ್ನು ಹೇಗೆ ನಿಭಾಯಿಸಲಿದ್ದಾರೆ ಎಂಬ ಕೌತುಕವಿದೆ.

ಲಖನೌ ಸೇರಿದ ಶಾರ್ದೂಲ್

ವಿಶಾಖಪಟ್ಟಣಂ: ಸೋಮವಾರ ನಡೆಯುವ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯಕ್ಕೂ ಮುನ್ನ



ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಅವರು ಬದಲಿ ಆಟಗಾರನಾಗಿ ಲಖ್‌ನೌ ಸೂಪರ್ ಜಯಂಟ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಗಾಯಗೊಂಡಿರುವ ಮೊಹ್ಸಿನ್ ಖಾನ್ ಟೂರ್ನಿಯಿಂದ ಹೊರಬಿದ್ದ ಕಾರಣ ಅವರ ಸ್ಥಾನಕ್ಕೆ ಬದಲಿ ಆಟಗಾರನಾಗಿ ತಂಡ ಸೇರಿದ್ದಾರೆ. ಕಳೆದ ವರ್ಷ ನಡೆದಿದ್ದ ಮೆಹಾ ಹಾರಾಜಿನಲ್ಲಿ ಶಾರ್ದೂಲ್ ಅನ್ ಸೋಲ್ಡ್ ಆಗಿದ್ದರು. 2025 ಋತುವಿನ ಸಿದ್ಧತೆಗಳು ಆರಂಭಗೊಂಡಂದಿನಿಂದಲೇ ಠಾಕೂರ್ ಅವರು ಲಖನೌ ಸೂಪರ್ ಜಯಂಟ್ಸ್‌ನ ತಂಡದೊಂದಿಗಿದ್ದರು. 'ನೋಂದಾಯಿತ ಲಭ್ಯವಿರುವ ಆಟಗಾರರ ಪೂಲ್‌ನಿಂದ ಸಹಿ ಹಾಕಲಾಗಿರುವ ಠಾಕೂರ್ ಅವರನ್ನು 2 ಕೋಟಿ ರೂಪಾಯಿ ಮೀಸಲು ಬೆಲೆಗೆ ಲಕ್ನೋ ತಂಡ ಖರೀದಿಸಿದೆ' ಎಂದು ಐಪಿಎಲ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಶಾರ್ದೂಲ್ ಐಪಿಎಲ್‌ನಲ್ಲಿ ಇದುವರೆಗೆ 95 ಪಂದ್ಯಗಳನ್ನು ಆಡಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ), ದೆಹಲಿ ಕ್ಯಾಪಿಟಲ್ಸ್ (ಡಿಸಿ), ಕಿಂಗ್ಸ್ ಇಲೆವೆನ್ ಪಂಜಾಬ್ ಕೋಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ಮತ್ತು ರೈಸಿಂಗ್ ಪುಣೆ ಸೂಪರ್‌ಜೈಂಟ್ ಪರ ಆಡಿದ್ದಾರೆ.

ಇಶಾನ್ ಕಿಶನ್ ಅಜೇಯ ಶತಕ | ತವರಿನಲ್ಲಿ ಎಸ್‌ಆರ್‌ಎಚ್ ಸ್ಫೋಟಕ ಬ್ಯಾಟಿಂಗ್

ಹೈದರಾಬಾದ್‌ಗೆ ಭರ್ಜರಿ ಗೆಲುವು

ಹೈದರಾಬಾದ್: ಇಶಾನ್ ಕಿಶನ್(106 ಅಜೇಯ) ಬಾರಿಸಿದ ಸೊಗಸಾದ ಅಜೇಯ ಶತಕ ಮತ್ತು ಟ್ರಾವಿಸ್ ಹೆಡ್(67) ಅವರ ಅರ್ಧಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಭಾನುವಾರದ ನಡೆದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ್ ವಿರುದ್ಧ 44 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಕಳೆದ ಬಾರಿ ತನ್ನ ಆಕ್ರಮಣಕಾರಿ ಆಟದ ಮೂಲಕವೇ ಎದುರಾಳಿ ತಂಡಗಳ ನಿದ್ದೆಗೆಡಿಸಿದ್ದ ಸನ್‌ರೈಸರ್ಸ್ ಹೈದರಾಬಾದ್ ಈ ಬಾರಿಯೂ ತಾನಾಡಿದ ಮೊದಲ ಪಂದ್ಯದಲ್ಲೇ ಸ್ಫೋಟಕ ಆಟವಾಡುವ ಮೂಲಕ ಎದುರಾಳಿ ತಂಡಗಳಿಗೆ ಎಚ್ಚರಿಕೆಯನ್ನು ರವಾನಿಸಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಹೈದರಾಬಾದ್ ತಂಡವು ಅಬ್ಬರದ ಬ್ಯಾಟಿಂಗ್ ಮೂಲಕ ತವರಿನ ಅಭಿಮಾನಿಗಳನ್ನು ರಂಜಿಸಿತು. ಅಭಿಷೇಕ್ ಶರ್ಮಾ(24) ವಿಕೆಟ್ ಕಳೆದುಕೊಂಡ ಬಳಿಕ ಜತೆಯಾದ ಟ್ರಾವಿಸ್ ಹೆಡ್ ಮತ್ತು 3ನೇ ಕ್ರಮಾಂಕದಲ್ಲಿ ಬಂದ ಇಶಾನ್ ಕಿಶನ್ ಸೇರಿಕೊಂಡು ರಾಜಸ್ಥಾನ್ ಬೌಲರ್‌ಗಳನ್ನು ಭರ್ಜರಿಯಾಗಿ ದಂಡಿಸಿದರು. ಇಶಾನ್ ಕಿಶಾನ್‌ರವರು ಜೋಫ್ರ ಆರ್ಚರ್, ಸಂದೀಪ್ ಶರ್ಮಾ, ಮಹೀಶ್ ತೀಕ್ಷ್ಣ ಅವರ ಬೌಲಿಂಗ್ ಸೇರಿದಂತೆ ಎಲ್ಲರ ಬೌಲಿಂಗ್‌ನಲ್ಲೂ ಸಿಕ್ಸರ್ ಸಿಡಿಸಿದರು. ಅವರ ಅಬ್ಬರದ ಬ್ಯಾಟಿಂಗ್ ನಿಂದಾಗಿ ಹೈದರಾಬಾದ್ ತಂಡವು 14.1 ಓವರ್‌ನಲ್ಲಿ ತಂಡ 200 ರನ್ ಕಲೆ ಹಾಕಿತು.

ಜಿದ್ದಿಗೆ ಬಿದ್ದವರಂತೆ ಬ್ಯಾಟ್ ಬೀಸಿದ ಇಶಾನ್-ಹೆಡ್ ಜೋಡಿ ದ್ವಿತೀಯ ವಿಕೆಟ್‌ಗೆ 85 ರನ್ ಒಟ್ಟುಗೂಡಿಸಿದರು. ಟ್ರಾವಿಸ್ ಹೆಡ್ 31 ಎಸೆತಗಳಿಂದ 9 ಬೌಂಡರಿ ಮತ್ತು 3 ಸಿಕ್ಸರ್ ನೆರವಿನಿಂದ 67 ರನ್ ಬಾರಿಸಿದರು. ಅವರ ವಿಕೆಟ್ ತುಷಾರ್ ದೇಶ್‌ಪಾಂಡೆ ಪಾಲಾಯಿತು. ಹೆಡ್ ಪೆವಿಲಿಯನ್ ಸೇರಿದ ಬಳಿಕವೂ ಹೈದರಾಬಾದ್ ತಂಡದ ರನ್ ಗಳಿಕೆಗೆ ಯಾವುದೇ ಹಿನ್ನಡೆಯಾಗಲಿಲ್ಲ. ಬಳಿಕ ಬಂದ ನಿತೀಶ್ ರೆಡ್ಡಿ(30), ಹೆನ್ರಿಚ್ ಕ್ಲಾಸೆನ್ (37) ರನ್ ಬಾರಿಸಿ ತಂಡವನ್ನು ಬೃಹತ್ ಮೊತ್ತದತ್ತ ಕೊಂಡೊಯ್ದರು. 45 ಎಸೆತಗಳಿಂದ ಚೊಚ್ಚಲ ಐಪಿಎಲ್ ಶತಕ ಬಾರಿಸಿದ ಇಶಾನ್ ಕಿಶನ್ ಅಂತಿಮವಾಗಿ 47 ಎಸೆತಗಳಿಂದ 11 ಬೌಂಡರಿ ಮತ್ತು 6 ಸೊಗಸಾದ ಸಿಕ್ಸರ್ ನೆರವಿನಿಂದ 106 ರನ್ ಬಾರಿಸಿ ಅಜೇಯರಾಗಿ ಉಳಿದರು. ತನ್ನ ಬ್ಯಾಟರ್‌ಗಳ ಸಿಡಿಲಬ್ಬರದ ಬ್ಯಾಟಿಂಗ್ ನೆರವಿನಿಂದ ಹೈದರಾಬಾದ್ ತಂಡ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟಿಗೆ 286 ರನ್ ಕಲೆ ಹಾಕಿತು. ರಾಜಸ್ಥಾನ್ ಪರ ದೇಶಪಾಂಡೆ 3 ವಿಕೆಟ್, ಮಹೀಶ್ ತೀಕ್ಷ್ಣ 2 ವಿಕೆಟ್ ಮತ್ತು ಸಂದೀಪ್ ಶರ್ಮಾ ಒಂದು ವಿಕೆಟ್ ಪಡೆದರು.

ಬೃಹತ್ ಮೊತ್ತವನ್ನು ಬೆನ್ನಟ್ಟಿದ ರಾಜಸ್ಥಾನ್ ತಂಡ ಆರಂಭದಲ್ಲೇ 2 ವಿಕೆಟ್ ಕಳೆದುಕೊಂಡು ಆಘಾತಕ್ಕೆ ಒಳಗಾಯಿತು. ಪಂಜಾಬ್‌ನ ವೇಗಿ ಸಿಮರ್ಜೀತ್ ಸಿಂಗ್ ಘಾತಕ ಬೌಲಿಂಗ್ ಮೂಲಕ ಹಂಗಾಮಿ ನಾಯಕ ರಿಯಾನ್ ಪರಾಗ್(4) ಮತ್ತು ಯಶಸ್ವಿ ಜೈಸ್ವಾಲ್ (1) ಅವರನ್ನು ಪೆವಿಲಿಯನ್‌ಗೆ ಅಟ್ಟಿದರು. ಬಳಿಕ ಬಂದ ನಿತೀಶ್ ರಾಣ(4) ಕೂಡ ಒಂದಂಕಿಗೆ ಸೀಮಿತರಾದರು.

50 ರನ್‌ಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ತಂಡಕ್ಕೆ ಇಂಪ್ಯಾಕ್ಟ್ ಆಟಗಾರನಾಗಿ ಕಣಕ್ಕಿಳಿದ ಸಂಜು ಸ್ಯಾಮ್ಸನ್ ಮತ್ತು ಧ್ರುವ್ ಜುರೆಲ್ ಆಸರೆಯಾಗಿ ಕೆಲ ಕಾಲ ಅಬ್ಬರ ಬ್ಯಾಟಿಂಗ್ ಮೂಲಕ ಪ್ರತಿ ಹೋರಾಟವೊಂದನ್ನು ಉಳಿಸಿದರು. ಉಭಯ ಆಟಗಾರರು ಕೂಡ ಅರ್ಧಶತಕ ಬಾರಿಸಿ ಮಿಂಚಿದರು. ಜಿದ್ದಿಗೆ ಬಿದ್ದವರಂತೆ ಬ್ಯಾಟ್ ಬೀಸಿದ ಈ ಜೋಡಿ 4 ವಿಕೆಟ್‌ಗೆ 111 ರನ್ ಒಟ್ಟುಗೂಡಿಸಿದರು. ಸಂಜು 66 (7 ಬೌಂಡರಿ, 4 ಸಿಕ್ಸರ್) ರನ್ ಗಳಿಸಿದ ವೇಳೆ ವಿಕೆಟ್ ಕಳೆದುಕೊಂಡರು. ಈ ವಿಕೆಟ್ ಬಿದ್ದ 2 ಎಸೆತಗಳ ಅಂತರದಲ್ಲಿ ಧ್ರುವ್ ಜುರೆಲ್ ವಿಕೆಟ್ ಕೂಡ ಪತನಗೊಂಡಿತು. 35 ಎಸೆತ ಎದುರಿಸಿದ ಜುರೆಲ್ 5 ಬೌಂಡರಿ ಮತ್ತು 6 ಸಿಕ್ಸರ್ ಸಿಡಿಸಿ 70 ರನ್ ಬಾರಿಸಿದರು. ಅಂತಿಮ ಹಂತದಲ್ಲಿ ಶಿಮ್ರಾನ್ ಹೆಟ್‌ಮೇರ್ (42) ರನ್ ಬಾರಿಸಿದರೂ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗಲಿಲ್ಲ. ಹೈದರಾಬಾದ್ ಪರ ಹರ್ಷಲ್ ಪಟೇಲ್ ಮತ್ತು ಸಿಮರ್ಜೀತ್ ಸಿಂಗ್ ತಲಾ ಎರಡು ವಿಕೆಟ್ ಪಡೆದರು.

ಜೋಫ್ರಾ: ದುಬಾರಿ ಬೌಲರ್

ರಾಜಸ್ಥಾನ್ ರಾಯಲ್ಸ್ ತಂಡದ ವೇಗಿ ಜೋಫ್ರಾ ಆರ್ಚರ್ ಭಾನುವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಪಂದ್ಯಾವಳಿಯಲ್ಲಿ ಐಪಿಎಲ್ ಇತಿಹಾಸದಲ್ಲೇ ಅತೀ ದುಬಾರಿ ಸ್ಪೆಲ್ ಎಂಬ ಕುಖ್ಯಾತಿಗೆ ಒಳಗಾದರು. ಅವರು ತಮ್ಮ ನಾಲ್ಕು ಓವರ್‌ಗಳ ಸ್ಪೆಲ್‌ನಲ್ಲಿ ನಾಲ್ಕು ಓವರ್ ಬೌಲ್ ಮಾಡಿ ಬರೋಬ್ಬರಿ 76 ರನ್ ಬಿಟ್ಟುಕೊಟ್ಟರು. ಇದಕ್ಕೂ ಮೊದಲು ಒಂದೇ ಇನ್ನಿಂಗ್ಸ್ 2024ರಲ್ಲಿ ದೆಹಲಿ ಕ್ಯಾಪಿಟಲ್ಸ್ ವಿರುದ್ಧ ಗುಜರಾತ್ ಟೈಟಾನ್ಸ್ ಪರ ನಾಲ್ಕು ಓವರ್ ಬೌಲಿಂಗ್ ಮಾಡಿದ್ದ ಮೋಹಿತ್ ಶರ್ಮಾ 73 ರನ್‌ಗಳನ್ನು ಬಿಟ್ಟುಕೊಟ್ಟಿದ್ದರು.

ಸ್ಕೋರ್ ಬೋರ್ಡ್

286/6 (20 ಓವರ್)

ಎಸ್‌ಆರ್‌ಎಚ್		ರನ್	ಎಸೆತ
ಅಭಿಷೇಕ್ ಶರ್ಮಾ	ಬೌಲರ್ ▸▸ ಮಹೀಶ್, ಕ್ಯಾಚ್ ▸▸ ಜೈಸ್ವಾಲ್	24	11
ಟ್ರಾವಿಸ್ ಹೆಡ್	ಬೌಲರ್ ▸▸ ತುಷಾರ್, ಕ್ಯಾಚ್ ▸▸ ಹೇಟ್ಮೆಯರ್	67	31
ಇಶಾನ್ ಕಿಶನ್	ನಾಟೌಟ್*	106	47
ನಿತೇಶ್ ರೆಡ್ಡಿ	ಬೌಲರ್ ▸▸ ಮಹೀಶ್, ಕ್ಯಾಚ್ ▸▸ ಜೈಸ್ವಾಲ್	30	15
ಹಿನ್ರಿಚ್ ಕ್ಲಾಸೆನ್	ಬೌಲರ್ ▸▸ ಸಂದೀಪ್, ಕ್ಯಾಚ್ ▸▸ ಪರಾಗ್	34	14
ಅನಿಕೇತ್ ವರ್ಮಾ	ಬೌಲರ್ ▸▸ ತುಷಾರ್, ಕ್ಯಾಚ್ ▸▸ ಆರ್ಚರ್	7	3
ಅಭಿನವ್ ಮನೋಹರ್	ಬೌಲರ್ ▸▸ ತುಷಾರ್, ಕ್ಯಾಚ್ ▸▸ ಪರಾಗ್	0	1
ಪಾಟ್ ಕಮಿನ್ಸ್	ನಾಟೌಟ್*	0	1

ಆರ್‌ಆರ್	ಓವರ್	ರನ್	ವಿಕೆಟ್
ಎಫ್. ಫಾರುಖಿ	3	49	0
ಎಮ್. ತೀಕ್ಷಣ	4	52	2
ಜೆ. ಆರ್ಚರ್	4	76	0
ಎಸ್. ಶರ್ಮಾ	4	51	1
ನಿತೇಶ್ ರಾಣಾ	1	9	0
ಟಿ. ದೇಶಪಾಂಡೆ	4	44	3

ಎಸ್‌ಆರ್‌ಎಚ್	ಓವರ್	ರನ್	ವಿಕೆಟ್
ಶಮಿ	3	33	1
ಸಿಮ್ರಜಿತ್ ಸಿಂಗ್	3	46	2
ಕ್ಯುಮಿನ್ಸ್	4	60	0
ಅಭಿಷೇಕ್	2	17	0
ಜಂಪಾ	4	48	1
ಹರ್ಷಲ್ ಪಟೇಲ್	4	34	2

242/6 (20 ಓವರ್)

ಆರ್‌ಆರ್		ರನ್	ಎಸೆತ
ಯಶಸ್ವಿ ಜಸ್ವಾಲ್	ಬೌಲರ್ ▸▸ ಸಮರ್ಜೀತ್, ಕ್ಯಾಚ್ ▸▸ ಮನೋಹರ್	1	5
ಸಂಜು ಸ್ಯಾಮ್ಸನ್	ಬೌಲರ್ ▸▸ ಹರ್ಷಲ್, ಕ್ಯಾಚ್ ▸▸ ಹೆನ್ರಿಚ್	66	37
ರಿಯಾನ್ ಪರಾಗ್	ಬೌಲರ್ ▸▸ ಸಮರ್ಜೀತ್, ಕ್ಯಾಚ್ ▸▸ ಕಮಿನ್ಸ್	4	2
ನಿತೇಶ್ ರಾಣಾ	ಬೌಲರ್ ▸▸ ಶಮಿ, ಕ್ಯಾಚ್ ▸▸ ಕಮಿನ್ಸ್	11	8
ಧ್ರುವ್ ಜ್ಯುರೆಲ್	ಬೌಲರ್ ▸▸ ಜಂಪಾ, ಕ್ಯಾಚ್ ▸▸ ಇಶಾನ್	70	35
ಎಸ್. ಹೇಟ್ಮಯರ್	ಬೌಲರ್ ▸▸ ಪಟೇಲ್, ಕ್ಯಾಚ್: ಮನೋಹರ್	42	23
ದುಬೆ	ನಾಟೌಟ್*	34	11
ಆರ್ಚರ್	ನಾಟೌಟ್*	1	1